TIGHT BINDING BOOK

UNIVERSAL LIBRARY
OU_198420
UNIVERSAL LIBRARY

# ಕನ್ನಡ

# ವಾಚನ ಪಾಠ ಮಾಲೆ

ಮತ್ತು

# ಕವಿತಾ ಪಾಠಮಾಲೆ.

ಸಂಪಾದಕರು ಮತ್ತು ಪ್ರಕಾಶಕರು

ಮಹಾದೇವ ಪ್ರಭಾಕರ ಪೂಜಾರ
ಕನ್ನಡ ಪಂಡಿತ

ನಾರಾಯಣ ವೇಂಕಟೇಶ ಕುರಡಿ
ಹೆಡ್‌ಮಾಸ್ಟರ್ ಪ್ರ್ಯಾ. ಸ್ಕೂ.
ಟ್ರೇನಿಂಗ್ ಕಾಲೇಜ್ ಧಾರವಾಡ.

೧೯೩೮.

ಎಲ್ಲ ಹಕ್ಕುಗಳು ಕಾದಿಡಲ್ಪಟ್ಟಿವೆ.

ಬೆಲೆ ೧-೧-೨

ಈ ಪುಸ್ತಕದ ೧–೧೭೬ ಪುಟಗಳನ್ನು ಬೆಳಗಾವಿಯ ಶ್ರೀಮಹಾವೀರ ಮುದ್ರಣಾಲಯದಲ್ಲಿ
ರಾ|| ಸಾತಪ್ಪ ಫಡೆಪ್ಪ ಚೌಗುಲೆ ಇವರು ಮುದ್ರಿಸಿದರು.
ಮತ್ತು ಕವಿತಾ ಪಾಠ ಮಾಲೆಯ ೧–೬೮ ಪುಟಗಳನ್ನು ಧಾರವಾಡದ
"ಸಾಧನ" ಮುದ್ರಣಾಲಯದಲ್ಲಿ ಮುದ್ರಿಸಿದರು.
ಸಂಪಾದಕರು ಧಾರವಾಡದಲ್ಲಿ ಪ್ರಕಟಿಸಿದರು

# ಮುನ್ನುಡಿ.

ನಮ್ಮ ಬಾಲಕ ಬಾಲಿಕೆಯರು ವಿದ್ಯಾಲಯವನ್ನು ಬಿಡುವ ಹೊತ್ತಿಗೆ ಇತರ ವಿಷಯಗಳಂತೆ ಮಾತೃಭಾಷೆಯಲ್ಲಿಯೂ ವ್ಯುತ್ಪತ್ತಿಯನ್ನು ಪಡೆಯಬೇಕು. ಭಾಷಾವ್ಯುತ್ಪತ್ತಿಯೆಂದರೆ ಭಾಷೆಯ ಜ್ಞಾನವು—ಭಾಷೆಯೊಳಗಿನ ವಿಚಾರಗಳನ್ನು ತಿಳಿದುಕೊಳ್ಳಲು ಅವರು ಸಮರ್ಥರಾಗಬೇಕು; ಒಳ್ಳೆಯ ಭಾಷೆಯನ್ನು ಉಪಯೋಗಿಸಲು ಎಂದರೆ ಆಡಲೂ ಬರೆಯಲೂ ಅವರಲ್ಲಿ ಯೋಗ್ಯತೆಯುಂಟಾಗಬೇಕು. ಇಂತಹ ಭಾಷಾವ್ಯುತ್ಪತ್ತಿಗೆ ಬೇರೆ ಬೇರೆ ವಿಷಯಗಳ ಬೇರೆ ಬೇರೆ ಶೈಲಿಗಳ ಹಲವು ಗ್ರಂಥಗಳನ್ನು ಅವರು ಓದಬೇಕು; ಅವರಲ್ಲಿ ಓದುವ ಅಭಿರುಚಿಯುಂಟಾಗಬೇಕು.

ಬಾಲಕರಲ್ಲಿ ಭಾಷಾವ್ಯುತ್ಪತ್ತಿಯನ್ನೂ ವಾಚನಾಭಿರುಚಿಯನ್ನೂ ಉಂಟುಮಾಡುವಲ್ಲಿ ಪೂರ್ಣಗ್ರಂಥಗಳೇ ಹೆಚ್ಚಾಗಿ ಪ್ರಯೋಜನಕರಗಳೆಂಬುದು ನಿಜವಾಗಿದ್ದರೂ ಭಿನ್ನಭಿನ್ನ ಶೈಲಿಗಳ ಬೇರೆ ಬೇರೆ ಗ್ರಂಥಗಳ ಕೆಲವು ಉತ್ತಮ ಭಾಗಗಳನ್ನಷ್ಟೇ ಓದುವುದೂ ಕೂಡ ಈ ದೃಷ್ಟಿಯಿಂದ ಪ್ರಯೋಜನಕರವಾಗದಿರದು.

ಶೈಲಿಯ ಅಭ್ಯಾಸವು ಎರಡು ತೆರನಾಗಿದೆ. ಬೇರೇಬೇರೆ ಪ್ರದೇಶಗಳ ಭಿನ್ನಭಿನ್ನ ಗ್ರಂಥಕರ್ತರ ಗ್ರಂಥಗಳನ್ನೋದಿ ಅವರ ಭಾಷೆಗಳಲ್ಲಿರುವ ಗ್ರಾಹ್ಯಾಂಶಗಳನ್ನು ಗ್ರಹಿಸಿಕೊಂಡು ಅವನ್ನು ತನ್ನಲ್ಲಿ ಜೀರ್ಣಿಸಿಕೊಂಡು ತನ್ನದೊಂದು ಭಾಷೆಯನ್ನು ಸಿದ್ಧಪಡಿಸಿಕೊಳ್ಳುವದು ಒಂದು ತೆರ, ಇಂಥ ಎಲ್ಲ ಗ್ರಾಹ್ಯಭಾಗಗಳನ್ನೊಳಗೊಂಡ ಮಾದರಿಯ ಭಾಷೆಯನ್ನೋದಿ ಅದನ್ನೇ-ಆ ತರದ ಭಾಷೆಯನ್ನೇ-ಜೀರ್ಣಿಸಿಕೊಂಡು ತನ್ನ ಭಾಷೆಯನ್ನು ಸಿದ್ಧಪಡಿಸಿಕೊಳ್ಳುವದು ಎರಡನೆಯ ತೆರ. ಪ್ರೌಢ ವಿದ್ಯಾಲಯಗಳ ಇಲ್ಲವೆ ಕಾಲೇಜಿನ ವಿದ್ಯಾರ್ಥಿಗಳು ಒಂದನೆಯ ತೆರದಿಂದ ತಮ್ಮ ಭಾಷೆಯನ್ನು ಸಿದ್ಧಪಡಿಸಿಕೊಳ್ಳಲಾಪರು. ಸಾಮಾನ್ಯ ಬಾಲಕರು ಇಲ್ಲವೆ ಪ್ರಾ. ಸ್ಕೂ. ಲೀ. ಸ. ಪರೀಕ್ಷೆಯ ವಿದ್ಯಾರ್ಥಿಗಳಂಥ ಚಿಕ್ಕ ಬಾಲಕರು ಎರಡನೆಯ ತೆರದಿಂದ ತಮ್ಮ ಭಾಷೆಯನ್ನು ಸಿದ್ಧಪಡಿಸಿಕೊಳ್ಳಲಾಪರು. ಈ ಎರಡೂ ತೆರಗಳಿಂದ ತಮ್ಮ ಭಾಷೆಯನ್ನು ಸಿದ್ಧಪಡಿಸಿಕೊಳ್ಳಲು ಈ ಪುಸ್ತಕವು ಹೆಚ್ಚು ಪ್ರಯೋಜನಕರವಾಗಿರುವುದೆಂದು ಹೇಳಬಹುದು.

ಕನ್ನಡ ನಾಡಿನಲ್ಲಿ ಭಿನ್ನಭಿನ್ನ ಪ್ರದೇಶಗಳ ಭಾಷೆಗಳಲ್ಲಿ ಕೆಲಕೆಲವು ವ್ಯತ್ಯಾಸಗಳು ಕಾಣಬರುವವು.—ಎಂದರೆ ಪ್ರಾದೇಶಿಕತೆ ತೋರಿಬರುವದು. ಈ ಪ್ರಾದೇಶಿಕತೆಯನ್ನು ಬದಿಗಿರಿಸಿ ಗ್ರಾಂಥಿಕ ಭಾಷೆಯ ಏಕೀಕರಣ ಮಾಡುವುದಕ್ಕಾಗಿ ಕನ್ನಡನಾಡಿನ ಮುಂದಾಳುಗಳು ಪ್ರಯತ್ನಿಸುತ್ತಿರುವರು. ಭಾಷಾ-ವಿಶಾರದರ ಭಾಷೆಯು ಅವರು ಯಾವ ಪ್ರದೇಶದವರಾಗಿದ್ದರೂ-ಮುಂಬಯಿ ಕರ್ನಾಟಕದವರಿರಲಿ, ಮಂಗಳೂರಿನವರಿರಲಿ, ಮೈಸೂರಿನವರಿರಲಿ ಒಂದೇ ವಿಧವಾಗಿರುವದೆಂದು ಹೇಳಬಹುದು. ಅವರಲ್ಲಿ ಪ್ರಾದೇಶಿಕತೆ ಹೆಚ್ಚಾಗಿ ಕಾಣಬರುವದಿಲ್ಲ. ಆದರೆ ಸಾಮಾನ್ಯರ ಭಾಷೆ ಪ್ರಾದೇಶಿಕತೆಯಿಂದ ಆಕ್ರಮಿಸಲ್ಪಟ್ಟು ಭಿನ್ನ ಭಿನ್ನ ಭಾಷೆಗಳಂತೆ ತೋರುವವು ಈ ವಾಚನ ಪಾಠ ಮಾಲೆಯ ಭಾಷೆಯು ಎಲ್ಲಿಯೂ ಪ್ರಾದೇಶಿಕತೆಯಿಂದ ಆಕ್ರಮಿಸಲ್ಪಡದೆ ಕನ್ನಡನಾಡಿನ ಎಲ್ಲ ಭಾಗಗಳಿಗೆ ಮಾದರಿಯದಾಗಿರುವದೆಂದರೆ ಹೆಚ್ಚಿಗೆ ಹೇಳಿದಂತಾಯಿತೆಂದು ನಮಗೆ ಎನಿಸುವದಿಲ್ಲ. ಈ ವಾಚನ ಪಾಠ ಮಾಲೆಯೊಳಗಿನ ಸು. ೬೦ ಪುಟಗಳಷ್ಟು ಪಾಠಗಳು ಮುಂಬಯಿ, ಮದ್ರಾಸ, ಮೈಸೂರು ಈ ಮೂರು ಪ್ರಾಂತಗಳ ಸರ್ಕಾರಗಳಲ್ಲಿಯೂ ಪಠ್ಯಪುಸ್ತಕ (ಟೆಕಸ್ಟ್) ಗಳಾಗಿರುವ ಗ್ರಂಥಗಳೊಳಗಿನವೇ ಇರುತ್ತವೆಂಬುದರಿಂದ ನಾವು ಹೇಳಿದ್ದು ಯೋಗ್ಯವಾಗಿರುವದೆಂಬಲ್ಲಿ ಸಂಶಯವಿಲ್ಲ.

ಮೇಲೆ ಹೇಳಿದ ಉದ್ದೇಶ್ಯಗಳನ್ನಿಟ್ಟುಕೊಂಡು ಈ ಮಾಲೆಗಳಲ್ಲಿ ಭಿನ್ನ ಭಿನ್ನ ವಿಷಯಕ ಗ್ರಂಥಗಳ ಭಾಗಗಳೂ ಭಿನ್ನಭಿನ್ನ ವಿಷಯಕ ಲೇಖನಗಳೂ ಸಂಗ್ರಹಿಸಿವೆ. ಶಾಸ್ತ್ರೀಯ ವಿಷಯಗಳ ಶೈಲಿ ಒಂದು ಬಗೆಯದಾಗಿದ್ದರೆ ಕಾದಂಬರಿಗಳ ಶೈಲಿಯು ಇನ್ನೊಂದು ಬಗೆಯದಾಗಿರುವುದು. ಚಿಕ್ಕ ಕಥೆಗಳ ಭಾಷೆ ಬೇರೆ; ನಾಟಕದ ಭಾಷೆ ಬೇರೆ. ಪ್ರಬಂಧ-ಪ್ರೌಢ ಕಾವ್ಯಗಳು ಗಡಚಾದ ಭಾಷೆಯನ್ನೊಳಗೊಂಡಿರುವುವು. ಪ್ರಾಚೀನರ ವಿಚಾರ-ಸಂಸ್ಕೃತಿಗಳನ್ನು ತಿಳಿದುಕೊಳ್ಳುವುದಾದರೆ ನಮಗೆ ಹಳೆಯ ಭಾಷೆಯ ಜ್ಞಾನವೂ ಬೇಕು. ಹಳೆಯ ಭಾಷೆಯ ಜ್ಞಾನಕ್ಕೆ ವಿಶೇಷವಾಗಿ ಪದ್ಯಕಾವ್ಯಗಳ ಅಭ್ಯಾಸವು ಆವಶ್ಯಕ. ಆದುದರಿಂದ ಪದ್ಯಕಾವ್ಯಗಳ ಭಾಗಗಳೂ ಇದರಲ್ಲಿ ಸೇರಿಸಲ್ಪಟ್ಟಿವೆ.

ವಾಚನ ಪಾಠ ಮಾಲೆಯಲ್ಲಿ ಪ್ರಬಂಧ, ಪ್ರೌಢ-ಗದ್ಯಕಾವ್ಯ, ನಾಟಕ, ಶಾಸ್ತ್ರೀಯವಿಷಯ, ಕಾದಂಬರಿ, ವಿನೋದಪರ ಕಥೆ, ನೀಳ್ಗತೆ, ಚಿಕ್ಕಕಥೆ,

ಚರಿತ್ರ ಮುಂತಾದ ವಿವಿಧ ಗದ್ಯಸಾಹಿತ್ಯ ವಿಭಾಗಗಳ ಮತ್ತು ಕವಿತಾ ಪಾಠ ಮಾಲೆಯಲ್ಲಿ ಹಳೆಯ ಸುಪ್ರಸಿದ್ಧ ಕವಿಗಳ ಮತ್ತು ಹೊಸ ಸರಸ ಕವಿಗಳ ವಿವಿಧ ವಿಷಯಕ ಒಳ್ಳೆಯ ಕವಿತೆಗಳ ಸಮಾವೇಶವು ಮಾಡಲ್ಪಟ್ಟಿದೆ. ಬೇರೆ ಬೇರೆ ಗ್ರಂಥಗಳೊಳಗಿನ ಒಳ್ಳೆಯ ಭಾಗಗಳನ್ನೂ ಒಳ್ಳೆಯ ಸ್ವತಂತ್ರ ಲೇಖನ ಪ್ರಬಂಧಗಳನ್ನೂ ಉತ್ತಮ ಪದ್ಯಗಳನ್ನೂ ಆಯ್ದುಕೊಂಡಿರುವುದರಿಂದ ಇವುಗಳ ಅಭ್ಯಾಸದಿಂದ ಮೂಲಗ್ರಂಥಗಳ ವಾಚನದಲ್ಲಿ ಬಾಲಕರಿಗೆ ಜ್ಞಾನವೂ ಅಭಿರುಚಿಯೂ ಉಂಟಾಗುವುವೆಂದು ಹಾರೈಸಿದ್ದೇವೆ. ಈ ಭಾಗಗಳು ತಮ್ಮಷ್ಟಕ್ಕೆ ಪೂರ್ಣವಾಗಿರುವುದರಿಂದ ಇವನ್ನು ಓದುವಾಗ ಮೂಲಗ್ರಂಥಗಳೇ ಬೇಕೆಂಬಂತಿಲ್ಲ. ಇವುಗಳ ಭಾಷೆ ವಿದ್ಯಾರ್ಥಿಗಳಿಗೆ ಮಾದರಿಯಾಗುವಂತಿರಬೇಕೆಂದು ಸಾಧ್ಯವಿದ್ದಮಟ್ಟಿಗೂ ಗಮನಿಸಿದೆ.

ಅನುಬಂಧಗಳಲ್ಲಿರುವ ಗ್ರಂಥಪರಿಚಯ, ಶಬ್ದಕೋಶ, ಟಿಪ್ಪಣಿಗಳು ಈ ಭಾಗಗಳಿಂದ ವಿದ್ಯಾರ್ಥಿಗಳ ವ್ಯಾಸಂಗಕ್ಕೂ, ಪ್ರಶ್ನೆಗಳು ಎಂಬ ಭಾಗದಿಂದ ಹೇಗೆ ವ್ಯಾಸಂಗ ಮಾಡಬೇಕೆಂಬುದಕ್ಕೂ ಮಾಡಿದ ವ್ಯಾಸಂಗದ ದೃಢತೆಗೂ ನೆರವು ದೊರೆಯುವುದು.

ಈ ಸಂಗ್ರಹಪುಸ್ತಕವನ್ನು ಸಿದ್ಧಪಡಿಸುವಲ್ಲಿ ನೆರವಾದ ನಮ್ಮ ಇಷ್ಟ ಮಿತ್ರರಿಗೆ ಕೃತಜ್ಞರಾಗಿದ್ದೇವೆ. ತಂತಮ್ಮ ಉತ್ತಮ ಕಾವ್ಯ ಭಾಗಗಳನ್ನು ಈ ಮಾಲೆಯಲ್ಲಿ ಸೇರಿಸಲು ದಯವಿಟ್ಟು ಅನುಮತಿಯನ್ನಿತ್ತ ಮಹಾಶಯರಿಗೆ ನಾವು ತುಂಬ ಋಣಿಯಾಗಿದ್ದೇವೆ. ಈ ಪುಸ್ತಕವನ್ನು ಸಕಾಲದಲ್ಲಿ ಅಚ್ಚು ಹಾಕಿಕೊಟ್ಟ ಶ್ರೀಮಹಾವೀರ ಮುದ್ರಣಾಲಯದ ಮತ್ತು ಧಾರವಾಡದ ಸಾಧನ ಮುದ್ರಣಾಲಯದ ಒಡೆಯರನ್ನು ಅಭಿನಂದಿಸದೆ ಇರಲಾರೆವು.

ಮುಂದಡಿಯಿಡುತ್ತಿರುವ ನಮ್ಮ ಹಿರಿಯ ಕನ್ನಡನಾಡಿನ ಪ್ರಿಯ ವಿದ್ಯಾರ್ಥಿಗಳ ಕೈಯಲ್ಲಿತ್ತ, ಈ ಉಪಹಾರವನ್ನು ಅವರು ಒಲುಮೆಯಿಂದ ಕೈಕೊಳ್ಳುವರೆಂದೂ, ತಾಯ್ನುಡಿಯ ಈ ಅಳಿಲಸೇವೆಯಿಂದ ನಾಡತಾಯಿ ನಲಿಯುವಳೆಂದೂ ಹಾರೈಸಿದ್ದೇವೆ.

ಕಾರ್ತಿಕ ಶುದ್ಧ ಪ್ರತಿಪದೆ, ೧೮೬೧.
ತಾ|| ೨೪—೧೦—೧೯೩೮.

**ಸಂಪಾದಕರು.**

# ಸೂಚನೆಗಳು.

ಭಾಷಾಭ್ಯಾಸವೆಂದರೆ: ತನ್ನ ಭಾಷೆ ಉತ್ತಮವಾಗುವುದಕ್ಕೂ, ಇತರರ ಭಾಷೆಯನ್ನು ತಿಳಿದುಕೊಳ್ಳುವುದಕ್ಕೂ ಬೇಕಾದ ಸಂಗತಿಗಳ ಕೂಲಂಕಷವಾದ ಅಭ್ಯಾಸ. ಇದರಲ್ಲಿ ಬಲ್ಲವರು ಹೇಳುವಂತೆ ಭಾಷಾವ್ಯುತ್ಪತ್ತಿ (ಲ್ಯಾಂಗ್ವೇಜ) ವಿಚಾರಸಾಹಿತ್ಯ (ಲಿಟ್ರೇಚರ) ವಿಚಾರ ಎಂದು ಎರಡು ಭಾಗಗಳು. ಪದ, ಪದಾರ್ಥ, ಪದಗಳ ಸಿದ್ಧರೂಪ ನಿಷ್ಪತ್ತಿ ಇವು ಮೊದಲನೆಯ ಭಾಗದಲ್ಲಿಯೂ, ಗದ್ಯ, ಪದ್ಯ, ಚಂಪು, ನಾಟಕ ಮುಂ. ಎಲ್ಲ ಬಗೆಯ ಸಾಹಿತ್ಯದ ಬರವಣಿಗೆಯ ಬಗೆ, ಕಠಿಣಶೈಲಿ, ಮೃದುಶೈಲಿ, ಮಧುರಶೈಲಿ ಮುಂತಾದ ಶೈಲಿವಿಚಾರ, ರಸಾಲಂಕಾರಗಳು, ಛಂದಸ್ಸು ಮೊದಲಾದ ಕಾವ್ಯಮರ್ಯಾದೆಗಳು ಮುಂತಾದುವೆಲ್ಲ ಎರಡನೆಯ ಭಾಗದಲ್ಲಿಯೂ ಸೇರುವವು. ಈ ದೃಷ್ಟಿಯಿಂದಲೇ ಇಲ್ಲಿಯ ಗದ್ಯ ಪದ್ಯ ಪಾಠಗಳು ಆರಿಸಿವೆ. ಪದ್ಯಪಾಠಗಳಲ್ಲಿ ಬಹುಶಃ ಎಲ್ಲ ಪ್ರಮುಖ ಷಟ್ಪದೀಕಾವ್ಯಗಳಿಂದ ತರಗತಿಗನುಗುಣವಾದ ಭಾಗಗಳು ಆಯ್ದುಕೊಂಡಿವೆ. ಆದ್ದರಿಂದ ಈ ಪಾಠಗಳನ್ನು ಅಭ್ಯಾಸ ಮಾಡುವಾಗ ಅಲ್ಲಿಯ ವಿಷಯಗಳನ್ನಲ್ಲದೆ ಅವಕ್ಕಿಂತ ಹೆಚ್ಚಾಗಿ ಈ ಕೆಳಗೆ ಹೇಳುವ ಮಾತುಗಳನ್ನು ಗಮನಿಸುವದು ಅತ್ಯವಶ್ಯ.

೧. ಶಬ್ದಭಾಂಡಾರವನ್ನು ಬೆಳೆಸಿಕೊಳ್ಳುವದು; ಎಂದರೆ ಆದಷ್ಟು ಹೆಚ್ಚು ಶಬ್ದಗಳನ್ನು ಅರ್ಥ ತಿಳಿದುಕೊಂಡು ಸ್ಮರಣೆಯಲ್ಲಿಟ್ಟುಕೊಳ್ಳುವದು, ಒಂದೇ ಅರ್ಥದ ಅನೇಕ ಶಬ್ದಗಳನ್ನೂ, ಒಂದೇ ಶಬ್ದದ ಅನೇಕಾರ್ಥಗಳನ್ನೂ ತಿಳಿದುಕೊಳ್ಳುವದು. ೨. ಭಾಷಾವ್ಯುತ್ಪತ್ತಿಗೆ ಸಾಧನವಾದ ವ್ಯಾಕರಣ (ಅಪ್ಲೈಡ್ ಗ್ರ್ಯಾಮರ್) ವನ್ನು ಓದುವ ಪುಸ್ತಕದ ಆಯಾ ಸಂದರ್ಭಗಳಲ್ಲಿಯೇ ಅಭ್ಯಾಸಿಸುವದು. ೩. ಹಿಂದೆ ಮುನ್ನುಡಿಯಲ್ಲಿ ಹೇಳಿದ ಶೈಲಿ ಮೊದಲಾದುವನ್ನು ವಿಮರ್ಶಿಸುವದು. ಯೋಗ್ಯವಾದ ಗದ್ಯ ಪದ್ಯ ಭಾಗಗಳನ್ನು ಪಾಠಮಾಡಿ ಅವುಗಳನ್ನನುಕರಿಸಲು ಯತ್ನಿಸುವದು. ೪. ಗದ್ಯ ಪದ್ಯಗಳಲ್ಲಿ ಬಂದ ಭಾಷೆಯ ಸ್ವಾರಸ್ಯವನ್ನು ಕಂಡುಹಿಡಿವುದು. ೫. ಭಾಷಾಸ್ವಾರಸ್ಯಕ್ಕೆ ಆವಶ್ಯಕ ಸಂಗತಿಗಳನ್ನಭ್ಯಾಸಿಸುವದು.

ಅನೇಕ ಸಂದರ್ಭಗಳಲ್ಲಿ ಈ ಮಾತುಗಳ ಕಡೆಗೆ ವಿದ್ಯಾರ್ಥಿಗಳ ಲಕ್ಷ್ಯವು ಎಳೆಯಬೇಕಾದುದು ಅವಶ್ಯವೆಂದು ಸೂಚಿಸುವೆವು. — ಸಂ.

# ಮಹನೀಯರ ಅಭಿಪ್ರಾಯಗಳು.

ಕೆಲವು ಪಾಠಗಳನ್ನು ಓದಿ ತಿಳಿದುಕೊಂಡರೆ ಮಾತೃಭಾಷೆಯ ಅಭ್ಯಾಸ ಮಾಡಿದಂತಾಗಲಿಲ್ಲ; ಮೇಲಾದ ಗದ್ಯಪದ್ಯಗಳ ಸ್ವಾರಸ್ಯವನ್ನು ಗ್ರಹಿಸಿ, ಒಳ್ಳೆಯ ವಾಙ್ಮಯದಲ್ಲಿ ಅಭಿರುಚಿಯನ್ನುಂಟುಮಾಡಿಕೊಳ್ಳುವದಲ್ಲದೆ, ವಿದ್ಯಾರ್ಥಿಗಳು ತಮ್ಮ ಮನೋಗತವನ್ನು ಶುದ್ಧವೂ ಸರಳವೂ ಆದ ಮಾತಿನಲ್ಲಿ ಸುಸಂಗತವಾಗಿಯೂ ಪರಿಣಾಮಕರವಾಗಿಯೂ ಹೇಳಲಿಕ್ಕೂ ಬರೆಯಲಿಕ್ಕೂ ಶಕ್ತರಾಗಬೇಕಾಗುವದು. ಈ ಕೌಶಲ್ಯವು ಸ್ವಲ್ಪಮಟ್ಟಿಗಾದರೂ ಉಂಟಾಗಬೇಕಾದರೆ ಭಾಷೆಯೊಳಗಿನ ಬಗೆಬಗೆಯ ಗದ್ಯಪದ್ಯಗಳನ್ನು ಸೂಕ್ಷ್ಮವಾಗಿ ಅಭ್ಯಾಸಿಸಬೇಕಾಗುವದು. ಇಂಥ ಗದ್ಯಪದ್ಯ ವಾಚನ ಪಾಠಮಾಲೆಗಳು ನಮ್ಮಲ್ಲಿ ಕ್ವಚಿತ್ತಾಗಿವೆ. ಈ ಕೊರತೆಯನ್ನು ಶ್ರೀ. ಮ. ಪ್ರ. ಪೂಜಾರ ಹಾಗು ಶ್ರೀ. ನಾ. ವೆ. ಕುರಡಿ ಇವರು ನೀಗಿಸಿ ವಿದ್ಯಾರ್ಥಿಗಳ ಹಾಗು ಪ್ರಾ. ಶಿಕ್ಷಕರ ಮನ್ನಣೆಗೆ ಪಾತ್ರರಾಗಿದ್ದಾರೆ. ಕರ್ನಾಟಕದ ಬೇರೆ ಬೇರೆ ಭಾಗಗಳ ಕನ್ನಡ ನುಡಿಯೂ ಭಾಷಾಶೈಲಿಯೂ ಭಿನ್ನವಾಗಿ ಕನ್ನಡದ ಅಭಿವೃದ್ಧಿಗೆ ತಡೆಯಾಗುತ್ತಿರುವದಷ್ಟೇ. ಈ ವಾಚನ ಪಾಠ ಮಾಲೆಯಲ್ಲಿ ಆರಿಸಿ ಹಾಕಿದ ಗದ್ಯ ಭಾಗಗಳು ಎಲ್ಲ ಭಾಗಗಳ ವಿದ್ಯಾರ್ಥಿಗಳಿಗೆ ಸುಗಮವಾಗಿವೆಯೆಂದು ಧಾರಾಳವಾಗಿ ಹೇಳಬಹುದು. ಗದ್ಯಪದ್ಯಗಳ ಅರ್ಥವೂ ರಹಸ್ಯವೂ ಪರಿಷ್ಕೃತವಾಗಿ ಭಾಷಾಭ್ಯಾಸಕ್ಕೆ ನೆರವಾಗಲು ಅವಶ್ಯವಿರುವಷ್ಟು ಟಿಪ್ಪಣಿಗಳನ್ನು ಸಂಪಾದಕರು ಕೊನೆಗೆ ಕೊಟ್ಟಿರುವರು. ಈ ವಾಚನ ಪಾಠ ಮಾಲಿಯಿಂದ ಈ ಪ್ರಾಂತದಲ್ಲಿ ಮಾತೃಭಾಷೆಯ ಅಭ್ಯಾಸಕ್ಕೆ ಯೋಗ್ಯ ಗತಿಯು ದೊರೆಯುವದೆಂದು ನಮ್ಮ ನಂಬುಗೆಯಿದೆ. ಕನ್ನಡ ಭಾಷೆಯ ಅಭ್ಯಾಸದಲ್ಲಿಯೂ ಶಿಕ್ಷಣದಲ್ಲಿಯೂ ನುರಿತ ಈ ಲೇಖಕರು ಭಾಷಾಭ್ಯಾಸಕ್ಕೆ ಸಹಕಾರಿಯಾಗುವ ಇತರ ಗ್ರಂಥಗಳನ್ನು ರಚಿಸಿ ವಿದ್ಯಾರ್ಥಿವರ್ಗಕ್ಕೂ ಶಿಕ್ಷಕವೃಂದಕ್ಕೂ ತಮ್ಮ ಜ್ಞಾನಾನುಭವಗಳ ಲಾಭವನ್ನು ಮಾಡಿಕೊಟ್ಟು ಕನ್ನಡ ಭಾಷಾಸೇವೆಯನ್ನು ಹೆಚ್ಚಾಗಿ ಮಾಡುವರೆಂದು ಹಾರೈಸುತ್ತೇವೆ.

ಧಾರವಾಡ.
ತಾ|| ೧೯—೧೨—೩೮.

**V. N. MAGADAL.**

# ಪರಿವಿಡಿ.


೧. ನಮ್ಮ ಹಿರಿಯ ಕನ್ನಡ ನಾಡು ನುಡಿ (ವಿವೇಚನಾತ್ಮಕ ಪ್ರಬಂಧ) ೧

೨. ಸತಿ ( ಸರಳ ಶೈಲಿಯ ಪೌರಾಣಿಕ ನೀಳ್ಗತೆ ) ೬

೩. ಜಗತ್ತಿನೊಳಗಿನ ಎಲ್ಲಕ್ಕೂ ಹೆಚ್ಚಿನ ಆಶ್ಚರ್ಯವು (ಶಾಸ್ತ್ರೀಯ ಪ್ರಬಂಧ) ೩೩

೪. ಒಂದೇಗತಿ ( ವರ್ಣನಪರ ಕಥೆ ) ೩೧

೫. ಪದ್ಮಿನಿ ( ಭಾವನಾತ್ಮಕ ಕಾದಂಬರಿ ) ೩೬

೬. ಮದಿನೆಯಲ್ಲಿ ಮುಹಮ್ಮದ ಪೈಗಂಬರರು ( ಸುಲಭ ಶೈಲಿಯ ಮಹಾಪುರುಷರ ಜೀವನ ಚರಿತ್ರೆಯ ಒಂದು ಭಾಗ ) ೫೪

೭. ವೇಣೀಸಂಹಾರ (ನಾಟಕ) ೫೯

೮. ಪಂಪಾಯಾತ್ರೆ ( ಪ್ರವಾಸ ವೃತ್ತ ) ೭೦

೯. ಮಹಾರಾಣಿ ಲಕ್ಷ್ಮೀಬಾಯಿ ( ವೀರರಸಪ್ರಧಾನವಾದ ಕಾದಂಬರಿ ) ೭೮

೧೦. ಶುಕ ಶಿಶುವಿನ ಆತ್ಮವೃತ್ತ ( ಪ್ರೌಢ ಶೈಲಿಯ ಗದ್ಯ ಕಾವ್ಯ ಭಾಗ) ೯೧

೧೧. ಶಿಕ್ಷೆ ( ಹಾಸ್ಯರಸ ಕಥೆ ) ೧೦೨

೧೨. ಗದಾಯುದ್ಧವೂ ಭೀಮಸೇನನ ನೀತಿಯೂ (ಪ್ರತಿಪಾದನಪರ ಪ್ರಬಂಧ) ೧೧೫

೧೩. ನಮ್ಮ ಸ್ವಾತಂತ್ರ್ಯಯುದ್ಧದ ಎರಡು ಪ್ರಕರಣಗಳು ( ಐತಿಹಾಸಿಕ ಕಾದಂಬರಿ ) ೧೨೪

೧೪. ಎರಡು ಚಿಕ್ಕ ಕಥೆಗಳು ೧೪೫

೧೫. ಮಹಾತ್ಮಾಜಿಯವರು ( ಮಹಾಪುರುಷರ ಜೀವನ ಚರಿತ್ರೆ-ಬಿಗುವುಳ್ಳ ಶೈಲಿಯ ಮಾದರಿ )

# ಕನ್ನಡ

# ವಾಚನಪಾಠ ಮಾಲೆ

## ೧. ನಮ್ಮ ಹಿರಿಯ ಕನ್ನಡ ನಾಡು; ನುಡಿ.

ಕನ್ನಡಿಗರ ನೆಲೆವೀಡಾದ ನಮ್ಮ ನಾಡಿಗೆ 'ಕರ್ನಾಟಕ' ವೆನ್ನಬೇಕೋ 'ಕರ್ಣಾಟಕ' ವೆನ್ನಬೇಕೋ ಎಂಬ ಪ್ರಶ್ನೆಯೊಂದನ್ನು ಹುಟ್ಟಿಸಿಕೊಂಡು ವಾದಿಸುತ್ತಿರುವ ವಾದಿ–ಪ್ರತಿವಾದಿಗಳನ್ನು ಸಮಾಧಾನಪಡಿಸುವ ಮಾರ್ಗವನ್ನು ಮುಂದೆ ಶೋಧಿಸುವ. ಅಲ್ಲಿಯವರೆಗೂ ಕರ್ಣಾಟಕವೆಂದರೂ ಅಷ್ಟೇ; ಕರ್ನಾಟಕವೆಂದರೂ ಅಷ್ಟೇ. ಎರಡೂ ಹೆರವರ ಮಾತು. ದಾರಿಯ ಜಗಳವನ್ನು ಮನೆಗೇಕೆ ಕರೆತರಬೇಕು? ಕೆಲವರು ಕರ್ನಾಟಕವೆನ್ನಲಿ, ಕೆಲವರು ಕರ್ಣಾಟಕವೆನ್ನಲಿ. ಇವರಿಬ್ಬರೂ ಬೇರೆ ಬೇರೆಯಾಗುಳಿದು ಸಂಸ್ಕೃತದ ಮಬ್ಬಿನಲ್ಲಿದ್ದು ಕನ್ನಡಿಗರ ಕನ್ನಡತನವನ್ನು ಮರೆತಿರದಿದ್ದರಾಯಿತು. ಎಲ್ಲರೂ ಒಂದಾದಾಗ ಆ ಉದಯಹೊಂದುವ ಚೆಲುವ ಕನ್ನಡ ನಾಡಿಗೆ 'ಹಿರಿಯ ಕನ್ನಡ ನಾಡು' ಎಂಬ ನಮ್ಮ ಅಚ್ಚಗನ್ನಡ ಹೆಸರನ್ನಿಟ್ಟುಕೊಳ್ಳುವ. ಆ ನಮ್ಮ ಹಿರಿಯ ಕನ್ನಡ ನಾಡು ಬೇಗನೆ ಉದಯವಾಗಲಿ! ಅಲ್ಲಿಯವರೆಗೂ ನಾವೆಲ್ಲರೂ "ಉದಯವಾಗಲಿ ನಮ್ಮ ಹಿರಿಯ ಕನ್ನಡ ನಾಡು" ಎಂದು ಹಾರೈಸುತ್ತಿರುವ.

ನಮ್ಮ ನಾಡಾವುದು, ಎಲ್ಲಿ ನೆಲೆಸಿದೆ, ಎಷ್ಟು ವಿಸ್ತಾರವಾಗಿದೆ, ಅದರ ಮೇರೆಯ ಗಡಿಗಲ್ಲುಗಳಾವುವು ಇವೇ ಮೊದಲಾದ ಹಲವು ಪ್ರಶ್ನೆಗಳಿಗೆ ಇನ್ನೂ ನಿಶ್ಚಿತವಾದ ಉತ್ತರಗಳು ದೊರೆತಿಲ್ಲ. ಮರಾಟಿಗರೂ ಬೇರೆ ನಮ್ಮ ದ್ರಾವಿಡ ಬಾಂಧವರೂ ನಮ್ಮ ನಾಡಿನ ಗಡಿಗಳನ್ನಾಕ್ರಮಿಸಿ ಮುಂದುವರಿಯುತ್ತ ನಡೆದಿರುವುದೇ ಈ ತೊಂದರೆಗೆ ಕಾರಣವಾಗಿದೆ. ಹಿಂದೊಂದು ಕಾಲದಲ್ಲಿ, ನಮ್ಮ ನಾಡುನುಡಿಗಳ ಉತ್ಕರ್ಷದ ದಿನದಲ್ಲಿ, ನಮ್ಮ ನಾಡು

ಗೋದಾವರೀ ಕಾವೇರಿಗಳೇ ಗಡಿಯೆನಿಸಿಕೊಳ್ಳುವಷ್ಟು ವಿಸ್ತಾರವಾಗಿದ್ದಿತು. ಆದುದರಿಂದ ನಮ್ಮ ಕವಿಗಳು "ಕಾವೇರಿ ದಕ್ಷಿಣದೊಳುತ್ತರದ ದಿಶೆಗೆ ಗೋದಾವರಿಯೆ ನಿನ್ನ ಗಡಿಯೆನಿಸಿತೊಮ್ಮೆ" ಎಂದು ಹಾಡಿದರು. ಆದರೆ ಆದು ಕಾಲಕ್ರಮದಲ್ಲಿ ಆಕುಂಚನಹೊಂದುತ್ತ ನಡೆದು ಕೊನೆಗೆ ಹೋಳು ಹೋಳಾಗಿ ಸಿಡಿದುಬಿದ್ದಿದೆ. ಈಗ ಅದನ್ನು ಸಂಗ್ರಹಿಸಿ ಹೇಳುವದಾದರೆ ಹೀಗೆ ಹೇಳಬಹುದು: ಮುಂಬಯಿ ಆಧಿಪತ್ಯಕ್ಕೆ ಒಳಗಾದ ಧಾರವಾಡ ಬೆಳಗಾವಿ, ವಿಜಾಪುರ, ಉತ್ತರ ಕನ್ನಡ ಜಿಲ್ಲೆಗಳೂ, ಮದ್ರಾಸ ಆಡಳಿತೆಗೆ ಸೇರಿದ ಸೇಲಂ, ನೀಲಗಿರಿ, ದಕ್ಷಿಣ ಕನ್ನಡ ಜಿಲ್ಲೆಗಳೂ, ಬಳ್ಳಾರಿ ಅನಂತಪುರ ಕೊಯಿಮುತ್ತೂರು ಜಿಲ್ಲೆಗಳ ಹಲಕೆಲವು ಭಾಗಗಳೂ, ಕೊಡಗು ಪ್ರಾಂತವೂ ಬ್ರಿಟಿಷ ಹಿಂದುಸ್ತಾನಕ್ಕೆ ಸೇರಿದ ಕನ್ನಡನಾಡಿನ ಮುಖ್ಯಭಾಗಗಳು. ಇವಲ್ಲದೆ ಹೈದರಾಬಾದಿನ ನಿಜಾಮರ ಆಧೀನದಲ್ಲಿದ್ದ ರಾಯಚೂರು ಗುಲಬುರ್ಗಾ ಉಸ್ಮಾನಾಬಾದ ಜಿಲ್ಲೆಗಳೂ, ಮಿರಜಿ ರಾಮದುರ್ಗ ಮುಧೋಳ ಸಾಂಗಲಿ ಜಮಖಂಡಿ ಸವಣೂರು ಸೊಂಡೂರು ಮೊದಲಾದ ಹದಿನೈದು ಚಿಕ್ಕದೊಡ್ಡ ದೇಶೀಯ ರಾಜರ ಸಂಸ್ಥಾನಗಳೂ ನಮ್ಮ ಕನ್ನಡ ಅಣ್ಣ ಅಕ್ಕಂದಿರ ನಿವಾಸ ಗಳಾಗಿರುವುದರಿಂದ ನ್ಯಾಯ್ಯವಾಗಿ ಅವು ನಮ್ಮ ಹಿರಿಯ ಕನ್ನಡ ನಾಡಿನ ಅಂಗೋಪಾಂಗಗಳೇ ಸರಿ. ಇವೆಲ್ಲವನ್ನೂ ಮಿಕ್ಕ, ಅಚ್ಚ ಕನ್ನಡ ದೊರೆಗ ಳಾಗಿ ಅಖಿಲ ಕನ್ನಡ ಪ್ರಜೆಗಳ ಮನಸ್ಸನ್ನು ಸೆಳೆದುಕೊಳ್ಳುತ್ತಿರುವ ಕನ್ನಡ ಒಡೆಯರ ರಾಮರಾಜ್ಯಕ್ಕೆ ಸೇರಿರುವ ವಿಸ್ತಾರವಾದ ಎಂಟು ಕನ್ನಡ ಜಿಲ್ಲೆ ಗಳನ್ನೊಳಗೊಂಡು ಕನ್ನಡ ಬಳಗದಲ್ಲಿ ಬಾಂಧವ್ಯವನ್ನು ಬೆಳಿಸಿಕೊಳ್ಳಲು ಹವ ಣಿಸುವ ಮೈಸೂರು ನಾಡೊಂದು ದಕ್ಷಿಣದಲ್ಲಿ ಮೆರೆಯುತ್ತಿದೆ. ಹೀಗೆ ಹರಿದು ಹದಿನೆಂಟು ಸೀಳಾಗಿ ಸಿಡಿದುಬಿದ್ದಿರುವ ಕನ್ನಡನಾಡೆಂಬ ರನ್ನಗನ್ನಡಿಯು ಒಂದೇ ಕಟ್ಟಿನಲ್ಲಿ ಹೊಂದಿಕೊಂಡು ಮಿರುಗುವಂತಾಗಬೇಕೆಂದು ಇಂದಿನ ನಮ್ಮ ಹಿರಿಯರ ಹಿರಿಯ ಆಸೆಯಿರುವುದಾದರೂ ಮೇಲೆ ಹೇಳಿದ ಬ್ರಿಟಿಷರ ಆಡಳಿತೆಗೆ ಸೇರಿದ ಭಾಗಗಳಷ್ಟೇ ಆದರೂ ಇಂದೇ ಒಂದಾಗಬೇಕೆಂದು ಅವರು ವಿಶ್ವಪ್ರಯತ್ನ ನಡೆಯಿಸುತ್ತಲಿದ್ದಾರೆ. ಕರ್ಣಾಟಕ ಏಕೀಕರಣ ಸಂಘವು ಸ್ಥಾಪಿತವಾಗಿ ಅದರ ಮೂಲಕ ಸಾರ್ವಜನಿಕ ಸಭೆಗಳ ನಿರ್ಣಯಗಳೂ

ದೂರುಗಳೂ ಸರಕಾರಕ್ಕೆ ಹೋಗುತ್ತಲಿವೆ. ದೇಶದ ಮುಂದಾಳುಗಳು ಈ ಮಾತನ್ನು ಒಪಿಕೊಂಡಿರುವರಾದರೂ ಅದನ್ನು ಕಾರ್ಯರೂಪವಾಗಿ ನಡೆಯಿಸಲು ಇನ್ನೂ ಅನೇಕ ತೊಂದರೆಗಳಿವೆಯೆನ್ನುತ್ತಿದ್ದಾರೆ. ಇಂದಿಲ್ಲದಿದ್ದರೆ ನಾಳೆಯಾದರೂ ಈ ಮಾತು ಆಗಿಯೆ ತೀರಬೇಕೆಂಬ ಆಶಾವಾದಿಗಳ ಪ್ರಯತ್ನವೇನೋ ಪ್ರಬಲವಾಗಿ ಸಾಗಿಯೇ ಇದೆ.

'ಭರತಖಂಡವು ಭೂಲೋಕದ ಸಾರ'ವೆನ್ನುವ ಮಾತಿನಂತೆ "ಕರ್ನಾಟಕವು ಸಂಕ್ಷಿಪ್ತ ಭರತಖಂಡ" ವೆಂಬ ಮಾತೂ ವಾಡಿಕೆಯಲ್ಲಿದೆ. ಮೇಲೆ ವಿವರಿಸಿದ ನಮ್ಮ ಹಿರಿಯ ಕನ್ನಡ ನಾಡಿಗೆ ಸುಮಾರು ಮುನ್ನೂರು ಮೈಲು ಉದ್ದವಾದ ಸಮುದ್ರತೀರವುಂಟು. ಅದಕ್ಕೆ ಹೊಂದಿದ ದಂಡೆಯು ಕಿರಿಯ ಗಲದ ಬಯಲುಭೂಮಿಯು ಕರಾವಳಿಯಿಂದ ಎದ್ದು ಬಂದಿರುವ ಸಹ್ಯಗಿರಿಯ ಸಾಲುಗಳ ಮಲೆನಾಡು ಬಹುಭಾಗದಲ್ಲಿ ದಟ್ಟಡವಿಯಿಂದ ಮುಸುಕಿ ವಿಶಾಲವಾದ ದರಿಕಂದರಗಳಿಂದಲೂ ಜಲಪ್ರಪಾತ ಆಣೆಕಟ್ಟು ಇವುಗಳಿಂದಲೂ, ಸುರಮ್ಯವಾಗಿ ಸೃಷ್ಟಿಸೌಂದರ್ಯದ ಆಗರವಾಗಿದೆ. ಅದರಾಚೆಯು ಬೆಡಗಿನ ಗಡಿನಾಡನ್ನು ದಾಟಿದರೆ ಕರುನಾಡಿನ–ಎರೆನಾಡಿನ–ಬೆಳೆಪೊಲದ ನಾಡಿನ ಬೆಳೆಯುಳ್ಳ ಭೂಭಾಗವು ಜನವಸತಿಯಿಂದ ಕಿಕ್ಕಿರಿದು ಫಲವತ್ತಾಗಿ ಸಂಪತ್ತಿನ ಬೀಡಾಗಿದೆ. ಹೀಗೆ ತರತರದ ಭೂಗುಣ ವಾಯುಗುಣಗಳಿರುವಂತೆಯೇ ನಮ್ಮ ಕನ್ನಡ ನಾಡು ಉತ್ತರದ ಆರ್ಯರ ಮತ್ತು ದಕ್ಷಿಣದ ದ್ರಾವಿಡರ ಸಂಸ್ಕೃತಿಗಳ ಸಂಗಮಸ್ಥಾನವಾಗಿರುವುದರಿಂದ ಈ ಎರಡೂ ಸಂಸ್ಕೃತಿಗಳ ಸಮ್ಮಿಲನವನ್ನು ಇಲ್ಲಿ ಕಾಣಬಹುದು.

ನಮ್ಮ ನಾಡು, ನಮ್ಮ ನುಡಿ ಇವು ಇಂದು ನಿನ್ನಿನವಲ್ಲ. ವೇದಕಾಲಕ್ಕೆ ಮೊದಲೂ ವೇದಕಾಲದಲ್ಲಿಯೂ ನಮ್ಮ ನಾಡು ನುಡಿಗಳು ಒಡೆದು ಮೂಡಿ ಸ್ವತಂತ್ರವಾಗಿ ಪ್ರಚಾರದಲ್ಲಿದ್ದುವು. ಭಾರತ ರಾಮಾಯಣಗಳ ಪೌರಾಣಿಕ ಯುಗದಲ್ಲಂತೂ ಇವುಗಳ ಸುಸ್ಪಷ್ಟವಾದ ಉಲ್ಲೇಖವಿದೆ. ನಮ್ಮ ನಾಡಿನ ನಮಗೆ ಉಪಲಬ್ಧವಾಗಿರುವ ಇತಿಹಾಸಪ್ರವಾಹವು ಭದ್ರಬಾಹು ಚಂದ್ರಗುಪ್ತರ ಕಾಲದಲ್ಲಿ ಉಗಮವಾಗಿ ಈವರೆಗೂ ಅವಿಚ್ಛಿನ್ನವಾಗಿ ಪ್ರವಹಿಸಿ ಬಂದಿದೆಯೆಂದು ಹೇಳಬಹುದು. ಶಾತವಾಹನರು, ಕದಂಬರು, ಬಾದಾಮಿಯ ಚಾಲುಕ್ಯರು, ತಲಕಾಡಿನ ಗಂಗರಸರು, ಮಾನ್ಯಖೇಟದ ರಾಷ್ಟ್ರಕೂಟರು ಇವ

ರೆಲ್ಲರೂ ನಮ್ಮ ನಾಡನ್ನಾಳಿದ ಬುನಾದಿಯ ಅರಸುಮನೆತನದವರು. ಈ ಎಲ್ಲರ ಆಳಿಕೆಗಳಲ್ಲಿ ನಮ್ಮ ನುಡಿಯ ಒಂದೊಂದು ಅವಸ್ಥೆಯು ಪ್ರಚಾರದಲ್ಲಿದ್ದಿತು. ಆಗ ನಮ್ಮ ಸಾಹಿತ್ಯವು ಬೆಳೆವಣಿಗೆ ಹೊಂದಿದ್ದಿತು; ಅಸಂಖ್ಯ ಗ್ರಂಥರಾಶಿಯೂ ಉಪಲಬ್ಧವಿದ್ದಿತು. ಆದರೆ ಅವುಗಳಲ್ಲೊಂದೂ ನಮಗೆ ಸಾಗಿಬಾರದಿರುವುದು ನಮ್ಮ ದುರ್ದೈವವೆನ್ನಬೇಕು. ರಾಷ್ಟ್ರಕೂಟರ ಅರಸು ನೃಪತುಂಗನು ತಾನೇ ಕವಿಯಾಗಿ 'ಕವಿರಾಜಮಾರ್ಗ'ವೆಂಬ ಕಾವ್ಯಧರ್ಮ-ವಿವೇಚನಾತ್ಮಕ ಗ್ರಂಥವೊಂದನ್ನು ರಚಿಸಿದನು. ಇದೇ ನಮಗೆ ದೊರೆತ ಮೊದಲನೆಯ ಕನ್ನಡಗ್ರಂಥ; ಪಿತ್ರಾರ್ಜಿತವಾದ ಸೊತ್ತು. ಅದರೊಳಗಿನ ಉದಾಹರಣ ಶ್ಲೋಕಗಳೆಲ್ಲ ಆ ಕಾಲದ ಹಿಂದಣ ಅಥವಾ ತತ್ಕಾಲೀನವಾದ ಸುಪ್ರಸಿದ್ಧ ಗ್ರಂಥಗಳಿಂದ ಉದ್ಧೃತವಾದುವುಗಳು. ಆದರೆ ಆ ಗ್ರಂಥಗಳಲ್ಲೊಂದೂ ನಮಗೆ ಉಪಲಬ್ಧವಾಗಿಲ್ಲ. ಕ್ರಿಸ್ತಪೂರ್ವ ಮೂರು ಶತಮಾನಗಳ ಹಿಂದಣ ಶಿಲಾಲೇಖನಗಳಲ್ಲ ನಮ್ಮ ನುಡಿಯೂ ಲಿಪಿಯೂ ಅಲ್ಪ ಸ್ವಲ್ಪ ವ್ಯತ್ಯಾಸದೊಡನೆ ಉಪಯೋಗಿಸಲ್ಪಟ್ಟಿರುವುದನ್ನು ನೋಡಬಹುದು. ಇದರಿಂದ ನಮ್ಮ ನುಡಿಯ ಮತ್ತು ನಾಡಿನ ಅಥವಾ ಸಂಸ್ಕೃತಿಯ ಪ್ರಾಚೀನತೆಯನ್ನು ಊಹಿಸಬಹುದು.

ಪ್ರಾಚೀನವೈಭವದಲ್ಲಿಯೂ ನಡೆನುಡಿಗಳು-ಸಂಸ್ಕೃತಿ-ಕಲಾಜೀವನ ಇವುಗಳಲ್ಲಿಯೂ ನೆರೆಯ ಮರಾಟಿಗರಿಗೂ ಇನ್ನುಳಿದ ದ್ರಾವಿಡ ಬಂಧುಗಳಿಗೂ ಯಾವ ವಿಧದಿಂದಲೂ ಹಿಂದಿಲ್ಲದ ನಮ್ಮ ಕನ್ನಡನಾಡಿನ ಮುನ್ನಡೆಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ವಿವೇಚಿಸಿ ಪ್ರಕೃತ ವಿಷಯವನ್ನು ನಿಲ್ಲಿಸುವ.

ಮೇಲೆ ವಿವೇಚಿಸಿದ ನಮ್ಮ ಹಿರಿಯ ಕನ್ನಡ ನಾಡು ವಿಸ್ತಾರದಲ್ಲಿ ನೋಡಿದರೆ ಪ್ರಪಂಚದಲ್ಲೆಲ್ಲ ಹೆಸರು ಪಡೆದ ಬ್ರಿಟಿಷ್ ಸಾಮ್ರಾಜ್ಯದ ಮುಕುಟಮಣಿಯೆನಿಸಿದ ಇಂಗ್ಲಂಡಕ್ಕಿಂತಲೂ ಹೆಚ್ಚಾಗಿದೆ. ಇಂಗ್ಲಂಡವು ನಮ್ಮ ನಾಡಿನಷ್ಟು ದೊಡ್ಡದಾಗಬೇಕಾದರೆ ಸ್ಕಾಟ್ಲಂಡವನ್ನು ಕೂಡಿಸಿಕೊಳ್ಳಬೇಕು. ಈ ಹಿರಿಯ ಕನ್ನಡ ನಾಡಿನ ಜನಸಂಖ್ಯೆಯು ಒಂದೂವರೆಕೋಟಿಯಷ್ಟಾಗುವುದು. ಈಯೆಲ್ಲಪ್ರದೇಶವನ್ನು ಒಂದುಗೂಡಿಸಿ ಒಂದೇ ಆಡಳಿತಕ್ಕೆ ಸೇರಿಸಿ ಒಂದು ಕನ್ನಡ ರಾಷ್ಟ್ರವನ್ನು ನಿರ್ಮಾಣ ಮಾಡಬೇಕೆಂಬುದೇ ಕನ್ನಡಿಗರ

ಹಿರಿಯ ಹಂಬಲವೆಂದು ಹಿಂದೆ ಹೇಳಿದೆ. ಆ ಮಾತು ರಾಜಕೀಯ ಕಾರಣಗಳ ಮೂಲಕ ಪ್ರಕೃತಕ್ಕೆ ಬಹು ಕಷ್ಟಸಾಧ್ಯವೆಂದಿಟ್ಟುಕೊಂಡರೂ ಬ್ರಿಟಿಷರ ಅಧೀನದಲ್ಲಿರುವ ಮುಂಬಯಿ ಅಧಿಪತ್ಯದ ನಾಲ್ಕು ಜಿಲ್ಲೆಗಳು, ಮದ್ರಾಸಕ್ಕೆ ಸೇರಿದ ಮೂರು ಜಿಲ್ಲೆಗಳು, ಕೊಡಗು, ಇನ್ನುಳಿದ ಹಲಕೆಲವು ತಾಲೂಕುಗಳು ಇವನ್ನಷ್ಟೇ ಆದರೂ ಒಂದುಗೂಡಿಸಿದರೆ ಕನ್ನಡ ಏಕೀಕರಣದ ಕಾರ್ಯಕ್ಕೆ ಜೀವಕಳೆ ಬಂದಂತಾಗುವುದು. ಕನ್ನಡ ರನ್ನಗನ್ನಡಿಯ ಇಪ್ಪತ್ತೆರಡು ಹೋಳುಗಳಲ್ಲಿ ದೊಡ್ಡವಾದ ಒಂದೆರಡನ್ನೇ ಆದರೂ ಹೊಂದಿಸಿ ಒಂದು ಕಟ್ಟಿನಲ್ಲಿ ಸೇರಿಸಿದರೆ ಅದೊಂದು ಸುಂದರವಾದ ನಿಲುವುಗನ್ನಡಿಯಾಗಬಹುದಲ್ಲವೇ? ಇಷ್ಟೇ ಪ್ರದೇಶದ ಭೂಮಿ ೨೫೦೦೦ ಚೌರಸ ಮೈಲಿನಷ್ಟಾಗಬಹುದು. ಜನಸಂಖ್ಯೆ ೭೦-೭೫ ಲಕ್ಷ ಎಂದರೆ ಸುಮಾರು ಮುಕ್ಕಾಲು ಕೋಟಿಗೆ ಸಮೀಪಿಸಬಹುದು. ಆದಾಯ ವೆಚ್ಚಗಳು ಕ್ರಮವಾಗಿ ೨೭೫ ಲಕ್ಷ, ೨೨೫ ಲಕ್ಷಗಳಾಗಿ ಉಳಿತಾಯವು ೫೦ ಲಕ್ಷವಾಗಬಹುದು. ಎಂದರೆ ವಿಸ್ತಾರ, ಜನಸಂಖ್ಯೆ, ಆದಾಯ ವೆಚ್ಚಗಳು, ಸಂಸ್ಕೃತಿ, ಸಾಹಿತ್ಯ, ಪ್ರಾಕೃತಿಕ ಸೌಲಭ್ಯಗಳು ಇವೆಲ್ಲ ಸೌಕರ್ಯಗಳುಳ್ಳ ನಮ್ಮ ಕನ್ನಡ ನಾಡನ್ನು ಒಂದುಗೂಡಿಸಿ ಒಂದು ಪ್ರಾಂತವನ್ನಾಗಿ ಮಾಡುವುದರಿಂದ ನಾವೊಂದು ಸ್ವತಂತ್ರ ವಿಶ್ವವಿದ್ಯಾಲಯವನ್ನು ನಿರ್ಮಿಸಿಕೊಳ್ಳಬಹುದು; ಒಂದೆರಡು ಒಳ್ಳೆಯ ಬಂದರಗಳನ್ನು ಕಟ್ಟಿಕೊಳ್ಳಬಹುದು; ವ್ಯಾಪಾರದ ಕೇಂದ್ರಗಳನ್ನು ರಚಿಸಿಕೊಳ್ಳಬಹುದು; ರೈಲುದಾರಿಯನ್ನು ಹಾಕಿಕೊಳ್ಳಬಹುದು; ನಮ್ಮಲ್ಲಿರುವ ಭೂಸಂಪತ್ತನ್ನು ಉಪಯೋಗಿಸಿಕೊಂಡು ಹೊಸ ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸಬಹುದು; ಜಲಪ್ರಪಾತಗಳೇ ಮೊದಲಾದ ಪ್ರಾಕೃತಿಕ ಶಕ್ತಿಗಳಿಂದ ವಿದ್ಯುತ್ ಸಂಚಯವನ್ನು ಮಾಡಿಕೊಂಡು ಅದರ ಬಲದಿಂದ ಹಲವು ಜನಹಿತದ ಕಾರ್ಯಗಳನ್ನು ನೆರವೇರಿಸಬಹುದು. ಆಗ ನಮಗೂ ನಮ್ಮ ನೆರೆಯ ಸಂಸ್ಥಾನಗಳ ಕನ್ನಡಿಗರಿಗೂ ಬಳಕೆ ಹೆಚ್ಚುತ್ತ ಬಂದು ನಮ್ಮ ನಡೆನುಡಿ, ಸಾಹಿತ್ಯ, ಸಂಸ್ಕೃತಿ, ರಾಷ್ಟ್ರೀಯತ್ವಗಳ ಬೆಳೆವಣಿಗೆಯಾಗಿ ಕನ್ನಡ ಕುಟುಂಬವು ಪ್ರಪಂಚದಲ್ಲಿ ಬೆಳಗಬಹುದು.

ಹೀಗೆ ಒಂದೇ ತಾಯಿಯ ಮಕ್ಕಳಾದ ನಾವೆಲ್ಲರೂ ಒಂದಾಗಬೇಕೆಂಬ ಹಂಬಲದಿಂದ ನಮ್ಮ ಹಿರಿಯರು ನಡುಕಟ್ಟಿ ನಿಂತಿದ್ದಾರೆ; ನೆರವಿಗಾಗಿ

ಶಿಖರಗಳ ನಡುವೆ ಗಂಗಾನದಿಯ ಪ್ರವಾಹವು ಬಿಳಿಯ ಹೆಬ್ಬಾವಿನಂತೆ ಬಿದ್ದಿದ್ದು ಮೆಲ್ಲಮೆಲ್ಲನೆ ಕೆಳಗಡೆಗೆ ಹರಿಯುವುದು. ಆ ಪ್ರದೇಶದಲ್ಲಿ ಹರಿದ ಗಂಗಾಪ್ರವಾಹವು ಪುಣ್ಯದ ಪ್ರವಾಹವೇ ಸರಿ. ಆರ್ಯ ಮಹರ್ಷಿಗಳನ್ನೆಲ್ಲ ಮರುಳುಗೊಳಿಸಿದ ಆ ಪುಣ್ಯ ನದಿಯನ್ನು ಬಣ್ಣಿಸುವುದು ನಮಗೇನು ಸಾವಿರ ಮೊಗದ ಶೇಷನಿಗೂ ಆಗದ ಮಾತು.

ಆ ಮಹಾನದಿಯ ಒಂದು ಕವಲು ದಕ್ಷಪುರಿಯ ಮಗ್ಗುಲಲ್ಲಿ ಹರಿಯುವುದು. ಅದರ ಹೆಸರು ನೀಲಧಾರೆ. ದಕ್ಷರಾಜನ ಅಂದವಾದ ಅರಮನೆಯು ಈ ನೀಲಧಾರೆಯ ಮೇಲೆಯೇ ಇತ್ತು. ವರ್ಷರ್ತುವಿನಲ್ಲಿ ಹೊಳೆಯು ಈ ಅರಮನೆಯ ಅಂಗಳವನ್ನು ತೊಳೆಯುವುದು. ಅರಮನೆಯಲ್ಲಿರುವವರು ಆ ಪುಣ್ಯಪ್ರವಾಹದ ಎಡೆವಿಡದ "ಕುಳುಕುಳು" ಎಂಬ ಸಂಗೀತವನ್ನು ಕೇಳುತ್ತ ನಿದ್ರೆಗೈಯುವರು.

ದಕ್ಷರಾಜನಿಗೆ ಹಲವರು ಹೆಣ್ಣುಮಕ್ಕಳಿದ್ದರು. ಸರೋವರವು ಅರಳಿದ ತಾವರೆಗಳಿಂದ, ಆಕಾಶವು ಮಿನುಗುವ ತಾರೆಗಳಿಂದ ಒಪ್ಪುವಂತೆ ದಕ್ಷರಾಜನ ಅರಮನೆ ಈ ಬಾಲಿಕೆಯರಿಂದ ಒಪ್ಪುತ್ತಿರುವುದು. ಮಕ್ಕಳ ಲೋಕೋತ್ತರ ಸೌಂದರ್ಯವನ್ನು ನೋಡಿ ಅರಸನಿಗೂ ಅರಸಿಗೂ ಹಿಡಿಸಲಾರದಷ್ಟು ಹರ್ಷವಾಗುತ್ತಿತ್ತು.

ರಾಜಕುಮಾರಿಯರು ಪ್ರತಿದಿನ ನೀಲಧಾರೆಗೆ ಸ್ನಾನಕ್ಕೆ ಬರುವರು. ನದಿಯ ನಿರ್ಮಲವಾದ ನೀರಲ್ಲಿ ಬಹಳಹೊತ್ತು ಆರಾಟವಾಡಿ ಮಳಲೊಟ್ಟಲುಗಳಲ್ಲಿ ಕೆಲಹೊತ್ತು ವಿಶ್ರಮಿಸುವರು. ಮನೆಗೆ ಬರುವಾಗ ಹೊಳೆಯೊಳಗಿನ ತರತರದ ಬಣ್ಣದ ಹಲವು ಕಲ್ಲುಹರಲುಗಳನ್ನು ಆರಿಸಿ ಉಡಿಲಲ್ಲಿ ಕಟ್ಟಿಕೊಂಡು ಬರುವರು. ಅವುಗಳನ್ನು ನೋಡಿ ಅರಸನೂ ಅರಸಿಯೂ ನಕ್ಕು—ಮಕ್ಕಳಿರಾ! ಮನೆಯಲ್ಲಿ ಬೇಕಾದಷ್ಟು ಹರಳುಕಲ್ಲುಗಳು ಇರಲು, ಬಿಟ್ಟು ಈ ಕಲ್ಲುಹರಲುಗಳನ್ನು ತಂದು ಏನು ಮಾಡುವಿರಿ ಎಂದು ಕೇಳುವರು; ಬಾಲೆಯರು ಮರುಮಾತುಗುಡದೆ ತಾವು ತಂದ ಕಲ್ಲುಹರಲುಗಳಿಂದಲೇ ಆಡುವರು.

ಆ ಬಾಲಿಕೆಯರು ಕ್ರಮದಿಂದ ಬೆಳೆದು ಮದುವೆಗೆ ತಕ್ಕವರಾದರು. ದಕ್ಷಪ್ರಜಾಪತಿಯು ಮಹಾವೈಭವದಿಂದ ಕ್ರಮವಾಗಿ ಅವರ ಲಗ್ನಗಳನ್ನು

ಮಾಡಿದನು. ಮುಂದೆ ಒಬ್ಬೊಬ್ಬರೇ ಪತಿಗೃಹಕ್ಕೆ ಹೋಗಿ ತಮ್ಮ ತಮ್ಮ ಸಂಸಾರವನ್ನು ಸಾಗಿಸಿಕೊಂಡು ಆನಂದದಿಂದಿರುವುದನ್ನು ನೋಡಿ ದಕ್ಷನೂ ದಕ್ಷಪತ್ನಿಯೂ ಇನ್ನಿಲ್ಲದಷ್ಟು ಸಂತಸಬಡುವರು.

ದಕ್ಷರಾಜನ ಮಕ್ಕಳಲ್ಲಿ ಇನ್ನೊಬ್ಬಳ ಮದುವೆಯಾಗಿರಲಿಲ್ಲ. ಆಕೆ ಕಡೆಹುಟ್ಟಿದ ಮಗಳು. ಅವಳ ಹೆಸರು ಸತಿ. ಅವಳ ಮೇಲೆ ತಾಯಿತಂದೆಗಳ ಪ್ರೀತಿ ಬಹಳ. ಸತಿಯನ್ನು ಉತ್ತಮನಾದ ಪತಿಗೆ ಕೊಟ್ಟು ಕಡೆಯ ಈ ಮದುವೆಯನ್ನು ದೊಡ್ಡ ವಿಜೃಂಭಣೆಯಿಂದ ಮಾಡಬೇಕೆಂಬುದು ಅವರ ಮನಸ್ಸಿನ ಕೊನೆಯ ಬಯಕೆ.

ಸತಿಯ ರೂಪವೂ ಗುಣಗಳೂ ಹೊಗಳತಕ್ಕವು. ಸತಿಯು ಕರಿಯ ಳೆಂದೆನ್ನುವಿರಲ್ಲವೇ? ಚೆಲ್ವಿಕೆಯು ಬಣ್ಣವೊಂದನ್ನೇ ಅವಲಂಬಿಸುವುದಿಲ್ಲ. ಅವಳ ಕನ್ನೈದಿಲ ದಳದಂತಿರುವ ಮೈಯ ಹೊಳಪೂ, ಕರಿಯವೂ ಪಿರಿಯವೂ ಆದ ಕಣ್ಣುಗಳೂ ಸಂಪಿಗೆಯ ಮೊಗ್ಗಿನಂತಿರುವ ಮೂಗೂ ನೋಟಕ್ಕೆ ಬಲು ಮಾಟ. ಮೂಲೋಕದಲ್ಲಿಯೂ ಅಂತಹ ಸುಂದರಿ ಇರಲಿಲ್ಲವೆಂದು ಒಮ್ಮೆ ಒಪ್ಪಿಬಿಡುವ. ಆಕೃತಿಗೆ ತಕ್ಕ ಪ್ರಕೃತಿ. ನಡೆನುಡಿಗಳು ಬಲು ಅಚ್ಚು ಕಟ್ಟು. ಗೃಹಿಣಿಗೆ ಇರಬೇಕಾದ ಗುಣಗಳೆಲ್ಲವೂ ಅವಳಲ್ಲಿ ತಲೆದೋರುತ್ತಿದ್ದುವು.

ಸತಿಯ ಸ್ವಭಾವವು ಬೇರೆ; ಆಕೆಯ ಅಕ್ಕಂದಿರ ಸ್ವಭಾವವು ಬೇರೆ. ಅವರು ಯಾವಾಗಲೂ ಉಡಿಗೆ ತೊಡಿಗೆಗಳಲ್ಲಿ, ಆಟಪಾಟಗಳಲ್ಲಿ ಕಾಲಕಳೆ ಯುವರು. ಆದರೆ ಅತ್ತ ಸತಿಯ ಒಲವೇ ಇಲ್ಲ. ಅವರು ಬೆಲೆಯುಳ್ಳ ಬಟ್ಟೆ ಗಳನ್ನೂ ಹರಲುಕೆಚ್ಚಿದ ಬಳೆಗಳನ್ನೂ ಮುತ್ತಿನ ಸರಗಳನ್ನೂ ಕಸ್ತೂರೀ ಚಂದನಾದಿ ಲೇಪನ ದ್ರವ್ಯಗಳನ್ನೂ ಬಯಸುವರು. ಇವಳು ನಾರುಮಡಿ ಯನ್ನೇ ಬಲು ಒಪ್ಪುವಳು. ರುದ್ರಾಕ್ಷಮಾಲೆ, ಸ್ಫಟಿಕಮಾಲೆಗಳ ವಸ್ತುಗಳಲ್ಲಿಯೇ ಅಕ್ಕರತೆ ಬಡುವಳು. ತಂದೆಯ ಹೋಮಕುಂಡದ ವಿಭೂತಿಯನ್ನು ಮೈಗೆ ಬಳಿದುಕೊಳ್ಳುವಳು. ತಲೆಗೆ ಎಣ್ಣೆ ಪೂಸಿಕೊಳ್ಳುವುದೂ ಬೇಡ. ಇದರಿಂದ ತಲೆಗೂದಲು ಜಡೆಗಟ್ಟಿದ್ದುವು. ಸ್ವಭಾವಸುಂದರಿ; ಈ ವೇಷದಲ್ಲಿಯೂ ಅವಳು ಸುಂದರಿಯೇ.

ಅರಸಿ ಸತಿಯ ಮನೋಭಾವವನ್ನರಿತು ಬಹಳ ದುಃಖಿಸುತ್ತಿದ್ದಳು. ಶರೀರವಿಷಯದಲ್ಲಿ ಇಷ್ಟು ಉದಾಸೀನೆಯಾಗಿ ಚಿಂತೆಯಲ್ಲಿರುವ ಚಿಕ

ಪ್ರಾಯದ ಮಗಳನ್ನು ನೋಡಿ ಯಾವ ತಾಯಿಯ ಎದೆಯೊಡೆದು ನೀರಾಗದು ? ಅವಳು ಒಮ್ಮೆ ಬಹು ಕಷ್ಟದಿಂದ " ಸತೀ, ನೀನು ಈಗ ದೊಡ್ಡವಳಾದೆ; ನಿನ್ನ ಮನಸ್ಸಿನಲ್ಲಿರುವುದೇನು ? ಉಡಿಗೆಯೇ, ತೊಡಿಗೆಯೇ, ಹೆಳಲೇ; ಇಂಥವಳನ್ನು ಯಾವಾತನು ಮದುವೆಯಾದಾನೇ ? " ಎಂದು ಮಗಳನ್ನು ಆಕ್ಷೇಪಿಸಿದಳು. ಸತಿ ' ನಕ್ಕು ಅವ್ವಾ, ಇನ್ನು ನೀನು ಹೇಳಿದಂತೆ ನಡೆವೆನು; ಆಯಿತೇ ' ಎಂದಳು. ಆದರೆ ಮನಸ್ಸಿನಲ್ಲಿ-ಉಡಿಗೆತೊಡಿಗೆ ಹೆಳಲುಗಳನ್ನು ನೋಡಿ ಮದುವೆಯಾಗುವವನ ಹೆಂಡತಿಯಾಗುವೆನೇ ಎಂದು ನುಡಿದು ಕೊಂಡಳು.

ದಕ್ಷರಾಜನೂ ಸತಿಯ ಈ ಸ್ಥಿತಿಯನ್ನು ನೋಡಿ ಒಮ್ಮೊಮ್ಮೆ ಸಿಟ್ಟಾಗುವನು. ಆದರೆ ಸತಿಯ ಸರಲತನ, ಆನಂದವೃತ್ತಿ, ಮುದ್ದುಮೊಗ ಇವನ್ನು ನೋಡಿದೊಡನೆ ಆತನ ಸಿಟ್ಟು ಎಲ್ಲಿಯೋ ಮಾಯವಾಗುವದು. ಸತಿಯ ಸ್ವಭಾವದಲ್ಲಿ ಇನ್ನೊಂದು ಗುಣವು ಒಡೆದುಕಾಣುವದು- ಅದೇನು ಗುಣವೋ ದೋಷವೋ ನಾವರಿಯೆವು. ಅವಳು ಅಭಿಮಾನಿನಿ, ಮಾನಕ್ಕೆ ಹಾನಿ ಬಂದರೆ ತಟ್ಟನೆ ಆಕೆಯ ಕಣ್ಣಲ್ಲಿ ನಿರೀ ಬರುವುವು.

ಕ್ರಮವಾಗಿ ಸತಿ ಮದುವೆಗೆ ತಕ್ಕವಳಾದಳು. ಆಗ ದಕ್ಷನು ತನ್ನ ತಮ್ಮ ದೇವರ್ಷಿ ನಾರದನನ್ನು ಕರೆಸಿ ನಾರದ, ನೀನು ಸರ್ವಲೋಕಸಂಚಾರಿ, ಮೂಲೋಕದಲ್ಲಿ ನಿನಗೆ ಪರಿಚಯವಿಲ್ಲದವರಿಲ್ಲ; ನಮ್ಮ ಸತಿಗೆ ತಕ್ಕ ವರನನ್ನು ಹುಡುಕುವುದು ನಿನ್ನನ್ನೇ ಕೂಡಿದೆ; ಎಂದು ಹೇಳಿದನು. ಕೂಡಲೆ ನಾರದನು ಅಣ್ಣನ ಅಪ್ಪಣೆಯನ್ನು ತಲೆಯಲ್ಲಾಂತು ಅಲ್ಲಿಂದ ಹೊರಟನು. ಎಲ್ಲ ಲೋಕಗಳಲ್ಲಿ ತಿರುಗಾಡಿ ತಕ್ಕ ವರನನ್ನು ನೋಡಿಕೊಂಡು ಮರಳಿ ದಕ್ಷಪುರಿಗೆ ಬಂದನು. ಆ ದಿನ ಊಟವಾದ ಬಳಿಕ ನಾರದನೂ ದಕ್ಷನೂ ದಕ್ಷಪತ್ನಿಯೂ ಒಂದೆಡೆಗೆ ಕಲೆತರು. ಆಗ ಅವರಲ್ಲಿ ಇಂತು ಮಾತುಗಳು ನಡೆದುವು.

ನಾರದ—ನಮ್ಮ ಸತಿಗೆ ಒಬ್ಬ ಉತ್ತಮ ಪತಿಯನ್ನು ನೋಡಿ ಬಂದಿರುವೆನು. ಅಂತಹ ಯೋಗ್ಯ ವರನನ್ನು ಇನ್ನೆಲ್ಲಿಯೂ ಕಾಣಲಿಲ್ಲ.

ದಕ್ಷ—ಅಂತಹ ವರನು ಯಾರು ?

ನಾರದ—ಕೈಲಾಸಗಿರಿಯ ರಾಜನು.

ಇದನ್ನು ಕೇಳಿ ದಕ್ಷನು ಸ್ವಲ್ಪ ಆಲೋಚನೆಗೀಡಾದನು. ಅವನು ನಾರದನಿಗೆ ಏನು ಕೇಳಬೇಕೆಂದಿದ್ದನೋ ಅದನ್ನೇ ಅರಸಿಯು ಕೇಳಿದಳು.

ಅರಸಿ—ಕೈಲಾಸಗಿರಿ! ಬಹಳ ದೂರ; ನಮ್ಮ ಸತಿಯನ್ನು ಅಷ್ಟು ದೂರದಲ್ಲಿ ಕೊಟ್ಟರೆ ಮೇಲೆ ಮೇಲೆ ಆವಳ ಸುದ್ದಿಯೆಲ್ಲಿ? ಮೇಲಾಗಿ ಕರೆಸು ವುದಕ್ಕೂ ಕಳಿಸುವುದಕ್ಕೂ ಬಹಳ ತೊಂದರೆ.

ನಾರದ—ನೀವು ಸತಿ ಹೋಗುಬರುವುದಕ್ಕೆ ಅನುಕೂಲವಾಗುವಂತೆ ಸಮೀಪದಲ್ಲಿ ಹೇಗಾದರೂ ಇರಬೇಕೆನ್ನುವಿರಾ? ಯೋಗ್ಯ ಪತಿಯೊಡನೆ ಎಲ್ಲಿ ಯಾದರೂ ಸುಖದಿಂದಿರಬೇಕೆನ್ನುವಿರಾ? ಸತಿ ತನ್ನ ಮನೆಯಲ್ಲಿ ಆನಂದ ದಿಂದಿರಲು ಮೇಲೆ ಮೇಲೆ ಬಂದು ಹೋಗಿ ಮಾಡದಿದ್ದರೆ ಹಾನಿಯೇನು?

ಅರಸನೂ ಅರಸಿಯೂ—ಸರಿ, ಆಗಬಹುದು.

ದಕ್ಷ—ನಾರದ, ವರನ ವಿದ್ಯಾಬುದ್ಧಿಗಳು ಎಂತಿರುವುವು?

ನಾರದ—ಅದನ್ನೇನು ಹೇಳಲಿ! ವೇದ, ಶಾಸ್ತ್ರ, ಆಗಮ, ಪುರಾಣ, ತಂತ್ರಗಳಲ್ಲಿ ಅವನಿಗೆ ತಿಳಿಯದಿರುವುದು ಯಾವುದೂ ಇಲ್ಲ. ಈ ವಿಷಯದಲ್ಲಿ ಬೇರೆ ನಿದರ್ಶನವೇತಕ್ಕೆ? ಮಹರ್ಷಿವಸಿಷ್ಠನು ವೇದಗಳ ತತ್ವವನ್ನು, ಪರಶು ರಾಮನು ಧನುರ್ವೇದವನ್ನು, ಬಹಳ ವೇಕೆ? ನಾನೇ ಗಂಧರ್ವವೇದವನ್ನು ಅವನಿಂದಲೆ ಕಲಿತುಕೊಂಡಿರುವೆವಲ್ಲವೆ? ನೃತ್ಯಾದಿ ಕಲೆಗಳಲ್ಲಿಯೂ ಆತನು ಬಲ್ಲಿದನು.

ದಕ್ಷನ ಮೋರೆ ಅರಳಿತು. ಅವನು ಮತ್ತೆ ನಾರದನನ್ನು 'ವರನ ಬಲ ವೀರ್ಯಗಳೆಂತೋ' ಎಂದು ಕೇಳಿದನು.

ನಾರದ—ಲೋಕಪ್ರಸಿದ್ಧವಾದ ಪಿನಾಕಧನುಸ್ಸು ಆತನ ಬಳಕೆಯದು. ಮೂಲೋಕದಲ್ಲಿ ಅದರ ಹೆದೆಯೇರಿಸುವುದು ಕೂಡ ಯಾರಿಗೂ ಸಾಧ್ಯವಿಲ್ಲ, ಕಂಡಿರಾ! ಅವನು ಎಲ್ಲರಿಗೂ ಮೀರಿ ನಿಂತ ತ್ರಿಪುರಾಸುರ ಗಜಾಸುರರನ್ನು ಅನಾಯಾಸವಾಗಿ ಕೊಂದವನು.

ಅರಸಿ—ನಾರದರೆ! ವರನ ಆಕಾರರೂಪಗಳೆಂತಿರುವುವು?

ನಾರದ–ಕೇಳುವುದೇನು? ಸಾಲವೃಕ್ಷದಂತೆ ಎತ್ತರವಾದ ಆ ನಿಲುವಿಕೆ, ಮೊಳಕಾಲವರೆಗೆ ಉದ್ದವಾದ ಆ ತೋಳುಗಳು, ಕಿವಿವರೆಗೆ ಅಗಲವಾದ ಆ

ಕಣ್ಣುಗಳು, ಬೆಳ್ಳಿಯಂತೆ ಬಿಳಿದಾದ ಆ ಮೈ, ಆ ಪ್ರಸನ್ನಸುಂದರಮುಖ ಇವು ನೋಡುವವರನ್ನು ಮರುಳುಗೊಳಿಸುವುವು. ದೇವೀ, ಅವನಿಗೆ ತಕ್ಕ ಸುಂದರ ಕನ್ಯೆ ಜಗತ್ತಿನಲ್ಲಿ ಇಲ್ಲವೆಂದರೂ ಸಲ್ಲುವುದು. ಆದರೂ ನಮ್ಮ ಸತಿ ತಕ್ಕ ವಳೆಂದೆನ್ನಬಹುದು.

ಸತಿಯ ಗೆಳತಿಯೊಬ್ಬಳು ಆ ಸಮಯದಲ್ಲಿ ಅರಸಿಯ ಬಳಿಗೆ ಏತಕ್ಕೋ ಬಂದಿದ್ದಳು. ಅವಳು ಈ ಮಾತುಗಳನ್ನಾಲಿಸಿ ಸತಿಯ ಬಳಿಗೆ ಓಡಿಹೋಗಿ "ಅಕ್ಕಾ, ನಿನ್ನ ಬಹುದಿವಸದ ಬಯಕೆ ಬೇಗನೆ ನೆರವೇರುವಂತೆ ತೋರುವುದು. ಯಾರ ಪ್ರಾಪ್ತಿಗಾಗಿ ಇದುವರೆಗೆ ತಪಸ್ಸನ್ನೂ ವ್ರತೋಪವಾಸಗಳನ್ನೂ ಮಾಡಿದೆಯೋ ಆ ಕೈಲಾಸಪತಿ ಪರಮೇಶ್ವರನಿಗೇ ನಿನ್ನನ್ನು ಧಾರೆಯೆರೆದು ಕೊಡಬೇಕೆಂದು ಹಿರಿಯರು ಮಾತಾಡುತ್ತಿರುವರು. ಸಂಪಿಗೆಯ ಮೊಗ್ಗುಗಳಂತಿರುವ ನಿಮ್ಮಿಬ್ಬರ ಬೆರಲುಗಳು ಬೇಗನೆ ಕೂಡಲಿ ಎಂದು ನಾವೆಲ್ಲರೂ ಹಾರೈಸುತ್ತಿರುವೆವು" ಎಂದಳು.

ಅರಸಿ—ನಾರದರೆ! ವರನ ಐಶ್ವರ್ಯವೆಷ್ಟು?

ನಾರದ—ದೇವೀ! ಅವನು ರತ್ನಗರ್ಭ ಕೈಲಾಸಗಿರಿಯ ಒಡೆಯನು. ಧನಪತಿ ಕುಬೇರನು ಅವನ ಮಿತ್ರನು; ಮತ್ತು ಬೊಕ್ಕಸದ ಅಧಿಕಾರಿಯು.

ಅರಸಿ—ವರನಿಗೆ ತಂದೆತಾಯಿಗಳೂ, ಅಣ್ಣತಮ್ಮಂದಿರೂ ಉಂಟೋ?

ನಾರದ—ವರನಲ್ಲಿ ಇದೊಂದು ಕೊರತೆಯೇ ಸರಿ. ದೇವೀ! ಅವನ ಬಳಗದಲ್ಲಿ ಒಬ್ಬರೂ ಇಲ್ಲ. ಲಗ್ನವಾದೊಡನೆ ನಮ್ಮ ಸತಿ ಕೈಲಾಸ ಪುರಿಯ ಸರ್ವೇಶ್ವರಿ!

ಅರಸಿ, ನಾರದನ ಕಡೆಗೆ ಮತ್ತೆ ನೋಡತೊಡಗಿದಳು. ಆಗ ನಾರದನು ದೇವೀ, ವರನಲ್ಲಿ ದೋಷವೂ ಸ್ವಲ್ಪವಿದೆ. ಇದ್ದ ದೋಷವನ್ನು ಮಾಜುವುದೇಕೆ? ವರನಿಗೆ ಸಂಸಾರದಲ್ಲಿ ಆಸ್ಥೆ ಕಡಿಮೆ; ಆದುದರಿಂದ ಅವನಿಗೆ ಮಂದಿರವೇನು ಮಸಣವೇನು, ಚಂದನವೇನು ಚಿತಾಭಸ್ಮವೇನು, ಎರಡೂ ಸಮಾನವೇ. ಇದಲ್ಲದೆ ಅವನಿಗೆ ಯಾವಾಗಲೂ ಚಿಂತೆ. ಆದರೆ ಆ ಚಿಂತೆ ಸ್ವಾರ್ಥಕ್ಕಾಗಿ ಅಲ್ಲ. ಜಗತ್ತಿನ ಕಲ್ಯಾಣದ ಚಿಂತೆ ಅದು. ಅವನು ಶವಗಳ ಎಲುವುಗಳನ್ನು ಪರೀಕ್ಷಿಸುವುದಕ್ಕಾಗಿ ಸ್ಮಶಾನದಲ್ಲಿಯೂ, ಉದ್ಭಿಜ್ಜಗಳ ಗುಣಪರೀಕ್ಷೆಗಾಗಿ ಅರಣ್ಯದಲ್ಲಿಯೂ, ಖನಿಜಪದಾರ್ಥಗಳ ತತ್ತ್ವನಿರೀಕ್ಷಣೆಗಾಗಿ ಗಿರಿ

ಗುಹೆಗಳಲ್ಲಿಯೂ ವೇಳೆಗಳೆವನು. ಲೋಕಕಲ್ಯಾಣಕ್ಕಾಗಿ ವಸ್ತುಗಳ ತತ್ತ್ವವನ್ನು ಪರೀಕ್ಷಿಸುವುದಕ್ಕಾಗಿ ಅವನು ಕಾಲಕೂಟವನ್ನು ಕುಡಿವುದರಲ್ಲಿಯೂ, ಸರ್ಪಗಳನ್ನು ಧರಿಸುವುದರಲ್ಲಿಯೂ ಹಿಂದು ಮುಂದೆ ನೋಡಿಲ್ಲ. ಈ ಕಾರಣಗಳಿಂದ ಅವನು ಪ್ರಭುವಾಗಿಯೂ ಭಿಕ್ಷುಕನು; ಗೃಹಸ್ಥನಾಗಿಯೂ ಸಂನ್ಯಾಸಿಯು. ಒಟ್ಟಿಗೆ ದೋಷಕ್ಕಿಂತ ಗುಣಗಳು ಹೆಚ್ಚು. ನಾನು ವರನ ಗುಣಾವಗುಣಗಳನ್ನೂ ನಡೆನುಡಿಗಳನ್ನೂ ಅರುಹಿದೆನು. ಇನ್ನು ನಿಮಗೆ ತಿಳಿದಂತೆ ಮಾಡುವುದು ಎಂದು ಬಿನ್ನೈಸಿದನು.

ಇದನ್ನು ಕೇಳಿದ ದಕ್ಷನ ಮೋರೆಯಲ್ಲಿ ವಿಕಾರವೇನೂ ಕಾಣಿಸಲಿಲ್ಲ. ಅವನು ಮತ್ತೆ ಮತ್ತೆ ತಲೆದೂಗಿದನು. ಅರಸಿಯ ನಿಪುಣದೂತಿಯೊಬ್ಬಳು ಅಲ್ಲಿಯೇ ಇದ್ದಳು. ಅವಳು ಅರಸಿಯ ಖಿನ್ನವಾದ ಮುಖವನ್ನು ನೋಡಿ "ದೇವೀ! ಚಿಂತಿಸುವಿರೇಕೆ? ವರನಿಗೆ ಸಂಸಾರದಲ್ಲಿ ಆಸ್ಥೆ ಕಡಿಮೆಯೆಂದೇ? ಲಗ್ನವು ಆಗಲಿ, ನಮ್ಮ ಸತೀದೇವಿ ಒಂದೇ ತಿಂಗಳಲ್ಲಿ ಅವನನ್ನು ಉತ್ತಮ ಸಂಸಾರಿಯನ್ನು ಮಾಡುವಳು." ಎಂದಳು. ಇದನ್ನು ಕೇಳಿ ಅರಸಿ ಸಮಾಧಾನ ಹೊಂದಿ ಇಂತು ನುಡಿದಳು.

ಅರಸಿ—ಎಲ್ಲಾ ಗುಣಗಳು ಒಂದೇ ಎಡೆಯಲ್ಲಿರುವುದು ಅಸಂಭವವು. ಯೋಗ್ಯವರನಿಗೆ ಮಗಳನ್ನು ಕೊಡುವುದು ತಾಯ್ತಂದೆಗಳ ಕರ್ತವ್ಯವು. ಹೆಚ್ಚಿನದು ಆಗುವುದೂ ಬಿಡುವುದೂ ಅವರವರ ದೈವವನ್ನು ಅವಲಂಬಿಸಿರುವುದು. ಸದ್ಗುಣಿಯೂ ಶ್ರೀಮಂತನೂ ಸುಂದರನೂ ಆದವನಿಗೆ ಮಗಳನ್ನು ಕೊಡಬೇಕೆಂಬುದೊಂದೇ ನನ್ನ ಬಯಕೆ; ಮೇಲೆ ಮಹಾರಾಜರ ಇಚ್ಛೆ.

ದಕ್ಷ—ಅರಸೀ ನನ್ನದೇನು? ಬ್ರಹ್ಮಸಂಕಲ್ಪ; ನನಗೇನೋ ಈ ಸ್ಥಳವು ಪ್ರಶಸ್ತವೆಂದು ತೋರುವುದು. ನಿನ್ನ ಮನಸ್ಸಿಗೂ ಬಂದರೆ ಈ ವರನನ್ನೇ ಗೊತ್ತುಮಾಡುವ.

ಹೆಚ್ಚು ಆಲೋಚನೆಯನ್ನು ಮಾಡಲಿಲ್ಲ. ಕೈಲಾಸಪತಿಗೆ ಸತಿಯನ್ನು ಕೊಡಬೇಕೆಂದು ಅರಸನೂ ಅರಸಿಯೂ ಸಂಕಲ್ಪಮಾಡಿದರು. ಮುಹೂರ್ತವೂ ಗೊತ್ತಾಯಿತು. ದಕ್ಷಮಹಾರಾಜನು ಮಹಾಸಮಾರಂಭದೊಡನೆ ಮದುವೆ ಮಾಡುವ ಸಿದ್ಧತೆಯಲ್ಲಿ ತೊಡಗಿದನು.

ಶುಭದಿನದಲ್ಲಿ ಸತಿಯ ಪಾಣಿಗ್ರಹಣವು ಸಾಂಗವಾಗಿ ಜರುಗಿತು. ಲಾಜಹೋಮವೂ ಆಯಿತು. ನಾರದನು ವರನ ವಿಷಯವಾಗಿ ಹೇಳಿದುದೆಲ್ಲ ನಿಜವಾಗಿದ್ದಿತು. ಕೈಲಾಸಪತಿ ಶಿವನ ಪೂರ್ಣಚಂದ್ರಸದೃಶವಾದ ಆ ಮುಖವನ್ನೂ, ಬೆಳ್ಳಿವೆಟ್ಟದಂತೆ ಬಿಳಿದಾದ ಆ ಭವ್ಯ ದೇಹವನ್ನೂ, ಆ ಆನಂದ ವೃತ್ತಿಯನ್ನೂ ನೋಡಿ ಎಲ್ಲರೂ ಬೆರಗಾದರು. ಅತ್ತೆಗಂತೂ ಅಳಿಯನನ್ನು ನೋಡಿದೊಡನೆ ಆನಂದವು ಉಕ್ಕೇರಿತು. ಪೌರನಾರಿಯರೆಲ್ಲ ವಧುವಿಗೆ ತಕ್ಕವರನೆಂದು ಏಕಕಂಠವಾಗಿ ನುಡಿದರು. ಒಂದು ವಿಷಯದಲ್ಲಿ ಮಾತ್ರ ಅರಸಿಯ ಮನಸ್ಸಿಗೆ ಸ್ವಲ್ಪ ಅಸಮಾಧಾನವೆನಿಸಿತು. ನಾರದನು ವರನ ಐಶ್ವರ್ಯವನ್ನು ವರ್ಣಿಸಿದುದು ಸುಳ್ಳೆಂದು ತೋರಿತು. ವಿವಾಹದಿವಸದಲ್ಲೂ ವರನ ಕೊರಳಲ್ಲಿ ರುದ್ರಾಕ್ಷಮಾಲೆ; ಮೈಗೆ ವಿಭೂತಿ; ನಡುವಿಗೆ ಹುಲಿದೊಗಲು; ಇದಲ್ಲದೆ ಸತಿಗೂ ಇವೇ ವಸ್ತ್ರಾಲಂಕಾರಗಳನ್ನು ತಂದಿದ್ದನು. ಅರಸಿಯು ಮನದೊಳಗೆ—“ ಇದೇನು? ಲಗ್ನದಲ್ಲಿಯೂ ನನ್ನ ಮಗಳು ಏನೂ ಕಾಣಲಿಲ್ಲ. ಎಷ್ಟು ಐಶ್ವರ್ಯವಿದ್ದೇನು ? ಇಲ್ಲವೆ ಅಳಿಯನ ಮನೆ ಜ್ಯೇಷ್ಠಾ ಲಕ್ಷ್ಮಿಯು......? ಛೀ ನಾರದನು ಸುಳ್ಳಾಡುವನೇ? ಎಂದು ಆಲೋಚಿಸತೊಡಗಿದಳು. ಆದರೂ ಈ ವಿಷಯದಲ್ಲಿ ಹೆಂಗುಸರು ಮೂಗುಮುರಿವಂತೆ ಇದ್ದಿತು. ಕೂಡಿದ ಹೆಂಗುಸರಲ್ಲಿ ಕೆಲವು ಜನ ಒಯ್ಯಾರಿಯರು “ ಅಳಿಯನನ್ನು ನೋಡಿರೇ ! ಶುದ್ಧ ಬೈರಾಗಿ, ಜಡೆಯೇನು, ಬೂದಿಯೇನು, ತೊಗಲೇನು, ರುದ್ರಾಕ್ಷಗಳೇನು ” ಎಂದೂ, ಇನ್ನು ಕೆಲವು ಅದೃಷ್ಟವಾದಿನಿಯರಾದ ಮುದುಕಿಯರು “ ಸತಿಯ ಹಣೆಬರಹದಲ್ಲೇ ಐಶ್ವರ್ಯವಿದ್ದಂತೆ ತೋರಲಿಲ್ಲ, ಅಳಿಯನದೇನೋ ದೊಡ್ಡ ಮನೆತನವಂತೆ, ಯಾತಕ್ಕೇನು ಕೊರತೆ ಇದ್ದೀತು ? ಸತಿಯ ದೈವವೇ ಕಡಮೆ ” ಎಂದೂ ತಮ್ಮತಮ್ಮೊಳಗೆ ನುಡಿದುಕೊಳ್ಳುತ್ತಿದ್ದರು.

ಅರಸಿಯ ಮನಸ್ಸಿಗೆ ಅಳಿಯನ ಬಡತನದ್ದೊಂದು ಚಿಂತೆಯೇ ಹಿಡಿಯಿತು. ಅವಳು ನಾರದನನ್ನು ಕರೆಯಿಸಿ ನಾರದರೇ ! ವರನ ಐಶ್ವರ್ಯವನ್ನು ಎಷ್ಟು ಬಣ್ಣಿಸಿದಿರಲ್ಲ ? ಆದರಂತೆ ಏನೂ ತೋರುವುದಿಲ್ಲವಲ್ಲ ? ನಮ್ಮ ಸತಿ ಲಗ್ನದಲ್ಲಿಯೂ ವಸ್ತ್ರಗಳನ್ನು ಕಾಣಲಿಲ್ಲ; ಎಂದು ಪ್ರಸ್ತಾವವೆತ್ತಿದಳು.

ನಾರದ—ದೇವೀ ! ನಾನು ಹೇಳಿದುದು ಸುಳ್ಳಲ್ಲ. ಸತಿಯು ನಿಶ್ಚಯವಾಗಿ ರಾಜರಾಜೇಶ್ವರಿಯಾಗುವಳು. ಈಗ ನಾನು ಏನೂ ಹೇಳಲಾರೆನು.

ಅವಳು ತನ್ನ ಮನೆಯಲ್ಲಿ ಇದ್ದ ಬಳಿಕ ಅವಳ ವಸ್ತ್ರಾಲಂಕಾರಗಳನ್ನೂ ಅಳಿಯನ ವೈಭವವನ್ನೂ ನೋಡುವಿರಿ.

ನಾರದನು ಈ ಮಾತುಗಳಿಂದ ಅರಸಿಯನ್ನೂ ಬಳಗದವರನ್ನೂ ಏನೋ ಸ್ವಲ್ಪ ಸಂತಯಿಸಿದನು.

ವರನ ವಿವಾಹಕಾಲದ ವೇಷಭೂಷಣಗಳನ್ನೂ ನಿಬ್ಬಣದ ಜನರ ನಡೆನುಡಿಗಳನ್ನೂ ನೋಡಿ ದಕ್ಷಮಹಾರಾಜನಿಗೆ ನಾಚಿಕೆಯಾಯಿತು. ಅವನ ಉಳಿದ ಅಳಿಯಂದಿರಲ್ಲಿ ಒಬ್ಬನು ಆನೆಯ ಮೇಲೆ, ಇನ್ನೊಬ್ಬನು ಕುದುರೆಯ ಮೇಲೆ, ಮತ್ತೊಬ್ಬನು ರಥದ ಮೇಲೆ ಇಂತು ಮಹಾವೈಭವದಿಂದ ಮದುವೆಗೆ ಬಂದಿದ್ದರು. ಆದರೆ ಹೊಸ ಅಳಿಯನ ವಾಹನವು ದೊಡ್ಡದೆಂದು ಮುದಿ ಎತ್ತು ! ಉಳಿದ ಅಳಿಯಂದಿರ ಸಂಗಡ ಬೆಳ್ಗೊಡೆಗಳನ್ನೂ, ಬೆಳ್ಳಿಬಂಗಾರಗಳ ಬೆತ್ತಗಳನ್ನೂ ಹಿಡಿದ ಹಲವರು ಸುರೂಪ ಸೇವಕರು. ಆದರೆ ಹೊಸ ಅಳಿಯನ ಸಂಗಡ ತ್ರಿಶೂಲವನ್ನೊ, ಡುಮರುವನ್ನೊ ಹಿಡಿದ ವಿಕೃತಮುಖದ ಸೇವಕರು. ನಿಬ್ಬಣದ ಜನರ ಆ ವಿಕಟರೂಪವನ್ನೂ ವಿಚಿತ್ರವ್ಯವಹಾರಗಳನ್ನೂ ನೋಡಿ “ ಇದೇನು ವರನ ಬಳಗ ? ” ಎಂದು ದಕ್ಷಪುರಿಯ ಜನರೆಲ್ಲ ಭೀತರೂ ವಿಸ್ಮಿತರೂ ಆದರು. ಆದರೆ ವರನ ಶಾಂತಹೃಷ್ಟಸ್ವಭಾವವನ್ನೂ ಸರಲಮಧುರ ಭಾಷಣವನ್ನೂ ಪ್ರಸನ್ನ ಸುಂದರಮುಖವನ್ನೂ ನೋಡಿ ಸ್ವಲ್ಪ ಸಮಾಧಾನ ಹೊಂದಿದರು.

ವರನ ವಿಷಯದಲ್ಲಿ ಅತ್ತೆಯ, ಮಾವನ, ಬಳಗದ, ಪುರಜನದ ಭಾವನೆ ಏನಾದರೇನು ? ನಮ್ಮ ಮದುಮಗಳ ಭಾವವು ಯಾವ ಪ್ರಕಾರದ್ದಾಯಿತೆಂಬುದನ್ನು ನೋಡುವ. ಇದುವರೆಗೆ ಸಾಧುಸಂನ್ಯಾಸಿಗಳ ಮುಖದಿಂದ ಯಾವಾತನ ಕಥೆಗಳನ್ನು ಪ್ರೀತಿಯಿಂದ ಆಲಿಸುತ್ತಿದ್ದಳೋ, ಯಾವಾತನನ್ನು ತನ್ನ ಇಷ್ಟದೇವತೆಯೆಂದು ಹಗಲೂ ಇರುಳೂ ಭಕ್ತಿಯಿಂದ ಪೂಜಿಸುತ್ತಿದ್ದಳೋ, ಯಾವಾತನ ಪ್ರಾಪ್ತಿಗಾಗಿ ವ್ರತೋಪವಾಸಗಳನ್ನು ಮಾಡುತ್ತ ಶರೀರವನ್ನು ಕೊರಗಿಸಿದ್ದಳೋ, ಆತನು ಈ ದಿನ ಪತಿರೂಪದಿಂದ ಇದಿರಿಗೆ ನಿಂತಿರಲು ಆದ ಮನೋಭಾವವನ್ನು ವರ್ಣಿಸುವುದೇನು ? ಸತಿಯು ಪತಿರಾಜನನ್ನು ಕಣ್ತುಂಬ ನೋಡಿ ತನ್ನನ್ನು ಆ ಕೈಲಾಸಪತಿಯ ಚರಣಾರವಿಂದಗಳಿಗೆ ಅರ್ಪಿಸಿದಳು. ಅವಳು ಮನದಲ್ಲಿ—“ ಪ್ರಭುವೇ ! ಸತಿಯ ಪ್ರಭುವೇ ! ಸತಿಯ

ಜನ್ಮವು ನಿಮಗಾಗಿಯೇ ಆಗಿರುವುದು. ಬ್ರಹ್ಮನು ನಿಮ್ಮ ಸಹಧರ್ಮಿಣಿಯನ್ನು ಮಾಡಿದುದು ನನ್ನ ಪುಣ್ಯದ ಫಲವೇ ಸರಿ. ಜಗದಲ್ಲಿ ಇನ್ನಾರಿಗೂ ಈ ಮನ್ನಣೆ ಇಲ್ಲ. ಇಂದು ನಾನು ಧನ್ಯಳಾದೆನು." ಎಂದು ಆನಂದಸಾಗರದಲ್ಲಿ ಮುಳುಗಿದಳು.

ಲಗ್ನವಾದ ಬಳಿಕ ಸತಿಯು ಕೈಲಾಸಗಿರಿಗೆ ಬಂದಳು. ಅವಳ ಆಗಮನದಿಂದ ಕೈಲಾಸವು ಸರ್ವಮಂಗಳಾಶ್ರಯವಾಯಿತು. ಸಂನ್ಯಾಸಿಯಂತಿದ್ದ ಕೈಲಾಸಪತಿಯು ಸತಿಯ ಗುಣಗಳಿಗೆ ಮೋಹಿತನಾಗಿ ಸಂಸಾರಿಯಾದನು. ದಾಕ್ಷಾಯಣಿಯು ಧರ್ಮದಲ್ಲಿಯೂ, ಗೃಹಕರ್ಮದಲ್ಲಿಯೂ ನೆರವಾಗಿ ಪತಿಯ ಅರ್ಧಾಂಗವೆನಿಸಿಕೊಂಡಳು.

ಇಂತು ದೀರ್ಘಕಾಲವು ಸಂದುಹೋಗುತ್ತಿರಲು ಒಮ್ಮೆ ಕೈಲಾಸಗಿರಿಯು ವಸಂತಾಗಮನದಿಂದ ಅಪೂರ್ವವಾದ ಶೋಭೆಯನ್ನು ವಹಿಸಿತು. ನಿರಂತರವಾದ ಹಿಮಪಾತದಿಂದ ಎಲೆಹೂಗಳಿಲ್ಲದೆ ಒಣಗಿದಂತೆ ಕಾಣುತ್ತಿದ್ದ ಗಿಡಬಳ್ಳಿಗಳು ಈಗ ಋತುರಾಜನು ಇಂದ್ರಜಾಲವ ಮಾಡಿದನೋ ಎಂಬಂತೆ ಒಮ್ಮೆಯೆ ಬುಡದಿಂದ ತುದಿವರೆಗೆ ಚಿಗುತು, ಕೆಂಪಾದ ಎಳೆಯೆಲೆಗಳಿಂದ ಕಂಗೊಳಿಸತೊಡಗಿದುವು. ಈಗ ಕೈಲಾಸಗಿರಿರಾಜನು ಬಿಳಿಯ ಬಣ್ಣದ ಹಿಮದ ಹೊದಿಕೆಯನ್ನು ಬಿಟ್ಟು ಶ್ಯಾಮಲವರ್ಣದ ಶೈವಾಲವಸ್ತ್ರವನ್ನು ಹೊದೆದುಕೊಂಡನು. ಕೆಂಪು ಬೆಳುಪು ಕಪ್ಪು ಅರಿಸಿನ ಬಣ್ಣಗಳ ತರತರದ ಹೂಗಳ ಗೊಂಚಲುಗಳು ಆ ಗಿರಿರಾಜನ ಕೊರಳಲ್ಲಿಯೂ, ಉರಃಸ್ಥಳದಲ್ಲಿಯೂ ಪಾದದೇಶದಲ್ಲಿಯೂ, ಒಪ್ಪುತ್ತಿರುವುವು. ಕರಗಿದ ಹಿಮರಾಶಿಯಿಂದ ನೂರಾರು ತೊರೆಗಳು "ಗುಳು ಗುಳು ಗಳ ಗಳ" ಎಂದು ಧ್ವನಿಮಾಡುತ್ತ ಕೆಳಗಡೆಗೆ ಧಾವಿಸುತ್ತಿದ್ದುವು. ಚಳಿಗೆ ಅಂಜಿದ ಅನೇಕ ಮೃಗಗಳು ಕೈಲಾಸವನ್ನು ಬಿಟ್ಟು ಇದುವರೆಗೆ ಬೇರೆ ಉಷ್ಣವಲಯಕ್ಕೆ ಹೋಗಿದ್ದುವು; ಅವು ತಿರುಗಿ ಬಂದುದರಿಂದ ಕೈಲಾಸವು ಮತ್ತೆ ಸಜೀವವಾಯಿತು. ಕೈಲಾಸದ ಉಪವನಗಳು ಹೊಸ ಹೊಸ ಹೂಗಳಿಂದಲೂ, ಅವುಗಳ ಬಳಿಯಲ್ಲಿ ಹಾರಾಡುವ ತುಂಬಿಗಳ ಝೇಂಕಾರದಿಂದಲೂ ರಮಣೀಯವಾದುವು. ಅಂಜುಗುಳಿಗಳಾದ ಕಸ್ತೂರೀಮೃಗಗಳೂ ಎರಳೆಗಳೂ ಹೊಸದಾಗಿ ಹುಟ್ಟಿದ ಎಳಹುಲ್ಲಿಗೆ ಮನಸೋತು ಅತ್ತಿತ್ತ ನೋಡುತ್ತ ಮೇಯುತ್ತ ಪರ್ವತದ

ಓರೆಯಲ್ಲಿ ತಿರುಗಾಡತೊಡಗಿದುವು. ಕಾಡಾಕಳುಗಳು ಎಳಹುಲ್ಲನ್ನು ಹೊಟ್ಟೆ ತುಂಬ ಮೇದು ಪರ್ವತದ ಹಾಸುಗಲ್ಲುಗಳ ಮೇಲೆ ಗಾಳಿಗೆ ಇದಿರಾಗಿ ಮೈಯೊಡ್ಡಿ ಮಲಗಿ ತಮ್ಮ ಮೂಗಿನ ಹೊರಳೆಗಳನ್ನು ಮುಂಚಾಚಿ ವಸಂತಾನಿಲನ ಸುಖಸ್ಪರ್ಶವನ್ನು ಸೂಚಿಸುತ್ತ ಮೆಲುಕಾಡಿಸುತ್ತಿದ್ದುವು. ಋತುರಾಜನ ಆಗಮನದಿಂದ ಎಲ್ಲ ಗಿಡುಬಳ್ಳಿಗಳಿಗೂ ಪಶುಪಕ್ಷಿಗಳಿಗೂ ಹೊಸವಿಕಾಸವೂ ಹೊಸಜೀವನವೂ ಬಂದಂತಾಯಿತು.

ಪರ್ವತದ ಒಂದು ಉನ್ನತವಾದ ಕೋಡುಗಲ್ಲ ಮೇಲೆ ಸ್ಫಟಿಕದಂತೆ ಶುಭ್ರವಾದ ಕೈಲಾಸಪತಿಯ ಅರಮನೆಯಿತ್ತು. ಅದರ ಸುತ್ತಣ ಪ್ರದೇಶವು ರಮಣೀಯವಾಗಿಯೂ ಶಾಂತವಾಗಿಯೂ ಇದ್ದಿತು. ತಪೋವನದ ಗಾಂಭೀರ್ಯದೊಡನೆ ಉಪವನದ ಸೌಂದರ್ಯವು ಬೆರೆತುದರಿಂದ ಆ ಸ್ಥಳವು ತಪಶ್ಚರ್ಯೆಗೂ, ಗಾರ್ಹಸ್ಥ್ಯಕ್ಕೂ ಯೋಗ್ಯವಾಗಿದ್ದಿತು. ಅದರ ಅಂಗಳದಲ್ಲಿ ಶಾಖೋಪಶಾಖೆಗಳಿಂದ ವಿಸ್ತೀರ್ಣವಾದ ಒಂದು ಪ್ರಾಚೀನ ದೇವದಾರು ದ್ರುಮವಿದ್ದಿತು. ಅದರ ಕೆಳಗೆ ತಾನಾಗಿಯೇ ಆದ ಒಂದು ಹಾಸುಗಲ್ಲಿನ ಕಟ್ಟೆಯಿದ್ದಿತು. ಸಾಯಂಕಾಲದಲ್ಲಿ ಪರಮೇಶ್ವರನು ಆ ಕಟ್ಟೆಯ ಮೇಲೆ ವ್ಯಾಘ್ರಾಜಿನವನ್ನು ಹಾಸಿ ಕುಳಿತುಕೊಳ್ಳುವನು. ಅವನ ಎಡಬದಿಗೆ ದಕ್ಷಪುತ್ರಿ ಸತಿ ಕುಳಿತುಕೊಳ್ಳುವಳು. ಒಂದು ವನಲತೆಯು ಆ ದೇವದಾರು ತರುವಿಗೆ ಹಬ್ಬಿಕೊಂಡಿದ್ದಿತು. ಸಂಧ್ಯಾಕಾಲದ ನಸುಗಾಳಿಯಿಂದ ಆ ಮರದ ಕೊಂಬೆಗಳು ತೊನೆದಾಡಲು ಆ ಬಳ್ಳಿಯ ಹೂಗಳು ಆಗಾಗ ಈ ದೇವದಂಪತಿಗಳ ಮೇಲೆ ಬೀಳುತ್ತಿದ್ದುವು. ಇದರಿಂದ ಆ ಮರಬಳ್ಳಿಗಳು ಭಕ್ತಿಪೂರ್ವಕವಾಗಿ ಕುಸುಮಾಂಜಲಿಯಿಂದ ಇವರನ್ನು ಪೂಜಿಸುವುವೊ ಎಂಬಂತೆ ತೋರುತ್ತಿತ್ತು. ಈ ಸಂಧ್ಯಾಪ್ರಕಾಶದಲ್ಲಿ ಶಿವನ ಶುಭ್ರಮೂರ್ತಿಯು ಬಲು ಒಪ್ಪುತ್ತಿತ್ತು. ಸತಿಯ ಮುಖಕ್ಕೂ ಅಪೂರ್ವವಾದ ಸೊಬಗುಂಟಾಗಿತ್ತು. ಆ ಕಾಲದಲ್ಲಿ ಪರಮೇಶ್ವರನು ಸತಿಯೊಡನೆ ಜೀವರಾಶಿಯ ಸುಖದುಃಖಗಳ ವಿಚಾರವನ್ನು ನಡೆಯಿಸಿದ್ದನು. ಅಷ್ಟರಲ್ಲಿ ಸೂರ್ಯನು ಅಸ್ತಂಗತನಾದನು. ಆಗ ಪರಮೇಶ್ವರನು ಅತ್ತ ಕೈಮಾಡಿ ತೋರಿಸಿ ಸತಿಗೆ ಇಂತು ನಿರೂಪಿಸಿದನು.

ಪರಮೇಶ್ವರ—ಸತೀ! ನೋಡಿದೆಯಾ? ತೇಜೋನಿಧಿ ಸೂರ್ಯನು ಇದುವರೆಗೆ ತನ್ನ ಉಜ್ವಲ ಕಿರಣಗಳಿಂದ ಜಗವನ್ನು ಬೆಳಗುತ್ತಿದ್ದನು. ಈಗ

ಅವನ ಆ ತೇಜವು ಅಡಗಿಹೋಯಿತು. ನೋಡನೋಡುತ್ತ ಅವನು ತೇಜೋಹೀನನಾಗಿ ಅದೃಶ್ಯನಾದನು. ಪೃಥ್ವಿಯ ಮಾನವರಲ್ಲಿಯೂ ಈ ಸ್ಥಿತಿ ಕಾಣಬರುವುದು. ಈದಿನ ಅಧಿಕಾರ ಜ್ಞಾನ ಗೌರವಗಳಿಂದ ಪ್ರಕಾಶಮಾನನಾಗಿರುವವನೇ ನಾಳೆ ತೇಜೋಹೀನನಾಗಿ ಕಣ್ಮರೆಯಾಗುವನು. ಆದರೆ ಮನುಷ್ಯನ ಭ್ರಾಂತಿಯೆಷ್ಟು ನೋಡಿದೆಯಾ? ಈ ನಶ್ವರವಾದ ದೇಹವನ್ನೂ ಸುಖದುಃಖಗಳನ್ನೂ ನಚ್ಚಿ ನಡೆದಿರುವನು.

ಸತಿ—ಜಗತ್ಪತಿಯೇ, ಸೂರ್ಯನು ಅಸ್ತಂಗತನಾದ ಬಳಿಕ ಪುತ್ತೆ ಉದಯಹೊಂದುವನು; ಈ ವಿಷಯದಲ್ಲಿ ಮನುಷ್ಯನ ಸ್ಥಿತಿಯೆಂತು?

ಪರಮೇಶ್ವರ—ದೇವೀ,' ಸಾಮಾನ್ಯಮನುಷ್ಯನು ಹೇಳುವ ಜನನ ಮರಣಗಳನ್ನೇ ಜ್ಞಾನಿಯು ಉದಯಾಸ್ತಗಳೆಂದು ಹೇಳುವನು. ಆದರೆ ಸೂರ್ಯನಿಗೆ ಪುತ್ತೆ ಮತ್ತೆ ಉದಯಾಸ್ತಗಳಾದರೂ ಅವನ ತೇಜಸ್ಸಿನಲ್ಲಿ ಹೆಚ್ಚು ಕಡಿಮೆಯಾದಂತೆ ಕಾಣಬರುವುದಿಲ್ಲ. ಆದರೆ ಮನುಷ್ಯನ ಸ್ಥಿತಿಯು ಹೀಗಲ್ಲ. ಅವನು ಒಂದೊಂದು ಜನ್ಮದಲ್ಲಿಯೂ ಹೆಚ್ಚು ಹೆಚ್ಚು ಜ್ಞಾನಸಂಗ್ರಹ ಮಾಡಿದಂತೆಯೂ ಹೆಚ್ಚು ಹೆಚ್ಚು ಸುಶೀಲನಾದಂತೆಯೂ ಮುಂದಿನ ಜನ್ಮಗಳಲ್ಲಿ ಹೆಚ್ಚು ಹೆಚ್ಚು ತೇಜಸ್ವಿಯಾಗಿ ಹುಟ್ಟುವನು. ಆದರೆ ಜ್ಞಾನ ಧರ್ಮಗಳ ಮಾರ್ಗವನ್ನು ಬಿಟ್ಟವನು ಮಾತ್ರ ಹೆಚ್ಚು ಹೆಚ್ಚು ತೇಜೋಹೀನನಾಗುತ್ತ ಹೋಗುವನು.

ಇಂತು ಅವರಲ್ಲಿ ಜಗತ್ಕಲ್ಯಾಣಕಾರಕವಾದ ಸಲ್ಲಾಪಗಳು ನಡೆದಿರಲು ದೂರದಿಂದ ಅತಿ ಮಂಜುಲವಾದ ವೀಣಾನಿನಾದವೂ ಅದರೊಡನೆ ಅತಿ ಮಧುರವಾದ ಮಂಗಲಗೀತವೂ ಕೇಳಿಸಿತು.

ಆ ಗಾನಧ್ವನಿಯು ಸತಿಗೆ ಮೊದಲಿನಿಂದ ಪರಿಚಿತವಾದುದೇ. ಅದನ್ನು ಕೇಳಿದೊಡನೆ ಅವಳು—ಈ ಸ್ವರವು ಇನ್ನಾರದೂ ಅಲ್ಲ; ದೇವರ್ಷಿ ನಾರದನು ಇತ್ತಕಡೆಗೆ ಬರುತ್ತಿರುವನು, ಎಂದಳು.

ಸ್ವಲ್ಪ ವೇಳೆಯಲ್ಲಿ ತನ್ನ ಮಂದಹಾಸಪ್ರಭೆಯಿಂದ ದಿಕ್ಕುಗಳನ್ನು ಬೆಳಗುತ್ತ ವೀಣಾಪಾಣಿ ಶುಭ್ರಮೂರ್ತಿ ನಾರದನು ಅವರಿದಿರಿಗೆ ಬಂದು ನಿಂತನು. ನಮಸ್ಕಾರ ಕುಶಲಪ್ರಶ್ನಾದಿಗಳು ನಡೆದ ಬಳಿಕ ನಾರದನು ಸಮಾ

ಪದ ಹಾಸುಗಲ್ಲಮೇಲೆ ಕುಳಿತುಕೊಳ್ಳಲು ಸತಿಯು ಇಂತು ಪ್ರಶ್ನ ಮಾಡಿದಳು. ಪೂಜ್ಯರೇ! ದಕ್ಷಪುರಿಯ ಸುದ್ದಿಯೇನು? ಮನೆಯಲ್ಲೆಲ್ಲ ಕುಶಲವೇ?

ನಾರದ—ಎಲ್ಲವೂ ಕುಶಲವಾಗಿದೆ. ನಿಮ್ಮ ತಂದೆಯು ದೊಡ್ಡದೊಂದು ಯಜ್ಞವನ್ನು ಹವ್ಮಿರುವನು. ಭೂಮಿಯಲ್ಲಿರುವ ಧನಿಕರು, ದರಿದ್ರರು, ಪಂಡಿತರು, ಪಾಮರರು, ಗಂಡುಸರು, ಹೆಂಗುಸರು ಎಲ್ಲರಿಗೂ ಆ ಯಜ್ಞಕ್ಕೆ ಆಮಂತ್ರಣ ಕೊಟ್ಟಿರುವನು. ಈಗ ಆ ಯಜ್ಞದ ಸಿದ್ಧತೆಯಲ್ಲಿಯೇ ಅವನು ತೊಡಗಿಕೊಂಡಿರುವನು.

ಸತಿ—(ಆನಂದದೊಡನೆ) ಪೂಜ್ಯರೇ! ಹಾಗಾದರೆ ತಂದೆಯ ಅಪ್ಪಣೆಯಿಂದ ನಮ್ಮನ್ನು ಕರೆಯಲಿಕ್ಕೆ ಬಂದಿರುವಿರೋ?

ನಾರದ—ದೇವೀ! ಇಲ್ಲ ಇಲ್ಲ. ನಾನು ಇಲ್ಲಿಗೆ ಬಂದುದನ್ನು ಕೂಡ ನಿನ್ನ ತಾಯಿತಂದೆಗಳು ಅರಿಯರು. ನಿಮ್ಮನ್ನು ನೋಡದೆ ಬಹಳ ದಿನಗಳಾದುವೆಂದು ದರ್ಶನಕ್ಕಾಗಿ ಬಂದೆನು.

ಸತಿ—(ಖಿನ್ನೆಯಾಗಿ) ಇಂತಹ ದೊಡ್ಡ ಸಮಾರಂಭಕ್ಕೆ ದೇಶದೇಶಗಳಿಂದ ಜನರನ್ನು ಕರೆಸಿ ನಮ್ಮನ್ನು ಕರೆಸದಿರುವುದಕ್ಕೆ ಕಾರಣವೇನು?

ನಾರದ—ಇದರ ಉತ್ತರವನ್ನು ನಾನೇನು ಹೇಳಲಿ? ನಿಮ್ಮ ತಂದೆಗೆ ಬುದ್ಧಿಭ್ರಮವಾಗಿರಬಹುದು. ನನ್ನ ಅಭಿಪ್ರಾಯವೆಂದರೆ ಈ ಸಮಯದಲ್ಲಿ ನಿಮ್ಮನ್ನು ಅವಶ್ಯವಾಗಿ ಕರೆಸತಕ್ಕುದು.

ಸತಿ—(ಆಶ್ಚರ್ಯದಿಂದ) ಪೂಜ್ಯರೇ, ನಮ್ಮಿಂದ ಏನಾದರೂ ಅವನ ವಿಷಯದಲ್ಲಿ ಅಪರಾಧವು ಘಟಿಸಿದೆಯೋ?

ನಾರದ—ಕೈಲಾಸಪತಿಯು ಯಾವುದೋ ಒಂದು ಸಂದರ್ಭದಲ್ಲಿ ತನ್ನನ್ನು ಅಪಮಾನಪಡಿಸಿರುವನಂತೆ. ಆ ಕೋಪದಿಂದ ಅವನು ತನ್ನ ಎಲ್ಲ ಬಳಗವನ್ನು ಕರೆಸಿ ನಿಮ್ಮನ್ನು ಮಾತ್ರ ಬುದ್ಧಿಪೂರ್ವಕವಾಗಿ ಕರೆಸಿಲ್ಲ.

ಸತಿ—ಅಮ್ಮನಿಗೆ ಈ ವಿಷಯವು ತಿಳಿದಿಲ್ಲವೆ?

ನಾರದ—ತಿಳಿದಿದೆ. ಎಷ್ಟು ಪರಿಯಿಂದ ಹೇಳಿಕೊಂಡರೂ ಅವಳ ಮಾತು ನಡೆಯಲಿಲ್ಲ. ಈಗ ಅವಳು ಅನ್ನ ನೀರುಗಳನ್ನು ತೊರೆದು ಮಲಗಿರುವಳು. ಆ ಎಲ್ಲ ವಿಷಯವನ್ನು ಆಲೋಚಿಸಲು ಫಲವಿಲ್ಲ. ಬೇರೆ ಕಾರ್ಯವಿರುವುದರಿಂದ ನಾನು ಹೊರಡುವೆನು.

ನಾರದನು ಹೋದ ಬಳಿಕ ಸತಿಯು ಪತಿಯನ್ನು ಕುರಿತು, ಸ್ವಾಮೀ, ತಾವು ನನ್ನ ತಂದೆಗೆ ಅಪಮಾನಮಾಡಿರುವಿರೆಂದು ನಾರದರು ಹೇಳುವರಲ್ಲ? ಇದರ ಅರ್ಥವೇನು? ಎಂದು ಕೇಳಿದಳು.

ಪರಮೇಶ್ವರ—ದೇವೀ, ನಾನು ಅವನಿಗೆ ಅಪಮಾನಮಾಡಿಲ್ಲ. ಆದರೆ ಕೆಲವು ದಿವಸಗಳ ಪೂರ್ವದಲ್ಲಿ ಒಂದು ಸಭೆಯಲ್ಲಿ ನಾನು ದೇವಗಣದೊಡನೆ ಕುಳಿತಿದ್ದೆನು. ಆಗ ದಕ್ಷನು ಅಲ್ಲಿಗೆ ಬರಲು ಉಳಿದವರೆಲ್ಲರು ಎದ್ದು ನಿಂತರು. ನಾನು ಮಾತ್ರ ಏಳಲಿಲ್ಲ. ಇದನ್ನೇ ಅವನು ಅಪಮಾನವೆಂದು ಬಗೆದನು; ಮತ್ತು ಅಂದಿನಿಂದ ಏನಾದರೊಂದು ನಿಮಿತ್ತದಿಂದ ನನ್ನನ್ನು ಅಪಮಾನ ಗೊಳಿಸಬೇಕೆಂದು ಹೊಂಚಿಕೊಂಡಿದ್ದನು. ನಿನ್ನ ಮನಸ್ಸು ನೋಯಬಾರದೆಂದು ಈ ವಿಷಯವನ್ನು ಇದುವರೆಗೆ ಬಚ್ಚಿಟ್ಟಿದ್ದೆನು.

ಸತಿ—ದೇವಾ, ನನ್ನದೊಂದು ಬೇಡಿಕೆಯುಂಟು. ತಮ್ಮ ಅಪ್ಪಣೆ ದೊರೆತರೆ ನಾನು ಒಮ್ಮೆ ದಕ್ಷಪುರಿಗೆ ಹೋಗಿ ತಂದೆಯ ದುರಭಿಪ್ರಾಯವನ್ನು ತೊಲಗಿಸಿ ಬರುವೆನು.

ಪರಮೇಶ್ವರ—ದೇವೀ, ಈ ಸಮಯವನ್ನು ಬಿಟ್ಟು ಬೇರೊಂದು ಸಮಯದಲ್ಲಿ ಹೋಗುವುದು ಒಳ್ಳೆಯದು. ಈಗ ಸಿಟ್ಟಿನ ಭರದಲ್ಲಿ ಅವನು ನಿನಗೂ ಅಪಮಾನ ಮಾಡಬಹುದು.

ಸತಿ—ನನಗೆ ಅಪಮಾನ ಮಾಡುವನೇ? ನಾನೇನು ಆತನಿಗೆ ಅಪರಾಧ ಮಾಡಿದ್ದೇನೆ?

ಪರಮೇ.—ಸತೀ, ನೀನು ಬಹು ಸರಲಸ್ವಭಾವದವಳು. ದಕ್ಷನ ಕಪಟವನ್ನು ನೀನರಿಯೆ. ಅವನು ದುರಭಿಮಾನದಿಂದ ಸಲ್ಲದ ಕಾರ್ಯವನ್ನಾದರೂ ಮಾಡಬಲ್ಲನು. ನಾವು ಅಲ್ಲಿಗೆ ಹೋಗದಿರುವುದೇ ಉತ್ತಮ. ನಾವೇ ಅಲ್ಲಿ ಇಲ್ಲದಿರಲು ಯಾರಿಗೆ ಅಪಮಾನ ಮಾಡುವನು? ನಮ್ಮ ಮಾನ ಭಂಗಮಾಡುವುದಕ್ಕಾಗಿಯೇ ಈ ಯಜ್ಞವನ್ನು ಹವ್ಮಿರುವನು. ಇಂಥ ಪ್ರಸಂಗದಲ್ಲಿ ಕರೆ ಬಾರದೆ ಹೋಗಬಹುದೇ? ನೀನೇ ನೋಡು.

ಸತಿ—ಮಗಳಿಗೆ ತಂದೆಯ ಮನೆಗೆ ಹೋಗುವುದಕ್ಕೆ ಕರೆಯೇತಕ್ಕೆ? ಇದಲ್ಲದೆ ತಾಯಿ ಅನ್ನನೀರುಗಳನ್ನು ಬಿಟ್ಟಿರುವಳೆಂದು ನಾರದರು ಹೇಳಿದರು. ಇದನ್ನು ಕೇಳಿಯೂ ಅಪಮಾನಕ್ಕೆ ಅಂಜಿ ಅವಳನ್ನು ಕಾಣವುದಕ್ಕೆ ಹೋಗದಿರುವುದು ಸರಿಯೇ?

ಪರಮೇ.—ದೇವೀ, ಇದರ ಮೇಲೆ ನಿನ್ನ ಇಚ್ಛೆ. ಸಮಯವನ್ನು ನೋಡಿ ವರ್ತಿಸು. ಈ ಯಜ್ಞದ ಪರಿಣಾಮವು ದಕ್ಷನಿಗೂ ನಮಗೂ ಯಾರಿಗೂ ಕ್ಷೇಮಕರವಲ್ಲವೆಂದು ನನಗೆ ತೋರುವುದು.

ಸತಿಯು ಹಾಗೂ ಹೀಗೂ ಪತಿಯ ಅಪ್ಪಣೆಯನ್ನು ಪಡೆದುಕೊಂಡು ತವರ್ಮನೆಗೆ ಹೊರಟಳು. ಕಳುಹಿ ಬರುವುದಕ್ಕೆ ನಂದಿಯು ಸಿದ್ಧನಾಗಿದ್ದನು. ಆತನೊಡನೆ ಕೆಲವು ದಿವಸಗಳಲ್ಲಿಯೇ ದಕ್ಷಪುರಿಗೆ ಬಂದು, ಯಾರಿಗೂ ಕಾಣಿಸಿಕೊಳ್ಳದೆ ನೆಟ್ಟಗೆ ಹಿಂಬಾಗಿಲಿನಿಂದ ಅರಮನೆಯ ಹೊಕ್ಕು ತಾಯಿ ಇದ್ದ ಸ್ಥಳಕ್ಕೆ ಬಂದಳು. ಅಲ್ಲಿ ದುಃಖದಿಂದ ಮಲಗಿದ ತಾಯಿಯನ್ನು ನೋಡಿ ಮೆಲ್ಲನೆ ಅಮ್ಮಾ, 'ನಾನು ಬಂದಿದ್ದೇನೆ' ಎಂದಳು. ಮಗಳ ದನಿಯನ್ನು ಕೇಳಿದೊಡನೆ ನೆಲ ಹಿಡಿದ ಅರಸಿಯು ಎದ್ದು ಕುಳಿತಳು; ಮತ್ತು ಸತಿಯನ್ನು ಪ್ರೇಮದಿಂದ ಅಪ್ಪಿಕೊಂಡು 'ಮಗಳೇ ನಿನಗೆ ನನ್ನ ನೆನಪಾಯಿತೇ?' ಎಂದೆನ್ನುತ್ತ ಮತ್ತೆಮತ್ತೆ ಅವಳನ್ನು ಮುದ್ದಿಸಿದಳು. ಇಬ್ಬರ ಕಣ್ಣುಗಳಿಂದಲೂ ದಳದಳ ಕಣ್ಣೀರು ಸುರಿದುವು.

ಸತಿ—ಅಮ್ಮಾ, ಅಪ್ಪನನ್ನು ಕಂಡು ಬರುವೆನು.

ಅರಸಿ—ಮಗಳೇ, ಮಹಾರಾಜರು ಈಗ ಯಜ್ಞಮಂಟಪದಲ್ಲಿರಬಹುದು. ಆದುದರಿಂದ ಈಗ ಹೋಗಬೇಡ.

ಸತಿ—ಅಪ್ಪನನ್ನು ನೋಡದೆ ಬಹಳ ದಿವಸಗಳಾದುವು. ಈಗಲೇ ಹೋಗಿ ಸುಮ್ಮನೆ ನೋಡಿಕೊಂಡು ಮಾತ್ರ ಬರುವೆನು.

ತಾಯಿಯ ಉತ್ತರದ ದಾರಿಯನ್ನು ನೋಡದೆ ಸತಿಯು ಯಜ್ಞಮಂಟಪದ ಕಡೆಗೆ ಹೊರಟಳು. ಅರಮನೆಯ ಇದಿರಿನ ವಿಶಾಲವಾದ ಅಂಗಳದಲ್ಲಿ ಯಜ್ಞಮಂಟಪವಿದ್ದಿತು. ದೇಶದೇಶಗಳಿಂದ ಬಂದ ಸಾವಿರಾರು ಜನ ಶ್ರೋತ್ರಿಯರು ಅಲ್ಲಿ ನೆರೆದಿದ್ದರು. ದಕ್ಷನ ಐಶ್ವರ್ಯಕ್ಕೇನು ಕೊರತೆ? ಯಾವ ವ್ಯವಸ್ಥೆಯಲ್ಲಿಯೂ ಲೋಪವಿರಲಿಲ್ಲ. ಮಂಟಪದ ಒಂದು ಭಾಗದಲ್ಲಿ ಯಜ್ಞವೇದಿಕೆ ಕಂಗೊಳಿಸುತ್ತಿದ್ದಿತು. ಋತ್ವಿಜರು ಆ ವೇದಿಯ ಸುತ್ತಲು ಮಂಡಲಾಕಾರವಾಗಿ ಕುಳಿತಿದ್ದರು. ನಟ್ಟನಡುವೆ ದಕ್ಷಪ್ರಜಾಪತಿಯು ಕುಳಿತಿದ್ದನು. ಪವಿತ್ರವಾದ ಹೋಮಧೂಮವು ನಾಲ್ಕು ದಿಕ್ಕಿಗೂ ಪಸರಿಸಿತ್ತು. ಎಡೆಬಿಡದೆ ಬೀಳುವ ಆಹುತಿಗಳಿಂದ ಅಗ್ನಿಯು ಪ್ರಜ್ವಲಿಸುತ್ತಿದ್ದನು. ಅಗ್ನಿಯ ಜಳದಿಂದ ದಕ್ಷನ

ಮೋರೆ ಕೆಂಪಗಾಗಿತ್ತು. ಸತಿಯನ್ನು ನೋಡಿದೊಡನೆ ಅಲ್ಲಿದ್ದವರೆಲ್ಲ ಸಂಭ್ರಮದಿಂದ ದಾರಿಯ ಬಿಟ್ಟು ಎದ್ದುನಿಂತರು. ಸತಿಯು ಹತ್ತಿರ ಹೋಗಿ ತಂದೆಗೆ ನಮಸ್ಕಾರ ಮಾಡಿದಳು. ಒಂದು ಕ್ಷಣ ಎಲ್ಲ ಋತ್ವಿಜರು ತಮ್ಮತಮ್ಮ ಹೋಮಕಾರ್ಯವನ್ನು ನಿಲ್ಲಿಸಿದರು. ಆಗ ದಕ್ಷನು ಕಣ್ಣೊರೆಸಿಕೊಂಡು ನೋಡುವಷ್ಟರಲ್ಲಿ ಸತಿಯು ಕೈಜೋಡಿಸಿಕೊಂಡು ಇದಿರಿಗೆ ನಿಂತಿದ್ದಳು. ಸತಿಯನ್ನು ನೋಡಿದೊಡನೆ ಮೊದಲು ದಕ್ಷನ ಮುಖವು ಅರಳಿತು. ಅವನು ಪ್ರೀತಿಯಿಂದ ಸತೀ, ಒಳಿತಾಗಿರುವೆಯಾ? ಎಂದು ಕೇಳಿದನು. ಆದರೆ ಕೂಡಲೆ ಅವನ ಭಾವವು ವಿರುದ್ಧವಾಯಿತು. ಮುಖವು ಸಂಧ್ಯಾಕಾಲದ ಸೂರ್ಯನಂತೆ ಕೆಂಪಗಾಯಿತು. ಆಗ ಅವನು ಬಿರುಸರದಿಂದ ಸತೀ ಏತಕ್ಕೆ ಬಂದೆ? ನಿನ್ನನ್ನು ಯಾರು ಕರೆಸಿದರು? ಎಂದು ಕೇಳಿದನು. ತಂದೆಯ ಈ ಬಿರುನುಡಿಯು ವಿಷದ ಅಲಗಿನಂತೆ ಸತಿಯ ಹೃದಯವನ್ನು ಭೇದಿಸಿತು. ಅವಳು ಜನ್ಮಾವಧಿ ಈ ತರದ ಮಾತುಗಳನ್ನಾಡಿಸಿಕೊಂಡಿರಲಿಲ್ಲ. ಅವಳು ಕಣ್ಣೀರುಗಳನ್ನು ತಡೆದುಕೊಂಡು ಗದ್ಗದಿತಕಂಠದಿಂದ ಅಪ್ಪಾ, ನಿನ್ನನ್ನು ನೋಡದೆ ಬಹಳ ದಿವಸಗಳಾದುದರಿಂದ ನಿನ್ನ ದರ್ಶನಕ್ಕೆಂದು ಬಂದೆನು ಎಂದಳು. ಸತಿಯ ಈ ಕರುಣಸ್ವರದ ನುಡಿಯನ್ನು ಕೇಳಿ ಅಲ್ಲಿದ್ದ ಎಲ್ಲ ಜನರ ಹೃದಯವು ಕರಗಿತು. ಆದರೆ ದಕ್ಷನು ಮೊದಲಿನಂತೆ ಕಠೋರ ಸ್ವರದಿಂದ— 'ಕರೆಸದೆ ಬರುವುದಕ್ಕೆ ನಾಚಿಕೆ ಬರಲಿಲ್ಲವೇ' ಎಂದನು.

ಸತಿ (ಸಮಾಧಾನದಿಂದ)—ಅಪ್ಪಾ, ಮಕ್ಕಳು ತಾಯಿತಂದೆಗಳನ್ನು ಕಾಣುವುದಕ್ಕೆ ಕರೆಸಿಕೊಂಡೇ ಬರಬೇಕೇ? ಅದರಿಂದ ನಾನು ಹಾಗೇ ಬಂದೆನು.

ದಕ್ಷ—ಈ ಮಾತು ದಕ್ಷನ ಮಗಳಿಗೆ ಒಪ್ಪತಕ್ಕುದಲ್ಲ. ಬ್ರಹ್ಮನು ನಿನ್ನನ್ನು ಯಾವ ನಿರ್ಲಜ್ಜನಿಗೆ ಗಂಟುಹಾಕಿರುವನೋ ಅವನ ಹೆಂಡತಿಗೆ ಒಪ್ಪತಕ್ಕುದು.

ಸತಿ—ಅಪ್ಪಾ, ನಿಷ್ಕಾರಣವಾಗಿ ತಾವು ನಿರ್ಲಜ್ಜನೆಂದು ಅವರನ್ನು ಬಯ್ಯುವಿರೇಕೆ?

ದಕ್ಷ—ನಿರ್ಲಜ್ಜನೆಂದರೂ ಅವನಿಗೆ ಬಯ್ದಂತಾಗುವದಿಲ್ಲ. ಇದಕ್ಕೂ ಹೆಚ್ಚಿನ ಕಠೋರ ಶಬ್ದಗಳು ಬೇಕು. ದಿಗಂಬರನಾದವನನ್ನು ನಿರ್ಲಜ್ಜನೆನ್ನ

ವದು ಯುಕ್ತವೇ ಸರಿ. ಮನೆಯೇನು ಮಸಣವೇನು; ಅನುಲೇಪನವೇನು? ಬೂದಿಯೇನು; ಅಮೃತವೇನು ವಿಷವೇನು? ಎನ್ನುವವನಿಗೆ ನಿರ್ಲಜ್ಜನೆನಬೇಕೋ ಉನ್ಮತ್ತನೆನಬೇಕೋ? ಚಿಃ ಮೋರೆಯ ತೋರಿಸಬೇಡ.

ಈ ನಿಂದೆಯನ್ನು ಅವಳಿಂದ ತಾಳುವುದಾಗಲಿಲ್ಲ. ಪತಿನಿಂದೆಯನ್ನು ಕೇಳಿ ಅಪವಿತ್ರವಾದ ಕಿವಿಗಳಮೇಲೆ ಕೈಗಳನ್ನಿಟ್ಟುಕೊಂಡು 'ಶಿವ ಶಿವ' ಎನ್ನುತ್ತ ದೊಪ್ಪನೆ ನೆಲದ ಮೇಲೆ ಬಿದ್ದು, ಕೂಡಲೆ ಯೋಗಾಸನವನ್ನು ಹಾಕಿ ಕಣ್ಮುಚ್ಚಿದಳು. ಸ್ವಲ್ಪ ವೇಳೆ ಅವಳ ಶರೀರವು ಸ್ತಬ್ಧವಾಗಿದ್ದಿತು. ನೆರೆದವರೆಲ್ಲ ಚಕಿತರಾಗಿ ಚಿತ್ರದ ಗೊಂಬೆಗಳಂತೆ ನೋಡುತ್ತಿದ್ದರು. ನೋಡುನೋಡುತ್ತ ಸತಿಯ ದೇಹದಿಂದ ಒಂದು ಅಪೂರ್ವವಾದ ಜ್ಯೋತಿಯು ಹೊರಟಿತು. ಅದರ ಬೆಳಕಿನಿಂದ ಯಜ್ಞಕುಂಡದ ಅಗ್ನಿಯೊಡನೆ ಮಿಶ್ರವಾಗಿ ಆಕಾಶದಲ್ಲಿ ಅಡಗಿಹೋಯಿತು. ಕ್ಷಣದಲ್ಲಿ ಸತಿಯ ದೇಹವು ಮಣ್ಣಿನ ಬೊಂಬೆಯಂತೆ ಭೂಮಿಯಮೇಲೆ ಬಿದ್ದಿತು.

ಮುಂದೆ ದಕ್ಷನ ಯಜ್ಞದ ಕೊನೆ ಹೇಗಾಯಿತೆಂಬುದನ್ನು ಹೇಳುವುದು ಬೇಡ. ಮಕ್ಕಳು ತಮ್ಮ ತಾಯಿಯ ಕೊಂದವರನ್ನು ಕೊಲ್ಲುವಂತೆ ಕೈಲಾಸ ಪತಿಯ ಅನುಚರರು ದಕ್ಷನನ್ನೂ ಅವನ ಅನುಯಾಯಿಗಳನ್ನೂ ಕೊಂದರು. ದಕ್ಷನ ಅರಮನೆ ಮೊದಲಾದುದೆಲ್ಲ ನೆಲಕ್ಕೆ ಸಮವಾಯಿತು. ದಕ್ಷಪುರಿಯ ಸಿರಿಯೆಲ್ಲ ಮಣ್ಣುಗೂಡಿತು. ಪುರಜನರೆಲ್ಲ ನಿರ್ಗತಿಕರಾದರು. ದಕ್ಷನ ಪಾಪದಿಂದ ಆ ಪುರವು ಮಸಣದಂತೆ ತೋರತೊಡಗಿತು. ಭಾಗೀರಥಿಯು ಮಾತ್ರ ದಕ್ಷನ ಅನ್ಯಾಯವನ್ನು ಲೋಕಕ್ಕೆಲ್ಲ ಸಾರುತ್ತ ನಡೆದಳೋ ಎಂಬಂತೆ ಎಂದಿನಂತೆ 'ಕುಳುಕುಳು' ಧ್ವನಿಗೈಯುತ್ತ ಅಲ್ಲಿಂದ ಹರಿಯುತ್ತಿರುವಳು.

## ೩. ಜಗತ್ತಿನೊಳಗಿನ ಎಲ್ಲಕ್ಕೂ ಹೆಚ್ಚಿನ ಆಶ್ಚರ್ಯವು!

ಭರದಿಂದ ಓಡುವ ಉಗಿಬಂಡಿಯು ಇಲ್ಲವೆ ಮೋಟಾರು
ಸಮೀಪದಲ್ಲಿ ಹಾಯ್ದು ಹೋಗುತ್ತಿರಲು ಕ್ಷಣಕಾಲವಾದರೂ
ವಿಸ್ಮಿತನೇತ್ರದಿಂದ ನೋಡದ ಮನುಷ್ಯನಾರು? ಒಂದು
ಕಡೆಯಲ್ಲಿ ಹತ್ತಿಯನ್ನು ತುಂಬಿ ಬಿಟ್ಟರೆ ಇನ್ನೊಂದು ಕಡೆಯಲ್ಲಿ ನಯವಾದ
ಬಟ್ಟೆಯು ಸಿದ್ಧವಾಗಿ ಬರುವ ಯಂತ್ರಾಗಾರಿಕೆಯನ್ನು ನೋಡಿ ಯಾರು
ಮೂಗಿನ ಮೇಲೆ ಬೆರಳಿಟ್ಟುಕೊಳ್ಳರು? ಅದರಂತೆ ಮನುಷ್ಯರು ದೇವತೆ
ಗಳಂತೆ ವಿಮಾನವಿಹಾರಿಗಳಾಗಿರುವುದನ್ನು ನೋಡಿ ಯಾರು ಆನಂದಾಶ್ಚ
ರ್ಯಗಳಿಂದ ಪರವಶರಾಗರು? ಆದರೆ ಇವೆಲ್ಲ ಮನುಷ್ಯ-ಕೃತಿಗಳು. ಇವೆಲ್ಲವು
ಗಳಲ್ಲಿಯೂ ಒಂದಿಲ್ಲೊಂದು ತರದ ನ್ಯೂನತೆ ಇದ್ದೇ ಇದೆ. ಈ ತರದ ಮಾನ
ವೀಯಕೃತಿಯಲ್ಲಿ ಪ್ರಸಂಗವಿಶೇಷಗಳಲ್ಲಿ ಒದಗಬಹುದಾದ ಅಪಘಾತದ
ವಿಚಾರವೂ ಇವುಗಳನ್ನು ರಚಿಸುವುದರಲ್ಲಿ ಮನುಷ್ಯನು ಸಹಿಸಬೇಕಾದ
ಹಲವು ಕಷ್ಟ-ನಷ್ಟಗಳ ಕಲ್ಪನೆಯೂ ಸ್ಮರಣೆಗೆ ಬಂದಕೂಡಲೆ ಮನಸ್ಸಿನೊಳ
ಗಿನ ಆಶ್ಚರ್ಯಯುಕ್ತವಾದ ಆನಂದಭಾವನೆ ಅಡಗಿ ಭೀತಿ ತಲೆದೋರಿ
ಮೈ ಜುಮ್ಮೆನ್ನುವುದು; ಅಂತರಂಗವು ನಡುಗತೊಡಗುವುದು.

ಇನ್ನು, ಜಗತ್ತಿನೊಳಗಿನ ಈಶ್ವರೀಯ ಕೃತಿಯನ್ನು ನೋಡಿರಿ:
ಮುಂಜಾವಿನಲ್ಲಿ ಅರಳಿನಿಂತು ತಂಗಾಳಿಯಿಂದ ತೊನೆಯುತ್ತಿರುವ ಸುಂದರ
ವಾದ ಗುಲಾಬಿಹೂವಿನ ಸ್ನಿಗ್ಧ-ಪುಷ್ಟ-ಮೃದುಲವಾದ ಎಸಳಗಳು, ಅವುಗಳ
ಚಮತ್ಕಾರವಾದ ವಿನ್ಯಾಸ ಇವುಗಳನ್ನು ನೋಡಿ, ಅದರ ಸುಮನೋಹರ
ವಾದ ಸುವಾಸನೆಯನ್ನು ಆಘ್ರಾಣಿಸಿ ಅಂತರಂಗವು ಹೇಗೆ ಪ್ರಫುಲ್ಲಿತವಾಗು
ವುದು! ನಿರ್ಮಲವೂ ಶೀತಲವೂ ಆದ ತೊರೆಯು, ದೊಡ್ಡ ದೊಡ್ಡ ಬಂಡೆ
ಗಳು ಅಂಕಡೊಂಕ ಕಲ್ಲುಗಳು ಸ್ವಚ್ಛವಾದ ಬಿಳಿಯ ಉಸುಕು ದಂಡೆಯೊಳ
ಗಿನ ಹಸರುಮುರಿಯುವ ಎಳಗರಿಕೆ ಇವುಗಳ ನಡುವೆ ಮಂಜುಳವಾದ
"ಗುಳು ಗುಳು" ನಿನಾದದೊಡನೆ ಮಂದಮಂದವಾಗಿ ಹರಿಯುತ್ತಿದ್ದಾಗ,

ಸಂಧ್ಯಾಸಮಯದ ಮಂದಮಾರುತನ ಸುಳಿದಾಟದಿಂದ ಅದರಲ್ಲಿ ಪುಟ್ಟ ಪುಟ್ಟ ಅಲೆಗಳು ಆಡುತ್ತಿದ್ದಾಗ, ದಂಡೆಯ ಮೇಲಿನ ಬಂಡೆಗಲ್ಲಿನ ಮೇಲೆ ಆ ತೊರೆಯ ನೀರಲ್ಲಿ ಕಾಲಿಟ್ಟು ಕುಳಿತುಕೊಂಡು ಸುತ್ತಲಿನ ಸೃಷ್ಟಿ-ಸೌಂದರ್ಯವನ್ನು ನಿರೀಕ್ಷಿಸುವಾಗ ನಮ್ಮ ಮನಸ್ಸಿನ ಸ್ಥಿತಿಯು ಹೇಗಾಗಬಹುದು ?

ಎಲೈ ಶ್ರೇಷ್ಠಮಾನವನೇ ಇವನ್ನೆಲ್ಲಾ ನೋಡು ! ಅನುಭವಿಸು ! ಆನಂದವ ಪಡೆ ! ಆದರೆ ಇನ್ನೊಂದು ವಿಚಾರವಿದೆ. ಇವೆಲ್ಲಕ್ಕಿಂತಲೂ ಅತ್ಯುಚ್ಚತರದ, ಇವೆಲ್ಲಾ ಸೌಂದರ್ಯಗಳನ್ನು ಅನುಭವಿಸಲಿಕ್ಕೆ ಸಾಧನವಾದ, ನಿನ್ನ ಸ್ವಶರೀರವನ್ನು ನೀನು ಎಂದಾದರೂ ಒಮ್ಮೆ ಇಂಥ ಚಕಿತ ದೃಷ್ಟಿಯಿಂದ ನೋಡಿ ಅದರಿಂದಾಗುವ ಆನಂದವನ್ನು ಅನುಭವಿಸಿರುವೆಯಾ? ಅದರ ರಚನೆಯೂ ಸೌಂದರ್ಯವೂ ಸೃಷ್ಟಿಯೊಳಗಿನ ಸಕಲ ರಚನೆಗಳಲ್ಲಿಯೂ ಸೌಂದರ್ಯಗಳಲ್ಲಿಯೂ ಶ್ರೇಷ್ಠತರದವಾಗಿರುವುವೆಂಬ ಕಲ್ಪನೆ ನಿನ್ನ ಮನಸ್ಸಿಗೆ ಎಂದಾದರೂ ಹೊಳೆದಿರುವುದೇ ? ಈ ನಿನ್ನ ಶರೀರದೊಳಗಿನ ಅವಯವಗಳ ಸಲಕ್ಷಣ ಸನ್ನಿವೇಶ, ಅವುಗಳನ್ನು ಆಳುವ ಮೇಧಾಶಕ್ತಿ ಮತ್ತು ಸುಖದುಃಖಗಳ ಅನುಭವಕ್ಕೆ ಕಾರಣವಾಗಿದ್ದ ಮನಸ್ಸು ಎಂಬೀ ಸೌಂದರ್ಯತ್ರಯದ ಮುಂದೆ ಇತರ ಸಕಲ ಪದಾರ್ಥಗಳು ಕೇವಲ ಕ್ಷುಪದಾರ್ಥಗಳೆಂಬ ವಿಚಾರವು ನಿನ್ನ ಲಕ್ಷ್ಯದಲ್ಲಿರಲಿ ! ಜಗತ್ತಿನೊಳಗಿನ ಮಹಾ ಮಹಾ ತತ್ತ್ವವಿದರು ಹೇಳಿದ "ಮಾನವಾ ! ನಿನ್ನನ್ನೇ ನೀನು ತಿಳಿದುಕೊಳ್ಳು !" ಎಂಬ ಉಪದೇಶವಾಕ್ಯದ ಭಾವವನ್ನು ಗಮನಿಸು ! ಸಂಪೂರ್ಣವಾದ ಶರೀರ-ರಚನೆಯನ್ನೂ ಅತುಲವಾದ ಬುದ್ಧಿ-ಸಾಮರ್ಥ್ಯವನ್ನೂ ಕೊಟ್ಟು ನಿನ್ನನ್ನು ಈ ಸೃಷ್ಟಿಯಲ್ಲಿ ಶ್ರೇಷ್ಠನನ್ನಾಗಿ ಮಾಡಿದ ಜಗದೀಶ್ವರನ ಉಪಕಾರವನ್ನು ಸಾಧ್ಯವಿದ್ದಮಟ್ಟಿಗಾದರೂ ತೀರಿಸಲು ಯತ್ನಿಸು ! ಸ್ಮರಿಸು !

ಮಾನವಶರೀರವು ಭಾಷೆಗೆ ಶಬ್ದಕೋಶವಿದ್ದಂತೆ ಯಂತ್ರಶಾಸ್ತ್ರಕ್ಕೆ ದೊಡ್ಡದೊಂದು ಕೋಶದಂತಿರುವುದು. ಶಬ್ದಕೋಶದಲ್ಲಿ ಸಕಲ ವಿಷಯಗಳಿಗೆ ಸಂಬಂಧಿಸಿದ ಶಬ್ದಗಳ ಸಂಗ್ರಹವಿರುವಂತೆ, ಮಾನವ ಶರೀರದಲ್ಲಿ ಇಂಥ ಸುಧಾರಣೆಯ ಯುಗದಲ್ಲಿಯೂ ಮಾನವನಿಗೆ ಅನುಕರಿಸುವುದಕ್ಕೆ ಅಸಾಧ್ಯವಾದ ಬಗೆಬಗೆಯ ಯಾಂತ್ರಿಕರಚನೆಗಳೂ, ಯಂತ್ರಶಾಸ್ತ್ರನಿಯಮ

ಗಳಿಗೆ ಸಂಬಂಧಿಸಿದ ಎಲ್ಲ ಬಗೆಯ ಮಾದರಿಗಳೂ, ಸಕಲ ಸೃಷ್ಟಿನಿಯಮಗಳ ಪ್ರತ್ಯಕ್ಷ ಉದಾಹರಣಗಳೂ ಸಕಲ ವಿದ್ಯಾ-ಕಲಾ-ಕೌಶಲ್ಯಗಳ ಪ್ರತ್ಯಕ್ಷ ಸ್ವರೂಪಗಳೂ ಕಾಣಬರುವುವು.

ಮಾನವಶರೀರದಲ್ಲಿ ತರತರದ ಮನೋಹರವಾದ ವರ್ಣಗಳು, ಅತಿ ಗೂಢವಾದ ತತ್ತ್ವಗಳು, ಆಶ್ಚರ್ಯಕರವಾದ ಬೇರೆ ಬೇರೆ ಅವಯವಗಳು ಇವು ಕೊಂಕುಕೊರತೆಗಳಿಲ್ಲದೆ ಕೂಡಿಕೊಂಡಿರುವುವು ! ಅದರಲ್ಲಿರುವ ಪರ ಮಾಣುಗಳು ನಲಿಕೆಗಳು ಸಿರಗಳು ಜೀವತತ್ತ್ವವನ್ನು ಬೆಳೆಯಿಸುವಂಥ ಸಾಧನಗಳು ಇವುಗಳ ಗಣನೆ ಇಂದಿಗೂ ಆಗಿಲ್ಲ ! ಮಾನವದೇಹವು ವಿಶ್ವದ ವ್ಯಷ್ಟಿ ಎಂದರೆ ವಿಶ್ವದ ಸಣ್ಣದೊಂದು ಮಾದರಿ ಆಗಿರುವುದು !

ಮಾನವಶರೀರವು ಸೃಷ್ಟಿಕರ್ತನ ಅಸಾಧಾರಣವಾದ ಬುದ್ಧಿಕೌಶಲ್ಯ ವನ್ನು ವ್ಯಕ್ತಪಡಿಸುವಂಥ, ಸ್ವಯಂ ಚಲನೆಯುಳ್ಳಂಥ, ತಾನೇ ತನ್ನ ಸವಕಳಿ ಯನ್ನು ಪೂರೈಸಿಕೊಳ್ಳುವಂಥ, ಕೆಲವೊಂದು ದೀರ್ಘ-ಅವಧಿಯವರೆಗೆ ಬೆಳೆ ವಣಿಗೆಯನ್ನೂ ತಾಳಿಕೆಯನ್ನೂ ಹೊಂದುವಂಥ, ಒಂದು ಅತ್ಯಗಾಧವಾದ ಯಂತ್ರವಾಗಿರುವುದು. ಕೆಲವರು ಈ ಯಂತ್ರವನ್ನು ಉಗಿಬಂಡಿಯ ಎಂಜಿನಿಗೆ ಹೋಲಿಸುವದುಂಟು. ಇದು ಎಂಜಿನಿನಂತೆ ಆಹಾರವನ್ನು ತಿಂದು ಅದ ರಿಂದುಂಟಾಗುವ ಶಕ್ತಿಯಿಂದ ಬೇರೆ ಬೇರೆ ಕಾರ್ಯಗಳನ್ನು ಜರುಗಿಸುವುದು; ಉಳಿಯುವ ನಿರುಪಯುಕ್ತ ಪದಾರ್ಥವನ್ನು ಮಲದ ರೂಪದಿಂದ ಬಿಟ್ಟು ಬಿಡುವುದು. ಇವಲ್ಲದೆ ಬೇರೆ ಕೆಲವು ಸಂಗತಿಗಳಲ್ಲಿಯೂ ಈ ಎರಡು ಯಂತ್ರಗಳ ಹೋಲಿಕೆಯುಂಟು. ಇವೆರಡೂ ನಿರ್ಮಲವಾಗಿರಬೇಕು; ಇವೆ ರಡನ್ನೂ ಉಪಯೋಗಿಸದೆ ಬಿಟ್ಟರೆ ಕೆಟ್ಟುಹೋಗುವುವು; ಇವೆರಡರಲ್ಲಿಯೂ ಒಂದು ಭಾಗವು ಮತ್ತೊಂದು ಭಾಗದ ಸುರಕ್ಷಿತತೆಯನ್ನು ಅವಲಂಬಿಸಿರು ವುದು; ಇವೆರಡರಲ್ಲಿಯೂ ಒಂದು ಭಾಗವು ಕೆಟ್ಟು ಹೋದರೆ ಬಹುಶಃ ಇಡಿ ಯಂತ್ರವು ನಿರುಪಯುಕ್ತವಾಗಿ ಹೋಗುವುದು; ಇಲ್ಲವೆ ತೀರ ಅಶಕ್ತವಾಗುವುದು.

ಹೀಗಿದ್ದರೂ ಕೆಲವು ಮಹತ್ವದ ಸಂಗತಿಗಳಲ್ಲಿ ಉಗಿಬಂಡಿಯ ಎಂಜಿನು ಮಾನವಶರೀರಯಂತ್ರವನ್ನು ಸರಿಗಟ್ಟಲಾರದು. ಕ್ಷುದ್ರ ಮರ್ತ್ಯನ ಕೃತಿ ಯೆಲ್ಲಿ, ಅಪಾರಮಹಿಮೆಯುಳ್ಳ ಸರ್ವೇಶ್ವರನ ರಚನೆಯೆಲ್ಲಿ ! ಮಾನವಶರೀರ

ದಲ್ಲಿದ್ದ, ಅದರ ಜೀವನಕ್ಕೆ ಕಾರಣವಾದ ಜೀವನರಸವು ಉಗಿಬಂಡಿಯ ಎಂಜಿನಿನಲ್ಲಿಲ್ಲ. ಮಾನವಶರೀರವು ತಾನು ತಿಂದ ಆಹಾರದಿಂದ ಮಜ್ಜಾ-ಮಾಂಸಾದಿಗಳನ್ನು ನಿರ್ಮಿಸಿಕೊಂಡು ತನ್ನ ಸವಕಳಿಯನ್ನು ಪೂರೈಸಿಕೊಳ್ಳುವುದು; ಬೆಳೆವಣಿಗೆಯನ್ನು ಹೊಂದುವುದು; ಈ ಶಕ್ತಿಯು ಉಗಿಬಂಡಿಯ ಯಂತ್ರದಲ್ಲಿಲ್ಲ. ಮಾನವಶರೀರವು ಸ್ವಯಂಚಲಿತವು; ಎಂಜಿನು ಪರಾಧೀನವು. ಮಾನವಶರೀರವು ಏಳೇಳು ವರ್ಷಕ್ಕೊಮ್ಮೆ ತನ್ನೊಳಗಿನ ಯಾವತ್ತು ಯಂತ್ರಸಾಮಗ್ರಿಗಳನ್ನು ಹೊಸದಾಗಿ ನಿರ್ಮಿಸಿಕೊಳ್ಳುವುದೆಂದು ಶಾಸ್ತ್ರಜ್ಞರ ಅಭಿಪ್ರಾಯವಿರುವುದು. ಈ ಶಕ್ತಿಯು ಮಾನವೀಯ ಕೃತಿಯಲ್ಲಿ ಎಲ್ಲಿದೆ?

ಇಂದು ಸಣ್ಣ ಕೂಸಾಗಿದ್ದವರು ಕ್ರಮವಾಗಿ ಬೆಳೆದು ದೊಡ್ಡ ಹುಡುಗರಾಗುವರು; ತರುಣರಾಗುವರು. ಆಗ ಅವರ ಶರೀರದೊಳಗಿನ ಎಲ್ಲ ಅವಯವಗಳು ಮೊದಲಿಗಿಂತ ಹಲವು ಮಡಿ ದೊಡ್ಡವಾಗುವುವು; ಎಷ್ಟೋ ಭಾಗಗಳು ಹೊಸದಾಗಿ ಉಂಟಾಗುವುವು. ಈ ಬೆಳೆವಣಿಗೆ ಏತರಿಂದಾಗುವುದು? ಬೆಳೆವಣಿಗೆಯೆಂದರೇನೆಂಬುದನ್ನು ಕುರಿತು ಒಬ್ಬ ಶಾಸ್ತ್ರಜ್ಞನು ಹೇಳುವುದೇನಂದರೆ:— "ಮಾನವಶರೀರವು ತನ್ನ ಸುತ್ತಲಿನ ಪದಾರ್ಥಗಳನ್ನು ಸ್ವೀಕರಿಸಿ ರೂಪಾಂತರ ಮಾಡಿ ತನ್ನೊಳಗೆ ಇರುವಂಥ ಪದಾರ್ಥಗಳನ್ನು ನಿರ್ಮಿಸಿಕೊಳ್ಳಬಲ್ಲುದು. ಈ ವ್ಯಾಪಾರಕ್ಕೆ ಬೆಳೆವಣಿಗೆಯೆಂಬ ಹೆಸರು." ಈ ಬೆಳೆವಣಿಗೆ ಸರಿಯಾಗಿ ನಡೆಯಬೇಕಾದರೆ ಶರೀರಕ್ಕೆ ಯಾವದೊಂದು ನೈಮಿತ್ತಿಕ ವ್ಯಾಧಿಯು ತಗಲಕೂಡದು; ಆನುವಂಶಿಕ ವ್ಯಾಧಿಯು ಇರಕೂಡದು. ಇದಲ್ಲದೆ ಮನುಷ್ಯನ ಶರೀರವು ನಿತ್ಯದ ದುಡಿತದಿಂದ ಸವೆದು ಆ ಸವಕಳಿಯನ್ನು ಪೂರೈಸಿಕೊಳ್ಳುವುದೆಂದರೆ ಅದೂ ಒಂದು ಪ್ರಕಾರದ ಬೆಳೆವಣಿಗೆಯೇ ಸರಿ. ಈ ಮೇರೆಗೆ ಮನುಷ್ಯನ ಶರೀರದಲ್ಲಿ, ಇದ್ದ ಅವಯವಗಳನ್ನು ವೃದ್ಧಿಪಡಿಸಿಕೊಳ್ಳುವುದು, ದುಡಿತದಿಂದಾಗುವ ಸವಕಳಿಯನ್ನು ಪೂರೈಸಿಕೊಳ್ಳುವುದು ಎಂಬ ಎರಡು ಬಗೆಯ ಬೆಳೆವಣಿಗೆಯ ಕಾರ್ಯವು ಸತತವಾಗಿ ನಡೆಯುವುದು.

ಹೊಸದಾಗಿ ಪದಾರ್ಥಗಳನ್ನು ನಿರ್ಮಿಸಿಕೊಳ್ಳುವ ಮತ್ತು ಸವಕಳಿಯನ್ನು ಪೂರೈಸಿಕೊಳ್ಳುವ ಸಂಬಂಧದಿಂದ ಮಾನವಪ್ರಾಣಿಯು ತನ್ನ ಆಯುಷ್ಯಕ್ರಮದಲ್ಲಿ ಬಾಲ್ಯ ತಾರುಣ್ಯ ವಾರ್ಧಕ್ಯಗಳೆಂಬ ಮೂರು ಒಡೆದು ಕಾಣಿಸುವಂಥ ಅವಸ್ಥೆಗಳನ್ನು ಹೊಂದುವುದು. ಬಾಲ್ಯದಲ್ಲಿ ಶರೀರನಿರ್ಮಾ

ಪಕ ಸಾಮಗ್ರಿಗಳ ಪೂರೈಕೆಯು ತತ್ಕಾಲದ ಸವಕಳಿಯ ಮಾನಕ್ಕಿಂತ ಹೆಚ್ಚಿಗೆ ಇರುವದರಿಂದ ಹುಡುಗರು ಕೆಲವೊಂದು ಅವಧಿಯ ವರೆಗೆ ಬೆಳೆದು ದೊಡ್ಡವರಾಗುವರು; ಎಂದರೆ ಅವರ ಅವಯವಗಳು ವೃದ್ಧಿಹೊಂದುವವು. ಕ್ರಮದಿಂದ ಪೂರೈಕೆಯ ಮಾನವು, ಆ ಶರೀರದಲ್ಲಿ ನಡೆದಿರುವ ಸವಕಳಿಯ ಮಾನಕ್ಕೆ ಸರಿಯಾಗತೊಡಗಲು ಬೆಳೆವಣಿಗೆ ಕಟ್ಟಾಗುವುದು. ಈ ಅವಧಿಗೇ ತಾರುಣ್ಯವೆನ್ನಬಹುದು. ಮುಂದೆ ಬರಬರುತ್ತ ಸವಕಳಿಯ ಮಾನವು ಪೂರೈಕೆಗಿಂತ ಹೆಚ್ಚಾಗಲು ವೃದ್ಧಾಪ್ಯವೆಂಬ ಮೂರನೆಯ ಅವಸ್ಥೆ ಒದಗುವುದು.

ಮಾನವಶರೀರವು ತ್ವಚೆಯಿಂದ ತುಂಬ ಆಚ್ಛಾದಿತವಾಗಿರುವುದು. ಈ ತ್ವಚೆಯು ನಮಗೆ ಮಿದುವಾಗಿಯೂ ಸಪಾಟಾಗಿಯೂ ಇದ್ದಂತೆ ತೋರಿದರೂ ನಿಜವಾದ ಸ್ಥಿತಿ ಮಾತ್ರ ಹಾಗೆ ಇಲ್ಲ. ಅದು ಸುಮಾರು ೨೫ ಲಕ್ಷ ಬೇರೆ ಬೇರೆ ಗ್ರಂಥಿಗಳಿಂದ ಕೂಡಿದೆ. ಈ ಗ್ರಂಥಿಗಳು ತಾವು ಸಂಗ್ರಹಿಸಿದ ಸ್ವೇದವನ್ನು ಅಸಂಖ್ಯ ಸರ್ಪಾಕಾರ-ನಳಿಕೆಗಳಿಂದ ಹೊರಗೆ ಹಾಕುತ್ತಿರುವವು. ಒಂದು ಸೂಕ್ಷ್ಮದರ್ಶಕ ಯಂತ್ರದ ಕೆಳಗೆ ನಮ್ಮ ಅಂಗೈಯನ್ನಿಟ್ಟು ನೋಡಿದರೆ ಅಲ್ಲಿ ಪ್ರತಿ ಚೌರಸ ಅಂಗುಲಕ್ಕೆ ಸು. ೩೮೦೦ ಸೂಕ್ಷ್ಮವಾದ ಛಿದ್ರಗಳಿರುವುವೆಂಬುದು ಕಂಡುಬರುವುದು! ಈ ಛಿದ್ರಗಳ ಮಾರ್ಗವಾಗಿ ಶರೀರದೊಳಗಿನ ವಿಷಮಯ ನಿರುಪಯುಕ್ತ ಪದಾರ್ಥಗಳು ಬೆವರಿನ ರೂಪದಿಂದ ಹೊರಬೀಳುವುವು. ಇವಲ್ಲದೆ ಒಳಭಾಗದಿಂದ ಒಂದು ಬಗೆಯ ಎಣ್ಣೆಯನ್ನು ತಂದು ಮೈದೊಗಲನ್ನು ನೆನೆಯಿಸಿ ಅದನ್ನು ಮೆತ್ತಗಿಡುವ ಕೆಲಸವನ್ನು ಮಾಡುವಂಥ ಅಸಂಖ್ಯ ನಲಿಕೆಗಳು ಮೈದೊಗಲಿನಲ್ಲಿ ಕಂಡುಬರುವುವು. ನಿಜವಾಗಿ ನೋಡಿದರೆ ೨೪ ತಾಸುಗಳ ಅವಧಿಯಲ್ಲಿ ಮೂತ್ರಾಶಯದಿಂದ ಹೊರಬೀಳುವಷ್ಟಕ್ಕಿಂತಲೂ ಹೆಚ್ಚು ಪ್ರವಾಹಿಪದಾರ್ಥವು ಮೈದೊಗಲಿನಿಂದ ಹೊರಬೀಳುವುದು. ಆದರಿಂದ ಶರೀರವು ನಿರ್ಮಲವಾಗಿ ನೀರೋಗಿಯಾಗಿರಲು ಸಹಾಯವಾಗುವುದು. ಯಾವದಾದರೊಂದು ಪ್ರಾಣಿಯ ಮೈಮೇಲಿನ ಯಾವತ್ತು ಕೂದಲುಗಳನ್ನು ಬೋಳಿಸಿ ಮೇಲೆ ವಾರ್ನಿಸನ್ನು ದಟ್ಟಾಗಿ ತೊಡೆದು ಮೈದೊಗಲೊಳಗಿನ ಎಲ್ಲ ಛಿದ್ರಗಳನ್ನು ಮುಚ್ಚಿಬಿಟ್ಟರೆ ಆ ಪ್ರಾಣಿಯು ಕೆಲವು ಹೊತ್ತಿನಲ್ಲಿಯೇ ಸತ್ತುಹೋಗುವುದೆಂಬುದು ಪ್ರಯೋಗದಿಂದ ಸಿದ್ಧವಾಗಿದೆ. ಇದರಿಂದ ಮೈದೊಗಲನ್ನು ಸ್ವಚ್ಛವಾಗಿಡುವುದು ಎಷ್ಟು

ಅವಶ್ಯವೆಂಬುದು ತಾನೇ ಗೊತ್ತಾಗುವುದು. ಸ್ನಾನಮಾಡಲು ಬೇಸರುವವರು ಈ ಮಾತನ್ನು ಲಕ್ಷ್ಯದಲ್ಲಿಡಬೇಕು.

ಮನುಷ್ಯನ ಮೈದೊಗಲನ್ನು ಸುಲಿದುಬಿಟ್ಟರೆ ಒಳಭಾಗದಲ್ಲಿ ಕಾಣಿಸುವ ಮಾಂಸಮಯವಾದ ಭಾಗವು ಸ್ನಾಯುಗಳಿಂದಾಗಿರುವುದು. ಈ ಸ್ನಾಯು ಗಳಲ್ಲಿ ೫೨೨ ಸ್ವತಂತ್ರ ಮಂಡಲಗಳಿದ್ದು ಆ ಪ್ರತಿಯೊಂದು ಮಂಡಲಕ್ಕೂ ಒಂದೊಂದು ಸ್ವತಂತ್ರವಾದ ಹೆಸರಿರುವುದು. ಅದರಂತೆ ನಮ್ಮ ಶರೀರದಲ್ಲಿ ಸು. ೨೧೨ ಬೇರೆ ಬೇರೆ ಅಸ್ಥಿಗಳಿದ್ದು ಅವೆಲ್ಲಕ್ಕೂ ಬೇರೆ ಬೇರೆ ಹೆಸರುಗಳಿರು ವುವು. ಈ ಸ್ನಾಯುಗಳ ಹಾಗು ಅಸ್ಥಿಗಳ ಸಹಾಯದಿಂದ ಮನುಷ್ಯಶರೀರವು ಸು. ೧೨೦೦ ಬೇರೆ ಬೇರೆ ಅಂಗಚೇಷ್ಟೆಗಳನ್ನು ಜರುಗಿಸಬಲ್ಲುದು.

ಮಾನವಶರೀರದ ಬೇರೆ ಬೇರೆ ಅವಯವಗಳನ್ನು ಪೋಷಿಸಿ ಅವು ಗಳಲ್ಲಿ ಕರ್ತೃತ್ವಶಕ್ತಿಯನ್ನು ಹುಟ್ಟಿಸುವಂಥ ಪದಾರ್ಥವು ರಕ್ತವು. ಈ ರಕ್ತವು ಹೃದಯವೆಂಬ ಆಶಯದಿಂದ ಹೊರಟು ಅಸಂಖ್ಯ ವಾಹಿ ನಿಗಳ ಮಾರ್ಗವಾಗಿ ಪ್ರವಹಿಸಿ ಅಲ್ಲಲ್ಲಿಗಿರುವ ಅವಯವಗಳಿಗೆ ಪೋಷಕ ದ್ರವ್ಯಗಳನ್ನು ಪೂರೈಸಿಕೊಟ್ಟು ನಿಸ್ಸತ್ವವಾಯಿತೆಂದರೆ ಮತ್ತೆ ಹೃದ ಯಕ್ಕೆ ಬರುವುದು. ಆರೋಗ್ಯಸ್ಥಿತಿಯಲ್ಲಿದ್ದ, ಬೆಳೆವಣಿಗೆ ತೀರಿದ ಮನುಷ್ಯನ ಹೃದಯವು ಇದಕ್ಕಾಗಿ ಮಿನಿಟಿಗೆ ೭೦ ಸಾರೆಯಂತೆ ಬಡಿದುಕೊಳ್ಳುವುದು. ಈ ಪ್ರತಿಯೊಂದು ಬಡಿತದಿಂದ ೨½ ಔಂಸು ಎಂದರೆ ಒಂದು ದಿವಸದಲ್ಲಿ ಸು. ೪೪೧ ಮಣ ರಕ್ತವು ಹೃದಯದಿಂದ ಒತ್ತಿ ಕಳುಹಲ್ಪಡುವುದು. ಹೀಗೆಂದ ಮಾತ್ರಕ್ಕೆ ಹೃದಯವು ಒಂದು ದೊಡ್ಡ ಬಾವಿಯೆಂದಾಗಲಿ, ಇಷ್ಟೊಂದು ರಕ್ತವು ಅಲ್ಲಿ ಸಂಚಿತವಾಗಿರುವದು ಅಸಂಭವವಾಗಿರುವುದರಿಂದ ನಾವು ಏನೋ ಒಂದು, "ಅರೇಬಿಯನ್ ನೈಟ್ಸ್" ಎಂಬ ಕಥೆಯ ಪುಸ್ತಕದಲ್ಲಿ ಹೇಳಿದಂತೆ ಕೇವಲ ಕಲ್ಪಿತ ವಿಚಾರವನ್ನು ಮನಬಂದಂತೆ ಹೇಳುತ್ತಿರುವೆವೆಂದಾಗಲಿ ಕಲ್ಪಿಸಿಕೊಳ್ಳಲಾಗದು. ಒಮ್ಮೆ ರಕ್ತಾಶಯದಿಂದ ಹೊರಟ ಒಂದು ರಕ್ತದ ಬಿಂದುವು ೨–೩ ಮಿನಿಟುಗಳಲ್ಲಿ ತನ್ನ ಪ್ರದಕ್ಷಿಣೆಯನ್ನು ಮುಗಿಸಿ ಮರಳಿ ಹೃದಯಕ್ಕೆ ಬಂದು ಮುಟ್ಟುವುದು! ಎಂದರೆ ಶರೀರದೊಳಗಿನ ಒಂದೊಂದು ರಕ್ತಬಿಂದುವೂ ಒಂದು ದಿವಸದಲ್ಲಿ ೧೬೮ ಮೈಲು ಪ್ರವಾಸಮಾಡುವುದು. ಶರೀರವಿಜ್ಞಾನ-ಶಾಸ್ತ್ರಜ್ಞರು ಹೇಳುವುದೇನೆಂದರೆ:—" ಶರೀರದೊಳಗಿನ ಬೇರೆ

ಬೇರೆ ಅವಯವಗಳನ್ನು ಪೋಷಿಸುವುದಕ್ಕಾಗಿಯೂ ಅವುಗಳೊಳಗಿನ ಸ್ನಾಯುಗಳು ಸವೆದು ಹುಟ್ಟಿದ ಮಲವನ್ನು ಶೇಖರಿಸಿ ಶರೀರದಿಂದ ಹೊರಗೆಡಹುವುದಕ್ಕಾಗಿಯೂ ಶರೀರದಲ್ಲಿ ಒಂದು ದಿವಸಕ್ಕೆ ೧ ಅಶ್ವಶಕ್ತಿಯು ಉತ್ಪನ್ನವಾಗುವುದು ! ಈ ಶಕ್ತಿಯು ಶರೀರದಲ್ಲಿ ನಡೆಯುವ ರಾಸಾಯನಿಕ ಕ್ರಿಯೆಯಿಂದ ಉಂಟಾಗುವುದು. ''

ಮಾನವಶರೀರದೊಳಗಿನ ರಕ್ತವು ರುಧಿರದ್ರವ ರಕ್ತಗೋಲಕ ಶ್ವೇತಗೋಲಕ ಎಂಬ ಮೂರು ಪದಾರ್ಥಗಳ ಸಂಯೋಗದಿಂದ ಉಂಟಾಗಿರುವುದು. ಒಬ್ಬ ಸಾಮಾನ್ಯ ಮನುಷ್ಯನ ಶರೀರದೊಳಗಿನ ರಕ್ತದಲ್ಲಿ ಸು. ೨೨೪ ಕೋಟಿ ರಕ್ತಗೋಲಕಗಳೂ, ೫೦ ಲಕ್ಷ ಶ್ವೇತಗೋಲಕಗಳೂ ಇರುವುವಂತೆ! ಒಬ್ಬ ಜರ್ಮನ್ ವೈಜ್ಞಾನಿಕನು ಪ್ರಬುದ್ಧ ಮನುಷ್ಯನ ಶರೀರದೊಳಗಿನ ರಕ್ತದಲ್ಲಿ ತುಸು ಹೆಚ್ಚು ಕಡಿಮೆ ೨೬೫೦೦೦ ಕೋಟಿ ಗೋಲಕಗಳಿರುವುವೆಂದು ಹೇಳಿರುವನು !

ಇಂಥ ಅತ್ಯದ್ಭುತವಾದ ಈಶ್ವರ-ನಿರ್ಮಿತ-ಯಂತ್ರವು ಉಚಿತವಾಗಿ ದೊರೆತರೆ ಯಾರಿಗೆ ಆನಂದವಾಗಲಿಕ್ಕಿಲ್ಲ? ಸಾಲೆಯೊಳಗಿನ ಒಬ್ಬ ವಿದ್ಯಾರ್ಥಿಗೆ ಪರೀಕ್ಷಕರು ಒಂದು ಪುಸ್ತಕವನ್ನು ಸಂಭಾವನೆ ಕೊಟ್ಟರೆ ಅವನು ಹಿರಿ ಹಿರಿ ಹಿಗ್ಗಿ ಕುಣಿದಾಡುವನು. ಆದರೆ ಪಾಠಕರೇ, ಈಶ್ವರದತ್ತವಾದ ಈ ಅಮೌಲ್ಯವಾದ ಪಾರಿತೋಷಿಕವನ್ನು ಹೊಂದಿದ ನಿಮಗೆ ಆ ಬಾಲಕನ ಹಾಗೆ ಎಂದಾದರೂ ಆನಂದವಾಗಿತ್ತೇ? ಆನಂದವಾಗುವುದಂತೂ ಒಂದೆಡೆಗಿರಲಿ, ಅದರ ಮಹತ್ವವನ್ನರಿತುಕೊಂಡು ನಡೆಯುವವರಾದರೂ ಎಷ್ಟು ಜನರು? ಅನಿಯಮಿತವಾದ ಆಹಾರವಿಹಾರಗಳಿಂದಲೂ ತಂಬಾಕು, ಗಾಂಜಿ; ಮದ್ಯ, ಮಾಂಸ ಮುಂತಾದ ವಿಷಪದಾರ್ಥಗಳಿಂದಲೂ ಶರೀರವನ್ನು ಹಲವು ವಿಧದ ಬೇನೆಗಳಿಗೆ ಆಹುತಿಗೊಡುವ ಪುಣ್ಯಾತ್ಮರಿಗೆ ಈ ಅಮೌಲ್ಯವಾದ ಯಂತ್ರದ ಮಹತ್ವವು ತಿಲಮಾತ್ರವಾದರೂ ಗೊತ್ತಾಗಿರುವುದೇ?

ಮಾನವಶರೀರವು ಅಪರೂಪವಾದ ದೈವಿಕ ಯಂತ್ರಗಾರಿಕೆಯ ಒಂದು ಉತ್ಕೃಷ್ಟ ದೃಷ್ಟಾಂತವಾಗಿರುವುದು. ಮನುಷ್ಯಕೃತಯಂತ್ರಗಳು ಕೆಲಸ ಮಾಡುವಾಗ ಎಷ್ಟೊಂದು ಕರಾಳ ವಿಕರಾಳವಾಗಿ ತೋರುವುವು ! ಎಷ್ಟೊಂದು

"ಧಡಬಡ" ಹೊಡೆದುಕೊಳ್ಳುತ್ತಿರುವುವು! ಕೆಲವಂತೂ "ಭಕ್, ಭಕ್" ಸಪ್ಪಳ ಮಾಡುತ್ತ ಬಿಟ್ಟ ಹೊಗೆಯಿಂದ ಆಕಾಶವನ್ನೆಲ್ಲ ಮುಚ್ಚಿಬಿಡುವುವು! ಆದರೆ ಈಶನಿರ್ಮಿತ ಈ ಯಂತ್ರವನ್ನು ನೋಡಿರಿ. ಎಷ್ಟೋ ಆಂತರಿಕ ವ್ಯಾಪಾರಗಳು ಹಗಲಿರುಳು ಅವ್ಯಾಹತವಾಗಿ ನಡೆದಿದ್ದರೂ ಹೊರಗೆ ನೋಡುವವರಿಗೆ ಅವು ನಡೆಯುತ್ತವೋ ಇಲ್ಲವೋ ಎಂಬುದು ಕೂಡ ಕಾಣಬರುವುದಿಲ್ಲ. ಈ ವಿಷಯವಾಗಿ ಒಬ್ಬ ಶಾಸ್ತ್ರಜ್ಞನು ಹೇಳಿರುವುದೇನೆಂದರೆ:-"ನಮ್ಮ ಶರೀರವು ಆರೋಗ್ಯಾವಸ್ಥೆಯಲ್ಲಿದ್ದಾಗ ಅದರ ಬೇರೆ ಬೇರೆ ಅವಯವಗಳ ಇರುವಿಕೆಯೇ ಭಾಸವಾಗುವುದಿಲ್ಲ; ಕೆಲಸ ಮಾಡಲಾರದಂತಾದಾಗ ಮಾತ್ರ ಅವುಗಳ ಅಸ್ತಿತ್ವದ ಕಲ್ಪನೆ ನಮಗೆ ಬರುವುದು."

ತತ್ತ್ವಜ್ಞರಾದ ಮಹಾಪುರುಷರು ಮಾನವಶರೀರವನ್ನು ಈಶ್ವರನ ಆಶ್ರಯಸ್ಥಾನವೆನ್ನುವರು. ಉಪನಿಷದಗಳು, ಪುರಾಣಗಳು ಮುಂತಾದುವುಗಳಲ್ಲಿ ಇದಕ್ಕೆ ಹಲವು ಉದಾಹರಣೆಗಳು ದೊರೆಯುವುವು: "ಅರ್ಜುನನೇ, ಈಶ್ವರನು ಸಕಲ ಪ್ರಾಣಿಗಳ ಅಂತರಂಗದಲ್ಲಿಯೂ ವಾಸವಾಗಿರುವನು" ಎಂದು ಭಗವದ್ಗೀತೆಯಲ್ಲಿ ಹೇಳಿದೆ; ಮತ್ತು "ಏನು? ನೀವು ನನ್ನ ಆಕಾಶಸ್ಥ ಪಿತೃವಾದ ಪರಮೇಶ್ವರನ ಮಂದಿರವೆಂಬುದು ನಿಮಗೆ ಗೊತ್ತಿಲ್ಲವೇ!" ಎಂದು ಯೇಸುಕ್ರಿಸ್ತನು ಕೇಳಿರುವನು. ವರಕವಿಯೂ ಭಕ್ತಶ್ರೇಷ್ಠನೂ ಆದ ಕಬೀರದಾಸನು ಕೂಡ ತನ್ನ ಕಾವ್ಯದಲ್ಲಿ ಇದೇ ಮಾತನ್ನು ಬಹು ಸರಸವಾಗಿ ವರ್ಣಿಸಿದ್ದಾನೆ—

ಇಳೆಯನಾಳುವನಾರು? ದೇವರು। ಕುಳಿತಿರಲು ಪ್ರಾರ್ಥನೆಯ ಸ್ಥಳದಲಿ।
ಶಿಲೆಯ ಸುಂದರಮೂರ್ತಿಯಲಿ ಶ್ರೀರಾಮನಡಗಿರಲು ॥
ಇಳೆಯ ಸೃಷ್ಟಿ-ಸ್ಥಿತಿ-ಲಯಂಗಳ। ನಳವಡಿಸುತಿಹರಾರು ಸುಮ್ಮನೆ।
ಬಳಲಲೇತಕೆ ಮಕ್ಕೆ ವಾರಾಣಸಿಗೆ ತೆರಳುತಲಿ ॥ ೧ ॥

ಹರಿಯು ಪೂರ್ವದಿ ಪಶ್ಚಿಮದೊಳಾ।ಗುರು ಮಹಮ್ಮದಗೊಲಿದ 'ಅಲ್ಲಾ'।
ಇರುವರೈ ನೀಂ ನೋಡು ನಿನ್ನಯ ಹೃದಯದೇಶದಲಿ ॥
ಇರುವರಲ್ಲಿಯೆ ರಾಮ ರಹಿಮರು। ಧರೆಯ ನರನಾರಿಯರೆ ದೇವರು।
ಧರಿಸಿರುವ ಸಾಕಾರ ರೂಪದ ರೂಪವಹುದಹುದು ॥ ೨ ॥

ಇಂಥ ಪೂಜ್ಯ ಘನ ಮಹಾವಸ್ತುವಿನ ರಕ್ಷಣೆಗಾಗಿ ಯತ್ನಿಸುವುದು ನಮ್ಮ ಕರ್ತವ್ಯವಲ್ಲವೇ ? ಆದರೆ ಮೋಕ್ಷವನ್ನು ಪಡೆಯುವ ಉದ್ದೇಶದಿಂದ ಗುಡಿಗಳನ್ನು ಕಟ್ಟಿಸಿ ಮೂರ್ತಿಗಳನ್ನು ಸ್ಥಾಪಿಸುವ ಆಸ್ತಿಕರಾದ ಸಜ್ಜನರೂ ಕೂಡ ತಮ್ಮ ಶರೀರವೆಂಬ ಪ್ರತ್ಯಕ್ಷ ದೇವಾಲಯದ ರಕ್ಷಣೆಯ ಕಡೆಗೆ ಲಕ್ಷ್ಯಗೊಡದಿರುವದು ಅತ್ಯಂತ ದುಃಖದ ಸಂಗತಿಯು

## ೪. ಒಂದೇಗತಿ.

ತಾಮ್ರಲಿಪ್ತಿಯು ಸಮುದ್ರತೀರದ ಊರು. ಮಾಣಿಕ್ಯಸೆಟ್ಟಿಯು ಅಲ್ಲಿಯ ಸುಖವಸ್ತು. ಮಾಣಿಕ್ಯಸೆಟ್ಟಿಗೆ ಸಕಲಸಂಪತ್ತುಗಳೂ ಇದ್ದಂತೆ ಪುತ್ರಸಂಪತ್ತೂ ಚೆನ್ನಾಗಿ ಇತ್ತು. ಮನೆಗೆ ಬರಹೋಗುವವರೂ ವಿಶೇಷ. ಆದರಿಂದ ಆತನ ಮನೆಯಲ್ಲಿ ಭೋಜನ ಫಲಾಹಾರಗಳು ನಡೆದೇ ಇರುವವು. ಶ್ರೀಮಂತರ ಮನೆಯಲ್ಲಿ ಉಣ್ಣುವದಕ್ಕಿಂತ ಚೆಲ್ಲುವದು ಬಹಳ. ಈ ಚೆಲ್ಲಿದ ಎಂಜಲಿನಿಂದಲೇ ಹಲವು ಪ್ರಾಣಿಗಳ ನಿರ್ವಾಹವು ನಡೆಯುವುದು.

ಮಾಣಿಕ್ಯಸೆಟ್ಟಿಯ ಮನೆಯ ಅಂಗಳದಲ್ಲಿದ್ದ ಬೇವಿನ ಮರದಲ್ಲಿ ಒಂದು ಕಾಗೆ ಗೂಡುಗಟ್ಟಿಕೊಂಡು ವಾಸವಾಗಿತ್ತು. ಕಾಗೆಗೆ ಎಂಜಲ ಮೇಲೆ ಪ್ರೀತಿ ಬಹಳ. ಅದು ಯಾವಾಗಲೂ ಕಾವ್ ಕಾವ್ ಎಂದು ಕೂಗುತ್ತ ಅಲ್ಲಿಯೇ ಸುಳಿದಾಡುವದು. ಸೆಟ್ಟಿಯ ಮಕ್ಕಳು ಉಣ್ಣುವಾಗ ತಿನ್ನುವಾಗ ಎಡೆಯೊಳಗಿನ ಎಂಜಲನ್ನು ಆ ಕಾಗೆಗೆ ಹಾಕುವರು. ಶ್ರೀಮಂತರ ಮನೆಯ ಎಂಜಲಕೂಳನ್ನು ತಿಂದು ಆ ಕಾಗೆ ಬಹಳ ಕೊಬ್ಬಿತ್ತು, ಬಹಳ ಸೊಕ್ಕಿತ್ತು. ಬೇರೆ ಹಕ್ಕಿಗಳನ್ನು ಕಂಡಾಗಳೆಲ್ಲ ಅದು ಅವುಗಳನ್ನು ಜರೆದು ಹೀಯಾಳಿಸತೊಡಗಿತು. ಸೆಟ್ಟಿಯ ಮಕ್ಕಳಿಗೆ ಆ ಕಾಗೆ ಬಲು ಪ್ರಿಯವಾಗಿತ್ತು. ತಮ್ಮ ಮನೆಯ ಮುಂದಿನ ಮರದೊಳಗಿನ ಕಾಗೆ; ತಾವು ಹೊಟ್ಟೆಗೆ ಹಾಕಿ ಸಲಹಿದ್ದು; ಕೇಳುವದೇನು? ಇದಲ್ಲದೆ ಅವರು ಶ್ರೀಮಂತರ ಮಕ್ಕಳು. ಹತ್ತಿರ ಸುಳಿದಾಡು

ವವರೇ ಅವರಿಗೆ ಪ್ರಿಯರು. ಜನರ ಪರೀಕ್ಷೆ ಅವರಿಗೆಲ್ಲಿ? ಕಾಗೆ ದಿನ ದಿನಕ್ಕೆ ಕೊಬ್ಬಿ ಅಟ್ಟಕ್ಕೇರಿತು. ಅದರ ಬಡಿವಾರವನ್ನು ಕಂಡು ಹಿಗ್ಗಿ ಸೆಟ್ಟಿಯ ಮಕ್ಕಳು ತಮ್ಮ ಕಾಗೆಯನ್ನು ಸರಿಗಟ್ಟುವ ಹಕ್ಕಿಯೇ ಜಗದಲ್ಲಿಲ್ಲವೆಂದು ನಂಬಿದರು.

ಒಂದಾನೊಂದು ದಿವಸ ಆವೂರಿಗೆ ಒಂದು ಹಂಸಪಕ್ಷಿಗಳ ಹಿಂಡು ಬಂದಿತು. ಹಂಸಪಕ್ಷಿಗಳು ತ್ರಿವಿಷ್ಟಪ (ಸ್ವರ್ಗ)ದ ಮಾರ್ಗದಲ್ಲಿ ಕೈಲಾಸದ ಬಳಿಯಲ್ಲಿರುವ ಮಾನಸ ಸರೋವರದಲ್ಲಿ ವಾಸಮಾಡುವಂಥವು. ಮಾಗಿಯ ಕಾಲದಲ್ಲಿ ಹವೆಯೂ ನೀರೂ ನಿರ್ಮಲವಾಗಿರುವಾಗ ಭರತಖಂಡದ ಎಲ್ಲ ಭಾಗಗಳಲ್ಲಿ ಸಂಚಾರ ಮಾಡುವುವು. ಹಾಲು ನೀರುಗಳನ್ನು ಬೆರಸಿಟ್ಟರೆ ಅವು ನೀರನ್ನು ಬೇರ್ಪಡಿಸಿ ಹಾಲನ್ನಷ್ಟೇ ಕುಡಿಯುವಂಥವು. ಅವುಗಳ ಈ ಶಕ್ತಿಗೆ ಅಂಜಿದ ಗೋವಳಿಗನ ಶಾಪವು ತಟ್ಟಲು ಆ ಹಕ್ಕಿಗಳು ಈಗ ಕಡಿಮೆಯಾಗಿವೆ. ಅವುಗಳ ಆ ನೀರಕ್ಷೀರವಿಭೇದನ ಶಕ್ತಿ ಈಗ * ಮಿಲ್ಕ್ ಮೀಟರ್ ಯಂತ್ರಕ್ಕೆ ಬಂದಂತೆ ತೋರುವುದು. ಹಂಸಗಳ ಹಾರುವ ಶಕ್ತಿಯೂ ಅದ್ಭುತವಾದದ್ದು. ಅವು ಒಂದೇಸಮನೆ ಬೇಕಾದಷ್ಟು ದೂರ ಹಾರಬಲ್ಲವು.

ಅಚ್ಚ ಬಿಳಿಯ ಬಣ್ಣದ ಮೈಯಿಂದಲೂ ಹೊಂಬಣ್ಣದ ಚಂಚು ಪಾದಗಳಿಂದಲೂ ಸುಂದರವಾಗಿ ಕಂಗೊಳಿಸುವ ಹಂಸಗಳನ್ನು ನೋಡಿದ ತರುವಾಯವೂ ಸೆಟ್ಟಿಯ ಮಕ್ಕಳಿಗೆ ತಮ್ಮ ಕಾಗೆಯೇ ಮುದ್ದಾಗಿ ಕಾಣಿಸಿತು. ಅವರು ತಮ್ಮ ಪ್ರೀತಿಯ ಕಾಗೆಯನ್ನು ಕರೆದು ಎಲೈ ಚೆಲುವಿನ ಹಕ್ಕಿಯೇ, ನಿನ್ನ ಸೌಂದರ್ಯ, ಶಕ್ತಿ, ಸ್ವರ, ವರ್ಣಗಳ ಮುಂದೆ ಈ ಹಂಸಗಳು ಏನೂ ಅಲ್ಲ. ಎಲ್ಲ ಪಕ್ಷಿಗಳಲ್ಲಿ ನೀನೇ ಹೆಚ್ಚಿನವನು, ಎಂದು ಹೊಗಳಿದರು. ಮೊದಲೇ ಸೊಕ್ಕಿಗೇರಿದ ಕಾಗೆಯು ಈಗ ಮೈಮರೆಯಿತು. ಅದು ನೆಟ್ಟನೆ ಹಂಸಗಳ ಬಳಿಗೆ ಹೋಗಿ—ನಿಮ್ಮಲ್ಲಿ ಬೇಕಾದವರು ನನ್ನ ಸಂಗಡ ಹಾರುವುದಕ್ಕೆ

---

* ಅಂಚೆಯ ಚಂಚುವು ಸ್ವಾಭಾವಿಕವಾಗಿ ಹುಳಿಯಾಗಿರುತ್ತದೆ. ಆದದರಿಂದ ಹಾಲನ್ನು ಕುಡಿಯುವದಕ್ಕಾಗಿ ಅದು ಬಟ್ಟಲಿನಲ್ಲಿ ಬಾಯನ್ನು ಹಾಕಿದ ಕೂಡಲೆ ಶುದ್ಧವಾದ ಹಾಲೆಲ್ಲ ಮೊಸರಿನ ಕರಣೆಯಾಗುತ್ತದೆ; ನೀರಿನ ಅಂಶವು ಹಾಗೇ ಉಳಿಯುತ್ತದೆ. ಹಂಸವು ಆ ಕರಣೆಯನ್ನಷ್ಟು ನುಂಗಿ ಉಳಿದದ್ದನ್ನು ಬಿಟ್ಟುಬಿಡುತ್ತದೆ. ಇದನ್ನೇ ಕವಿಗಳು "ಹಂಸಕ್ಷೀರ ನ್ಯಾಯ" ವೆಂದು ಹೇಳುತ್ತಾರೆ.

ಬರಬೇಕು. ನಾನು ಅವರನ್ನು ಸಹಜವಾಗಿ ಗೆಲ್ಲುವೆನು, ಎಂದು ಜಂಭ ಬಡಿಯಿತು. ಆಗ ಹಂಸಗಳು—ಎಲೇ, ಭೂಲೋಕವನ್ನೆಲ್ಲ ಸಂಚರಿಸಬಲ್ಲ ಮಾನಸವಾಸಿಗಳಾದ ನಾವೆಲ್ಲಿ? ಎಂಜಲುಗುಂಡಿಯ ಸುತ್ತಲು ಹಾರಾಡಿ ಬಳಲುವ ನೀನೆಲ್ಲಿ? ನಮ್ಮಂಥವರ ಸಂಗಡ ಪಣತೊಡುವ ಮಾತನ್ನೆತ್ತಲು ನಾಚಿಕೆ ಬರುವುದಿಲ್ಲವೇ? ಎಚ್ಚರಿಕೆಯಲ್ಲಿರುವೆಯಾ? ಎಂದು ಕೇಳಿದುವು. ಮತ್ತರು ಮಾತಿಗೆ ಮಣಿಯುವುದಿಲ್ಲ. ಕಾಗೆಯು ಹಂಸಗಳ ಮಾತಿಗೆ ಗಹಗಹಿಸಿ ನಕ್ಕು—ಕೈಯಲ್ಲಾಗದವರಿಗೆ ದೊಡ್ಡ ದೊಡ್ಡ ಮಾತುಗಳೇ ಆಯುಧಗಳು; ನಿಮ್ಮ ಬರಿಯ ಮಾತಿನ ಆಯುಧಕ್ಕೆ ನಾನು ಅಂಜುವವನಲ್ಲ. ನಾನು ಉಡ್ಡೀನ, ಅವಡೀನ, ಪ್ರಡೀನ, ಪರಿಡೀನ, ಸಂಡೀನ ಮೊದಲಾದ ನೂರೊಂದು ಗತಿಗಳನ್ನು ಬಲ್ಲೆನು. ನನ್ನ ಹಾರಿಕೆಗಳಿಗೆ ಗರುಡಪಕ್ಷಿಯೂ ಬೆರಗಾಗುತ್ತಿದೆ. ಅಂಚೆಗಳ ಪಾಡೇನು? ಈಗ ನಿಮಗೆ ನನ್ನದೊಂದು ಉಡ್ಡಯನವನ್ನು ತೋರಿಸಲೇ? ಅಥವಾ ನಿಮ್ಮಲ್ಲಿ ಗಟ್ಟಿಗರಾದವರು ಹಾರಲಿಕ್ಕೆ ಸಜ್ಜಾಗಿರಿ, ಈಗಲೇ ಪರೀಕ್ಷೆಯಾಗಿ ಹೋಗಲಿ ಎಂದು ಕಾಲ್ಕೆದರತೊಡಗಿತು.

ಹಂಸಗಳ ಹಿಂಡಿನಲ್ಲಿ ಒಂದು ಮುಂದೆ ಬಂದು—ಕಾಕರಾಜರೇ, ನೀವು ಬಹಳ ಸಮರ್ಥರು. ನಮಗೆ—ಹಂಸಗಳಿಗೆ—ನಿಮ್ಮ ನೂರೊಂದು ಗತಿಗಳು, ನೂರೊಂದು ಹಾರಿಕೆಗಳು ಬಾರವು; ನಾವು ಒಂದೇ ಗತಿಯನ್ನು, ಒಂದೇ ಹಾರಿಕೆಯನ್ನು ಬಲ್ಲೆವು; ನೀವು ಬೇಕಾದ ಗತಿ-ಚಮತ್ಕಾರಗಳನ್ನು ತೋರಿಸಿರಿ; ನಾನು ಒಂದೇ ಗತಿಯಿಂದ ಹಾರುವೆನು; ನೀನಾಗಿ ಬಂದು ಹಾರುವ ಪಣಕ್ಕೆ ಕರೆದ ಬಳಿಕ ನಾನು ಬರಲೇಬೇಕು; ನಡೆ ಹಾರುವ ಎಂದಿತು.

ಹಂಸನ ಈ ಸೋತ ಮಾತಿಗೆ ಆ ಎಂಜಲುದಿನಿ ಕಾಗೆಯೂ ಅದರ ಬಳಗದ ಬೇರೆ ಕಾಗೆಗಳೂ ಕ್ರಾ ಕ್ರಾ ಎಂದು ಒದರುತ್ತ ಎಲ್ಲ ಹಂಸಗಳ ಅಪಹಾಸ್ಯ ಮಾಡುತ್ತ ಕುಣಿದಾಡತೊಡಗಿದುವು. ಕೆಲವು ಮದ್ದಿನ ಕುಡಿಕೆಗಳಂತೆ ಟಣ ಪುಣ ಜಿಗಿದಾಡತೊಡಗಿದುವು.

ಕಾಗೆಗೂ ಹಂಸಕ್ಕೂ ಹಾರಾಟದ ಪಣಕ್ಕೆ ಪ್ರಾರಂಭವಾಯಿತು. ಕಾಗೆಯ ಬಳಗವೂ ಹಂಸಗಳ ಹಿಂಡೂ ನೋಡುತ್ತ ನಿಂತುಕೊಂಡುವು. ಹಂಸವು ಒಂದೇ ಗತಿಯಿಂದ ಹಾರುತ್ತಿದೆ. ಆದರೆ ಕಾಗೆಯು ಸಡಗರದಿಂದ ತನ್ನ ಬಗೆಬಗೆಯ ಹಾರಿಕೆಗಳನ್ನು ತೋರಿಸುತ್ತ ಹಾರತೊಡಗಿದೆ. ಸ್ವಲ್ಪ

ಹೊತ್ತಿನಲ್ಲಿ ಕಾಗೆಯು ಹಂಸನನ್ನು ಹಿಂದೆಹಾಕಿತು. ಕಾಗೆಯ ಅಸಹ್ಯವಾದ ಹಾರಾಟಗಳನ್ನು ಕಂಡು ಹಂಸಗಳು ಹೇಸಿಕೊಂಡುವು. ಆದರೆ ಕಾಗೆಗಳು ಹಂಸಕ್ಕೇ ಸೋಲು ಬರುವುದೆಂದು ಉಬ್ಬಿನಿಂದ ಕೋಲಾಹಲ ಮಾಡಿದುವು. ತಮ್ಮ ಬಣಕ್ಕೇ ನಿಶ್ಚಯವಾಗಿ ಗೆಲವು ದೊರೆಯುವುದೆಂದು ಹಿಗ್ಗಿದುವು.

ಹಂಸವು ಧೀರಗತಿಯಿಂದ ಮಾರ್ಗಕ್ರಮಣಮಾಡುತ್ತ ನಡೆದಿತ್ತು. ಅದು ಕಾಗೆಗಳ ಕಲಕಲವನ್ನು ಕೇಳಿ ಖತಿಗೊಂಡರೂ ತನ್ನ ವೇಗವನ್ನು ಹೆಚ್ಚಿಸಲಿಲ್ಲ. ಕೆಲ ಹೊತ್ತಾದ ಬಳಿಕ ಕಾಗೆಯೂ ಹಂಸವೂ ಒಂದೇ ರೇಖೆಯಲ್ಲಿ ಬಂದುವು. ಈಗ ಹಂಸವು ಸಮುದ್ರದ ಕಡೆಗೆ ಹಾರತೊಡಗಿತು. ಕಾಗೆಯು ಅನಿವಾರ್ಯವಾಗಿ ಹಂಸನನ್ನು ಬೆಂಬಳಿಸಿ ನಡೆಯಿತು. ಹಂಸವು ಒಂದೇ ಗತಿಯಿಂದ ಮುಂದೆ ಸಾಗತೊಡಗಿತ್ತು. ಕಾಗೆಯ ಪಕ್ಕಗಳು ಈಗ ಸೋತವು. ಆದರೆ ಹಿಂದಾಗುವುದು ಅದರ ದುರಭಿಮಾನಕ್ಕೆ ಸಲ್ಲುವಂತೆ ಇರಲಿಲ್ಲ. ಆದುದರಿಂದ ಕಾಗೆಯು ಇಲ್ಲದ ಬಲವನ್ನು ತಂದುಕೊಂಡು ಹಂಸನನ್ನು ಬೆಂಬಳಿಸತೊಡಗಿತು. ಸಮುದ್ರದ ಮೇಲಿನ ಆಕಾಶ. ಬರಿಯ ಬಯಲು. ಎಲ್ಲಿಯೂ ಮರಗಳಿಲ್ಲ. ನಡುಗಡ್ಡೆಯಿಲ್ಲ. ಸ್ವಲ್ಪ ವಿಶ್ರಮಿಸೇನೆಂದರೆ ಕಾಲಿಡುವುದಕ್ಕೆ ಆಸರವಿಲ್ಲ. ಕೆಳಗೆ ಬಿದ್ದರೆ 'ಸಮುದ್ರಾಸ್ತ್ವೃಪ್ಯಂತು' ಆಗುವದರಲ್ಲಿ ಸಂಶಯವಿಲ್ಲ. ಕಾಗೆಯು ಇರುಕಿನಲ್ಲಿ ಸಿಲುಕಿತು. ಕಾಗೆಯ ಕಣ್ಣು ಅತ್ತ ಮುಂದೆ ಹೋಗುವ ಹಂಸನ ಕಡೆಗೊಮ್ಮೆ, ಇತ್ತ ಆತುರತೆಯಿಂದ ನೋಡುವ ತನ್ನ ಬಳಗದ ಕಡೆಗೊಮ್ಮೆ ತಿರುಗಲಾರಂಭಿಸಿತು. ಕಾಗೆಯ ಬಳಗವು ಅತ್ತ ತಮ್ಮ ಬೆಡಗಿನ ಕಾಗೆಯನ್ನೊಮ್ಮೆ, ಇತ್ತ ಹಂಸಗಳ ಹಿಂಡನ್ನೊಮ್ಮೆ ನೋಡಲಾರಂಭಿಸಿತು. ಇದರಿಂದಲೇ ಎಲ್ಲ ಕಾಗೆಗಳ ನೋಟವು ಅಂದಿನಿಂದ ಇತ್ತೊಮ್ಮೆ ಅತ್ತೊಮ್ಮೆ ಹೀಗೆ ಒಕ್ಕಣ್ಣನೋಟವಾಯಿತೋ ಏನೊ? ಬರಬರುತ್ತ ಕಾಗೆಯು ತೀರ ಬಳಲಿತು. ಇನ್ನು ಅಭಿಮಾನದಿಂದಾದರೂ ಹಾರುವದು ಅದಕ್ಕೆ ನೀಗದಂತಾಯಿತು. ಕಾಗೆ ಹಿಂದೆ ಉಳಿದು ಸೋತು ನಡೆಯುತ್ತಿರುವುದನ್ನು ಕಂಡು ಹಂಸವು ಸ್ವಲ್ಪ ಹೊತ್ತು ಚಕ್ರಾಕಾರವಾಗಿ ತಿರುಗುತ್ತ ಕಾಗೆ ಬರುವವರೆಗೆ ನಿಂತು—"ಎಲೈ ನೂರೊಂದು ಗತಿಯ ಮಂದಮತಿಯೇ, ಎಲೈ ಎಂಜಲ ಅಗುಳಿಗೆ ಲಾಗಹಾಕುವ ಬಾಯ್ಬಡಕಾ, ಎಲೈ ಪಿಂಡದಕೂಳಿಗೆ ಅಂಡಲೆಯುವ ಹೇಡೀ, ಇದೇನು ಇಷ್ಟರಲ್ಲಿಯೇ ಹಿಂದುಳಿದೆ? ನಿನ್ನ

ಉಡ್ಡಯನಗಳು ಎಲ್ಲಿ ಅಡಗಿದುವು? ಇನ್ನೂ ಸಾವಿರ ಕ್ರೋಶಗಳನ್ನು ಕ್ರಮಿಸಿ ಬರುವ ನಡೆ" ಎಂದಿತು. ಕಾಗೆಗೆ ಈ ಮಾತಿನಿಂದ ಚೇಳು ಕಚ್ಚಿದಂತೆ ವೇದನೆಯಾಯಿತು. ಎದುರಿಗೆ ಕೊನೆಯಿಲ್ಲದ ಬಯಲು, ಮೇಲೆ ಎಂದೂ ಮುಗಿಯದ ಮುಗಿಲು, ಕೆಳಗೆ ನೆಲೆಯಿಲ್ಲದ ಕಡಲು; ತಿರುಗಿ ಹೋಗ ಬೇಕೆಂದರೆ ಈಗ ಬಂದಷ್ಟೇದಾರಿ. ಸಾಗರರಾಜನ ಘೋರಾಟ ಆತನ ಪರ್ವತಪ್ರಾಯವಾದ ಅಲೆಗಳು ಅವುಗಳಲ್ಲಿ ಹಾರಾಡುತ್ತಿದ್ದ ನೂರಾರು ಜಲಚರಗಳು ಇವುಗಳನ್ನು ನೋಡಲು ಕಾಗೆಯ ಹೊರಗಿನ ಹಾರಿಕೆ ಗಳೆಲ್ಲ ಅಡಗಿ ಎದೆಯ ಗುಂಡಿಗೆಯನ್ನಾಶ್ರಯಿಸಿದುವು. ಕಾಗೆ ಮುಂದು ಗಾಣದಾಯಿತು. ಅದರ ಕಣ್ಣಿಗೆ ಕತ್ತಲೆ ಕವಿಯಿತು. ಕೊನೆಗೆ ಕಟ್ಟುದಪ್ಪಿ ಕೆಳಗೆ ಬಿದ್ದುಬಿಟ್ಟಿತು. ಆ ಸಪ್ಪುಳಕ್ಕೆ ಹಂಸವು ಹಿಂದಿರುಗಿ ನೋಡಿತು. ಕಾಗೆಯು ಸಮುದ್ರದ ಮೇಲೆ ಒದೆದಾಡುತ್ತಿದೆ. ನೀರನ್ನು ಗುಟುಕರಿಸಿ ಪಕ್ಕ ಗಳನ್ನು ಕೊಡಹುತ್ತ ಕ್ರಾ ಕ್ರಾ ಎಂದು ಕೂಗುತ್ತ ಒಮ್ಮೆ ಚುಂಚುವನ್ನೂ, ಒಮ್ಮೆ ಪುಚ್ಛವನ್ನೂ ನೀರಿಗೆ ಬಡಿಸುತ್ತ ಕಕ್ಕಾವಿಕ್ಕಿಯಾಗಿ ಚಟಪಟಿಸುತ್ತಿದೆ. ಹಂಸವು ಕಾಗೆಯ ಈ ಕೊನೆಗಾಲದ ಒದೆದಾಟವನ್ನು ಕಂಡು ಕನಿಕರಬಟ್ಟು ಹತ್ತಿರ ಬಂದು—'ತಮ್ಮಾ, ಹೀಗೇಕೆ ಕಳವಳಬಡುವೆ? ಹಾರಿಕೆ ಸಾಕಾಗಿದ್ದರೆ, ನಿನ್ನ ನೂರೊಂದು ಹಾರಿಕೆಗಳೂ ಮುಗಿದು ಹೋಗಿದ್ದರೆ ಹೇಳಬಾರದಾಗಿತ್ತೇ?' ಎಂದು ನುಡಿಯಿತು. ಮತ್ತೆ—ಅಯ್ಯಾ, ನನ್ನ ಬೆನ್ನ ಮೇಲೆ ಬಾ, ಅಂಜಿಕೆ ಯನ್ನು ಬಿಡು, ನಿನ್ನ ಬಳಗದಲ್ಲಿ, ನಿನ್ನ ಸೆಟ್ಟಿಯ ಮನೆಯ ಮುಂದಿನ ಮರದ ಗೂಡಿನಲ್ಲಿ, ನಿನ್ನ ಅಕ್ಕರತೆಯ ಸೆಟ್ಟಿಯ ಮಕ್ಕಳ ನಡುವೆ ನಿನ್ನನ್ನು ಒಯ್ದು ಬಿಡುವೆನು, ಎಂದು ಸಮಾಧಾನಬಡಿಸಿ ಅದನ್ನು ಸಹಜವಾಗಿ ಹೆಗಲ ಮೇಲೆ ಹೇರಿಕೊಂಡು ಮೊದಲಿನ ವೇಗದಿಂದ ಕಾಗೆಯ ಬಳಗವಿದ್ದಲ್ಲಿಗೆ ಬಂದಿತು. ಹಂಸನ ವೇಗದಲ್ಲಿ ಯಾವ ಹೆಚ್ಚುಕಡಿಮೆಯೂ ಆಗಿರಲಿಲ್ಲ. ಅದಕ್ಕೆ ಬಳಲಿಕೆಯೇನೂ ಆಗಿರಲಿಲ್ಲ. ತೇಲುಗಣ್ಣು ಹಾಕುತ್ತ ಬಾಯ್ಬಿಡುತ್ತ ಬೆನ್ನ ಮೇಲೆ ಕುಳಿತಿದ್ದ ಕಾಗೆಯನ್ನು ಹಂಸವು ಅದರ ಬಳಗಕ್ಕೆ ಒಪ್ಪಿಸಿತು. ಆಗ ಕಾಗೆಗಳೆಲ್ಲ ಕೆಳಮೋರೆಮಾಡಿದುವು. ಹಂಸಗಳು ಬಹುಶ್ರಮದಿಂದ ನಗೆಯನ್ನು ತಡೆದುಕೊಂಡು ಗಂಭೀರವಾಗಿ ಒಮ್ಮೆ ಕಾಗೆಯ ಬಳಗವನ್ನು ನೋಡಿದುವು.

# ೫. ಪದ್ಮಿನಿ.

ಐನೂರಡಿ ಉನ್ನತವಾದ ದಿಣ್ಣೆಯ ಮೇಲೆ ಇತಿಹಾಸಪ್ರಸಿದ್ಧವಾದ ಚಿತ್ತೂರುದುರ್ಗವು ನೆಲೆಸಿರುವುದು. ಆ ಭವ್ಯವಾದ ದುರ್ಗದ ಹಳೆಯ ಕುರುಹುಗಳು ಬಹು ದೂರದವರೆಗೆ ಹರಡಿಕೊಂಡು, ಅದೊಂದು ಭೀಷಣವಾದ ಶ್ಮಶಾನವೋ ಎಂಬಂತೆ ಇಂದಿಗೂ ತೋರುತ್ತಿರುವುದು. ಅನೇಕಾನೇಕ ಗಿರಿಝರಿಗಳೂ ಆರಾವಲೀ ಪರ್ವತದ ಕಡೆಯಿಂದ ಬೀಸುವ ವಾಯುಪ್ರವಾಹಗಳೂ ಆ ನಿರ್ಜನಪ್ರದೇಶದಲ್ಲಿ "ಹಾಯ್! ಹಾಯ್!" ಎಂದು ಧ್ವನಿಗೈಯುತ್ತ ಪ್ರವಹಿಸುತ್ತಿರುವುವು. ಮನುಷ್ಯರಾಗಲಿ ಇತರ ಪ್ರಾಣಿಗಳಾಗಲಿ ವಾಸಿಸದೆ ಇರುವುದರಿಂದ ಆ ಸ್ಥಳವು ಬಹು ಭೀಷಣವಾಗಿ ತೋರುವುದು.

ಒಂದಾನೊಂದು ಕಾಲದಲ್ಲಿ ಇದೇ ಸ್ಥಳದಲ್ಲಿ ಬಾಪ್ಪಾರಾವ್, ಖೋಮಾನ್, ಸಮರಸಿಂಹ, ಸಂಗ್ರಾಮಸಿಂಹ ಇವರ ರಾಜಧಾನಿಯು ವಿರಾಜಿಸುತ್ತಿತ್ತು. ಇದೇ ಸ್ಥಳದಲ್ಲಿಯೇ ಜಯಮಲ್ಲ, ಪುತ್ತ, ಹಾಮಿರ ಮತ್ತು ಪ್ರತಾಪಸಿಂಹ ಇವರು ಮಾತೃಭೂಮಿಯ ಉದ್ಧಾರಾರ್ಥವಾಗಿ ತಮ್ಮ ಸರ್ವಸ್ವವನ್ನೂ ಧಾರೆಯೆರೆದರು. ಈ ಚಿತ್ತೂರುದುರ್ಗದ ಬಾಗಿಲಿನಲ್ಲಿಯೇ ಒಂದಾನೊಂದು ಕಾಲದಲ್ಲಿ ಹಲವು ಹಿಂದುರಾಜರು ತಲೆಬಗ್ಗಿಸಿ ನಡೆಯುತ್ತಿದ್ದರು. ಈಗ ಆ ದುರ್ಗಕ್ಕೆ ಎಂಥ ಸಮಯವೊದಗಿದೆ! ಅವರೆಲ್ಲ ಏನಾಗಿ ಹೋದರು! ಇಲ್ಲ, ಯಾವುದೂ ಉಳಿದಿಲ್ಲ; ಕಾಲಪುರುಷನ ತುಳಿದಾಟದಿಂದ ಸಕಲವೂ ವಿಧ್ವಸ್ತವಾಗಿಹೋಗಿದೆ!

ಆದರೆ, ಆ ದುರ್ಗವಿರುವ ಸ್ಥಳದಲ್ಲಿ ಕಾಲಿಟ್ಟ ಮಾತ್ರಕ್ಕೆ, ಆ ಪುರಾತನ ದುರ್ಗದ ಹಳೆಯ ಕುರುಹುಗಳನ್ನು ನೋಡಿದ ಮಾತ್ರಕ್ಕೆ, ಹಿಂದುಗಳ ಅಂತಃಕರಣದಲ್ಲಿ ಏನೋ ಒಂದು ಪವಿತ್ರವಾದ ಭಾವನೆ ಒಡಮೂಡುವುದು. ಮೈಯೊಳಗಿನ ರಕ್ತಪ್ರವಾಹಕ್ಕೆ ಬಿಸಿಯೇರುವುದು; ಮನಸ್ಸು ಮಂಕಾಗುವುದು. ದುಃಖಮಯವೋ, ಸುಖಮಯವೋ, ಸಹಾನುಭೂತಿಪೂರ್ಣವೋ, ರೋಷ.

ಪೂರ್ಣವೋ, ಆದ ಮನೋಭಾವನೆಯಿಂದ ಮನುಷ್ಯನು ತಟಸ್ಥನಾಗುವನು. ಆ ಸ್ಥಳದಲ್ಲಿ ನಡೆದುಹೋದ ಸಕಲ ಸಂಗತಿಗಳೂ ಒಂದೊಂದಾಗಿ, ಎರಡೆರಡಾಗಿ, ಹತ್ತಾಗಿ, ಹಲವಾಗಿ ಮನಸ್ಸಿನ ಮುಂದೆ ಬಂದು ನಿಲ್ಲುವುವು. ಕೊನೆಗೆ ಆ ವ್ಯಕ್ತಿಯು ಹೆಣ್ಣುಗರುಳಿನವನಾಗಿದ್ದರೆ 'ಗೊಳೋ' ಎಂದು ಅತ್ತು ಬಿಡುವನು. ಕಠಿಣ ಮನಸ್ಸಿನವನೂ ಧೀರನೂ ಆಗಿದ್ದರೆ ಅಂತರಂಗದಲ್ಲಿ ವೀರರಸವು ಪ್ರವಹಿಸತೊಡಗಿ ಸ್ವಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನಗಳೆಂಬ ಉಚ್ಚ, ಉಚ್ಚತರ, ಉಚ್ಚತಮವಾದ ಮನೋಭಾವನೆಗಳು ಜಾಗ್ರತವಾಗಿ ತನ್ನ ಕರ್ತವ್ಯವನ್ನು ಸ್ಮರಿಸಿಕೊಂಡು, ದೃಢಪ್ರತಿಜ್ಞೆಗೈದು ಆ ಮಹಸೀಯರಾದ ರಾಜಪುತ್ರವೀರರನ್ನು ಅನುಕರಿಸಿ ನಡೆದು ಆ ತನ್ನ ಪ್ರತಿಜ್ಞೆಯನ್ನು ಕೊನೆಗಾಣಿಸಿಕೊಂಡು ಇಹಲೋಕದಲ್ಲಿ ಸ್ಥಿರವಾದ ಕೀರ್ತಿಯನ್ನೂ ಪರಲೋಕದಲ್ಲಿ ನಿಶ್ಚಿತವಾದ ಸುಖವನ್ನೂ ಪಡೆಯುವನು.

ಆರುನೂರಕ್ಕಿಂತ ತುಸು ಹೆಚ್ಚು ವರುಷಗಳ ಹಿಂದೆ ಒಂದು ದಿನ ಅಕಸ್ಮಾತ್ತಾಗಿ ಅಶ್ವಾರೋಹಿಯಾದ ಅತಿಥಿಯೊಬ್ಬನು ಚಿತ್ತೂರು ದುರ್ಗವನ್ನು ಪ್ರವೇಶಿಸಿದನು. ಆ ಕಾಲದಲ್ಲಿ ಚಿತ್ತೂರು ಸಕಲ ಸಮೃದ್ಧಿಗಳಿಂದ ವಿರಾಜಮಾನವಾಗಿತ್ತು. ನೆರೆಯಲ್ಲಿದ್ದ ಗುಜರಾಥದ ಅರಸನ ಸಂಗಡ ಕಲಹವುಂಟಾಗಿ ಆದೇ ತಾನೇ ಚಿತ್ತೂರಿನ ರಾಣನು ಆ ರಾಜನನ್ನು ಜಯಿಸಿದ್ದನು. ನಾಲ್ಕು ಕಡೆಗೂ ವಿಜಯೋತ್ಸವಗಳು ಒಳ್ಳೆಯ ವೈಭವದಿಂದ ಜರುಗುತ್ತಿದ್ದುವು. ಚಿತ್ತೂರಿನೊಳಗಿನ ಒಂದೊಂದು ಮನೆಯಲ್ಲಿಯೂ ಆನಂದೋತ್ಸವಗಳು ನಡೆಯುತ್ತಿದ್ದುವು.

ಅಶ್ವಾರೋಹಿಯು ದುರ್ಗದ ಆರು ಬಾಗಿಲುಗಳನ್ನು ದಾಟಿ ಏಳನೆಯ 'ರಾಮಪೋಲ' ಮಹಾದ್ವಾರವನ್ನು ಮುಟ್ಟಿದನು. ಹಠಾತ್ತಾಗಿ ಬಾಗಿಲಕಾಯುವವನು ಬಂದು ಅವನನ್ನು ತಡೆದು "ನೀನು ಯಾರು" ಎಂದು ಕೇಳಿದನು.

ಅಶ್ವಾರೋಹಿಯು ಏನೊಂದೂ ಉತ್ತರವನ್ನು ಹೇಳಲಿಲ್ಲ. ಒಂದು ಸುವರ್ಣದ ಮುದ್ರಿಕೆಯನ್ನು ತೋರಿಸಿದನು; ಸಂಗಡ ಮೊಹರುಮಾಡಿದ ಒಂದು ಪತ್ರವೂ ಇತ್ತು. ಅದರ ಮೇಲೆ ರಾಣನ ಹೆಸರು ಬರೆದಿತ್ತು.

ಪ್ರಹರಿಯು ಸುಮ್ಮನಾಗಿ ದಾರಿಯ ಬಿಟ್ಟುಬಿಟ್ಟನು. ಅಶ್ವಾರೋಹಿಯು ಅರಮನೆಯ ಕಡೆಗೆ ಗಂಭೀರವಾದ ನಡಿಗೆಯಿಂದ ಹೊರಟನು.

ಚಿತ್ತೂರಿನ ಅಧಿಪತಿಯು ಆ ದಿನ ಊಟವಾದ ಬಳಿಕ ತನ್ನ ವಿಶ್ರಾಂತಿ ಮಂದಿರಕ್ಕೆ ಬಂದು ಮನೋಹರವಾದ ಒಂದು ಆಸನದ ಮೇಲೆ ಕುಳಿತು ಕೊಂಡು ಮೆಲ್ಲನೆ ತೊನೆಯುತ್ತಿದ್ದ ತಂಗಾಳಿಯನ್ನು ಸೇವಿಸುತ್ತಿದ್ದನು. ಮುಂದುಗಡೆ ದುರ್ಗದ ಶಿಖರದ ಮೇಲಿನ ರಕ್ತವರ್ಣದ ನಿಶಾನೆಯು ಗಾಳಿ ಯಿಂದ ಅಲ್ಲಾಡಿ ಪ್ರಖರವಾದ ಬಿಸಿಲಿನಲ್ಲಿ ಥಳಥಳನೆ ಹೊಳೆಯುತ್ತಿತ್ತು. ರಾಣನು ಅದನ್ನು ನೋಡಿ ನೋಡಿ ಆನಂದಪಡುತ್ತ ಮನಸ್ಸಿನಲ್ಲಿ ಏನೋ ಒಂದು ಸುಖಮಯ ಸ್ವಪ್ನವನ್ನು ಭಾವಿಸುತ್ತಿದ್ದನು. ಅಷ್ಟರಲ್ಲಿ ಅರಮನೆಯ ದ್ವಾರಪಾಲಕನು ಒಳಗೆ ಬಂದು ರಾಣನನ್ನು ವಂದಿಸಿ ಹಿಂದೆ ಹೇಳಿದ ದೂತನ ಆಗಮನವನ್ನು ವಿಜ್ಞಾಪಿಸಿದನು. ಮತ್ತು ಮೋಹರು ಮಾಡಿದ ಒಂದು ಪತ್ರ ವನ್ನು ರಾಣನ ಮುಂದಿನ ಅಮೃತಶಿಲೆಯ ಮೇಜಿನ ಮೇಲೆ ಇರಿಸಿದನು. ರಾಣನು ಗುಜರಾಥದಲ್ಲಿ ತನಗೊದಗಿದ ವಿಜಯದ ಕುರುಹಿಗಾಗಿ ಚಿತ್ತೂರಿ ನಲ್ಲಿ ಒಂದು ವಿಜಯಸ್ತಂಭವನ್ನು ಸ್ಥಾಪಿಸಬೇಕೆಂದು ಯೋಚಿಸಿದ್ದನು. ಆ ವಿಜಯಸ್ತಂಭದ ನಕಾಶೆಯು ಎದುರಿಗೆ ಗೋಡೆಯ ಮೇಲೆ ತೂಗಾಡುತ್ತಿತ್ತು. ರಾಣನು ಆ ನಕಾಶೆಯ ಕಡೆಗೆ ಒಮ್ಮೆ ತಿರುಗಿ ನೋಡಿ ದೂತನ ಪತ್ರವನ್ನು ಕೈಯೊಳಗೆ ತೆಗೆದುಕೊಂಡನು; ಆಶ್ಚರ್ಯದಿಂದ ರಾಣನ ಮುಖಚರ್ಯೆಯು ಒಮ್ಮಿಂದೊಮ್ಮೆ ಬದಲಾಯಿತು. "ಇದಾರ ಪತ್ರ? ಎಲ್ಲಿಂದ ಬಂದಿತು? ಮೇಲೆ ಗುರ್ಜರಾಧಿಪತಿಯ ಮೋಹರು! ನಮ್ಮ ಚಿರಶತ್ರುವಾದ ಗುರ್ಜರೇ ಶ್ವರನು ಇದೇನು ಬರೆದು ಕಳುಹಿಸಿರುವನು?" ಎಂದು ಹೇಳಿಕೊಳ್ಳುತ್ತ ರಾಣನು ಚಟ್ಟನೆ ಮೋಹರನ್ನು ಒಡೆದು ಕಾಗದವನ್ನು ತೆಗೆದು ಓದಲಾ ರಂಭಿಸಿದನು. ನಿಜವಾಗಿಯೂ ಪತ್ರದ ಕೊನೆಯಲ್ಲಿ ದೊಡ್ಡ ದೊಡ್ಡ ಅಕ್ಷರ ಗಳಿಂದ "**ಕರಣರಾಯ**" ಎಂದು ಬರೆದಿತ್ತು. ರಾಣನು ಪತ್ರವನ್ನು ಓದತೊಡಗಿದನು:—

"ಮಹಾರಾಣಾ, ಕೇಳಿದೆನು. ನಮ್ಮನ್ನು ಜಯಿಸಿದ ನೀನು ಉಲ್ಲಾಸ ದಿಂದುಬ್ಬಿ ಮೆರೆಯತೊಡಗಿರುವೆಯಂತೆ; ಗುರ್ಜರವಿಜಯದ ಕುರುಹಿಗಾಗಿ ವಿಜಯಸ್ತಂಭವನ್ನು ನಿಲ್ಲಿಸುವ ಸಂಭ್ರಮದಲ್ಲಿ ನಿದ್ರಾಹಾರಗಳನ್ನು ತೊರೆ ದಿರುವೆಯಂತೆ. ಆದರೆ ನೀನು ಚಿರಂಜೀವಿಯಲ್ಲವೆಂಬುದನ್ನು ಮರೆಯಬೇಡ. ಈ ನಿನ್ನ ಐಶ್ವರ್ಯಪ್ರತಾಪಗಳೂ ಸ್ಥಿರವಾದುವಲ್ಲ. ನಿನಗೆ ಒದಗಬಹು

ದಾದ ಕಷ್ಟವನ್ನು ಯೋಚಿಸಿರುವೆಯಾ? ಕೆಲವು ದಿವಸಗಳಲ್ಲಿಯೇ ಅದನ್ನು ಕಣ್ಣಾರೆ ಕಾಣುವೆ, ಅನುಭವಿಸುವೆ. ನೀನು ಗುರ್ಜರಜಯದ ಜಯಸ್ತಂಭ ವನ್ನು ಸ್ಥಾಪಿಸುವುದಕ್ಕೆ ಮುಂಚಿತವಾಗಿಯೇ ಇನ್ನೊಬ್ಬನು ಚಿತ್ತೂರ ವಿಜ ಯದ ವಿಜಯಸ್ತಂಭವನ್ನು ಸ್ಥಾಪಿಸಿಬಿಡುವನು! ರಾಣಾ, ಆಗ ಈ ನಿನ್ನ ಆನಂದೋತ್ಸವಗಳೂ ಮನಸ್ಸಿನ ಸ್ಥಿತಿಯೂ ಏನಾಗಬಹುದು?

ಅಲ್ಲಾವುದ್ದೀನನು ಗುಜರಾಥವನ್ನು ಜಯಿಸಿರುವನು; ಅಲ್ಪಕಾಲ ದಲ್ಲಿಯೇ ಉಳಿದ ಹಿಂದು ರಾಜ್ಯಗಳನ್ನೂ ಜಯಿಸುವನು. ಚಿತ್ತೂರು ಅವನ ಕೈಯೊಳಗಿಂದ ಪಾರಾಗಲಾರದು. ನೀನು ವಿರೋಧಿಯಾದ ಗುರ್ಜರ ರಾಜನ ಸಮಾಧಿಯ ಮೇಲೆ ನಿಶ್ಚಿಂತನಾಗಿ ಕುಣಿದಾಡತೊಡಗಿರುವೆ; ಕುಣಿ. ಗುರ್ಜರೇಶ್ವರನನ್ನು ಪುನಃ ತಲೆಯೆತ್ತದಂತೆ ಮಾಡಿಬಿಟ್ಟಿರುವೆನೆಂಬ ಆನಂದ ದಿಂದ ಉತ್ಸವಗಳನ್ನು ಮಾಡತೊಡಗಿರುವೆ; ಮಾಡು. ಆದರೆ ಈ ಆನಂದವು ಸ್ಥಿರವಾಗಿ ಉಳಿಯಲಾರದೆಂಬುದನ್ನು ಮಾತ್ರ ಮರೆಯದಿರು.

ಗುಜರಾಥವು ಇಷ್ಟು ಸುಲಭವಾಗಿ ಅಲ್ಲಾವುದ್ದೀನನ ಸ್ವಾಧೀನವಾಗ ಬಹುದೆಂದು ಯಾರು ತಿಳಿದಿದ್ದರು? ಇದಕ್ಕೆ ಕೇವಲ ನಿನ್ನ ಕೃಪೆಯೇ ಕಾರ ಣವು! ಅಂದು ನೀನು ಆ ರೀತಿಯಾಗಿ ಗುರ್ಜರರಾಜನ ದೇಹದ ಎಲುಬು ಗಳನ್ನು ಮುರಿದು ನುಗ್ಗು ಮಾಡಿರದಿದ್ದರೆ ಅವನು ಈ ಯಃಕಶ್ಚಿತ್ ಪಠಾಣ ನಿಗೆ ಮಣಿಯುತ್ತಿದ್ದನೇ? ಈ ನಮ್ಮ ವಿರೋಧದಿಂದಲೇ ಚಿತ್ತೂರು ಸ್ವಲ್ಪ ದಿವಸಗಳಲ್ಲಿ ಧ್ವಂಸವಾಗಿಹೋಗುವುದು; ಇದಕ್ಕೆ ಸಂದೇಹಬೇಡ. 'ಚಿತ್ತೂರು ಹಾಳಾಗಲಿ' ಎಂದು ಮನಃಪೂರ್ವಕವಾಗಿ ಶಪಿಸುತ್ತೇನೆ. ನನ್ನ ಶಾಪವು ಬೇಗನೆ ಫಲಿಸುವುದು.

ರಾಣಾ! ನಾನು ರಾಜ್ಯವನ್ನು ಕಳೆದುಕೊಂಡು ಭ್ರಾಂತನಾಗಿ ಬಾಯಿಗೆ ಬಂದಂತೆ ಪ್ರಲಪಿಸುತ್ತೇನೆಂದು ತಿಳಿಯಬೇಡ. ಈ ರಾಜ್ಯವೈಭವಗಳು ಕ್ಷಣ ಭಂಗುರವಾದುವು; ಎಷ್ಟೋ ಬರುತ್ತವೆ; ಎಷ್ಟೋ ಹೋಗುತ್ತವೆ. ಆದರೆ ಈ ಬಾರಿ ಗುರ್ಜರೇಶ್ವರನ ಒಂದು ಅಮೌಲ್ಯ ರತ್ನವನ್ನು ಪಠಾಣರು ಅಪಹರಿ ಸಿರುವರು. ಆ ರತ್ನವು ತಿರುಗಿ ನನ್ನ ನಿನ್ನ ಭಾಂಡಾರಕ್ಕೆ ಬರಲಾರದು. ಇಂದು ಹಿಂದು ರಮಣಿಯರ ಕೀರ್ತಿಮುಕುಟದೊಳಗಿನ ಒಂದು ರತ್ನವು ಉದುರಿ ಹೋಯಿತು. ಗುಜರಾಥದ ರಾಜನ ಗೃಹಲಕ್ಷ್ಮಿಯನ್ನು ಪಠಾಣನು ಅಪಹರಿಸಿ

ಕೊಂಡು ಹೋಗಿ ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡನು! ರಾಜ್ಯಲಕ್ಷ್ಮಿಯೊಂದೇ ಹೋಗಿದ್ದರೆ ನನಗೆ ವ್ಯಸನವಾಗುತ್ತಿರಲಿಲ್ಲ; ಆದರೆ ಪಠಾಣನು ಹಿಂದು ರಮಣಿಯರ ಮೂಗನ್ನು ಕೊಯ್ದು ಅವರ ಕೈಗೆ ಕನ್ನಡಿಯನ್ನು ಕೊಟ್ಟನಲ್ಲಾ!? ಎಂದು ಕಳವಳಪಡುವೆನು.

**ರಾಣಾ!** ನಿನ್ನನ್ನು ನಿಂದಿಸುವುದಾಗಲಿ ನಿನ್ನ ಮೇಲೆ ದೋಷವನ್ನು ಆರೋಪಿಸುವುದಾಗಲಿ ಸದ್ಯದಲ್ಲ ನನಗೆ ಉದ್ದೇಶ್ಯವಾಗಿಲ್ಲ. ಗಿಡದ ನೆಳಲಿನಲ್ಲ ಬಿದ್ದು ಕಾಲ ಕಳೆಯಬೇಕಾಗಿರುವ ನಾನು ಮಹಾರಾಣಾನ ಮೇಲೆ ದೋಷವನ್ನು ಆರೋಪಿಸಲು ಎಷ್ಟರವನು? ನನ್ನ ಉದ್ದೇಶ್ಯವು ಬೇರೆಯೇ ಇರುವುದು. ಒಡೆದು ಹೇಳುತ್ತೇನೆ; ಕೇಳು.

ನನಗೆ ನೀನು ಹೇಗೆ ಶತ್ರುವೋ ಹಾಗೆ ಅಲ್ಲಾವುದ್ದೀನನೂ ಶತ್ರುವು. ನಾನು ಈ ಉಭಯ ವೈರಿಗಳನ್ನು ಒಂದೇ ಆಘಾತದಿಂದ ನಾಶಗೊಳಿಸಲು ಯೋಚಿಸಿ ಈಗ ಆ ಕಾರ್ಯವನ್ನು ಆರಂಭಿಸಿರುವೆನು. ನಾನು ನಿಮಗೂ ಪಠಾಣರಿಗೂ ದ್ವೇಷವನ್ನುಂಟುಮಾಡುವೆನು. ಪಠಾಣರ ಹೊಡೆತದಿಂದ ರಜಪೂತರು ನಾಶವಾಗುವರು; ಅದರಂತೆ ರಜಪೂತರಿಂದ ಪಠಾಣರು ಒಂದು ವೇಳೆ ಸಂಪೂರ್ಣವಾಗಿ ನಾಶವಾಗದೆ ಇದ್ದರೂ ಹತವೀರ್ಯರಾಗುವರು; ಸರಿ. ಆ ಬಳಿಕ ನಿಸ್ತೇಜರಾದ ಶತ್ರುಗಳನ್ನು ನಾನು ಅನ್ಯೋಪಾಯದಿಂದ ಮುರಿಬಡಿಯುವೆನು. ಅಲ್ಲಾವುದ್ದೀನನು ಚಿತ್ತೂರಿನಿಂದ ಸುರಕ್ಷಿತವಾಗಿ ತಿರುಗಿ ಬರಬಾರದೆಂಬ ಉದ್ದೇಶದಿಂದಲೇ ಇಂದು, ಮುಂದಾಗಿ ಈ ವಿಚಾರವನ್ನು ನಿನಗೆ ತಿಳಿಸಿರುವೆನು. ಅಲ್ಲಾವುದ್ದೀನನು ಬಹಳ ಶೂರನಾಗಿಯೇ ಇರಬಹುದು. ಆದರೆ ನೀವು ವೈಮರೆತು ಕುಳಿತಿರದಿದ್ದರೆ ಅವನು ನಿಮ್ಮನ್ನು ಸುಲಭವಾಗಿ ಜಯಿಸಲಾರನು; ಈ ಸಂಗತಿಯನ್ನು ನಾನು ಬಲ್ಲೆನು. ಈ ಎಲ್ಲ ಸಂಗತಿಗಳನ್ನೂ ತಿಳಿದುಕೊಂಡೇ ನಾನು ಅಲ್ಲಾವುದ್ದೀನನನ್ನು ಕರೆಯಲು ದಿಲ್ಲಿಗೆ ಹೊರಟಿರುವೆನು.

ಅಲ್ಲಾವುದ್ದೀನನು ಚಿತ್ತೂರಿನ ಮೇಲೆ ದಂಡೆತ್ತಿ ಬರುವನು; ನಿಶ್ಚಯವಾಗಿಯೂ ಚಿತ್ತೂರು ಹಾಳಾಗಿಹೋಗುವುದು. ಆದರೆ **ರಾಣಾ,** ಇನ್ನೊಂದು ಮಾತು ಹೇಳುತ್ತೇನೆ: ಸಾಧ್ಯವಿದ್ದರೆ ಈ ಸುಸಮಯದಲ್ಲಿ ಹಿಂದು ಲಲನೆಯರ ಗೌರವಧ್ವಜವನ್ನು ಪುನಃ ಸ್ಥಾಪಿಸಲು ಯತ್ನಿಸು. ನೀನು ದ್ವೇಷಿಯಾದರೂ

ಹಿಂದು ಅಬಲೆಯರು ನನ್ನ ವೈರಿಗಳಲ್ಲ; ಅವರು ನನ್ನ ಭಗಿನಿಯರು. ಆ ನನ್ನ ಭಗಿನಿಯರ ಮಾನರಕ್ಷಣೆಗಾಗಿ ನಾನು ನಿನ್ನನ್ನು ಯಾಚಿಸುವೆನು. ನಿನ್ನ ಅರಮನೆಯಲ್ಲಿಯೂ ಕಮಲೆಯಂಥ ಅಮೌಲ್ಯವಾದ ಸ್ತ್ರೀರತ್ನವಿದೆಯೆಂದು ಕೇಳಿದ್ದೇನೆ. ಅವಳು ಮಾತ್ರ ದಿಲ್ಲಿಯ ಪಠಾಣನ ಬೇಗಮಳಾಗದಂತೆ ನೋಡಿಕೊ!

ನನ್ನ ಯಾವತ್ತು ಹಗೆ ತೀರಿಸಿಕೊಳ್ಳುವ ಇಚ್ಛೆಗಳ ಮಧ್ಯದಲ್ಲಿಯೂ ನಿನ್ನ ವಿಷಯವಾಗಿ ಒಂದು ಸದಿಚ್ಛೆ ಇರುವುದು. ಅಲ್ಲಾವುದ್ದೀನನು ಚಿತ್ತೂರನ್ನು ಸುಟ್ಟು ಸೂರೆಮಾಡಲಿ! ಆದರೊಡನೆ ಹಿಂದು ರಮಣಿಯರ ಕಲಂಕವೂ ಬೆಂದುಹೋಗಲಿ!

ನೀನು ಆರು ತಿಂಗಳು ಅಲ್ಲಾವುದ್ದೀನನನ್ನು ಚಿತ್ತೂರಿನಲ್ಲಿ ತಡೆದಿಡಬಲ್ಲೆಯಾದರೆ ನಾನು ದಿಲ್ಲಿಯ ಕಿಲ್ಲೆಯ ಕಲ್ಲುಗಳನ್ನು ಒಂದುಳಿಯದಂತೆ ಕಿತ್ತು ಬಿಸುಡಬಲ್ಲೆನು! ಇವೆಲ್ಲಾ ನಿಜವೆಂದು ನಂಬು; ತಿಲಮಾತ್ರವೂ ಸಂಶಯ ಪಡಬೇಡ. ಒಂದುವೇಳೆ ಸಂಶಯಪಟ್ಟರೆ ಚಿತ್ತೂರು ನಾಶವಾಗುವುದು; ಪಠಾಣನು ಮಾತ್ರ ಸುರಕ್ಷಿತವಾಗಿ ತಿರುಗಿ ಹೊಗುವನು.

ಒಳ್ಳೆಯದು, ನಮಸ್ಕಾರ. ಒಂದು ವೇಳೆ ಈ ನನ್ನ ಉದ್ದೇಶಗಳೆಲ್ಲಾ ಸಾಧಿಸಿದರೆ ಒಂದಿಲ್ಲೊಂದು ದಿನ ನಿನ್ನನ್ನು ನೋಡಲು ಬರುವೆನು. ಆಗ ನೀನು ಗುರ್ಜರೇಶ್ವರನನ್ನು ಮತ್ತೊಮ್ಮೆ ಸೋಲಿಸಿ ಪುನಃ ವಿಜಯಶಾಲಿಯಾಗಬಹುದು! ಅದು ಏನೇ ಇರಲಿ, ನೀನು ಮಾತ್ರ ಅಲ್ಲಾವುದ್ದೀನನ ವಿಷಯವಾಗಿ ಎಚ್ಚರದಿಂದಿರು. ಅಲ್ಲಾವುದ್ದೀನನ ನಾಶಕಾರ್ಯದಲ್ಲಿ ನಾನು ನಿನಗೆ ಸಂಪೂರ್ಣ ಸಹಾಯಮಾಡುವೆನು."

ಕರಣರಾಯ.

ಪತ್ರವನ್ನು ಓದಿನೋಡಿ ರಾಣಾ ಲಕ್ಷ್ಮಣಸಿಂಗನು ಕೆಲಹೊತ್ತಿನವರೆಗೆ ಸ್ತಬ್ಧನಾಗಿ ಕುಳಿತುಬಿಟ್ಟನು. ಇದೆಲ್ಲಿಯ ಅಕಲ್ಪಿತವಾದ ವಾರ್ತೆ! ರಾಣನ ಮುಖವು ಸಪ್ಪಗಾಯಿತು. ಕಣ್ಣುಗಳಲ್ಲಿ ನೀರು ತುಂಬಿತು. ಅವನು ನಿಟ್ಟುಸಿರುಬಿಟ್ಟನು. ಅವನ ಮುಖದಿಂದ "ನಿಜವಾಗಿಯೂ ಹಿಂದುಗಳ ಗೌರವಕ್ಕೆ ಇಂಥ ಅವಸ್ಥೆ ಒದಗಿತೇ! ಗುಜರಾಥದ ಗತಿ ಹೀಗಾಯಿತೇ!" ಎಂಬ ಉದ್ಗಾರಗಳು ಹೊರಟುವು. ರಾಣನು ಪತ್ರವನ್ನು ಮತ್ತೊಮ್ಮೆ ಓದಿನೋಡಿದನು. ಅವನ ಮೈಯೆಲ್ಲ ಬೆವತಿತು. ಗಂಡಸ್ಥಲದ ಮೇಲೆ ಬೆವರಹನಿ

ಗಳು ಮೂಡಿದುವು. ಅವನ ಅಂತರಂಗವು ದುಃಖಸಂತಾಪಗಳಿಂದ ಕುದಿಯ ತೊಡಗಿತು. ಗುರ್ಜರೇಶ್ವರನು ಚಿರಶತ್ರುವಾಗಿದ್ದರೂ ಅವನ ಈ ತರದ ಸಂಕಟವನ್ನು ಕೇಳಿ ರಾಣನ ಮನಸ್ಸು ಮರುಗಿತು. ನೀಚ ಪಠಾಣನ ದುಷ್ಕೃತಿಯನ್ನು ಕೇಳಿ ಆ ದುಃಖವು ಸಂತಾಪವಾಗಿ ಪರಿಣಮಿಸಿತು. ಅವನಿಗೆ ಮುಂದಿನ ಕರ್ತವ್ಯವೇ ತಿಳಿಯದಾಯಿತು.

ಆಗ ರಾಣನು ತಟ್ಟನೆ ಎದ್ದು ನಿಂತು ಮನೆಯಿಂದ ಹೊರಗೆ ಬಂದನು. ಬಾಗಿಲಲ್ಲಿ ದ್ವಾರಪಾಲಕನು ಕೈಜೋಡಿಸಿಕೊಂಡು ನಿಂತಿದ್ದನು. ಆಗ ರಾಣನು, "ಮಂಗಲಸಿಂಹ, ಆ ದೂತನಿಗೆ ಯಥಾರೀತಿಯಾಗಿ ಆದರ ಸತ್ಕಾರಗಳನ್ನು ನಡೆಯಿಸುವಂತೆ ಅರಮನೆಯ ಅತಿಥಿಶಾಲೆಯ ಅಧಿಕಾರಿಗೆ ತಿಳಿಸು" ಎಂದು ಹೇಳುತ್ತ ನಡೆದನು. ಸ್ವಲ್ಪ ಮುಂದಕ್ಕೆ ಹೋದವನು ಪುನಃ ತಿರುಗಿ ನಿಂತು– "ಮಂಗಲಸಿಂಹ, ಈಗಲೇ ಹೋಗಿ ಈ ಹೊತ್ತಿನಿಂದ ಚಿತ್ತೂರಿನಲ್ಲಿ ಯಾರೂ ಯಾವ ತರದ ಆನಂದೋತ್ಸವಗಳನ್ನೂ ನಡೆಯಿಸಕೂಡದೆಂದು ನಗರ ಪಾಲಕರಿಗೆ ತಿಳಿಸು," ಎಂದು ಆಜ್ಞಾಪಿಸಿ ತನ್ನ ಕಕ್ಕ (ಚಿಕ್ಕಪ್ಪ) ನಾದ ಭೀಮಸಿಂಹನ ಮಂದಿರದತ್ತ ತೀವ್ರವಾಗಿ ನಡೆದನು.

ರಾಣಾ ಸಮರಸಿಂಹನು ಮರಣಹೊಂದಿದಾಗ ಅವನ ಮಗನಾದ ಲಕ್ಷಣಸಿಂಹನು ಇನ್ನೂ ತೀರ ಚಿಕ್ಕವನಾಗಿದ್ದನು. ಸಮರಸಿಂಹನು ಮರಣೋನ್ಮುಖನಾದಾಗ ಆ ಚಿಕ್ಕ ಮಗುವನ್ನು ತನ್ನ ತಮ್ಮ ಭೀಮಸಿಂಹನ ಮಡಿಲಲ್ಲಿಟ್ಟು:—"ತಮ್ಮಾ, ಇವನು ನನ್ನ ಮಗನಲ್ಲ, ನಿನ್ನ ಮಗನು; ಇವನ ಲಾಲನಪಾಲನಗಳೂ ರಾಜ್ಯದ ಸುಖಶಾಂತಿಗಳೂ ನಿನ್ನನ್ನೇ ಕೂಡಿರುವುವು" ಎಂದು ಹೇಳಿ ಮರಣಹೊಂದಿದನು. ಅಂದಿನಿಂದ ಭೀಮಸಿಂಹನು ಮಗುವಾದ ಲಕ್ಷ್ಮಣಸಿಂಹನ ಹೆಸರಿನಿಂದ ತಾನೇ ಯಾವತ್ತು ರಾಜ್ಯಕಾರಭಾರಗಳನ್ನು ನಡೆಯಿಸುತ್ತಿದ್ದನು. ಇವನಂಥ ಜಾಣನೂ ಪ್ರತಾಪಶಾಲಿಯೂ ಬೇರೊಬ್ಬನಿರಲಿಲ್ಲ. ಮೇವಾಡದ ರಾಜ್ಯವನ್ನು ಇವನಷ್ಟು ಚೆನ್ನಾಗಿ ಬೇರೆ ಯಾರೂ ಆಳಲಿಲ್ಲ. ಪ್ರಜೆಗಳೆಲ್ಲರೂ ಭೀಮಸಿಂಹನನ್ನು ತಂದೆಯಂತೆ ಪ್ರೀತಿಸುತ್ತಿದ್ದರು; ಅರಸನಂತೆ ಕೊಂಡಾಡುತ್ತಿದ್ದರು; ದೇವರಂತೆ ಪೂಜಿಸುತ್ತಿದ್ದರು.

ಮುಂದೆ ಕೆಲಕಾಲದ ಮೇಲೆ ಲಕ್ಷ್ಮಣಸಿಂಹನು ಪ್ರಾಯಕ್ಕೆ ಬಂದಬಳಿಕ ಸಿಂಹಾಸನದ ಮೇಲೆ ಕುಳಿತನು. ಆದರೆ ಆಗಲೂ ಭೀಮಸಿಂಹನ ಅಧಿಕಾರವು

ಮಾತ್ರ ಮೊದಲಿನಂತೆಯೇ ನಡೆಯುತ್ತಿತ್ತು. ಅವನ ಮಾನ-ಮರ್ಯಾದೆಗಳಿಗೆ ಯಾವ ರೀತಿಯಿಂದಲೂ ಕೊರತೆಯಾಗಲಿಲ್ಲ. ಲಕ್ಷ್ಮಣಸಿಂಹನು ಕಕ್ಕನ ಅಭಿಪ್ರಾಯವನ್ನು ಕೇಳದೆ ಯಾವ ಕಾರ್ಯವನ್ನೂ ಮಾಡುತ್ತಿರಲಿಲ್ಲ. ಯುದ್ಧಕಾಲದಲ್ಲಿ ಭೀಮಸಿಂಹನೇ ಸೇನಾಪತಿಯು; ರಾಜಸಭೆಯಲ್ಲಿ ಅವನೇ ಮಂತ್ರಿಯು; ಸಂಧಿವಿಗ್ರಹಗಳ ಯೋಜನೆಗೆ ಅವನೇ ರಾಯಭಾರಿಯು.

ಹೀಗಿದ್ದುದರಿಂದ ರಾಣನು ಇಂದು ಕರಣರಾಯನ ಪತ್ರವನ್ನು ನೋಡಿ ಮುಂದೇನು ಮಾಡಬೇಕೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಆ ಪತ್ರವನ್ನು ಕೈಯಲ್ಲಿ ಹಿಡಿದುಕೊಂಡು ಕಕ್ಕನ ಮನೆಗೆ ಬಂದನು. ಭೀಮಸಿಂಹನು ಮಗನನ್ನು ಪ್ರೀತಿಯಿಂದ ಕರೆದೊಯ್ದು ಕುಳ್ಳಿರಿಸಿಕೊಂಡನು.

ರಾಣನು ಅಕಾಲದಲ್ಲಿ ತನ್ನ ಮನೆಗೆ ಬಂದುದನ್ನು ನೋಡಿ ಭೀಮಸಿಂಹನು ಅವನನ್ನು ಕುರಿತು:—"ರಾಣಾಜೀ, ಏನಾದರೂ ವಿಶೇಷ ವರ್ತಮಾನವುಂಟೀ?" ಎಂದು ಕೇಳಿದನು.

**ರಾಣ:**—ಕಾಕಾಜೀ, ವರ್ತಮಾನವೇನೋ ಸಾಮಾನ್ಯವಾದುದಲ್ಲ; ವಿಶೇಷ ಗದ್ದಲವುಂಟಾಗುವಂತೆ ತೋರುತ್ತದೆ. ಪುನಃ ಯುದ್ಧವು ಸಂಘಟಿಸುವುದು!

**ಭೀಮಸಿಂಹ:**-ಯುದ್ಧವು ಸಂಘಟಿಸುವುದೋ? ಇದಕ್ಕೇಕೆ ಇಷ್ಟೊಂದು ಯೋಚನೆ? ಪ್ರಸಂಗವೇ ಬಂದರೆ ಯುದ್ಧವನ್ನು ಮಾಡೋಣವಂತೆ! ಕ್ಷತ್ರಿಯರಾಗಿ ಯುದ್ಧಕ್ಕಂಜಿದರೆ ಹೇಗೆ? ಆದರೆ ನಡೆದುದಾದರೂ ಏನು? ಹೇಳಿರಿ, ನೋಡೋಣ.

ಆಗ ರಾಣನು ಗುರ್ಜರೇಶ್ವರನ ಪತ್ರವನ್ನು ಕೈಗೆ ಕೊಟ್ಟನು. ಅದನ್ನು ಓದಿದೊಡನೆಯೇ ಭೀಮಸಿಂಹನ ಮುಖವು ಕಪ್ಪಾಯಿತು. ರಣಭೂಮಿಯಲ್ಲಿ ವೈರಿಗಳ ಖಡ್ಗವು ನೆಟ್ಟರೂ ಹಿಂತೆಗೆಯದ ಭೀಮಸಿಂಹನ ಹೃದಯವು ಗುರ್ಜರೇಶ್ವರನ ಪತ್ರದೊಳಗಿನ ಒಂದೇ ಒಂದು ದೈನ್ಯವಾಣಿಯಿಂದ ಸೀಳಿಹೋಯಿತು! ಅವನು:-"ಈ ಪತ್ರವನ್ನು ಯಾರು ತೆಗೆದುಕೊಂಡು ಬಂದರು?" ಎಂದು ಕೇಳಿದನು.

**ರಾಣ:**—ಒಬ್ಬ ರಾಜದೂತನು ತೆಗೆದುಕೊಂಡು ಬಂದಿರುವನು; ಅಪ್ಪಣೆಯಾದರೆ ಅವನನ್ನು ಇಲ್ಲಿಗೆ ಕರೆಯಿಸುವೆ. ನಾನೂ ಅವನನ್ನಿನ್ನೂ ನೋಡಿಲ್ಲ.

**ಭೀಮಸಿಂಹ:**—ಒಳ್ಳೆಯದೇ ಆಯಿತು; ನಾವು ಏನು ಮಾಡಬೇಕೆಂಬುದನ್ನು ಮೊದಲು ವಿಚಾರಮಾಡಿ ಆ ಮೇಲೆ ದೂತನನ್ನು ಕರೆಯಿಸೋಣ. ಕಮಲಾದೇವಿಯು ಈ ರೀತಿಯಾಗಿ ತನ್ನ ಸರ್ವಸ್ವವನ್ನೂ ನಾಶಮಾಡಿಕೊಂಡಳೇ?

**ರಾಣ:**—ಅವಳೇನು ಮಾಡುವಳು? ಪಠಾಣರು ಅವಳನ್ನು ಬಲಾತ್ಕಾರದಿಂದ ಅಪಹರಿಸಿಕೊಂಡು ಹೋದರು. ಈ ಬಾರಿ ಯುದ್ಧವಾದರೆ ಪಠಾಣರು ಚಿತ್ತೂರಿಗೆ ಬರುವರು; ಬರಲಿ. ನಾವೂ ಬಂದು ಬಾರಿ ಅಲ್ಲಾಉದ್ದೀನನು ಎಂಥ ನೀಚನೆಂಬುದನ್ನು ನೋಡೋಣ.

ಭೀಮಸಿಂಹನು ಸ್ವಲ್ಪ ಚಿಂತೆಗೊಳಗಾದನು. ಅವನು ಏನೋ ವಿಚಾರದಲ್ಲಿದ್ದನು. ಅಷ್ಟರಲ್ಲಿ ರಾಣನು:—"ರಾಣಾಜೀ, ನನಗೆ ಕೇವಲ ಅಲ್ಲಾವುದ್ದೀನನೊಬ್ಬನೇ ಇದರಲ್ಲಿ ಅಪರಾಧಿಯಲ್ಲವೆಂದು ತೋರುತ್ತದೆ. ಇದರಲ್ಲಿ ಏನೋ ಒಂದು ಕುಹಕ ವ್ಯಾಪಾರವು ನಡೆದಿರಬೇಕು. ಅಲ್ಲಾವುದ್ದೀನನು ಏನುಮಾಡುತ್ತಿದ್ದನು? ಅವನು ಗುಜರಾಥವನ್ನು ಜಯಿಸಿದನು, ಜಯಿಸಲಿ; ರಾಜ್ಯವನ್ನು ಸುಟ್ಟು ಸೂರೆಮಾಡಲಿ. ಆದರೆ ತನ್ನ ಸತೀಧರ್ಮವನ್ನು ಕಾದುಕೊಳ್ಳುವುದು ಕಮಲಾದೇವಿಯ ಕೈಯಲ್ಲಿಯೇ ಇತ್ತಷ್ಟೇ?" ಎಂದನು.

**ಭೀಮಸಿಂಹ:**—ಇಲ್ಲ; ನಾನು ಆ ಮಾತನ್ನು ನಂಬುವುದಿಲ್ಲ. ಹಿಂದುಗಳ ಪೂರ್ವಸಂಸ್ಕಾರ, ಆಚಾರವಿಚಾರ ಇವೆಲ್ಲಾ ಒಂದೆರಡು ದಿನಗಳಲ್ಲಿಯೇ ಎಂದೂ ಲೋಪವಾಗಿ ಹೋಗಲಾರವು. ಕಮಲಾದೇವಿಯು ಪಾಪಿಷ್ಟಳೆಂಬುದೇನೋ ನಿಜ; ಆದರೆ ಆ ಪಾಪವು ಬಹುದಿನಗಳಿಂದಲೂ ಸಂಚಿತವಾಗಿರಬೇಕೆಂದು ನನಗೆ ತೋರುತ್ತದೆ. ಆ ನೀಚ ದಾಸಿ ಬಹುದಿನಗಳಿಂದಲೂ ಪ್ರಯತ್ನಮಾಡಿ ಅವಳ ಅಂತರಂಗವನ್ನು ಕೆಡಿಸಿರಬೇಕು.

ರಾಣನ ಮುಖದ ಮೇಲಿನ ವ್ಯಸನದ ಮತ್ತು ಉದ್ವೇಗದ ಛಾಯೆ ಅಡಗಿತು; ಕೂಡಲೆ ಅದರ ಸ್ಥಳವನ್ನು ಆಶ್ಚರ್ಯಭಾವನೆ ವ್ಯಾಪಿಸಿತು. ಆಗ ರಾಣನು "ಆದದ್ದಂತೂ ಆಯಿತು, ಮುಂದಿನ ವಿಚಾರವೇನು" ಎಂದು ಕೇಳಿದನು.

ಭೀಮಸಿಂಹನು ಎದ್ದುನಿಂತು, ಒಳಕ್ಕೆ ನಡೆಯಿರಿ, ಹೇಳುತ್ತೇನೆ. ಬಹುದಿನಗಳಿಂದಲೂ ನನ್ನ ಮನಸ್ಸಿನಲ್ಲಿ ಒಂದು ವಿಚಾರವು ಇದ್ದೇ ಇತ್ತು. ಇಂದು

ಅದನ್ನೆಲ್ಲ ಹೇಳಿಬಿಡುವೆನು, ಎಂದು ಹೇಳುತ್ತ ರಾಣನನ್ನು ಕರೆದುಕೊಂಡು ಮತ್ತೊಂದು ಕೋಠಡಿಯನ್ನು ಪ್ರವೇಶಿಸಿದನು.

*          *          *          *

ಗುರ್ಜರೇಶ್ವರನಾದ ಕರಣರಾಯನು ಮುನ್ನುಡಿದಂತೆ ಆತನ ಬೋಧನೆಯಿಂದಲೇ ಪದ್ಮಿನಿಯ ಮೋಹದಿಂದಲೂ ಚಿತ್ತೂರಿನ ರಾಜ್ಯದ ಲೋಭದಿಂದಲೂ ಮುಗ್ಧನಾದ ಅಲ್ಲಾವುದ್ದೀನನು ಪ್ರಬಲವಾದ ಪಠಾಣಸೇನೆಯೊಡನೆ ಚಿತ್ತೂರಿನ ಮೇಲೆ ದಂಡೆತ್ತಿ ಬಂದನು; ಆದರೆ ಅದೇ ಕರಣರಾಯನಿಂದಲೇ ಎಚ್ಚತ್ತು ಯುದ್ಧಕ್ಕೆ ಸನ್ನದ್ಧರಾಗಿದ್ದ ರಜಪೂತರನ್ನು ರಣರಂಗದಲ್ಲಿ ಜಯಿಸಲು ಸಾಧ್ಯವಾಗಲಿಲ್ಲ. ಪದ್ಮಿನಿಯ ಪ್ರತಿಬಿಂಬವನ್ನು ಕನ್ನಡಿಯಲ್ಲಿ ನೋಡುವಂತಹ ಮನಸ್ಸಿನ ಆತುರತೆಗಾಗಿ ಆತನು ಅನೇಕಾನೇಕ ಸೈನಿಕ ಸೇನಾನಾಯಕರನ್ನು ಬಲಿಕೊಟ್ಟು ದಿಲ್ಲಿಗೆ ತಿರುಗಿ ಹೋಗಬೇಕಾಯಿತು.

ಪದ್ಮಿನಿಯ ಮೇಲಣ ಮೋಹವೂ ಚಿತ್ತೂರಿನಲ್ಲಾದ ಅಪಜಯದ ಅಪಮಾನದ ಹಗೆಯೂ ಅಲ್ಲಾವುದ್ದೀನನನ್ನು ಸುಮ್ಮನಿರಗೊಡಲಿಲ್ಲ. ಅವನು ಎರಡು ವರುಷಗಳ ವರೆಗೆ ಬಿಟ್ಟುಬಿಡದೆ ಸಿದ್ಧತೆ ಮಾಡಿಕೊಂಡು ಮತ್ತೆ ಚಿತ್ತೂರನ್ನು ಮುತ್ತಿದನು. ಈ ಸಾರೆ ರಜಪೂತರು ಕೈಸೋತು ಕುಸಿದು ಕುಳಿತರು. ಕರಣರಾಯನ ಶಾಪದಂತೆ ಚಿತ್ತೂರು ಹಾಳಾಗಿ ಹೋಗುವ ಸಂದರ್ಭವೊದಗಿತು. ರಜಪೂತರು ರಾಜ್ಯವನ್ನು ಕಳೆದುಕೊಂಡರೂ ಮಾನವನ್ನೂ ಧರ್ಮಾಭಿಮಾನವನ್ನೂ ಕಳೆದುಕೊಳ್ಳಲು ಸಮ್ಮತಿಸಲಿಲ್ಲ. ಅಭಿಮಾನಿಗಳಾದ ಅವರು ಪ್ರಾಣವನ್ನು ತೃಣಕ್ಕೆ ಬಗೆದು ತಮ್ಮ ಧರ್ಮಾನುಗುಣವಾದ ಕೊನೆಯ ಮಾರ್ಗವನ್ನು ಅವಲಂಬಿಸಬೇಕೆಂದು ನಿರ್ಣಯಿಸಿದರು.

ಪದ್ಮಿನಿಯೂ ರಾಣಿಯೂ ಜೋಹಾರವ್ರತವನ್ನು ಸ್ವೀಕರಿಸುವರೆಂಬ ವರ್ತಮಾನವು ಊರಲ್ಲೆಲ್ಲ ಹಬ್ಬಿತು. ರಜಪೂತ ಸ್ತ್ರೀಪುರುಷರೆಲ್ಲರೂ ಕ್ಷಣಕಾಲ ತಟಸ್ಥರಾಗಿ ಕುಳಿತುಬಿಟ್ಟರು. ಆದರೆ ಪರಕ್ಷಣದಲ್ಲಿಯೇ ಅವರು ಕೋಪ-ಸಂತಾಪ-ಆನಂದ-ಉತ್ಸಾಹಗಳಿಂದ ಉನ್ಮತ್ತರಾಗಿ ಹೋದರು. ಊರಲ್ಲೆಲ್ಲ ಮಹಾ ಕೋಲಾಹಲವುಂಟಾಯಿತು.

ಜೋಹಾರವು ರಜಪೂತರ ಕೊನೆಯ ವ್ರತವು. ಅವರು ಹಗೆಗಳಿಂದ ಪರಾಜಿತರಾಗಿ, ಅವರ ಸ್ತ್ರೀಯರ ಶೀಲ ಧರ್ಮ ಮರ್ಯಾದೆಗಳು ಶತ್ರುಗಳ

ಸ್ವಾಧೀನವಾಗಿ ಹೋಗುವ ಪ್ರಸಂಗವು ಒದಗಿದರೆ, ಅವರು ಈ ವ್ರತವನ್ನು ಸ್ವೀಕರಿಸುವರು. ವ್ರತಸಮಾಪ್ತಿಯ ದಿವಸ ರಜಪೂತ ಸೈನಿಕರು ಕೇಶರ ವರ್ಣದ ವಸ್ತ್ರಗಳನ್ನು ಧರಿಸಿ ಅಫೀಮು ಮುಂತಾದ ಮಾದಕದ್ರವ್ಯಗಳನ್ನು ಯಥೇಚ್ಛವಾಗಿ ಸೇವಿಸಿ ಉನ್ಮತ್ತರಾಗಿ ಒರೆಗಳೆದ ಖಡ್ಗಗಳನ್ನೂ ಭಾಲೆ ಬರ್ಚಿ ಮುಂತಾದ ಆಯುಧಗಳನ್ನೂ ಧರಿಸಿ ಒಮ್ಮಿಂದೊಮ್ಮೆ ದುರ್ಗದ ಬಾಗಿಲನ್ನು ತೆರೆದು ಶತ್ರುಗಳ ಮೇಲೆ ಬಿದ್ದು ಮೈಯಲ್ಲಿ ಪ್ರಾಣವಿರುವವರೆಗೂ ಶತ್ರುಗಳನ್ನು ತುಂಡುಗಡಿದು ಕೊನೆಗೆ ಆ ರಣರಂಗದಲ್ಲಿಯೇ ತಾವೂ ಹತ ರಾಗುವರು. ಅದೇ ಕಾಲಕ್ಕೆ ದುರ್ಗದ ಒಳಗಡೆಗೆ ಶ್ರೀಗಂಧ ಚಂದನ ಮುಂತಾದ ಸುಗಂಧದ ಕಟ್ಟಿಗೆಗಳನ್ನು ರಾಶಿರಾಶಿಯಾಗಿ ಒಟ್ಟಿ, ಅದರ ಮೇಲೆ ಧೂಪ ಕಪ್ಪುರ ಮೊದಲಾದ ಸುಗಂಧದ್ರವ್ಯಗಳನ್ನು ಹರವಿ ಉರಿಯನ್ನು ಹೊತ್ತಿಸುವರು. ಬಳಿಕ ರಾಜಕುಲವಧುಗಳೂ ಇತರ ಸ್ತ್ರೀಯರೂ ಸ್ನಾನ ಮಾಡಿ ಕೆಂಪು ಬಟ್ಟೆಗಳನ್ನುಟ್ಟುಕೊಂಡು ಮುಡಿಯನ್ನು ಬಿಚ್ಚಿ ಅರಿಸಿನ ಕುಂಕುಮಗಳು ಮೊದಲಾದ ಸೌಭಾಗ್ಯದ್ರವ್ಯಗಳನ್ನೂ ಹೂವಿನ ಮಾಲೆಗಳ ನ್ನೂ ಧರಿಸಿ ಬ್ರಾಹ್ಮಣರಿಗೆ ದಾನಧರ್ಮಗಳನ್ನು ಯಥೇಚ್ಛವಾಗಿ ಸೂರೆಮಾಡಿ ಆಪ್ತೇಷ್ಟರ ಅನುಜ್ಞೆಯನ್ನು ಪಡೆದು ಮಂಗಲವಾದ್ಯಗಳು ಘೋರ್ಗರೆಯುತ್ತಿ ರಲು ಆ ಅಗ್ನಿಕುಂಡಕ್ಕೆ ಮೂರು ಪ್ರದಕ್ಷಿಣೆ ಮಾಡುವರು. ಆಗ ಬ್ರಾಹ್ಮಣರು ವೇದಘೋಷ ಮಾಡುತ್ತ ಅಗ್ನಿಸಂಸ್ಕಾರವನ್ನು ಮಾಡುತ್ತಿರುವರು. ಕೊನೆಗೆ ಸತೀಧರ್ಮದಲ್ಲಿ ಅತ್ಯಂತ ಅಭಿಮಾನಿನಿಯರಾದ ರಜಪೂತ ರಮಣಿಯರು ಆತ್ಮಸಂತೋಷದಿಂದ ಧಗಧಗ ಉರಿಯುವ ಚಿತೆಯೊಳಗೆ ಹಾರಿಕೊಂಡು ಇಹಲೋಕದ ಸಕಲ ಸಂಬಂಧಗಳನ್ನೂ ಹರಿದೊಗೆದು ನಶ್ವರವಾದೀ ನರದೇಹ ವನ್ನು ಅಗ್ನಿನಾರಾಯಣನಿಗೆ ಸಮರ್ಪಿಸಿ, ರಣರಂಗದಲ್ಲಿ ಮಡಿದು ವೀರಸ್ವರ್ಗ ವನ್ನೈದುವ ತಮ್ಮ ಪತಿಗಳ ಮಾರ್ಗವನ್ನು ಅನುಸರಿಸಿ ಹೋಗಿಬಿಡುವರು.

ಚಿತ್ತೂರಿನ ರಜಪೂತರು ನಾಳೆ ಬೆಳಗಾಗುತ್ತಲೇ ತಾವು ಕೈಕೊಂಡಿ ರುವ ಜೋಹಾರ ವ್ರತವನ್ನು ನೆರವೇರಿಸತಕ್ಕವರು. ಅದರಿಂದ ಆ ರಾತ್ರಿಯೆಲ್ಲ ಚಿತ್ತೂರಿನಲ್ಲಿ ಮಹಾ ಕೋಲಾಹಲವುಂಟಾಗಿತ್ತು.

ರಾತ್ರಿ ಬಹಳ ಹೊತ್ತಾಗಿತ್ತು. ಹಿಟ್ಟುಚೆಲ್ಲಿದಂತೆ ಬೆಳದಿಂಗಳು ಬಿದ್ದಿತ್ತು; ಆ ಬೆಳದಿಂಗಳೂ ಆಕಾಶದಲ್ಲಿದ್ದ ರಜನೀಪತಿಯೂ ಆತನನ್ನು ಸುತ್ತುವರಿ

ದಿರುವ ತಾರಕಾಪುಂಜಗಳೂ ಚಿತ್ತೂರಿನ ಭವಿತವ್ಯವನ್ನು ಭಾವಿಸುತ್ತ ಮೌನವನ್ನು ತಳೆದಂತೆ ತೋರುತ್ತಿದ್ದುವು. ರಾಜಮಹಿಷಿಯೂ ಪದ್ಮಿನಿಯೂ ತಮ್ಮ ಬಹುಕಾಲದ ಪ್ರೀತಿಯ ಸ್ಥಳಗಳ ಮತ್ತು ತಮ್ಮ ಆಪ್ತೇಷ್ಟರ ದರ್ಶನಕ್ಕಾಗಿ ಪರಿಚಾರಿಕೆಯರೊಂದಿಗೆ ಬೀದಿಬೀದಿಗಳಲ್ಲಿ ಅಲೆದಾಡುತ್ತಿದ್ದರು.

ಆ ದಿನ ರಾತ್ರಿಯಲ್ಲಿ ಚಿತ್ತೂರಿನಲ್ಲಿ ಯಾರೂ ಕಣ್ಣುಮುಚ್ಚಿ ಮಲಗಲಿಲ್ಲ. ಅವರಿಗೆ ಮಲಗಲು ಅವಕಾಶವಿಲ್ಲ; ಬೆಳಗಾಗುತ್ತಲೇ ತಮ್ಮ ಇಹಲೋಕದ ಎಲ್ಲ ಲೆಕ್ಕಪತ್ರಗಳನ್ನು ಒಪ್ಪಿಸಲು ಹೋಗಬೇಕಾಗಿರುವುದು. ಆದರಿಂದ ಅವರೆಲ್ಲರೂ ಶಾಂತಚಿತ್ತದಿಂದ ತಮ್ಮ ಆಯುಷ್ಯದ ಹಿಂದಿನ ಸಂಗತಿಗಳನ್ನೆಲ್ಲ ಸ್ಮರಿಸಿಕೊಳ್ಳುತ್ತಿದ್ದರು.

ಕೊನೆಗೆ ಪದ್ಮಿನಿಯು ಒಂದು ವಿಶಾಲವಾದ ಸರೋವರದ ಬಳಿಗೆ ಬಂದಳು. ಆಗ ಅವಳಿಗೆ ತನ್ನ ಹಿಂದಿನ ಸುಖದ ದಿನಗಳು ಸ್ಮರಣೆಗೆ ಬಂದುವು. ಎರಡು ಹನಿ ಕಣ್ಣೀರು ತಟ್ಟನೆ ಉದುರಿತು. ಆ ಬಳಿಕ ಅವರೆಲ್ಲರೂ ತಾವು ಹೋಗಬೇಕಾಗಿದ್ದ ಸ್ಥಳಗಳಿಗೆ ಹೋಗಿ ತಿರುಗಿ ಮನೆಗೆ ಬಂದರು.

ಪದ್ಮಿನಿಯು ತನ್ನ ಅಂತಃಪುರವನ್ನು ಪ್ರವೇಶಿಸಿದಳು. ಬಾಗಿಲಿನ ಇದಿರಿಗೆ ದೊಡ್ಡದೊಂದು ಕನ್ನಡಿಯಲ್ಲಿ ಅವಳ ಭಾವಚಿತ್ರವು ನಗುಮೊಗದಿಂದ ಒಪ್ಪುತ್ತಿತ್ತು. ಪದ್ಮಿನಿಯು ನಿಲುಕಿ ಆ ಕನ್ನಡಿಯನ್ನು ಹಿಡಿದೆಳೆದಳು. ಅದನ್ನು ಕಟ್ಟಿದ್ದ ದಾರವು ಹರಿದುದರಿಂದಲೂ ಪದ್ಮಿನಿಯು ಅದನ್ನು ಸರಿಯಾಗಿ ಹಿಡಿದಿರಲಿಲ್ಲವಾದುದರಿಂದಲೂ ಕನ್ನಡಿ ದೊಪ್ಪನೆ ಕೆಳಗೆ ಬಿದ್ದು ಹೋಳು ಹೋಳಾಗಿ ನಾಲ್ಕೂ ಕಡೆಗೆ ಸಿಡಿಯಿತು. ಪದ್ಮಿನಿಯು ಆ ಭಾವಚಿತ್ರವನ್ನು ಹಿರಿದುಕೊಂಡು ದೀಪದ ಮೇಲೆ ಹಿಡಿದು ಸುಡತೊಡಗಿದಳು. ಚಿತ್ರವು ಸುಡುತ್ತಿದ್ದಾಗ ಪದ್ಮಿನಿಯು:—“ ಮೂರ್ಖಾ! ನೀನು ಪದ್ಮಿನಿಯ ಒಂದು ಕೂದಲನ್ನಾದರೂ ನೋಡಲಾರೆ, ಇಷ್ಟೇ ಅಲ್ಲ; ಅವಳ ಕುರುಹುಗಳು ಕೂಡ ನಿನ್ನ ಕಣ್ಣಿಗೆ ಬೀಳಲಾರವು ! ” ಎಂದಳು.

ಇಷ್ಟರಲ್ಲಿ ಮಂದಿರದ ಹೊರಗಡೆಗೆ ಸುವರ್ಣಪಂಜರಗಳಲ್ಲಿದ್ದ ಪಂಚವರ್ಣದ ಗಿಳಿಯೂ ಮಯನಾ ಪಕ್ಷಿಯೂ—“ ರಾಣಿಯವರೇ ಬನ್ನಿರಿ, ಬನ್ನಿರಿ, ಕುಳಿತುಕೊಳ್ಳಿರಿ. ” ಎಂದುವು. ಕೂಡಲೆ ಪದ್ಮಿನಿಯು ಅವುಗಳ ಬಳಿಗೆ ಹೋಗಿ ಪಂಜರದ ಬಾಗಿಲನ್ನು ತೆರೆದು ಅವುಗಳನ್ನು ಹೊರಗೆ ಬಿಟ್ಟು

ಬಿಟ್ಟಳು. ಆದರೆ ಅವು ಹಾರಿಹೋಗಲಿಲ್ಲ; ತಿರುತಿರುಗಿ ಬಂದು ಪದ್ಮಿನಿಯ ಭುಜದ ಮೇಲೆಯೂ ಮುಂಗೈ ಮೇಲೆಯೂ ಕುಳಿತುಕೊಳ್ಳುತ್ತಿದ್ದುವು. ಅದನ್ನು ನೋಡಿ ಪದ್ಮಿನಿಯ ಕಣ್ಣುಗಳಿಂದ ಮತ್ತೆರಡು ಹನಿಗಳುದುರಿದುವು.

ಬಹಳ ಹೊತ್ತಾದ ಮೇಲೆ ರಾಣಾ ಭೀಮಸಿಂಹನು ಜೋಹಾರದ ಎಲ್ಲ ಸಿದ್ಧತೆಯನ್ನು ಮಾಡಿಸಿಟ್ಟು ಮನೆಗೆ ಬಂದನು. ಪದ್ಮಿನಿಯು ಹಾಸಿಗೆಯಿಲ್ಲದ ಮಂಚದ ಮೇಲೆ ಕುಳಿತುಕೊಂಡಿದ್ದಳು. ಪತಿಯು ಬಂದುದನ್ನು ನೋಡಿ ಎದ್ದು ಸಾಷ್ಟಾಂಗ ನಮಸ್ಕಾರ ಮಾಡಿದಳು. ಮನಸ್ಸಿನಲ್ಲಿ ಇದೇ ಕೊನೆಯ ದಿನವೆಂದಳು. ರಾಣನು ಅವಳನ್ನು ಎಬ್ಬಿಸಿದನು. ಒಬ್ಬರ ಬಾಯಿಯಿಂದಲೂ ಮಾತು ಹೊರಡದು.

ಕ್ರಮವಾಗಿ ರಾತ್ರಿ ಕಳೆಯಿತು. ಪ್ರಾತಃಕಾಲದ ಮಂದವಾದ ಛಾಯೆ ಒಡೆದು ಕಾಣಿಸುತ್ತಿತ್ತು. ಸೃಷ್ಟಿಚಕ್ರಕ್ಕೆ ಮಾನವನ ಸುಖದುಃಖಗಳ ಕಲ್ಪನೆಯೆಲ್ಲಿರುವುದು? ಅದು ಸುಖದ ಕಾಲವೆಂದು ಬೇಗನೆ ತಿರುಗುವುದಿಲ್ಲ. ದುಃಖದ ಸಮಯವೆಂದು ಸಾವಕಾಶವಾಗಿ ಭ್ರಮಿಸುವುದಿಲ್ಲ.

ಪೂರ್ವದಿಕ್ಕಿನಲ್ಲಿ ಸೂರ್ಯನು ಉದಯಹೊಂದಿ ಮೇಲಕ್ಕೆ ಬಂದನೋ ಇಲ್ಲವೋ, ಚಿತ್ತೂರಿನೊಳಗೆ ಯಾವತ್ತೂ ಸ್ತ್ರೀಯರು ಆಲಂಬಿತ ಕುಂತಲೆಯರಾಗಿ ರಕ್ತಾಂಬರಗಳನ್ನುಟ್ಟು ಬಣ್ಣ ಬಣ್ಣದ ಹೂವಿನ ಹಾರಗಳನ್ನೂ ಹರಿದ್ರಾ ಕುಂಕುಮಾದಿ ಸೌಭಾಗ್ಯದ್ರವ್ಯಗಳನ್ನೂ ಧರಿಸಿ ತಂಡತಂಡವಾಗಿ ಚಿತೋರೇಶ್ವರಿಯ ಮಂದಿರದ ಕಡೆಗೆ ನಡೆದರು.

ಎಲ್ಲರಿಗಿಂತ ಮುಂದೆ ಪದ್ಮಿನಿಯೂ ಚಿತ್ತೂರಿನ ರಾಣಿಯೂ ಜೋಡಾಗಿ ನಡೆಯುತ್ತಿದ್ದರು. ಅವರ ಹಿಂದೆ ಹೋಗುತ್ತಿದ್ದ ಭೈರವಿಯು ಉದ್ದಿಷ್ಟಸ್ಥಳವನ್ನು ಮುಟ್ಟಿದ ಕೂಡಲೆ ಅವರಿಗೆ ಸಂಜ್ಞೆಮಾಡಿದಳು. ಎಲ್ಲರೂ ನಿಂತುಕೊಂಡರು. ಹೊರಗಡೆಗೆ ಮಂಗಲವಾದ್ಯಗಳು ಭೋರ್ಗರೆಯುತ್ತಿದ್ದುವು. ಬ್ರಾಹ್ಮಣರು ವೇದಘೋಷ ಮಾಡುತ್ತ ಅಗ್ನಿಸಂಸ್ಕಾರ ಮಾಡುತ್ತಿದ್ದರು. ಎದುರಿಗೆ ವಿಸ್ತಾರವಾದ ಕುಂಡದಲ್ಲಿ ಅಗ್ನಿಯು ಧಗಧಗ ಉರಿಯುತ್ತಿತ್ತು.

ಪುರೋಹಿತನ ಅಪ್ಪಣೆಯಾದ ಕೂಡಲೆ ಪದ್ಮಿನಿಯೂ ರಾಣಿಯೂ ಉಳಿದ ಯಾವತ್ತೂ ಸ್ತ್ರೀಯರೂ ಅಗ್ನಿನಾರಾಯಣನನ್ನು ಸ್ಮರಿಸುತ್ತ.

ನಿಂತಲ್ಲಿಯೇ ಮೂರು ಪ್ರದಕ್ಷಿಣೆಗಳನ್ನು ಮಾಡಿ, ಮೊದಲು ತಾವು ಧರಿಸಿದ್ದ ಹೂವಿನ ಮಾಲೆಗಳನ್ನು ಹರಿದು ಅಕ್ಷತೆಗಳನ್ನೂ ಆ ಮಾಲೆಗಳನ್ನೂ ಅಗ್ನಿ ನಾರಾಯಣನಿಗೆ ಅರ್ಪಿಸಿ ಬಳಿಕ ಕ್ರಮವಾಗಿ ತಮ್ಮ ದೇಹಗಳನ್ನು ಆ ಕುಂಡ ದಲ್ಲಿ ಈಡಾಡಿದರು. "ಜಯ! ಮಹಾಕಾಲಿ!!" ಎಂಬ ಅತಿ ಭೀಷಣ ವಾದ ಧ್ವನಿಯು ದಿಕ್ಕುದಿಕ್ಕುಗಳಲ್ಲಿ ಮಾರ್ದನಿಗೊಂಡಿತು!

ಅದೇ ಕಾಲಕ್ಕೆ ಅಗ್ನಿಕುಂಡದ ಇನ್ನೊಂದು ದಿಕ್ಕಿನಲ್ಲಿ ಸಾವಿರಾರುಜನ ರಜಪೂತ ಯೋಧರು ಕೇಶರವರ್ಣದ ಬಟ್ಟೆಗಳನ್ನು ಧರಿಸಿಕೊಂಡು ಸಶಸ್ತ್ರ ರಾಗಿ ಅಗ್ನಿನಾರಾಯಣನನ್ನು ಅಭಿವಂದಿಸಿ ದುರ್ಗದ ಮಹಾದ್ವಾರದ ಕಡೆಗೆ ಭರದಿಂದ ನಡೆದರು.

ಪರಕ್ಷಣದಲ್ಲಿಯೇ ದುರ್ಗದ ಮಹಾದ್ವಾರವು ತೆರೆಯಲ್ಪಟ್ಟಿತು. ಕಟ್ಟಿ ನಿಂತಿದ್ದ ನದಿಯ ನೀರು ಕಟ್ಟು ಒಡೆದ ಕೂಡಲೆ ಮಹಾವೇಗದಿಂದ ಧಾವಿಸು ವಂತೆ ದುರ್ಗದ ಮಹಾದ್ವಾರವು ತೆರೆದ ಕೂಡಲೆ ಉನ್ಮಾದಿತರಾದ ರಜಪೂತ ಸೈನಿಕರು ಪ್ರವಾಹಗೊಂಡು ಶತ್ರುಸೇನೆಯೆಂಬ ಸಾಗರವನ್ನು ಪ್ರವೇಶಿಸಿದರು. ಪಠಾಣ ಸೇನಾಸಾಗರದ ನೀಲಜಲದಲ್ಲಿ ರಜಪೂತ ಸೈನಿಕಪ್ರವಾಹದ ಕೇಶರ ವರ್ಣವು ಎಷ್ಟೋ ದೂರದವರೆಗೆ ಒಡೆದು ಕಾಣಿಸುತ್ತಿತ್ತು. ಎಲ್ಲರ ಮುಂಗಡೆಗೆ ರಾಣಾ ಲಕ್ಷ್ಮಣಸಿಂಗನೂ ಭೀಮಸಿಂಹನೂ ಸೇನಾಪತಿ ಬಾದಲನೂ ಇದ್ದರು.

ಬರಬರುತ್ತ ಕೇಸರೀ ಬಣ್ಣದ ಪ್ರವಾಹವು ಅದೃಶ್ಯವಾಗುತ್ತ ಬಂದಿತು. ಒಬ್ಬ ರಜಪೂತನೂ ರಣರಂಗದಿಂದ ತಿರುಗಿ ಬರಲಿಲ್ಲ; ಬದುಕಿ ಉಳಿಯಲಿಲ್ಲ!

ಯುದ್ಧವು ಮುಗಿಯಿತು. ಬಹು ದಿವಸಗಳವರೆಗೆ ಕಷ್ಟಪಟ್ಟು ಅಲ್ಲಾ ವುದ್ದೀನನು ಜಯವನ್ನು ಪಡೆದನು. ಅವನ ಬಹು ದಿವಸಗಳ ಬಯಕೆ ಇಂದು ಪೂರ್ಣವಾದಂತಾಯಿತು. ಅವನು ಆನಂದದಿಂದ ಉನ್ಮತ್ತನಾಗಿಹೋದನು.

ಅಲ್ಲಾವುದ್ದೀನನು ಒಳ್ಳೆಯ ವೈಭವದಿಂದ ದುರ್ಗವನ್ನು ಪ್ರವೇಶಿಸಿದನು. ದುರ್ಗವನ್ನು ಏರಿಬರುವಾಗ ಅವನು ತನ್ನ ಮನಸ್ಸಿನಲ್ಲಿ ಹಲವು ಬಯಕೆಗಳನ್ನು ಭಾವಿಸಿಕೊಳ್ಳುತ್ತಲಿದ್ದನು. ಪದ್ಮಿನಿಯ ಕೂದಲನ್ನು ಕೂಡ ತಾನು ನೋಡ ಲಾರನೆಂಬ ವಿಚಾರವು ಅವನಿಗೇನು ಗೊತ್ತು? ಅವನು ಇನ್ನು ಪದ್ಮಿನಿಯು ಸುಲಭವಾಗಿ ತನ್ನವಳಾಗುವಳೆಂದು ನಂಬಿ ನೆಟ್ಟಗೆ ಪದ್ಮಿನಿಯ ಅರಮನೆಯ ಕಡೆಗೆ ನಡೆದನು. ದಾರಿಯಲ್ಲಿ ಎರಡೂ ಮಗ್ಗುಲಿನ ಮನೆಗಳೆಲ್ಲ ಬರಿಯವಾಗಿ

ದ್ದುವು. ಬಾಗಿಲಲ್ಲಿ ಅರಿಸಿನ ಕುಂಕುಮಗಳೂ ಅಕ್ಷತೆಗಳೂ ಹರಿದ ಹೂವಿನ ಮಾಲೆಗಳೂ ಸೂರೆಯಾಗಿ ಬಿದ್ದಿದ್ದುವು. ಅಲ್ಲಾವುದ್ದೀನನ ಅಂತರಂಗವು ಹೊಯಿದಾಡುತ್ತಿತ್ತು. ಆ ನಿರ್ಮಾನುಷವಾದ ದೊಡ್ಡ ದೊಡ್ಡ ಮಂದಿರ ಗಳನ್ನು ನೋಡಿ ಅವನ ಮನಸ್ಸಿನಲ್ಲಿ ಒಂದು ಪ್ರಕಾರದ ಭೀತಿಯುಂಟಾ ಯಿತು. ಅವನಿಗೆ ಆ ಮಂದಿರಗಳು ತನ್ನನ್ನು ನೋಡಿ ಹಾಸ್ಯಮಾಡುವಂತೆ ತೋರಿದುವು.

ಅಲ್ಲಾವುದ್ದೀನನು ಪದ್ಮಿನಿಯ ಅರಮನೆಯ ಒಳಗೆ ಬಂದನು. ಕೂಡಲೆ ಅವನ ಮನಸ್ಸಿನಲ್ಲಿ ಹೇಗೆ ಹೇಗೋ ಆಗುತ್ತಿತ್ತು. ಅವನಿಗೆ ಆ ಮಂದಿರವನ್ನು ನೋಡಿ ಆಶ್ಚರ್ಯವೆನಿಸಿತು. ಒಮ್ಮೆಲೆ ಹಿಂದೆ ತಾನು ಪದ್ಮಿನಿಯ ಪ್ರತಿಬಿಂಬ ವನ್ನು ನೋಡಲು ಹೋಗಿದ್ದ ದಿವಸವು ಅವನ ನೆನಪಿಗೆ ಬಂದಿತು. ಅಂದಿನ ಆ ಆನಂದೋತ್ಸವಗಳೂ ಜನದಟ್ಟಣೆಯೂ ಅವನ ಕಣ್ಣಿನ ಮುಂದೆ ಕಟ್ಟಿದಂತಾ ದುವು. ಅವನು ಅಂದಿನ ಆ ಸ್ಥಿತಿಯನ್ನೂ ಇಂದಿನ ಈ ನಿರ್ಮಾನುಷ ಸ್ಥಿತಿಯನ್ನೂ ಮನಸ್ಸಿನಲ್ಲಿ ಹೋಲಿಸತೊಡಗಿದನು. ಅವನ ಮನಸ್ಸು ಭೀತಿ ಯಿಂದ ಚಂಚಲವಾಯಿತು. ಪದ್ಮಿನಿಯ ಮಂದಿರದ ಬಾಗಿಲುಗಳೂ ಕಿಟಕಿ ಗಳೂ ತೆರೆದಿವೆ; ಬಾಗಿಲಲ್ಲಿ ದ್ವಾರಪಾಲಕರಿಲ್ಲ; ಒಳಗೆ ಪರಿಚಾರಿಕೆಯರಿಲ್ಲ. ಮನೆಯಲ್ಲೆಲ್ಲ ಅರಿಸಿನ ಕುಂಕುಮಗಳೂ ಅಕ್ಷತೆಗಳೂ ಹರಿದ ಹೂಮಾಲೆಗಳೂ ಹರಡಿಕೊಂಡಿವೆ.

ಅಲ್ಲಾವುದ್ದೀನನು ಇವನ್ನೆಲ್ಲ ನೋಡುತ್ತ ಸಾವಕಾಶವಾಗಿ ಒಳಗೆ ಹೋದನು. ಅವನ ಕೈಕಾಲುಗಳು ನಡುಗತೊಡಗಿದುವು. ಹೃದಯವು ಅಸ್ಥಿರ ವಾಗಿಹೋಯಿತು. ಇದೇನು ? ಎಲ್ಲಿಯೂ ಏನೂ ಕಾಣಿಸಲೊಲ್ಲದು ! ಮನು ಷ್ಯರೇ ಇಲ್ಲವಲ್ಲ ! ಅಲ್ಲಾವುದ್ದೀನನು:—'' ಪದ್ಮಿನೀ ! " ಎಂದು ಕರೆದನು. ಪದ್ಮಿನಿಯು ಎಲ್ಲಿರುವಳು ? ಎಡಬಲದ ಕೋಣೆಗಳೊಳಗಿಂದ ವಿಕಟವಾದ ಸ್ವರದಿಂದ—'' ಪದ್ಮಿನೀ ! ಪದ್ಮಿನೀ ! '' ಎಂದು ಪ್ರತಿಧ್ವನಿಯಾಯಿತು.

ಈಗ ಅಲ್ಲಾವುದ್ದೀನನ ಎದೆಯೊಡೆದು ನೀರಾಯಿತು. ದಿಲ್ಲಿಯ ಬಾದಷ ಹನು ಆ ಹಾಳುಮನೆಯ ಧೂಳಿಧೂಸರಿತವಾದ ನೆಲದ ಮೇಲೆ, ತಲೆಯ ಮೇಲೆ ಕೈಯಿಟ್ಟುಕೊಂಡು ಕುಳಿತುಬಿಟ್ಟನು !

ಹಠಾತ್ತಾಗಿ ಅಲ್ಲಾವುದ್ದೀನನು ಎದ್ದುನಿಂತು ವಿಸ್ಮಿತನೇತ್ರದಿಂದ ಕಿವಿಗೊಟ್ಟು ಕೇಳತೊಡಗಿದನು. "ಇಲ್ಲ. ಪದ್ಮಿನಿಯು ಇಲ್ಲಿ ಇಲ್ಲ." ಎಂಬ ಮಾತುಗಳು ಅವನಿಗೆ ಸ್ಪಷ್ಟವಾಗಿ ಕೇಳಿಸಿದುವು. ಅವುಗಳನ್ನು ಯಾರೋ ದೂರದಿಂದ ಒದರಿ ಹೇಳುತ್ತಿದ್ದರು. "ಬನ್ನಿರಿ, ಬನ್ನಿರಿ; ಮಹಾರಾಜರೇ, ಬನ್ನಿರಿ; ಕುಳಿತುಕೊಳ್ಳಿರಿ; ಅಲ್ಲಿ ಮಂಚವಿದೆ. ನೆಲದ ಮೇಲೆ ಯಾಕೆ ಕುಳಿತಿರಿ?" ಎಂದು ಆ ವ್ಯಕ್ತಿಯು ಪುನಃ ಹೇಳಿತು.

ಅಲ್ಲಾವುದ್ದೀನನು ಸುತ್ತಲೂ ನೋಡಿದನು. ಮನುಷ್ಯರಿಲ್ಲ; ಎಲ್ಲಿಯೂ ಯಾರೂ ಕಾಣಿಸಲೊಲ್ಲರು. ಅವನು ಭೀತಿಯಿಂದಲೂ ವಿಸ್ಮಯದಿಂದಲೂ ಚಕಿತನಾಗಿಹೋದನು. ಅಲ್ಲಾವುದ್ದೀನನ ಸಂಗಡ ಬಂದಿದ್ದ ದೂತರು ಮನೆಯ ಎಲ್ಲ ಭಾಗಗಳನ್ನು ಶೋಧಿಸಿ ನೋಡಿದರು. ಎಲ್ಲಿಯೂ ಮನುಷ್ಯರಿಲ್ಲ. ಪುನಃ ಶಬ್ದವಾಯಿತು:—"ಮಹಾರಾಜರೇ, ಆಸನದಲ್ಲಿ ಕುಳಿತುಕೊಳ್ಳಿರಿ; ಆಸನದಲ್ಲಿ ಕುಳಿತುಕೊಳ್ಳಿರಿ."

ಆ ಮಾತುಗಳನ್ನು ಮನುಷ್ಯರು ಆಡಿದ್ದಿಲ್ಲ. ಅಲ್ಲಾವುದ್ದೀನನ ಇದಿರಿಗೆ ಸೂರಿನ ಮೇಲೆ ಕುಳಿತಿದ್ದ ಒಂದು 'ಮಯನಾ' ಪಕ್ಷಿಯು ಈ ಮಾತುಗಳನ್ನು ಹೇಳುತ್ತಿತ್ತು! ಅಲ್ಲಾವುದ್ದೀನನಿಗೆ ತನ್ನನ್ನು ನೋಡಿ ಜಗತ್ತೇ ಹಾಸ್ಯ ಮಾಡುವಂತೆ ಭಾಸವಾಯಿತು. ಆತನು ಆ ಪಕ್ಷಿಯನ್ನು "ಪದ್ಮಿನಿಯು ಎಲ್ಲಿಗೆ ಹೋದಳು?" ಎಂದು ಕೇಳಿದನು. ಪಕ್ಷಿಯು ಪುನಃ "ಮಹಾರಾಜರೇ, ಕುಳಿತುಕೊಳ್ಳಿರಿ. ಆಸನದ ಮೇಲೆ ಕುಳಿತುಕೊಳ್ಳಿರಿ." ಎಂದಿತು. ಬಾದಷಹನಿಗೆ ಮಹಾ ಕೋಪವುಂಟಾಯಿತು. ಆದರೆ ಮಾಡುವುದೇನು? ಅವನು ಕೋಪಸಂತಾಪಗಳಿಂದ ಉರಿದುಹೋದನು. ಅವನು ತನ್ನ ಅನುಚರರಿಗೆ—"ಊರೊಳಗಿನ ಒಂದೊಂದು ಮನೆಯನ್ನೂ ಹುಡುಕಿ ಪದ್ಮಿನಿಯನ್ನು ಹಿಡಿದುಕೊಂಡು ಬನ್ನಿರಿ" ಎಂದು ಆಜ್ಞಾಪಿಸಿದನು.

ಪಠಾಣ ಸೈನಿಕರು ನಾಲ್ಕು ಕಡೆಗೂ ಭರದಿಂದ ನಡೆದರು. ದುರ್ಗದಲ್ಲಿ ಬಲವಳಿದ ಮುದುಕರೂ ಹಸುಳರೂ ಮಾತ್ರ ಅಲ್ಲೊಬ್ಬರು ಇಲ್ಲೊಬ್ಬರಂತೆ ಕಂಡುಬರುತ್ತಿದ್ದರು. ಪಠಾಣರು ಅವರನ್ನು ನಿಷ್ಕರುಣರಾಗಿ ಕಡಿದು ಬಿಸುಟರು. ಆದರೆ ಪದ್ಮಿನಿ ಮಾತ್ರ ಎಲ್ಲಿಯೂ ದೊರೆಯಲಿಲ್ಲ. ಪದ್ಮಿನಿ

ದೊರೆಯುವುದು ಹಾಗಿರಲಿ, ಒಬ್ಬ ಮಧ್ಯಮ ವಯಸ್ಸಿನ ಸ್ತ್ರೀಯಾಗಲಿ ಪುರುಷನಾಗಲಿ ಅವರ ಕಣ್ಣಿಗೆ ಬೀಳಲಿಲ್ಲ. ಸೈನಿಕರೆಲ್ಲರೂ ಹಾಗೆಯೇ ತಿರುಗಿ ಬಂದು ಒಡೆಯನ ಬಳಿಯಲ್ಲಿ ಸುಮ್ಮನೆ ನಿಂತುಕೊಂಡರು.

ಬಳಿಕ ಅಲ್ಲಾವುದ್ದೀನನು ತಾನೇ ಪದ್ಮಿನಿಯನ್ನು ಹುಡುಕಲು ಹೊರಟನು. ಒಂದೊಂದು ಮನೆಯನ್ನೂ ಉದ್ಯಾನವನ್ನೂ ಮಂದಿರವನ್ನೂ ಮಠವನ್ನೂ ಹುಡುಕಿ ನೋಡಿದನು. ಎಲ್ಲಿಯೂ ಸಿಕ್ಕಲಿಲ್ಲ. ಆಗ ಅವನು ಹತಾಶನಾಗಿ ಒಂದು ಸರೋವರದ ಬಳಿಗೆ ಬಂದು ಅದರ ಪಾವಟಿಗೆಯಲ್ಲಿ ತಲೆಯ ಮೇಲೆ ಕೈಯಿಟ್ಟುಕೊಂಡು ಕುಳಿತುಬಿಟ್ಟನು. ಆ ಸರೋವರದ ಒಂದು ಭಾಗದಲ್ಲಿ ಶಿಲೆಯಿಂದ ಮಾಡಿದ ಗೋಮುಖಾಕೃತಿಯ ಬಾಯೊಳಗಿಂದ ನೀರು ಸುರಿಯುತ್ತಿತ್ತು. ದೂರದಲ್ಲಿ ಪರ್ವತದ ಒಂದು ಭಾಗದಲ್ಲಿ ಮಹಾಧೂಮರಾಶಿಯು ಎದ್ದು ಆಕಾಶವನ್ನು ಮುಸುಕುತ್ತಿತ್ತು. ಅತ್ತಕಡೆಯ ಗಾಳಿಯು ಬಂದ ಕೂಡಲೆ ಒಂದು ಬಗೆಯ ಸುವಾಸನೆ ಬರುತ್ತಿತ್ತು. ಅಲ್ಲಾವುದ್ದೀನನು ಆ ಕಡೆಗೆ ಕಣ್ಣಿಟ್ಟು ನೋಡಿದನು. 'ಅದೇನು' ಎಂದು ಅವನು ಉದ್ವೇಗದಿಂದ ಆ ಕಡೆಗೆ ಕೈತೋರಿಸಿ ಕೇಳಿದನು.

ಪರಕ್ಷಣದಲ್ಲಿಯೇ ನೂರಾರುಜನ ಪಠಾಣ ಸೈನಿಕರು ಆ ಕಡೆಗೆ ಮಹಾವೇಗದಿಂದ ನಡೆದರು. ಅಲ್ಲಾವುದ್ದೀನನೂ ಅವರ ಹಿಂದೆ ನಡೆದನು. ಹೋಗಿ ನೋಡುತ್ತಾರೆ. ಮಹಾ ಭಯಂಕರವಾದ ನೋಟ!

ಆಳವಾದದ್ದೊಂದು ಪರ್ವತ ಕಂದರ; ಅದರಲ್ಲಿಯ ಬಹು ವಿಶಾಲವಾದ ಗಹ್ವರದ ಮುಖದಿಂದ ಚಂದನಾಗರುಗಳೇ ಮೊದಲಾದ ಸುಗಂಧದ್ರವ್ಯಗಳನ್ನು ಸುಡುವ ವಾಸನೆ ನುಗ್ಗಿಬರುವುದು. ಧಗಧಗಿಸಿ ಉರಿಯುವ ಜ್ವಾಲೆಯು ಮೃತ್ಯುವಿನ ನಾಲಗೆಯಂತೆ ಆಕಾಶದ ಕಡೆಗೆ ಸುಳಿಸುಳಿದು ಏಳುವುದು. ಅಲ್ಲಲ್ಲಿಗೆ ಧೂಮರಾಶಿಯು ಆ ಜ್ವಾಲೆಯನ್ನು ಮುಸುಕಿಕೊಂಡಿದೆ. ಗಹ್ವರದ ಬಾಗಿಲಲ್ಲಿ ಅರಿಸಿನ ಕುಂಕುಮಗಳೂ ಅಕ್ಷತೆಗಳೂ ಹರಿದು ಚೆಲ್ಲಿದ ಹೂವಿನ ಮಾಲೆಗಳೂ ಗುಂಪುಗುಂಪಾಗಿ ಬಿದ್ದಿವೆ.

ಇವನ್ನೆಲ್ಲ ನೋಡಿ ಅಲ್ಲಾವುದ್ದೀನನ ಅಂತರಂಗಕ್ಕೆ ಕೆಂಡದಂತೆ ಕೆಂಪಗಾದ ಕಬ್ಬಿಣದ ಸಲಾಕೆಯಿಂದ ಬರೆ ಇಟ್ಟಂತಾಯಿತು. ಅವನು ದೊಪ್ಪನೆ ನೆಲದ ಮೇಲೆ ಬಿದ್ದುಬಿಟ್ಟನು. ಮತ್ತೊಂದು ಕ್ಷಣದ ತರುವಾಯ ಎದ್ದು ಆ

ಅಗ್ನಿಕುಂಡದ ಕಡೆಗೆ ಉನ್ಮತ್ತನ ಹಾಗೆ ಧಾವಿಸಿಹೋದನು. ಅವನ ಸರದಾರನೊಬ್ಬನು ಅವನನ್ನು ತಡೆದುನಿಲ್ಲಿಸಿದನು. ಆಗ ಬಾದಷಹನು "ಬೆಂಕಿಯನ್ನು ಆರಿಸಿ ಪದ್ಮಿನಿಯನ್ನು ಬದುಕಿಸಿದವರಿಗೆ ಲಕ್ಷ ಲಕ್ಷ ಮೊಹರುಗಳ ಬಹುಮಾನ" ಎಂದು ಅಂಗಲಾಚಿ ಹೇಳಿದನು.

ಹಾಯ್! ಪದ್ಮಿನಿ ಈಗೆಲ್ಲಿರುವಳು? ಅವಳು ಸ್ವರ್ಗದ ಮಾರ್ಗದಲ್ಲಿದ್ದುಕೊಂಡು ಕ್ರೂರ ಪಠಾಣನ ಮೂರ್ಖತೆಯನ್ನು ನೋಡಿ ಹಾಸ್ಯ ಮಾಡುತ್ತಲಿರುವಳು. ಅಲ್ಲಾವುದ್ದೀನನ ಲಕ್ಷ ಲಕ್ಷ ಮೊಹರುಗಳೂ ಲಕ್ಷ ಲಕ್ಷ ಸೈನಿಕರೂ ಅವಳ ಒಂದು ಕೂದಲಿನಷ್ಟು ಕೂಡ ಬೆಲೆಬಾಳಲಿಲ್ಲ. ಆ ಸತೀಶಿರೋಮಣಿಯು ಪಠಾಣನ ಸಿಂಹಾಸನಾರ್ಧಕ್ಕೆ ಪ್ರತಿಯಾಗಿ ತನ್ನ ಒಂದು ಕೂದಲನ್ನಾದರೂ ಕೊಡಲು ಸಮ್ಮತಿಸಲಿಲ್ಲ. ಸತ್ವಶಾಲಿಗಳಾದವರ ರೀತಿಯು ಹೀಗೆಯೇ.

ಈ ಮೂರು ದಿನಗಳಲ್ಲಿ ಪಠಾಣರು ನಿರ್ಜನವಾದ ಆ ಹಾಳು ನಗರದಲ್ಲಿ ಸಂಚರಿಸಿ ಅಲ್ಲಿಯ ಯಾವತ್ತೂ ಸಂಪತ್ತನ್ನು ಶೇಖರಿಸಿಕೊಂಡರು. ರಜಪೂತರು ಮೊದಲೇ ದೊಡ್ಡ ದೊಡ್ಡ ಕಟ್ಟಡಗಳನ್ನೂ ಉಪವನಗಳನ್ನೂ ಅರ್ಧರ್ಧ ಹಾಳು ಮಾಡಿಬಿಟ್ಟಿದ್ದರು. ಉಳಿದದ್ದನ್ನು ಪಠಾಣರು ನಾಶಮಾಡಿದರು. ಅಂತೂ ಎರಡು ದಿನಗಳ ಹಿಂದೆ ಮಹಾವೈಭವದಿಂದ ಮೆರೆಯುತ್ತಿದ್ದ ನಗರವು ಈಗ ಶ್ಮಶಾನವಾಗಿಹೋಯಿತು! ವಿಧಿಯ ಮಹಿಮೆ ಅಗಾಧವಾದದ್ದು!

ಸೈ! ಇಲ್ಲಿಗೆ ಪತಿವ್ರತಾಗ್ರೇಸರಳಾದ ಪದ್ಮಿನೀ ರಾಣಿಯ ಚರಿತ್ರವು ಮುಗಿಯಿತು. ಪದ್ಮಿನೀದೇವಿಯ ಸತಿಯ ಧರ್ಮದ ಮುಂದೆ ದಿಲ್ಲಿಯ ಪಠಾಣ ಬಾದಷಹನ ಸಾಮ್ರಾಜ್ಯವೂ ಅತುಲವಾದ ಸುಖಸಂಪತ್ತುಗಳೂ ಕೇವಲ ಕಸದ ಕಡ್ಡಿಗಳೆಂಬುದನ್ನು ತನ್ನ ಹಿಂದು ಭಗಿನಿಯರಿಗೆ ಇಂದಿಗೂ ಸಾರಿ ಉಪದೇಶಿಸುತ್ತಲಿರುವಳು.

# ೬. ಮದಿನೆಯಲ್ಲಿ ಮುಹಮ್ಮದ ಪೈಗಂಬರರು.

ಪೈಗಂಬರರು ಶತ್ರುಗಳ ಬಾಧೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಅಬುಬಕರನ ಮನೆಗೆ ಬಂದು ಆತನೊಡನೆ ಅದೇ ರಾತ್ರಿ ಮದಿನೆಗೆ ಹೊರಟರು. ಮುಹಮ್ಮದ ಪೈಗಂಬರರಿಂದ ನಡೆದು ಬಂದ ಹಿಜರೀ ಶಕವು ಈವೊತ್ತಿನಿಂದಲೇ ಆರಂಭವಾಗುವುದು. ಈ ಸ್ಥಳಾಂತರಕ್ಕೆ ಹಿಜರತ್ ಎಂದು ಹೆಸರು. ಅದರಿಂದ ಆ ಶಕವು ಹಿಜರಿ ಶಕವೆಂದೆನಿಸಿದೆ. ಅಬುಬಕರನು ಶತ್ರುಗಳ ಮೊದಲನೆಯ ಏಟು ಪೈಗಂಬರರಿಗೆ ತಾಗಬಾರದೆಂದು ದಾರಿಯಲ್ಲಿ ಯಾವಾಗಲೂ ತಾನು ಮುಂದೆ ನಡೆಯುತ್ತ ಸಾಗಿದನು. ಒಂದೆಡೆಯಲ್ಲಿ ಪೈಗಂಬರರ ಕಾಲಿಗೆ ಕಲ್ಲು ತಗಲಿ ಅವರು ನಡೆಯದಂತಾಗಲು ಅಬುಬಕರನು ಅವರನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ನಡೆದನು. ಅವರು ದಾರಿಯಲ್ಲಿ ಸೌರ್ ಎಂಬ ಗಿರಿ ಗುಹೆಯಲ್ಲಿ ಅಡಗಿಕೊಂಡು ಮೂರು ದಿನಗಳನ್ನು ಕಳೆದರು.

ಇತ್ತ ವೈರಿಗಳು, ಹಜರತ್‌ಮುಹಮ್ಮದರು ತಮ್ಮ ಕೈಯಿಂದ ತಪ್ಪಿಸಿಕೊಂಡು ಹೋದುದನ್ನು ಕಂಡು ಈದ ಹುಲಿಯಂತೆ ಕಂಗೆಟ್ಟು ಅವರನ್ನು ಹುಡುಕುತ್ತ ಸೌರ್ ಗುಹೆಯವರೆಗೆ ಬಂದರು. ಹಜರತ್ ಮುಹಮ್ಮದರಿಗೂ ಅಬುಬಕರನಿಗೂ ಅವರ ಕಾಲಸಪ್ಪುಳವು ಕೇಳಬರಲು ಅಬುಬಕರನು ಗಾಬರಿಯಾಗಿ ನಾವು ಇಬ್ಬರು, ಶತ್ರುಗಳು ಬಹು ಜನರು; ಕ್ಷೇಮವಿಲ್ಲ, ಎಂದನು. ಅದಕ್ಕೆ ಪೈಗಂಬರರು ನಾವು ಇಬ್ಬರಲ್ಲ, ಮೂವರು, ಈಶ್ವರನು ನಮ್ಮ ಬಳಿಯಲ್ಲಿ ಇರುವನು, ಆತನು ನಮ್ಮನ್ನು ಕಾಪಾಡುವನು; ಎಂದರು. ಅಬುಬಕರನೂ ಹ. ಮುಹಮ್ಮದರೂ ಗುಹೆಯಲ್ಲಿ ಸೇರಿದ ಸ್ವಲ್ಪ ಹೊತ್ತಿನಲ್ಲಿಯೇ ಒಂದು ಜೇಡವು ಗವಿಯ ಬಾಯಿಗೆ ಬಲೆಯನ್ನು ಕಟ್ಟಿದ್ದಿತು; ಒಂದು ಪಾರಿವಾಳವು ಅಲ್ಲಿಯೇ ತತ್ತಿಗಳನ್ನಿಟ್ಟಿದ್ದಿತು. ಗವಿಯ ಬಾಯಿಗೆ ಜೇಡನ ಬಲೆಯನ್ನೂ ಪಾರಿವಾಳದ ತತ್ತಿಗಳನ್ನೂ ನೋಡಿ ಒಳಗೆ ಮನುಷ್ಯಪ್ರವೇಶ

ವಾಗಿರಲಾರದೆಂದು ಬಗೆದು ಶತ್ರುಗಳು ಒಳಹೊಕ್ಕು ನೋಡದೆ ಹೊರಟು ಹೋದರು. ಪೈಗಂಬರರೂ ಅಬುಬಕರನೂ ವಿಪತ್ತಿನಿಂದ ಪಾರಾದರು. ನಾಲ್ಕನೆಯ ದಿವಸ ರಾತ್ರಿ ಅವರು ಮದಿನೆಯ ಬಳಿಯ ಕುಬಾ ಎಂಬಲ್ಲಿಗೆ ಬಂದು ಅಲ್ಲಿ ನಾಲ್ಕು ದಿವಸ ಇದ್ದು ರಬ್ಬಿಯುಲ್ ಅವಲ್ ತಿಂಗಳ ಹದಿನಾರ ನೆಯ ದಿವಸ ( ಶುಕ್ರವಾರ ) ಮದಿನಾಪ್ರವೇಶ ಮಾಡಿದರು.

ಮದಿನಾಪ್ರವೇಶಸಮಾರಂಭಕಾಲದಲ್ಲಿ ಹಜರತ್ ಮುಹಮ್ಮದರನ್ನು ಕುರಿತು ಮದಿನೆಯ ಬಹುಜನ ದೊಡ್ಡ ಮನುಷ್ಯರು ತಾವು ನಮ್ಮ ಮನೆ ಯಲ್ಲಿಳಿದುಕೊಳ್ಳಿರೆಂದು ಬಿನ್ನಯಿಸಿದರು. ಆದರೆ ಪೈಗಂಬರರು ಯಾರ ಮನಸ್ಸನ್ನೂ ನೋಯಿಸಲಾರದೆ ' ನಾನು ಹತ್ತಿದ ಒಂಟೆ ಯಾರ ಮನೆಯ ಮುಂದೆ ನಿಲ್ಲುವುದೋ ಅವರ ಮನೆಯಲ್ಲಿ ಇಳಿಯುವೆನು ' ಎಂದರು. ಒಂಟೆ ಯಾರ ಮನೆಯ ಮುಂದೆಯೂ ನಿಲ್ಲದೆ ಅಬೂ ಅಯ್ಯೂಬ ಅನ್ಸಾರಿ ಎಂಬ ವರ ಮನೆಯ ಹತ್ತಿರ ಒಂದು ಬಯಲಲ್ಲಿ * ನಿಂತಿತು. ಆಗ ಪೈಗಂಬರರು ಅಲ್ಲಿಯೇ ಇಳಿದುಕೊಂಡು ಎಲ್ಲರನ್ನು ಸಂತೈಸಿ ಕಳುಹಿದರು. ಈ ಚಮತ್ಕಾರ ವಾದ ಪ್ರಸಂಗದಿಂದ ಎಲ್ಲರೂ ಸಂತುಷ್ಟರಾದರು.

ಪೈಗಂಬರರ ಶುಭಾಗಮನಕಾಲದಲ್ಲಿ ಮದಿನೆಯಲ್ಲಿ ಎಲ್ಲರೂ ಆನಂದದಿಂದ ಜಯಜಯಕಾರ ಮಾಡಿದರು; ಮತ್ತು ಅವರಿಗೆ ತಕ್ಕ ಸತ್ಕಾರ ವನ್ನು ಮಾಡಿದರು. ಇಲ್ಲಿ ಪೈಗಂಬರರ ಜೀವನೇತಿಹಾಸದ ಹೊಸ ಅಧ್ಯಾ ಯದ ಆರಂಭವಾಯಿತು. ಪೈಗಂಬರರು ಮಕ್ಕೆಯಲ್ಲಿರುವಾಗ ತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳುತ್ತಿದ್ದರು. ಮತ್ತು ಒಂದೊಂದು ದಿವಸ ಅನ್ನವಿಲ್ಲದೆ ಉಪವಾಸವಿರುತ್ತಿದ್ದರು ಅವರ ಜೀವನದ ಹೊಸ ಅಧ್ಯಾಯ ದಲ್ಲಿಯೂ ಈ ವಿಷಯದಲ್ಲಿ ಸ್ಥಿತ್ಯಂತರವಾಗಲಿಲ್ಲವಾದರೂ ಅವರು ಕಾಲ ಕ್ರಮದಿಂದ ಪೃಥ್ವಿಯೊಳಗಿನ ಅತಿ ಬಲಿಷ್ಠರಾದ ಚಕ್ರವರ್ತಿಗಳಿಗಿಂತ ಹೆಚ್ಚಿಗೆ ಬಲಾಢ್ಯರಾದರು.

---

* ಮುಂದೆ ಪೈಗಂಬರರು ಇದೇ ಸ್ಥಳದಲ್ಲಿ ಒಂದು ಮಸೀದೆಯನ್ನು ಕಟ್ಟಿಸಿ ಅದಕ್ಕೆ " ಮಸಜಿದೆ ಕುಬಾ " ಎಂದು ಹೆಸರಿಟ್ಟರು. ಇದೇ ಇಸ್ಲಾಮ್ ಧರ್ಮದ ಆರಂಭದ ಮಸೀದೆ. ಈಗಲೂ ಇದೆ.

K. 1859

ಮದಿನೆಗೆ ಬಂದ ಬಳಿಕ ಪೈಗಂಬರರು, ಅಲ್ಲಿ ಎಲ್ಲರೂ ಇಸ್ಲಾಮ್ ಧರ್ಮಾನುರಾಗಿಗಳಾಗಿರುವುದನ್ನು ಕಂಡು ಅವರ ಧರ್ಮಚರ್ಚೆಯ ಅನುಕೂಲತೆಗೋಸ್ಕರ ಪ್ರಯತ್ನ ಮಾಡತೊಡಗಿದರು. ಮೊದಲು ಅದ್ವಿತೀಯನೂ ನಿರಾಕಾರನೂ ಆದ ಪರಮೇಶ್ವರನ ಉಪಾಸನೆಗೋಸ್ಕರ ಒಂದು ಮಂದಿರವನ್ನೂ, ಮುಸಲ್ಮಾನರಾದುದರಿಂದ ಮನೆಯಿಂದ ಹೊರಗೆ ಹಾಕಿಸಿಕೊಂಡ ಜನರು ಇರುವುದಕ್ಕೆ ಒಂದು ಮನೆಯನ್ನೂ ಕಟ್ಟಿಸಿದರು. ಈ ಕಟ್ಟುವ ಕೆಲಸದಲ್ಲಿ ತಮ್ಮ ಕೈಮುಟ್ಟಿ ಸಹಾಯ ಮಾಡಿದರು. ಇಲ್ಲಿ ಪೈಗಂಬರರು ಕಟ್ಟಿದ ಮಸೀದೆಯು "ಮಸ್‌ಜಿದ್ ಉಲ್ ನಬಿ" ಎಂಬ ಹೆಸರಿನಿಂದ ಈಗಲೂ ಇರುವದು. ಈ ಕಾಲದಲ್ಲಿ ಮದಿನಾ ನಿವಾಸಿಗಳಲ್ಲಿ ಎರಡು ಬಣಗಳಿದ್ದುವು. ಒಂದು ಬಣದವರಿಗೆ ಆವುಸ್ ಎಂದೂ ಇನ್ನೊಂದು ಬಣದವರಿಗೆ ಖಿಜ್‌ರಾಜ್ ಎಂದೂ ಹೆಸರು. ಈ ಎರಡು ಬಣಗಳಲ್ಲಿ ಪರಸ್ಪರ ವೈಮನಸ್ಯವಿದ್ದರೂ ಹೊಸ ಧರ್ಮದ ಪ್ರಕಾಶದಿಂದ ಅವರ ದ್ವೇಷಾಂಧಕಾರವು ತೊಲಗಿಹೋಯಿತು. ಅವರಲ್ಲಿ ಒಕ್ಕಟ್ಟು ಉಂಟಾಯಿತು. ಬಳಿಕ ಅವರ ಒಕ್ಕಟ್ಟನ್ನು ದೃಢಪಡಿಸುವುದಕ್ಕೋಸ್ಕರ ಪೈಗಂಬರರು ಆ ಎರಡೂ ಬಣಗಳಿಗೆ ಕೂಡಿ 'ಅನ್‌ಸಾರ' ಎಂದರೆ ಸಹಾಯಕಾರಿ ಎಂಬ ಹೆಸರನ್ನಿಟ್ಟರು. ಮದಿನಾವಾಸಿಗಳು ಆಪತ್ಕಾಲದಲ್ಲಿ ಸಹಾಯಮಾಡಿದುದರಿಂದ ಅವರನ್ನು ಈ ಗೌರವದ ಹೆಸರಿನಿಂದ ಕರೆದರು. ಮಕ್ಕಾನಿವಾಸಿಗಳಲ್ಲಿ ಹಲವರು ಇಸ್ಲಾಮ್ ಧರ್ಮವನ್ನು ಕಾಪಾಡಿಕೊಳ್ಳುವುದಕ್ಕಾಗಿ ತಮ್ಮ ಪ್ರೀತಿಯ ಜನ್ಮಭೂಮಿಯನ್ನು ತೊರೆದು ಮದಿನೆಗೆ ಬಂದಿದ್ದರು- ಇವರಿಗೆ ಮಹಾಜರೀನ್ ಎಂಬ ಹೆಸರನ್ನಿಟ್ಟರು. ಈ ಮಹಾಜರೀನರಿಗೂ ಅನ್‌ಸಾರರಿಗೂ ಪರಸ್ಪರ ಪ್ರೇಮವುಂಟಾಗಬೇಕೆಂದು ಇವರನ್ನೆಲ್ಲ ಸೇರಿಸಿ ಒಂದು ಧರ್ಮಮಂಡಲವನ್ನು ಸ್ಥಾಪಿಸಿದರು ಈ ಧರ್ಮಮಂಡಲಕ್ಕೆ ಸೇರಿದವರೆಲ್ಲ ಒಬ್ಬರಿಗೊಬ್ಬರು ಅಣ್ಣತಮ್ಮಂದಿರಂತೆ ನಡೆದುಕೊಳ್ಳುತ್ತ ಸುಖದುಃಖಗಳಲ್ಲಿ ನೆರವಾಗುತ್ತ ನಡೆದರು.

ಹೊಸದಾಗಿ ಸ್ಥಾಪಿಸಿದ ಈ ಧರ್ಮಮಂಡಲಕ್ಕೆ ಪೈಗಂಬರರು ಧರ್ಮಬಲವೊಂದನ್ನಲ್ಲದೆ ರಾಜಬಲವನ್ನೂ ನೆರವು ಮಾಡಿದರು. ನಿರಾಕಾರನಾದ ಪರಮೇಶ್ವರನ ಉಪಾಸನೆಯನ್ನು ನೆಲೆಗೊಳಿಸುವುದೂ ಪಾಪದಲ್ಲಿ ಮುಳುಗಿ ಹೋದ ಅರಬ ಸಮಾಜವನ್ನು ಉದ್ಧರಿಸುವುದೂ ಹಲವು ಪಂಗಡಗಳಾಗಿದ್ದ

ಅರಬ ಜನಾಂಗದಲ್ಲಿ ಐಕ್ಯವನ್ನುಂಟುಮಾಡುವುದೂ ಪೈಗಂಬರರ ಜೀವನದ ಉದ್ದೇಶ್ಯಗಳಾಗಿದ್ದುವು. ಈ ಉದ್ದೇಶ್ಯಗಳು ಕೊನೆಗಾಣುವುದಕ್ಕೆ ಧರ್ಮ ಬಲಕ್ಕೆ ರಾಜಬಲವೂ ಬೇಕಾಗಿದ್ದಿತು. ಆದುದರಿಂದ ಅವರು ಈ ಧರ್ಮ ಮಂಡಲಕ್ಕೆ ರಾಜಶಕ್ತಿಯ ನೆರವು ಮಾಡಿ ಒಂದು ಪ್ರಜಾಸತ್ತಾತ್ಮಕರಾಜ್ಯದ ತಳಹದಿಯನ್ನು ಹಾಕಿದರು. ಯಾವದೊಂದು ಸ್ಥಳದ ನಿವಾಸಿಗಳು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೆ ಆ ಸ್ಥಳವು ಈ ಧರ್ಮಮಂಡಲದ ಆಳಿಕೆಗೊಳಗಾಗುವಂತೆ ಕಟ್ಟುಮಾಡಿದರು. ಪೈಗಂಬರರು ತಾವು ಈ ಧರ್ಮಮಂಡಲದ ಅಧ್ಯಕ್ಷರಾದರು.

ಈ ಕಾಲದಲ್ಲಿ ಮದಿನೆಯಲ್ಲಿಯೂ ಅದರ ನೆರೆಹೊರೆಯಲ್ಲಿಯೂ ಯುಹೂದಿಗಳು ಹಲವರು ವಾಸವಾಗಿದ್ದರು. ಪೈಗಂಬರರು ಅವರೊಡನೆ ಒಪ್ಪಂದವನ್ನು ಮಾಡಿಕೊಂಡರು. ಈ ಒಪ್ಪಂದದಿಂದ ಯುಹೂದಿಗಳಿಗೆ ತಮ್ಮ ಧರ್ಮಕರ್ಮಗಳನ್ನು ಮಾಡುತ್ತ ಇರುವಂತೆ ಅನುವು ದೊರೆಯಿತು. ಯುಹುದಿಗಳು ಮುಸಲ್ಮಾನರೊಡನೆ ಯಾವ ತರದ ವಿರೋಧವನ್ನೂ ಮಾಡುವದಿಲ್ಲೆಂದು ಒಪ್ಪಿದ್ದರೂ ಇಸ್ಲಾಮ್ ಧರ್ಮಕ್ಕೂ ಅವರ ಧರ್ಮಕ್ಕೂ ಬಹಳ ಭೇದವಿದ್ದುದರಿಂದ ಅವರು ಪೈಗಂಬರರ ವಿಷಯವಾಗಿ ಮನಸ್ಸಿನಲ್ಲಿ ಆದರವುಳ್ಳವರಾಗಿರಲಿಲ್ಲ. ಪೈಗಂಬರರ ನಡತೆಯು ಉದಾತ್ತವಿದ್ದುದರಿಂದಲೇ ಯುಹುದಿಗಳು ಹೊರಗೆ ಅವರೊಡನೆ ಸರಿಯಾಗಿ ನಡೆದುಕೊಂಡರು. ಆದರೆ ಒಳಗೆ ಅವರ ದ್ವೇಷಾಗ್ನಿ ಪ್ರಜ್ವಲಿಸುತ್ತ ನಡೆಯಿತು.

ಮದಿನಾವಾಸಿಗಳೆಲ್ಲ ಇಸ್ಲಾಮ್‌ಧರ್ಮಕ್ಕೆ ಪೂರ್ಣವಾಗಿ ಅನುಕೂಲರಾಗಿದ್ದುದರಿಂದ ಅದು ಚೆನ್ನಾಗಿ ಬೇರೂರಿತು. ಪೈಗಂಬರರು ಪರಮೋತ್ಸಾಹದಿಂದ ಅರಬದೇಶದಲ್ಲಿ ಏಕೇಶ್ವರ ಮತವನ್ನು ಪ್ರಚಾರಗೊಳಿಸಿದುದರಿಂದ ಎಷ್ಟೋ ಪ್ರದೇಶಗಳ ನರನಾರಿಯರು ಮೂರ್ತಿಪೂಜಕ ಧರ್ಮವನ್ನು ಬಿಟ್ಟು ಏಕೇಶ್ವರಧರ್ಮವನ್ನು ಸ್ವೀಕರಿಸಿ ಮದಿನೆಯ ಧರ್ಮಮಂಡಲದ ನೆಳಲಿಗೆ ಬಂದರು. ಇದರಿಂದ ಪೈಗಂಬರರ ಗೌರವವು ದಿನದಿನಕ್ಕೆ ಬೆಳೆಯತೊಡಗಲು ಕುರೇಶರು ಬಹಳ ರೇಗಿದರು. ಅವರು ಪೈಗಂಬರರ ಕೊಲೆ ಮಾಡಲು ನಿಶ್ಚಯಿಸಿ ಮದಿನೆಯ ಯುಹುದಿಗಳ ಬಳಿಗೆ ದೂತರನ್ನು ಕಳುಹಿ ಒಳಸಂಚು ನಡೆಯಿಸಿದರು. ಇದರಿಂದ ಪೈಗಂಬರರು ತಮ್ಮ ಶಿಷ್ಯರ ಸಂರಕ್ಷ

ಣವು ಹೇಗಾದೀತೆಂಬ ವಿಚಾರವನ್ನು ಮಾಡಬೇಕಾಯಿತು. ಕುರೇಶರ ತೊಂದರೆ ಏನಾದರೂ ಕಡಿಮೆಯಾಗದಿರಲು ಶಸ್ತ್ರಧಾರಣ ಮಾಡಿದ ಹೊರತು ದೇಶದಲ್ಲೆಲ್ಲ ಹಬ್ಬಿದ ವೈರಾಗ್ನಿ ನಂದದೆಂದೂ ಶಾಂತಿ ನೆಲೆಗೊಳ್ಳದೆಂದೂ ಪೈಗಂಬರರು ತಿಳಿದರು. ಆದರೆ ಅವರ ಮನಸ್ಸು ರಕ್ತಪಾತಕ್ಕೆ ಹೇಸುತ್ತಿದ್ದಿತು. ಇದಲ್ಲದೆ ಮುಸಲ್ಮಾನರಿಗೂ ಆಗ ಶಾಂತಿ ಬೇಕಾಗಿದ್ದಿತು. ಏಕೆಂದರೆ, ಮಕ್ಕೆಯಲ್ಲಿರುವಾಗ ಅವರು ಪರಮಾವಧಿ ಪೀಡೆಯನ್ನು ಅನುಭವಿಸಿ ಇಲ್ಲಿಗೆ ಬಂದಿದ್ದರು; ಇಲ್ಲಿಯಾದರೂ ನಾಲ್ಕೊಪ್ಪೊತ್ತು ಶಾಂತಿಸುಖದಲ್ಲಿ ಕಾಲಕಳೆಯಬೇಕೆಂದಿದ್ದರು; ಮತ್ತೆ ನಾನಾವಿಧಕ್ಲೇಶಪೂರ್ಣವಾದ ಯುದ್ಧದಲ್ಲಿ ತೊಡಗುವುದು ಅವರ ಮನಸ್ಸಿನಲ್ಲಿರಲಿಲ್ಲ; ಪೈಗಂಬರರನ್ನೂ ಅವರ ಶಿಷ್ಯರನ್ನೂ ಶತ್ರುಗಳಿಂದ ಕಾಪಾಡುವೆವೆಂದು ಮದಿನಾವಾಸಿಗಳು ವಚನ ಕೊಟ್ಟಿದ್ದರು. ಒಟ್ಟಿಗೆ ಪೈಗಂಬರರ ಸ್ವಭಾವ, ಮುಸಲ್ಮಾನರ ಆಗಿನ ಸ್ಥಿತಿ, ಮದಿನಾವಾಸಿಗಳು ಕೊಟ್ಟ ವಚನ ಎಲ್ಲವೂ ಶಸ್ತ್ರಧಾರಣಕ್ಕೆ ಪ್ರತಿಕೂಲವಾಗಿದ್ದುವು. ಕೊನೆಗೆ ಪೈಗಂಬರರು ರಕ್ತಪಾತವಿಲ್ಲದೆ ಸುರಕ್ಷಿತವಾಗಿರಬೇಕೆಂಬ ವಿಷಯದಲ್ಲಿ ಸಾಧ್ಯವಿದ್ದಮಟ್ಟಿಗೆ ಪ್ರಯತ್ನವನ್ನು ಮಾಡಿದರೂ ಯಾವುದಕ್ಕೂ ಬಗೆಹರಿಯದೆ ತಮ್ಮ ಶಿಷ್ಯರ ಸಂರಕ್ಷಣೆಗೋಸ್ಕರ ಕುರೇಶರ ವಿರುದ್ಧವಾಗಿ ಶಸ್ತ್ರವನ್ನೆತ್ತಲೇಬೇಕಾಯಿತು. ಈ ವಿಷಯದಲ್ಲಿ ಪೈಗಂಬರರು ದೇವರ ಅಪ್ಪಣೆಯನ್ನು ಸಹ ಪಡೆದಿದ್ದರು.

# ೭. ವೇಣೀಸಂಹಾರ-ಕರ್ಣಾಶ್ವತ್ಥಾಮರ ಕಲಹ.

[ ಕುರುಕ್ಷೇತ್ರ ರಣಭೂಮಿ. ಕೌರವ ಸೇನಾಪತಿ ಭೀಷ್ಮನು ಶರಪಂಜರದಲ್ಲಿ. ದ್ವಿತೀಯ ಸೇನಾಪತಿ ದ್ರೋಣಾಚಾರ್ಯನು ತನ್ನ ಮಗ ಅಶ್ವತ್ಥಾಮನು ಮಡಿದನೆಂಬ ಸುಳ್ಳು ಸುದ್ದಿಯನ್ನು ಕೇಳಿ ಸಮರಾಂಗಣದಲ್ಲಿ ಶಸ್ತ್ರತ್ಯಾಗಮಾಡಿ ಕುಳಿತನು. ಆಗ ಪಾಂಡವಪಕ್ಷದ ದ್ರುಪದಪುತ್ರ ಧೃಷ್ಟದ್ಯುಮ್ನನು ದ್ರೋಣನ ಶಿರಶ್ಛೇದ ಮಾಡಿದನು. ]

**ಕೃಪಾಚಾರ್ಯ:**—( ದುಃಖದಿಂದ ಉಸಿರುಹಾಕಿ ) ಕುರುರಾಜನಿಗೂ ಅವನ ತಮ್ಮಂದಿರಿಗೂ ಧಿಕ್ಕಾರವಿರಲಿ! ಧರ್ಮರಾಯನು ಹಾಳಾಗಲಿ! ವ್ಯರ್ಥವಾಗಿ ಶಸ್ತ್ರಗಳನ್ನು ಧರಿಸಿರುವ ಅರಸುಗಳನ್ನೂ ನಮ್ಮನ್ನೂ ಸುಟ್ಟರಾದೀತು! ಆಗ ದ್ರೌಪದೀಕೇಶಗ್ರಹಣವನ್ನೂ ಈಗ ಆಚಾರ್ಯ ಕೇಶಗ್ರಹಣವನ್ನೂ ನಾವೆಲ್ಲ ಚಿತ್ರದ ಗೊಂಬೆಗಳಂತೆ ಸುಮ್ಮನೆ ನೋಡುತ್ತ ನಿಂತೆವಲ್ಲಾ! ಈಗ ವತ್ಸನಾದ ಅಶ್ವತ್ಥಾಮನನ್ನು ಹೇಗೆ ಕಾಣಲಿ! ಅಥವಾ ಹಿಮವತ್ಪರ್ವತದಂತೆ ಸ್ಥಿರನಾದ, ಲೋಕಸ್ಥಿತಿಯನ್ನರಿತ ಅಶ್ವತ್ಥಾಮನು ಅತಿ ದುಃಖಕ್ಕೆಡೆಗೊಡಲಾರನೆಂದು ತಿಳಿಯುತ್ತೇನೆ. ಆದರೂ ತಂದೆಗೆ ಒದಗಿದ ಅಸದೃಶವಾದ ಅಪಮಾನವನ್ನು ಕೇಳಿ ಏನು ಮಾಡುವನೋ ಅರಿಯೆನು. ಅಥವಾ ಸಂಶಯವೇತಕ್ಕೆ? ಒಂದನೆಯ ಕೇಶಗ್ರಹಣಕ್ಕೆ ಇಷ್ಟೊಂದು ಅನರ್ಥವುಂಟಾಗಿದೆ. ಈ ಎರಡನೆಯ ಕೇಶಗ್ರಹಣಕ್ಕೆ ಲೋಕವೆಲ್ಲವೂ ನಿರ್ಜನವಾಗುವುದೇ ನಿಜ. ( ಮುಂದೆ ನೋಡಿ ) ವತ್ಸನು ಇಲ್ಲಿಯೇ ಇರುವನು. ( ಬಳಿಗೆ ಹೋಗಿ ಮೂರ್ಛಿತನಾಗಿರುವುದನ್ನು ಕಂಡು ಆತುರಗೊಂಡು ) ಮಗುವೇ, ಸೈರಿಸು ಸೈರಿಸು.

**ಅಶ್ವತ್ಥಾಮ:**—(ಎಚ್ಚರಗೊಂಡು ಕಣ್ಣೀರಿಡುತ್ತ) ಹಾ! ತಂದೆಯೇ! ಲೋಕಕ್ಕೆಲ್ಲ ಆಚಾರ್ಯನೆನಿಸಿದವನೇ! (ಮೇಲೆ ನೋಡುತ್ತ) ಯುಧಿಷ್ಠಿರನೇ, ಯುಧಿಷ್ಠಿರನೇ, ನೀನು ಹುಟ್ಟಿದಂದಿನಿಂದ ಸುಳ್ಳಾಡಿದವನಲ್ಲ; ನೀನು ಯಾರನ್ನೂ ದ್ವೇಷಿಸುವುದಿಲ್ಲವಾದುದರಿಂದ ಅಜಾತಶತ್ರುವೆನಿಸಿಕೊಂಡಿರುವೆ;

ಆದರೆ ಗುರುವೂ ಬ್ರಾಹ್ಮಣಶ್ರೇಷ್ಠನೂ ಎನಿಸಿದ ನನ್ನ ತಂದೆಯ ವಿಷಯದಲ್ಲಿ ಅದೆಲ್ಲವನ್ನೂ ಒಮ್ಮೆಲಿ ಹೇಗೆ ಬಿಟ್ಟೆ? ಇದಕ್ಕೆ ನನ್ನ ದುರದೃಷ್ಟವೇ ಕಾರಣ.

( ಅಶ್ವತ್ಥಾಮನ ) **ಸಾರಥಿ:**—ಕುಮಾರನೇ, ನಿನ್ನ ಸೋದರಮಾವ ಕೃಪಾಚಾರ್ಯನು ಹತ್ತಿರವೇ ನಿಂತಿರುವನು.

**ಅಶ್ವತ್ಥಾಮ:**—( ಬದಿಯಲ್ಲಿ ನೋಡಿ, ಕಣ್ಣೀರಿಡುತ್ತ ) ಮಾವ, ಈದಿನ ನೀನು ಯಾವ ಸೇನಾಪತಿಯೊಡನೆ ಸಮರಾಂಗಣಕ್ಕೆ ಹೋಗಿದ್ದೆಯೋ, ಯಾವಾತನು ವೀರಪುರುಷರ ಕಾಳಗದ ತಿಂಡಿಯನ್ನು ಅಡಗಿಸುತ್ತಿದ್ದನೋ, ನೀನು ನಿರಂತರವೂ ಯಾವಾತನೊಡನೆ ಸರಸಸಲ್ಲಾಪಗಳನ್ನಾಡುತ್ತಿದ್ದೆಯೋ, ಯಾವಾತನು ನಿನ್ನ ತಂಗಿಗೆ ಶ್ಲಾಘ್ಯನಾದ ಪತಿಯೆನಿಸಿಕೊಂಡಿದ್ದನೋ ಆ ನನ್ನ ತಂದೆ ಎಲ್ಲಿ ಹೋದನು?

**ಕೃಪಾಚಾರ್ಯ:**—ವತ್ಸ, ತಿಳಿಯಬೇಕಾದುದನ್ನು ತಿಳಿದಿರುವ ನೀನು ಇಂತಹ ಅತ್ಯಂತ ಶೋಕಾವೇಗವನ್ನು ಬಿಡು.

**ಅಶ್ವತ್ಥಾಮ:**–ಮಾವನೇ, ಶೋಕಾವೇಗವನ್ನು ಬಿಟ್ಟುಬಿಟ್ಟೆನು. ಈಗ ನಾನು ಸುತವತ್ಸಲನಾದ ಆ ನನ್ನ ತಂದೆಯನ್ನೇ ಬೆಂಬಳಿಸುವೆನು.

**ಕೃಪಾಚಾರ್ಯ:**—ವತ್ಸ, ನಿನ್ನಂತಹರಿಗೆ ಇದು ಯೋಗ್ಯವಲ್ಲ.

**ಸಾರಥಿ:**—ಕುಮಾರ, ಅಂತಹ ಸಾಹಸವು ಬೇಡ.

**ಅಶ್ವತ್ಥಾಮ:**—ಆರ್ಯ ಶಾರದ್ವತನೇ, ನನ್ನ ವಿಯೋಗದ ಅಂಜಿಕೆಯಿಂದ ತಾತನು ಪರಲೋಕಕ್ಕೆ ತೆರಳಿದನು. ಪ್ರೀತಿಯುಕ್ತನಾದ ಆತನಿಗೆ ಯಾವಾಗಲೂ ಪುತ್ರವಿಯೋಗವಿಲ್ಲದಂತೆ ಮಾಡುವೆನು.

**ಕೃಪಾಚಾರ್ಯ:**—ವತ್ಸ, ಸಂಸಾರದಲ್ಲಿರುವವರೆಗೆ ಮಕ್ಕಳು ಎರಡು ಲೋಕಗಳಲ್ಲಿಯೂ ತಂದೆಗಳ ಅನುಸರಣೆ ಮಾಡಿಕೊಂಡಿರಬೇಕೆಂಬುದು ಪ್ರಸಿದ್ಧವಾಗಿಯೇ ಇದೆ. ನೋಡು, ತರ್ಪಣ, ಭೂರಿಭೋಜನ, ಶ್ರಾದ್ಧ ಇವುಗಳಿಂದ ಆತನಿಗೆ ಉಪಕಾರಮಾಡಲು ಬದುಕಿದರೆ ನಿನಗೆ ಸಾಧ್ಯವೇ, ಬದುಕದಿದ್ದರೆ ಸಾಧ್ಯವೇ?

**ಸಾರಥಿ:**—ಆಯುಷ್ಮಂತನೇ, ನಿನ್ನ ಮಾತುಲನಾದ ಕೃಪಾಚಾರ್ಯನು ಹೇಳುವುದು ಸರಿಯೆ.

**ಅಶ್ವತ್ಥಾಮ:—**ಆರ್ಯನೇ, ಇದು ನಿಜವು; ಆದರೆ ಶೋಕವು ತಾಳಲಾರದಷ್ಟು ಆಗಿರುವದರಿಂದ ತಂದೆಯನ್ನಗಲಿದ ನಾನು ಒಂದು ಕ್ಷಣವೂ ಬದುಕಿರಲಾರೆನು. ನನ್ನ ತಂದೆಯನ್ನು ನೋಡುವುದಕ್ಕೆ ಅಲ್ಲಿಗೇ ಹೋಗುವೆನು. ( ಎಂದು ಖಡ್ಗವನ್ನು ನೋಡಿ ಯೋಚಿಸಿ ) ಇಂತಹ ಸಮಯದಲ್ಲಿಯೂ ಶಸ್ತ್ರವನ್ನು ಹಿಡಿಯುವುದು ನಗೆಗೀಡು. ಎಲೈ ಪೂಜ್ಯವಾದ ಖಡ್ಗವೇ, ಬ್ರಾಹ್ಮಣರು ನಿನ್ನನ್ನು ಹಿಡಿಯಬಾರದಾಗಿದ್ದರೂ ಶತ್ರುಗಳಿಂದ ತಿರಸ್ಕಾರವಾದೀತೆಂಬ ಅಂಜಿಕೆಯಿಂದ ತಂದೆಯು ನಿನ್ನನ್ನು ಹಿಡಿದನು. ಅವನ ಪ್ರಭಾವದಿಂದ ನಿನಗೆ ಯಾವುದೂ ಅಸಾಧ್ಯವಾಗಿರಲಿಲ್ಲ. ಈಗ ತಂದೆಯು ನಿನ್ನನ್ನು ಬಿಟ್ಟನು; ಅಂಜಿಕೆಯಿಂದಲ್ಲ, ಪುತ್ರಶೋಕದಿಂದ. ಆದುದರಿಂದ ಎಲೈ ಶಸ್ತ್ರವೇ, ನಾನೂ ನಿನ್ನನ್ನು ಬಿಡುವೆನು. ನಿನಗೆ ಒಳಿತಾಗಲಿ. ( ಖಡ್ಗವನ್ನು ಕೆಳಗಿರಿಸುವನು. )

( ತೆರೆಯಲ್ಲಿ ) ಎಲೈ ರಾಜರುಗಳಿರಾ ! ನೀವೆಲ್ಲರೂ ಗುರುಗಳಾದ ದ್ರೋಣಾಚಾರ್ಯರಿಗೆ ಈ ಕಟುಕನಿಂದುಂಟಾಗುವ ಅಪಮಾನವನ್ನು ಉಲಕ್ಷಿಸುತ್ತೀರಾ ?

( ಕೇಳಿ ಕೋಪದಿಂದ ಮೆಲ್ಲನೆ ಖಡ್ಗಕ್ಕೆ ಕೈ ನೀಡಿ ) ಏನು ಗುರುಗಳಾದ ದ್ರೋಣಾಚಾರ್ಯರಿಗೂ ಅಪಮಾನವೆ ?

( ಮತ್ತೆ ತೆರೆಯಲ್ಲಿ )

ಮೂಲೋಕಕ್ಕೆ ಗುರುವೆನಿಸಿದವನು, ಶೋಕದಿಂದ ಶಸ್ತ್ರತ್ಯಾಗಮಾಡಿ ಕುಳಿತವನು, ಕಣ್ಣೀರಿನಿಂದ ಮೋರೆ ತೋಯವನು ಇಂತಹ ದ್ರೋಣಾಚಾರ್ಯನ ನರೆತು ಬಿಳಿದಾದ ತಲೆಯ ಮೇಲೆ ಕೈಯಿಟ್ಟು ಧೃಷ್ಟದ್ಯುಮ್ನನು ನೀಚಕೃತ್ಯವನ್ನೆಸಗಿ ತನ್ನ ಪಾಳೆಯಕ್ಕೆ ಹೋಗುತ್ತಿರುವನು. ಎಲ್ಲರೂ ತಾಳಿಕೊಳ್ಳಿರಿ !
( ಕೃಪಾಚಾರ್ಯನನ್ನೂ ಸಾರಥಿಯನ್ನೂ ನೋಡುತ್ತ ಕೋಪದಿಂದ ನಡುಗಿ )

ಇದಕ್ಕೆ ಏನೆನ್ನಬೇಕು ? ನನ್ನ ತಂದೆ ಶಸ್ತ್ರತ್ಯಾಗಮಾಡಿ ಧನುರ್ಧಾರಿಗಳಾದ ರಾಜರುಗಳ ಇದಿರಲ್ಲಿ ಪ್ರಾಯೋಪವೇಶಕ್ಕೆ ಸಮಾನವಾದ ಸ್ಥಿತಿಯಲ್ಲಿರುವಾಗ ಹಂಜಿಯಂತೆ ಬೆಳ್ಳಗಾದ ಆತನ ತಲೆಯ ಮೇಲೆ ಶಸ್ತ್ರವನ್ನಿಡುವುದು!

**ಕೃಪಾಚಾರ್ಯ:—**ವತ್ಸ, ಜನರು ಹೀಗೆ ಆಡಿಕೊಳ್ಳುತ್ತಾರೆ.

**ಅಶ್ವತ್ಥಾಮನು:**—ದುಷ್ಟನು ತಂದೆಯ ತಲೆಯ ಮೇಲೆ ಕೈಯಿಟ್ಟನೇ ?

**ಸಾರಥಿ:**—( ಅಂಜುತ್ತ ) ಕುಮಾರನೇ, ತೇಜೋನಿಧಿಯಾದ ಆಚಾರ್ಯನಿಗೆ ಇದೊಂದು ವಿಶೇಷಪ್ರಕಾರದ ಅಪಮಾನವು ಒದಗಿತು !

**ಅಶ್ವತ್ಥಾಮನು:**–ಹಾ ತಂದೆಯೇ ! ಪುತ್ರಪ್ರಿಯನೇ ! ಮಂದಭಾಗ್ಯನಾದ ನನಗಾಗಿ ಶಸ್ತ್ರತ್ಯಾಗಮಾಡಿ ಅಂತಹ ಅಲ್ಪನಿಂದ ಅಪಮಾನವನು ತಂದುಕೊಂಡೆಯಾ ! ಅಥವಾ ಕಾಳಗದಲ್ಲಿ ಶೋಕದಿಂದ ಮನಸ್ಸು ಕಲುಷಿತವಾಗಿ ಶರೀರವನ್ನು ತೊರೆದಿರುವಾಗ ನಾಯಿಯಾಗಲಿ, ಕಾಗೆಯಾಗಲಿ, ದ್ರುಪದನ ಮಗನಾಗಲಿ ತಲೆಯ ಮೇಲೆ ಹಸ್ತವನ್ನಿರಿಸಬಹುದು. ದಿವ್ಯಾಸ್ತ್ರಗಳ ಹೊರೆಯನ್ನು ಹಿಡಿದಿರುವ ಆ ವೈರಿಯ ತಲೆಯ ಮೇಲೆ ನಾನು ಇಕೋ ಈ ಪಾದವನ್ನಿಡುವೆನು. ಹಸ್ತವನ್ನಲ್ಲ. ಆಃ ! ದುರಾತ್ಮನಾದ ಅಧಮ ಪಾಂಚಾಲನೇ, ತಾತನು ಶಸ್ತ್ರವನ್ನು ಹಿಡಿಯುವುದಿಲ್ಲವೆಂಬುದು ನಿಶ್ಚಿತವಾಗಿ ತಿಳಿಯಲು, ಏನೂ ಅಂಜಿಕೆಯಿಲ್ಲದೆ ಆತನ ತಲೆಯ ಮೇಲೆ ಕೈಯಿಟ್ಟೆ. ಆಗ ಪ್ರಳಯಕಾಲದ ಮಾರುತನು ಅರಳೆಯನ್ನು ಹಾರಿಸುವಂತೆ ಕ್ಷಣದಲ್ಲಿ ಪಾಂಡವ ಪಾಂಚಾಲ ಸೇನೆಗಳನ್ನು ಹಾರಿಸಬಲ್ಲ ಧನುರ್ಧಾರಿಯಾದ ಅಶ್ವತ್ಥಾಮನು ನಿನ್ನ ನೆನಪಿಗೆ ಬರಲಿಲ್ಲವೇ ? ಯುಧಿಷ್ಠಿರನೇ, ಅಜಾತಶತ್ರುವೇ, ಸತ್ಯವಾದಿಯೇ, ಧರ್ಮಪುತ್ರನೇ, ನಿನಗಾಗಲಿ ನಿನ್ನ ತಮ್ಮಂದಿರಿಗಾಗಲಿ ಈತನು ಯಾವ ಕೇಡನ್ನು ಮಾಡಿದ್ದನು ? ಅಥವಾ ಸತ್ಯವಾದಿಯೆಂದು ನಟಿಸುವ ಈ ವಂಚಕನೊಡನೆ ಏತರ ಕೆಲಸ ? ಅರ್ಜುನನೇ, ಸಾತ್ಯಕಿಯೇ, ಬಾಹುಬಲಶಾಲಿಯಾದ ಭೀಮಸೇನನೇ, ಕೃಷ್ಣನೇ, ಸುರಾ-ಸುರ ಮನುಜರಲ್ಲಿ ಅದ್ವಿತೀಯ ಧನುರ್ಧಾರಿಯೂ, ಬ್ರಾಹ್ಮಣನೂ, ವೃದ್ಧನೂ, ಎಲ್ಲರಿಗೂ ಗುರುವೂ ಆದರಲ್ಲಿಯೂ ವಿಶೇಷವೆಂದರೆ ನನ್ನ ತಂದೆಯೂ ಇಂತಹನ ತಲೆಯನ್ನು ದ್ರುಪದಕುಲಕ್ಕೆ ಕಲಂಕವೆನಿಸಿದ ನರಪಶುವು ಮುಟ್ಟುತ್ತಿರಲು ನೀವು ಉಪೇಕ್ಷಿಸಿದ್ದು ಯುಕ್ತವೇ ? ಅಥವಾ ಇವರೆಲ್ಲರೂ ಪಾಪಿಗಳೇ. ಇವರಿಂದ ಏನು ಪ್ರಯೋಜನ ? ಈ ಮಹಾಪಾತಕವನ್ನು ಮಾಡಿದ, ಒಪ್ಪಿದ, ನೋಡಿದ, ಮಾನಹೀನ ನರಪಶುಗಳಾದ ನಿಮ್ಮ ಮತ್ತು ಕೃಷ್ಣಾರ್ಜುನ ಭೀಮಸೇನರ ರಕ್ತಮೇದೋಮಾಂಸಗಳಿಂದ ಈ ನಾನು ದಿಗ್ಬಲಿಯನ್ನು ಹಾಕುವೆನು.

**ಕೃಪಾಚಾರ್ಯ:**—ವತ್ಸನೇ, ದಿವ್ಯಾಸ್ತ್ರಗಳನ್ನೆಲ್ಲ ಬಲ್ಲವನೂ ಬಾಹುಶಾಲಿಯೂ ತಂದೆಗೆ ಸಮಾನನೂ ಎನಿಸಿದ ನಿನಗೆ ಯಾವುದು ಸಾಧ್ಯವಲ್ಲ?

**ಅಶ್ವತ್ಥಾಮ:**—ಎಲೇ, ಪಾಂಡವ ಪಾಂಚಾಲ ಮತ್ಸ್ಯಮಾಗಧ ಮೊದಲಾದ ಕ್ಷತ್ರಿಯಾಧಮರೇ, ಪರರು ತಂದೆಯ ತಲೆಯನ್ನು ಮುಟ್ಟಿದಾಗ ಅಗ್ನಿಯಂತೆ ಜ್ವಲಿಸುವ ಪರಶುವನ್ನು ಧರಿಸಿದ ಪರಶುರಾಮನು ಏನು ಮಾಡಿದನೆಂಬುದನ್ನು ನೀವು ಕೇಳಿಲ್ಲವೇ? ಈಗ ಕ್ರೋಧಾಂಧನಾದ ಅಶ್ವತ್ಥಾಮನು ರಕ್ತದ ಮಳೆಯನ್ನು ಪಿಶಾಚಗಳಿಗೆ ಬಲಿಗೊಡುವ ಅದೇ ಕರ್ಮವನ್ನು ರಣರಂಗದಲ್ಲಿ ಮಾಡಲಾರನೇ? ಸಾರಥಿಯೇ, ನಡೆ, ಸಮಸ್ತ ಯುದ್ಧೋಪಕರಣಗಳಿಂದ ಸಜ್ಜಾದ "ಮಹಾಹವ" ಎಂಬ ನನ್ನ ರಥವನ್ನು ತೆಗೆದುಕೊಂಡು ಬಾ.

**ಸಾರಥಿ:**—ಅಪ್ಪಣೆ, (ಹೊರಡುವನು.)

**ಕೃಪಾಚಾರ್ಯ:**—ವತ್ಸ, ದಾರುಣವಾದೀ ಅಪಮಾನಾಗ್ನಿಯ ಪ್ರತೀಕಾರವು ಅವಶ್ಯ ಕರ್ತವ್ಯವಾಗಿರುವುದರಿಂದ ಅದಕ್ಕೆ ನಮ್ಮೊಳಗೆ ನಿನ್ನ ಹೊರತು ಯಾರು ಸಮರ್ಥರು? ಆದರೆ,

**ಅಶ್ವತ್ಥಾಮ:**—ಅದರ ಹೊರತು ಇನ್ನೇನು?

**ಕೃಪಾಚಾರ್ಯ:**—ಸೇನಾಪತಿಪಟ್ಟವನ್ನು ಕಟ್ಟಿಸಿ ನಿನ್ನನ್ನು ಸಮರಾಂಗಣಕ್ಕೆ ಕಳುಹಬೇಕೆಂದು ಬಯಸುತ್ತೇನೆ.

**ಅಶ್ವತ್ಥಾಮ:**—ಮಾವ, ಇದು ಪರಾಧೀನವು: ಮತ್ತು ಅನಾವಶ್ಯಕವು.

**ಕೃಪಾಚಾರ್ಯ:**—ವತ್ಸ, ಪರಾಧೀನವೂ ಅಲ್ಲ; ಅನಾವಶ್ಯಕವೂ ಅಲ್ಲ. ಭೀಷ್ಮನಿಲ್ಲದ ದ್ರೋಣನಿಲ್ಲದ ಕೌರವಸೇನೆಯು, ಅವರಿಗೆ ಸಮಾನನಾದ ನೀನೂ ಸೇನಾಪತಿಯಾಗಿ ನಿಲ್ಲದಿದ್ದರೆ ಹೇಗೆ ನಿಂತೀತು? ನಿನ್ನಂತಹನು ಸಜ್ಜುಗೊಂಡು ನಿಂತುಬಿಟ್ಟರೆ ಮೂರುಲೋಕಗಳೂ ಪ್ರತಿಭಟಿಸಲು ಸಮರ್ಥವಾಗಲಾರವು. ಯುಧಿಷ್ಠಿರನ ಬಲವು ಎಷ್ಟರದು? ಆದುದರಿಂದ ಅಭಿಷೇಕೋಪಕರಣಗಳನ್ನು ಅಳವಡಿಸಿಕೊಂಡು ದುರ್ಯೋಧನಮಹಾರಾಜನು ಇಷ್ಟರಲ್ಲಿ ನಿನ್ನನ್ನು ಬರಮಾಡಿಕೊಳ್ಳುವನೆಂದು ತಿಳಿಯುತ್ತೇನೆ.

**ಅಶ್ವತ್ಥಾಮ:**—ಹೀಗಿದ್ದರೆ ಅಪಮಾನದ ಬೆಂಕಿಯಿಂದ ಸುಡುತ್ತಿರುವ ನನ್ನ ಮನಸ್ಸು, ಪ್ರತೀಕಾರಜಲದಲ್ಲಿ ಮುಳುಗಲು ತವಕಪಡುತ್ತಿದೆ. ಆದುದ

ರಿಂದ ನನ್ನ ತಂದೆಯ ವಧದಿಂದ ದುಃಖಿತನಾದ ಕುರುರಾಜನ ಬಳಿಗೆ ನಾನಾಗಿಯೇ ಹೋಗಿ ಸೇನಾಪತಿಪಟ್ಟವನ್ನು ಸ್ವೀಕರಿಸುವೆನೆಂಬ ಸಲಿಗೆಯನ್ನು ತೋರಿಸಿ ಸಮಾಧಾನಗೊಳಿಸುವೆನು.

**ಕೃಪಾಚಾರ್ಯ:**—ವತ್ಸ, ಇದೇ ಒಳ್ಳೆಯದು. ಅಲ್ಲಿಗೇ ಹೋಗುವ;

( ಹೊರಡುವರು. )

( ಕರ್ಣ ದುರ್ಯೋಧನರು ಪ್ರವೇಶಿಸುವರು. )

**ದುರ್ಯೋಧನ:**—ಅಂಗರಾಜನೇ, ತೇಜಸ್ವಿಯಾದ ಮನುಷ್ಯನು ಶತ್ರುಗಳಿಂದ ತಮ್ಮ ಬಂಧುಗಳು ಹತರಾದರೆ ಆ ದುಃಖಪೂರವನ್ನು ಆಯುಧಗಳೆಂಬ ತೆಪ್ಪಗಳನ್ನು ಧರಿಸಿದ ಬಾಹುಗಳಿಂದ ದಾಟುವರ; ಆದರೆ ದ್ರೋಣಾಚಾರ್ಯರು ಮಗನು ಸತ್ತನೆಂಬುದನ್ನು ಕೇಳಿ ಶಸ್ತ್ರಗ್ರಹಣಮಾಡಬೇಕಾದ ಸಮಯದಲ್ಲಿ ಶಸ್ತ್ರತ್ಯಾಗಮಾಡಿದರಲ್ಲ! ಅದೇಕೆ? ಅಧಮ ಸ್ವಭಾವವನ್ನು ಬಿಡಲಾಗುವುದಿಲ್ಲವೆಂದು ದೊಡ್ಡವರು ಹೇಳಿದುದು ಸರಿಯೇ. ಈ ಕಾರಣದಿಂದಲೇ ದುಃಖದಿಂದ ಮುಂದುಗಾಣದವರಾಗಿ ಕ್ಷತ್ರಿಯೋಚಿತವಾದ ಕಠೋರತೆಯನ್ನು ಬಿಟ್ಟು ಬ್ರಾಹ್ಮಣೋಚಿತವಾದ ಮಾರ್ದವವನ್ನು ಅಂಗೀಕರಿಸಿದರು.

**ಕರ್ಣ:**—ರಾಜನೇ, ಇದು ಹೀಗಲ್ಲ.

**ದುರ್ಯೋಧನ:**—ಇನ್ನು ಹೇಗೆ?

**ಕರ್ಣ:**—ಈ ಪೃಥ್ವಿಯ ಸಾಮ್ರಾಜ್ಯದಲ್ಲಿ ಅಶ್ವತ್ಥಾಮನಿಗೆ ಪಟ್ಟಗಟ್ಟಬೇಕೆಂದು ಅವನ ಮನಸ್ಸಿನಲ್ಲಿತ್ತು. ಅವನೇ ಇಲ್ಲದಾಗಲು ವೃದ್ಧನಾದ ಬ್ರಾಹ್ಮಣನಿಗೆ ತನಗೇಕೆ ಇನ್ನು ಶಸ್ತ್ರಗ್ರಹಣವೆಂದು ಹಾಗೆ ಮಾಡಿದನು.

**ದುರ್ಯೋಧನ:**—( ತಲೆದೂಗುತ್ತ ) ಇದು ಹೀಗೆಯೇನು ?

**ಕರ್ಣ:**—ಇದಕ್ಕಾಗಿಯೇ ಆತನು ಕೌರವರ ಕಡೆಗೂ ಪಾಂಡವರ ಕಡೆಗೂ ಯುದ್ಧಕ್ಕೆ ಬಂದ ರಾಜರು ಪರಸ್ಪರವಾಗಿ ಕಾದಾಡಿ ಮೃತರಾಗಿ ಹೋಗಲೆಂದು ಬಯಸಿ ಮುಖ್ಯ ಮನುಷ್ಯರು ಹತರಾಗುತ್ತಿರುವುದನ್ನು ಅಲಕ್ಷ್ಯಮಾಡಿದನು.

**ದುರ್ಯೋಧನ:**—ಇದು ಕೂಡುವುದು.

**ಕರ್ಣ:**— ಇನ್ನೊಂದು ಮಾತು; ರಾಜನೇ, ದ್ರುಪದನು ಬಾಲ್ಯದಿಂದ ಇವನ ಮನಸ್ಸನ್ನು ಬಲ್ಲವನಾದುದರಿಂದಲೇ ತನ್ನ ರಾಜ್ಯದಲ್ಲಿ ಈತನನ್ನು ಇರಗೊಡಲಿಲ್ಲ.

**ದುರ್ಯೋಧನ:** — ಅಂಗರಾಜನೇ, ಯೋಗ್ಯ. ಚೆನ್ನಾಗಿ ಹೇಳಿದೆ.

**ಕರ್ಣ:**— ಇದು ನನ್ನೊಬ್ಬನ ಅಭಿಪ್ರಾಯವಲ್ಲ. ಬೇರೆ ಹಿರಿಯರೂ ಇದನ್ನು ಬೇರೆಯಾಗಿ ತಿಳಿಯಲಾರರು.

**ದುರ್ಯೋಧನ:**— ಇದು ಹೀಗೆಯೇ ಸರಿ. ಸಂಶಯವೇತಕ್ಕೆ? ಹೀಗಲ್ಲದಿದ್ದರೆ ಸಿಂಧುರಾಜನನ್ನು ರಕ್ಷಿಸುತ್ತೇನೆಂದು ಅಭಯಪ್ರಧಾನಮಾಡಿಯೂ ಈ ಅತಿರಥವೀರನು ಅರ್ಜುನನಿಂದ ಆತನು ಹತನಾಗುತ್ತಿರುವಾಗ ಉಪೇಕ್ಷೆ ಮಾಡುತ್ತಿದ್ದನೇ ?

**ಕೃಪಾಚಾರ್ಯರು:**—( ಪ್ರವೇಶಿಸಿ ) ವತ್ಸನೇ, ದುರ್ಯೋಧನನು ಕರ್ಣನೊಡನೆ ಈ ಆಲದ ಮರದ ನೆಳಲಿನಲ್ಲಿ ಕುಳಿತಿರುವನು. ನಾವು ಬಳಿಗೆ ಹೋಗುವ. ( ಹಾಗೆ ಮಾಡಿ )

**ಕೃಪಾಶ್ವತ್ಥಾಮರು:**— ಕೌರವೇಶ್ವರನಿಗೆ ಜಯವಾಗಲಿ.

**ದುರ್ಯೋಧನ:**— ( ನೋಡಿ ) ಇದೇನು ! ಕೃಪಾಚಾರ್ಯರೂ ಅಶ್ವತ್ಥಾಮನೂ. ( ಆಸನದಿಂದಿಳಿದು ಕೃಪಾಚಾರ್ಯರನ್ನು ಕುರಿತು ) ಗುರುಗಳೇ, ನಮಸ್ಕರಿಸುವೆನು. ( ಅಶ್ವತ್ಥಾಮನನ್ನು ಕುರಿತು ) ಆಚಾರ್ಯಪುತ್ರನೇ, ನಮಗೋಸ್ಕರ ತಂದೆಯನ್ನು ಕಳೆದುಕೊಂಡವನೇ, ಬಾ; ದುಃಖದಿಂದ ಬಳಲಿರುವ ನಿನ್ನ ಅಂಗದಿಂದ ನನ್ನ ಈ ಅಂಗವನ್ನು ಬಿಗಿಯಾಗಿ ಆಲಿಂಗಿಸು. ನಿನ್ನೀ ತೋಳುಗಳ ಸ್ಪರ್ಶವು ನಿನ್ನ ತಂದೆಯ ತೋಳುಗಳ ಸ್ಪರ್ಶದಂತೆ ಈ ಮಹಾದುಃಖದಲ್ಲಿಯೂ ಸುಖವನ್ನುಂಟುಮಾಡುವುದು. (ಆಲಿಂಗಿಸಿ ಬದಿಯಲ್ಲಿ ಕುಳ್ಳಿರಿಸಿಕೊಳ್ಳುವನು.)

( ಅಶ್ವತ್ಥಾಮನು ಕಣ್ಣೀರನ್ನು ಸುರಿಸುವನು. )

**ಕರ್ಣ:**— ದ್ರೋಣಪುತ್ರನೇ, ನಿನ್ನೀ ದೇಹವನ್ನು ಅತ್ಯಂತವಾಗಿ ಶೋಕಾನಲಕ್ಕೀಡು ಮಾಡಬೇಡ.

**ದುರ್ಯೋಧನ:**— ಈ ಶೋಕಮಹಾಸಾಗರದಲ್ಲಿ ನಮ್ಮಿಬ್ಬರಿಗೂ ಹೆಚ್ಚುಕಡಿಮೆ ಏನಿದೆ ? ನೋಡು— ಆಚಾರ್ಯನು ನಿನಗೆ ಪ್ರೀತಿಯ ತಂದೆ; ನನಗೆ ತಂದೆಯ ಪ್ರೀತಿಯ ಮಿತ್ರ. ಶಸ್ತ್ರವಿದ್ಯೆಯಲ್ಲಿ ನಿನಗೆ ಹೇಗೋ ಹಾಗೆ

ನನಗೂ ಗುರುವ್. ಆತನ ಮರಣದಿಂದ ದುಃಖವೆಷ್ಟಾಗಿದೆಯೆಂದು ಹೇಗೆ ಹೇಳಲಿ? ಅದನ್ನು ನೀನೇ ನಿನ್ನ ಮಹಾದುಃಖದಿಂದ ತಿಳಿದುಕೊಳ್ಳು.

**ಕೃಪಾಚಾರ್ಯ:**-ವತ್ಸನೇ, ಇದು ಕುರುಪತಿಯು ಹೇಳಿದಂತೆಯೇ ಸರಿ.

**ಅಶ್ವತ್ಥಾಮ:**—ರಾಜನೇ, ನೀನು ಇಷ್ಟುಮಟ್ಟಿಗೆ ಅಭಿಮಾನದಿಂದ ಕಾಣುತ್ತಿರುವಾಗ ಶೋಕಭಾರವನ್ನು ಕಡಮೆ ಮಾಡಿಕೊಳ್ಳುವುದು ಯುಕ್ತ ವಾದುದು; ಆದರೆ ನನ್ನಂತಹ ಮಗನು ಜೀವಂತನಾಗಿರುವಾಗ ನನ್ನ ತಂದೆಯು ಕೇಶಗ್ರಹಣರೂಪವಾದ ಅಪಮಾನವನ್ನು ಹೊಂದಿದನು; ಎಂದ ಬಳಿಕ ಇನ್ನುಳಿದ ತಂದೆಗಳು ಮಕ್ಕಳಿರಬೇಕೆಂದು ಏಕೆ ಬಯಸಬೇಕು?

**ಕರ್ಣ:**—ದ್ರೋಣಪುತ್ರನೇ, ಈ ಸಂದರ್ಭದಲ್ಲಿ ಯಾರು ಮಾಡ ಬೇಕಾದುದೇನು? ಎಲ್ಲರನ್ನೂ ಅಪಮಾನವಾಗದಂತೆ ಕಾಪಾಡಬಲ್ಲ ತಾನೇ ಶಸ್ತ್ರವನ್ನು ತೊರೆದು ಅಂತಹ ಅವಸ್ಥೆಯನ್ನು ತಂದುಕೊಂಡನು.

**ಅಶ್ವತ್ಥಾಮ:** — ಅಂಗರಾಜನೇ, ಏನೆಂದೆ? ಈ ಸಂದರ್ಭದಲ್ಲಿ ಯಾರು ಮಾಡಬೇಕಾದುದೇನೆಂದು? ಹಾಗಾದರೆ ಕೇಳು. ಏನು ಮಾಡುವೆ ನೆಂಬುದನ್ನು. ಪಾಂಡವಸೇನೆಯಲ್ಲಿ ಭುಜಗರ್ವವುಳ್ಳ ಯಾವ ಯಾವನು ಶಸ್ತ್ರವನ್ನು ಧರಿಸಿರುವನೋ, ಬಾಲಕನಾಗಲಿ, ವೃದ್ಧನಾಗಲಿ, ಗರ್ಭವಾಸದಲ್ಲಿ ರುವವನಾಗಲಿ ಯಾವ ಯಾವನು ಪಾಂಚಾಲವಂಶದಲ್ಲಿ ಜನಿಸಿರುವನೋ, ಯಾವ ಯಾವನು ಆ ದುಷ್ಕರ್ಮವನ್ನು ನೋಡುತ್ತ ಇದ್ದನೋ, ರಣಾಂಗಣ ದಲ್ಲಿ ಸಂಚರಿಸುವಾಗ ನನ್ನನ್ನು ಯಾವ ಯಾವನು ಪ್ರತಿಭಟಿಸುವನೋ, ಅವರೆಲ್ಲರಿಗೂ ಪ್ರತ್ಯಕ್ಷ ಅಂತಕನಿಗೂ ಕೂಡ ಕ್ರೋಧಾಂಧನಾದ ನಾನು ಅಂತಕನಾಗುವೆನು. ಮತ್ತು ಕೇಳು; ಎಲೈ ಪರಶುರಾಮಶಿಷ್ಯನಾದ ಕರ್ಣನೇ, ಯಾವ ಪ್ರದೇಶದಲ್ಲಿ ನಿನ್ನ ಗುರುವು ಶತ್ರುಗಳ ರಕ್ತದಿಂದ ಮಡುಗಳನ್ನು ತುಂಬಿದನೋ ಅದೇ ಪ್ರದೇಶವಿದು. ತಾತನಿಗುಂಟಾದ ಕೇಶಗ್ರಹಣರೂಪ ವಾದ ಅಪಮಾನವು ಪರಶುರಾಮನ ತಂದೆಗೆ ಒದಗಿದಂಥದೇ; ಮತ್ತು ಇದೂ ಅದರಂತೆ ಕ್ಷತ್ರಿಯರಿಂದಲೇ ಒದಗಿದುದು. ಇದಲ್ಲದೆ ತಂದೆಯ ತಲೆಯ ಮೇಲೆ ಶಸ್ತ್ರಪ್ರಯೋಗ ಮಾಡಿದವನನ್ನು ಸಮೂಲನಾಶಗೊಳಿಸಬಲ್ಲ ನನ್ನ ಮಹಾಸ್ತ್ರ ಗಳು ಪರಶುರಾಮನಲ್ಲಿ ಇರುವಂತಹವೇ. ಆದುದರಿಂದ ಪರಶುರಾಮನು ಯಾವ ಕೆಲಸವನ್ನು ಮಾಡಿದನೋ, ಆ ಕೆಲಸವನ್ನೇ ಕುಪಿತನಾದ ಅಶ್ವತ್ಥಾಮನೂ ಮಾಡುವನು.

**ದುರ್ಯೋಧನ:**-ಆಚಾರ್ಯಪುತ್ರನೇ, ಅಂತಹ ಆಲೌಕಿಕವಾದ ನಿನ್ನ ಪರಾಕ್ರಮಕ್ಕೆ ಈ ಕೆಲಸವಲ್ಲದೆ ಇನ್ನಾವುದು ಯೋಗ್ಯವಾದೀತು ?

**ಕೃಪಾಚಾರ್ಯ:**-ರಾಜನೇ, ದ್ರೋಣಪುತ್ರನು ಈ ಯುದ್ಧದ ದೊಡ್ಡ ಭಾರವನ್ನು ತಾನು ಹೊರಬೇಕೆಂದು ನಿಶ್ಚಯಿಸಿರುವನು. ನೀನು ಕಾರ್ಯಾರಂಭವನ್ನು ಮಾಡಿಸಿದರೆ ಮೂರು ಲೋಕಗಳನ್ನು ನಿರ್ಮೂಲಮಾಡುವಲ್ಲಿಯೂ ಈತನು ಸಮರ್ಥನು; ಎಂದಬಳಿಕ ಪಾಂಡವಸೇನೆಯು ಪಾಡೇನು? ಆದುದರಿಂದ ಇವನಿಗೆ ಸೇನಾಪತಿಪಟ್ಟವನ್ನು ಕಟ್ಟು.

**ದುರ್ಯೋಧನ:**-ತಾವು ಹೇಳಿದುದು ಯೋಗ್ಯವಾದುದೇ ಸರಿ; ಆದರೆ ಆ ಪದವನ್ನು ಅಂಗರಾಜನಿಗೆ ಮೊದಲೇ ಕೊಟ್ಟಿರುವೆನಲ್ಲ ?

**ಕೃಪಾಚಾರ್ಯ:**—ರಾಜನೇ, ಅಸದೃಶ ಪರಿಭವ ಶೋಕಸಾಗರದಲ್ಲಿ ಮುಳುಗಿರುವ ಈತನಲ್ಲಿ ಅಂಗರಾಜನ ಸಲುವಾಗಿ ಉದಾಸೀನನಾಗುವುದು ಯೋಗ್ಯವಲ್ಲ; ಇವನಿಗೂ ಆದೇ ಶತ್ರುಕುಲವನ್ನು ಸಂಹರಿಸಬೇಕಾಗಿದೆ; ಎಂದ ಬಳಿಕ ಇವನ ಮನಸ್ಸಿಗೆ ಬೇಸರಾಗುವುದಿಲ್ಲವೇ ?

**ಅಶ್ವತ್ಥಾಮ:**—ರಾಜನೇ, ಇನ್ನೂ ಯುಕ್ತಾಯುಕ್ತ ವಿಚಾರವೇ ? ಈ ಕೆಲಸವನ್ನು ಮಾಡಿದರೆ-ನೀನು ಬೆಳಗಿನಲ್ಲಿ ವಂದಿಗಳು ಸ್ತುತಿಗಳಿಂದ ಪ್ರಯತ್ನಪೂರ್ವಕವಾಗಿ ಎಬ್ಬಿಸುವಷ್ಟು ಪಟ್ಟಿಗೆ ನಿಶ್ಚಿಂತನಾಗಿ ಇಡಿ ರಾತ್ರಿ ಮಲಗುವೆ. ಈ ದಿನ ಜಗತ್ತಿನಲ್ಲಿ ಕೇಶವನೂ ಪಾಂಡವರೂ ಸೋಮಕರೂ ಇಲ್ಲದಂತೆ ಮಾಡಿಬಿಡುವೆನು. ಈ ಯುದ್ಧದ ಸಮಾಚಾರವನ್ನು ಇಂದಿಗೇ ಮುಗಿಸಿಬಿಡುವೆನು. ಕ್ಷತ್ರಿಯಾರಣ್ಯದ ಮಹಾಭಾರವು ಭೂಮಿಗೆ ಇಂದಿನಿಂದ ಇಲ್ಲದಂತಾಗುವುದು.

**ಕರ್ಣ:**—(ನಕ್ಕು) ದ್ರೋಣಪುತ್ರನೇ, ಆಡುವುದು ಸುಲಭ; ಮಾಡುವುದು ಕಷ್ಟ ಕಂಡೆಯಾ ? ಕೌರವಬಲದಲ್ಲಿ ಈ ಕಾರ್ಯವನ್ನು ಮಾಡಬಲ್ಲ ಸಮರ್ಥರು ಹಲವರಿರುವರು.

**ಅಶ್ವತ್ಥಾಮ:**—ಅಂಗರಾಜನೇ, ಅಹುದು; ಕೌರವಬಲದಲ್ಲಿ ಈ ಕಾರ್ಯಕ್ಕೆ ಹಲವರು ಸಮರ್ಥರಿರುವರು; ಆದರೆ ದುಃಖಪೀಡಿತನಾದ ನಾನು ಕೋಪಾವೇಶದಿಂದ ಹಾಗೆ ಆಡಿದೆನಲ್ಲದೆ ವೀರಪುರುಷರ ತಿರಸ್ಕಾರಕ್ಕಾಗಿ ಆಡಲಿಲ್ಲ.

**ಕರ್ಣ:**—ಮೂಢನೇ, ದುಃಖಪೀಡಿತನು ಕಣ್ಣೀರು ಸುರಿಸಬೇಕು. ಕೋಪಾವೇಶವುಳ್ಳವನು ಆಯುಧಧಾರಿಯಾಗಿ ಸಂಗ್ರಾಮಕ್ಕೆ ಹೋಗಬೇಕು; ಹೀಗೆ ಬಡಬಡಿಸುವುದು ಯೋಗ್ಯವಲ್ಲ.

**ಅಶ್ವತ್ಥಾಮ:**—(ಕ್ರೋಧದಿಂದ) ಎಲೋ ರಾಧಾಗರ್ಭಭಾರಭೂತನೇ, ಸೂತಾಧಮನೇ, ನನಗೆ—ಅಶ್ವತ್ಥಾಮನಿಗೂ ಕಣ್ಣೀರು ಹಾಕಿ ದುಃಖ ಪ್ರತೀಕಾರ ಮಾಡಿಕೊಳ್ಳೆಂದು ಹೇಳುವೆಯಾ? ಶಸ್ತ್ರದಿಂದ ಬೇಡವೇ? ನೋಡು, ನಿನ್ನ ಶಸ್ತ್ರಗಳಂತೆ ನನ್ನ ಶಸ್ತ್ರಗಳು ಗುರುಶಾಪದಿಂದ ನಿರ್ವೀರ್ಯ ವಾಗಿರುವುವೇ? ಈಗಲೇ ಸಮರವನ್ನು ಬಿಟ್ಟು ಭಯಗೊಂಡು ನಿನ್ನಂತೆ ನಾನು ಓಡಿ ಬಂದಿರುವೆನೇ? ಅರಸರನ್ನೂ, ಅವರ ವಂಶವನ್ನೂ ಹೊಗಳುವ ಕೆಲಸ ವನ್ನು ಮಾತ್ರ ಬಲ್ಲ ಸೂತಕುಲದಲ್ಲಿ ನಿನ್ನಂತೆ ನಾನು ಹುಟ್ಟಿ ಬಂದಿಲ್ಲವಲ್ಲ? ಕ್ಷುದ್ರನಾದ ವೈರಿಯು ಮಾಡಿದ ಅಪಕಾರಕ್ಕೆ ಕಣ್ಣೀರಿನಿಂದ ಪ್ರತಿಕ್ರಿಯೆ ಮಾಡಿಕೊಳ್ಳಲೇ? ಶಸ್ತ್ರದಿಂದ ಬೇಡವೇ?

**ಕರ್ಣ:**—(ಕ್ರೋಧದಿಂದ) ಎಲೈ ವಾಚಾಲನೇ, ವ್ಯರ್ಥ ಶಸ್ತ್ರಗ್ರಹಣ ಮಾಡಿದ ಗರ್ವಿಷ್ಠಬಟುವೇ, ನನ್ನ ಆಯುಧವು ನಿರ್ವೀರ್ಯವಾಗಿರಲಿ, ಸವೀರ್ಯವಾಗಿರಲಿ ಬಾಹುಶಾಲಿಯಾದ ನಿನ್ನ ತಂದೆಯು ಧೃಷ್ಟದ್ಯುಮ್ನ ನಿಗೆ ಅಂಜಿ ಆಯುಧವನ್ನು ಬಿಟ್ಟಂತೆ ನಾನು ಬಿಡಲಿಲ್ಲ ಇನ್ನೂ ಕೇಳು. ನಾನು ಸೂತನಾಗಲಿ, ಸೂತನ ಮಗನಾಗಲಿ, ಯಾವನಾದರೂ ಆಗಲೊಲ್ಲೆ ನೇಕೆ; ಸತ್ಕುಲದಲ್ಲಿ ಜನಿಸುವುದು ಮನುಷ್ಯರ ಕೈಯಲ್ಲಿಲ್ಲ. ಆದರೆ ಪೌರುಷವು ನನ್ನ ಕೈಯಲ್ಲಿದೆ.

**ಅಶ್ವತ್ಥಾಮ:**—(ಸಂತಾಪದಿಂದ) ಎಲೈ ರಥಕಾರಕುಲಕಲಂಕನೇ, ರಾಧಾಗರ್ಭಭಾರಭೂತನೇ, ಆಯುಧಜ್ಞಾನಶೂನ್ಯನೇ, ನನ್ನ ತಂದೆಯನ್ನು ಕೂಡ ನಿಂದಿಸುವೆಯಾ? ಆತನು ಅಂಜುಗುಳಿಯಾಗಿರಲಿ, ಶೂರನಾಗಿರಲಿ, ಮೂರುಲೋಕಗಳು ಆತನ ಬಾಹುಸಾಮರ್ಥ್ಯವನ್ನು ತಿಳಿದಿವೆ. ಪ್ರತಿದಿನ ದಲ್ಲಿಯೂ ಆತನು ಸಮರಾಂಗಣದಲ್ಲಿ ಮಾಡಿದ ಕಾರ್ಯವನ್ನು ಈ ಭೂದೇವಿ ತಿಳಿದಿರುತ್ತಾಳೆ. ಆತನು ಶಸ್ತ್ರವನ್ನು ಏಕೆ ಬಿಟ್ಟನೆಂಬುದನ್ನು ಆ ಸತ್ಯಶೀಲ ನಾದ ಯುಧಿಷ್ಠಿರನು ತಿಳಿದಿದ್ದಾನೆ. ಎಲೈ ರಣಹೇಡಿಯೇ, ನೀನು ಆಗ ಎಲ್ಲಿ ಇದ್ದೆ.

**ಕರ್ಣ:**—(ನಕ್ಕು) ಅಹುದು; ನಾನು ಹೇಡಿಯು. ನೀನು, ಪರಾಕ್ರಮಿಯಾದ ನಿನ್ನ ತಂದೆಯನ್ನು ನೆನೆಸಿ ಈಗ ಏನು ಮಾಡುವಿಯೋ ಎನಿಸಿಬಿಟ್ಟಿದೆ. ಮತ್ತೂ, ಎಲೈ ಮೂಢನೇ, ಶಸ್ತ್ರವನ್ನು ಬಿಟ್ಟಿದ್ದರೇನಾಯಿತು, ಶಸ್ತ್ರರಹಿತರಾದವರು ಶಸ್ತ್ರಗಳನ್ನೆತ್ತಿ ಬಂದ ವೈರಿಗಳನ್ನು ನಿವಾರಿಸುವುದಿಲ್ಲವೇ? ರಾಜರು ಸೈನಿಕರು ಇವರಿದಿರಿಗೆ ಶತ್ರುವು ತನ್ನ ತಲೆಯನ್ನು ಕೊಯ್ಯುತ್ತಿದ್ದರೂ ಈತನು ಹೆಂಗುಸಿನಂತೆ ಸುಮ್ಮನೆ ಇದ್ದುಬಿಟ್ಟನಲ್ಲ?

**ಅಶ್ವತ್ಥಾಮ:**— ( ಸಂತಾಪದಿಂದ ನಡುಗುತ್ತ ) ನೀಚನೇ, ಅರಸರಿಗೆ ಬೇಕಾದವನೆಂದು ಗರ್ವಬಡುವವನೇ, ಸೂತಾಧಮನೇ, ಅಸಂಬದ್ಧ ಪ್ರಲಾಪಿಯೇ, ನನ್ನ ತಂದೆಯು ದುಃಖದಿಂದಾಗಲಿ, ಅಂಜಿಕೆಯಿಂದಾಗಲಿ ಹೇಗಾದರೂ ದ್ರುಪದಪುತ್ರನ ಕೈಯನ್ನು ತಡೆಯಲಿಲ್ಲ; ಭುಜಬಲದ ಸೊಕ್ಕಿನಿಂದ ಉಬ್ಬಿರುವ ನಿನ್ನ ತಲೆಯಮೇಲೆ ಈಗ ನಾನು ನನ್ನ ಈ ಎಡಗಾಲನ್ನಿಡುತ್ತೇನೆ; ಇದನ್ನು ತಪ್ಪಿಸಿಕೊಳ್ಳು. ( ಹಾಗೆ ಮಾಡಲು ಏಳುವನು. )

**ಕೃಪದುರ್ಯೋಧನರು:**—ಗುರುಪುತ್ರನೇ, ಸೈರಿಸು, ಸೈರಿಸು. (ಅಡ್ಡಿ ಮಾಡುವರು. ) ( ಅಶ್ವತ್ಥಾಮನು ಒದೆಯುವುದನ್ನು ಅಭಿನಯಿಸುವನು. )

**ಕರ್ಣ:**—( ಕೋಪದಿಂದ ಎದ್ದು ಕತ್ತಿಯನ್ನು ಹಿರಿದು ) ಎಲೈ ನೀಚನೇ, ಬ್ರಾಹ್ಮಣಾಧಮನೇ, ಆತ್ಮಶ್ಲಾಘಿಯೇ, ಜಾತಿಯನ್ನು ನೋಡಿ ನಿನ್ನನ್ನು ಕೊಲ್ಲಬಾರದಾಗಿದೆ; ಆದರೆ ಈ ಎತ್ತಿದ ಕಾಲನ್ನು ಕತ್ತರಿಸಿ ನೆಲಕ್ಕುರುಳಿಸಿದುದನ್ನು ಈಗಲೇ ಕಾಣುವೆ.

**ಅಶ್ವತ್ಥಾಮ:**-ಎಲೈ ಮರುಳೇ, ನಾನು ಕೊಲ್ಲಬಾರದ ಜಾತಿಯವನಾಗಿದ್ದರೆ ಇಗೋ ನೋಡು, ಈ ಜಾತಿಯನ್ನು ಬಿಡುತ್ತೇನೆ. (ಯಜ್ಞೋಪವೀತವನ್ನು ಹರಿದುಚೆಲ್ಲಿ, ಮತ್ತೆ ಕೋಪದಿಂದ ) ಈಗ ನೀನು ಶಸ್ತ್ರಗ್ರಹಣಮಾಡು; ಇಲ್ಲವೆ ಕೈಮುಗಿ; ಏನು ಮಾಡಿದರೂ ಈ ದಿನ ಅರ್ಜುನನ ಪ್ರತಿಜ್ಞೆಯು ಸುಳ್ಳಾಗುವಂತೆ ಮಾಡುವೆನು. ( ಇಬ್ಬರೂ ಖಡ್ಗವನ್ನೆತ್ತಿ, ಒಬ್ಬರನ್ನೊಬ್ಬರು ಹೊಡೆಯತೊಡಗುವರು; ಕೃಪಾಚಾರ್ಯ ದುರ್ಯೋಧನರು ಬಿಡಿಸುವರು. )

# ೮. ಪಂಪಾಯಾತ್ರೆ.

ನಮ್ಮ ತಾಯ್ನಾಡಾದ ಕರ್ನಾಟಕದಲ್ಲಿ ಬಾದಾಮಿ ಬನವಾಸಿಗಳಂಥ ಐತಿಹಾಸಿಕ ಪುಣ್ಯಕ್ಷೇತ್ರಗಳೂ ಗೋಕರ್ಣ-ಉಡುಪಿ ಉಳವಿಗಳಂಥ ಕೇವಲ ಧಾರ್ಮಿಕ ಕ್ಷೇತ್ರಗಳೂ ಹಲವು ಇರುವುವಷ್ಟೇ? ಆ ಎಲ್ಲ ಪವಿತ್ರ ಕ್ಷೇತ್ರಗಳಲ್ಲಿ ಹಂಪೆಯು ಅನೇಕ ಕಾರಣಗಳಿಂದ ಅತಿ ಮಹತ್ವದ್ದಾಗಿದೆ. ನಮ್ಮ ಮಹಾಕಾವ್ಯವೂ ಆದಿ ಕಾವ್ಯವೂ ಎನಿಸಿದ ಶ್ರೀಮದ್ರಾಮಾಯಣದಲ್ಲಿ ವರ್ಣಿತವಾದ ಪಂಪಾಕ್ಷೇತ್ರವೇ ಈಗ ಹಂಪೆಯೆನಿಸಿದೆ. ಇತಿಹಾಸಪ್ರಸಿದ್ಧವಾದ ವಿಜಯನಗರವು ಈ ಪ್ರದೇಶದಲ್ಲಿಯೇ ವಿರಾಜಿಸಿದ್ದಿತು. ವಿಜಯನಗರವು ಮುಂದೆ ಬಂದುದು ವಿದ್ಯಾರಣ್ಯಸ್ವಾಮಿಗಳಿಂದ. ಉತ್ತರದ ಮಹಮ್ಮದೀಯರ ದಾಳಿಯಿಂದ ಕನ್ನಡಿಗರ ವಿದ್ಯಾ ಕಲಾ ಕೌಶಲ್ಯಗಳೂ ಧಾರ್ಮಿಕ ಜೀವನವೂ ಸಂಸ್ಕೃತಿಯೂ ಮಣ್ಣುಪಾಲಾಗುವ ಹೊತ್ತು ಒದಗಿದಾಗ ವಿಜಯನಗರದ ಸಾಮ್ರಾಜ್ಯವು ಒಡಮೂಡಿ ತನ್ನ ಉಜ್ವಲ ಸಾಮರ್ಥ್ಯದಿಂದ ಸುಮಾರು ಎರಡೂವರೆ ಶತಮಾನಕಾಲ (೧೩೩೬-೧೫೬೫) ಮಹಾವೈಭವದಿಂದ ಮೆರೆದು ಕೊನೆಗೆ ಕಾಲಪುರುಷನ ದವಡೆಯಲ್ಲಿ ಸಿಕ್ಕಿ ಮಾಯವಾಗಿ ಹೋಯಿತು. ಕನ್ನಡಿಗರ ಅಖಂಡ-ಅಭಿಮಾನಕ್ಕೆ ಪಾತ್ರವಾದ ಈ ಹಂಪೆ ವಿಜಯನಗರಗಳ ಇಂದಿನ ಅವಸ್ಥೆಯನ್ನು ಕಣ್ಣಾರೆ ಕಂಡು ಬರುವುದು ನಮ್ಮ ಆಯುಷ್ಯದ ಮಹತ್ವದ ಕಾರ್ಯಗಳಲ್ಲಿ ಒಂದೆಂದು ಭಾವಿಸಿದರೆ ತಪ್ಪಾಗದು. ಇಲ್ಲಿ ಅಪ್ರತಿಮವಾದ ಪ್ರಾಕೃತಿಕ ಸೌಂದರ್ಯದೊಡನೆ ನಮ್ಮ ಹಿಂದಣ ಹಿರಿಯರ ಅದ್ವಿತೀಯ ಕಲಾನೈಪುಣ್ಯವು ಕಲೆತು ಒಂದರಿಂದೊಂದು ಬೆಳಗುವಂತಿದ್ದುದರಿಂದ ಅವು ಪ್ರೇಕ್ಷಕರ ಮನಸ್ಸನ್ನು ಆಕರ್ಷಿಸಿ ಪೂರ್ವಜರ ವಿಷಯದಲ್ಲಿ ಅಭಿಮಾನವನ್ನು ಹುಟ್ಟಿಸುವುವು; ಈ ಪ್ರದೇಶದಲ್ಲಿ ಹೋಗಿ ನಿಂತೊಡನೆಯೇ ನಮ್ಮ ಮನಸ್ಸು ಆನಂದ ಆಶ್ಚರ್ಯ ವಿಷಾದ ರೋಷ ಮುಂತಾದ ಭಾವನೆಗಳಿಂದ ಮಂಕಾಗಿ ಪರಕ್ಷಣದಲ್ಲಿಯೇ ಕರ್ತವ್ಯಜಾಗ್ರತೆಯಿಂದ ಉತ್ಸಾಹಭರಿತವಾಗುವುದು. ಇತಿಹಾಸದ ಸಾವಿರಪುಟಗಳ ಪಠಣ

ದಿಂದಾಗಲಾರದ ಉಜ್ವಲ ಪರಿಣಾಮವು ಇಲ್ಲಿಯ ಒಂದೊಂದು ಐತಿಹಾಸಿಕ ಕಟ್ಟಡದ ದರ್ಶನಮಾತ್ರದಿಂದಲೇ ಉಂಟಾಗುವುದೆಂದು ಹೇಳಿದರೆ ಅತಿಶ ಯೋಕ್ತಿಯೆನಿಸದು.

ರಾಮಾಯಣಕಾಲದ ಪುಣ್ಯಶೀಲ ಪೌರಾಣಿಕ ವ್ಯಕ್ತಿಗಳಾದ ಮಾರುತಿ ವಾಲಿ ಸುಗ್ರೀವರ ಲೀಲಾಭೂಮಿಯೂ ಅರ್ವಾಚೀನ ಕಾಲದ ಪ್ರೌಢದೇವ ರಾಯ ಕೃಷ್ಣದೇವರಾಯ ಮೊದಲಾದ ಕೆಚ್ಚೆದೆಯ ಕನ್ನಡ ಕಲಿಗಳ ಶೌರ್ಯಾಭಿನಯದ ರಂಗಸ್ಥಳವೂ ಆದ ಹಂಪೆ ಈಗ ಬ್ರಿಟಿಷ್ ಸಾಮ್ರಾಜ್ಯದ ಮದ್ರಾಸ ಆಧಿಪತ್ಯಕ್ಕೆ ಒಳಗಾದ ಬಳ್ಳಾರಿ ಜಿಲ್ಲೆಯಲ್ಲಿದೆ. ಪ್ರವಾಸಿಕರು ಮದ್ರಾಸ ಅಂಡ್ ಸದರ್ನ ಮರಾಠಾ ರೇಲ್ವೇ ಕಂಪನಿಯ ರೈಲುದಾರಿಯ ಹುಬ್ಬಳ್ಳಿ–ಗುಂತಕಲ್ ಶಾಖೆಯಲ್ಲಿರುವ 'ಹೊಸಪೇಟೆ' ನಿಲ್ದಾಣದಲ್ಲಿ ಇಳಿಯ ಬೇಕು. ವಿಜಯನಗರದ ಮಹಾ ಸಾಮ್ರಾಜ್ಯವನ್ನಾಳಿದ ಅರಸರಲ್ಲಿ ಅಗ್ರ ಗಣ್ಯನಾದ ಕೃಷ್ಣದೇವರಾಯನು ತನ್ನರಸಿ ನಾಗಲಾಂಬೆಯ ಹೆಸರಿನಿಂದ ಕಟ್ಟಿಸಿದ ನಾಗಲಾಪುರವು ಇಲ್ಲಿಂದಲೇ ಆರಂಭವಾಗುವುದು. ಆತನ ಆಳಿಕೆ ಯಲ್ಲಿ ವಿಜಯನಗರದ ಸಾಮ್ರಾಜ್ಯವು ವೈಭವದ ಪರಮಾವಧಿಯನ್ನು ಮುಟ್ಟಿದ್ದಿತು. ರಾಜಧಾನಿಯಾದ ವಿಜಯನಗರವು ೧೫೦ ಚೌ. ಮೈಲಿನಷ್ಟು ವಿಸ್ತಾರವಾಗಿದ್ದಿತೆಂದೂ ಜಗತ್ತಿನೊಳಗಿನ ಅತಿ ವೈಭವದ ನಗರಗಳಲ್ಲೊಂದಾ ಗಿದ್ದಿತೆಂದೂ ಫೆರಿಸ್ತ್ರ, ನಿಕೋಲೋಕೌಂತಿ, ಪೈಸ್ ಮುಂತಾದ ಆ ಕಾಲದ ಪರ ದೇಶದ ಪ್ರವಾಸಿಗಳು ಕಣ್ಣುಂಬ ನೋಡಿ ಬಣ್ಣಿಸಿದ್ದಾರೆ. ಪಂಪಾಯಾತ್ರೆಗೆ ಹೊರಟ ನಾವು ಹೊಸಪೇಟೆಯ ಊರ ಗಡಿಯನ್ನು ದಾಟಿದೊಡನೆಯೇ ನಮ್ಮ ಕನ್ನಡ ರಾಯರ ರಾಜಧಾನಿಯ ಅವಶೇಷಗಳನ್ನು ಮಾರ್ಗದ ಎಡ ಬಲಗಳಲ್ಲಿ ಅಲ್ಲಲ್ಲಿಗೆ ಕಾಣಬಹುದು. ಸುತ್ತಲೂ ಹಬ್ಬಿದ ಬೆಟ್ಟದ ಸಾಲು ಗಳಲ್ಲಿ ಅಲ್ಲಲ್ಲಿಗೆ ಎತ್ತರವಾಗಿ ನಿಂತ ಕೋಡುಗಲ್ಲುಗಳೂ ಪ್ರಚಂಡವಾದ ಬಂಡೆ ಗಲ್ಲುಗಳೂ ಅರ್ಧಮರ್ಧ ಉಳಿದಿರುವ ಚಿಕ್ಕ ದೊಡ್ಡ ಗುಡಿ ಗೋಪುರಗಳೂ ಹಳೆಯ ಕಟ್ಟಡಗಳ ಅವಶೇಷಗಳೂ ತಮ್ಮ ಕಡೆಗೆ ನಮ್ಮ ಮನಸ್ಸನ್ನೆಳೆದು "ಎಚ್ಚರಿಕೆ! ಮೂಢ ಮಾನವಾ, ಪ್ರಪಂಚವು ಮಾಯಾಮಯವಾಗಿದೆ. ವೈಭವವು ಸ್ಥಿರವಾದುದಲ್ಲ." ಎಂದು ಹೇಳುವಂತಾಗುವುದು. ಈಗ ಹೊಸ ಪೇಟೆಯಿಂದ ಹಂಪೆಗೆ ಸಾರ್ವಜನಿಕ ಮೋಟಾರು ಬಂಡಿಗಳು ಓಡಾಡುತ್ತಿರು

ವುವು. ಒಬ್ಬೊಬ್ಬನು ನಾಲ್ಕಾರಾಣೆ ಬಾಡಿಗೆ ಕೊಟ್ಟರಾಯಿತು. ಈ ಅನುಕೂಲತೆಯಿಂದ ಪಂಪಾಯಾತ್ರೆಗೆ ಹೊರಟವರೆಲ್ಲರೂ ಬಹುಶಃ ಈ ಮೋಟಾರುಗಳನ್ನೇ ನೋಡಿಕೊಳ್ಳುವರು. ಆದುದರಿಂದ ಹೊಸಪೇಟೆಯಿಂದ ಹೊರಟವರು ಅತ್ತಿತ್ತ ಹಳೆಯ ಅವಶೇಷಗಳ ಮತ್ತು ಅನಂತ ರೂಪಧಾರಿಣಿಯಾದ ಪ್ರಕೃತಿಯ ಚಮತ್ಕಾರಿಕವಾದ ಒಂದೆರಡು ಹೊಸನೋಟಗಳ ಕಡೆಗೆ ದೃಷ್ಟಿಯನ್ನು ನೀಡಿ ಮನಸ್ಸಿನಲ್ಲಿ ಹಾಗೆ ಹೀಗೆ ಎಂದು ಏನೇನೋ ಭಾವಿಸಿಕೊಳ್ಳುತ್ತಿರುವಷ್ಟರಲ್ಲಿ ಹಂಪೆಯೇ ಬಂದುಬಿಡುವುದು. ಮೋಟಾರಿನ ಆಳುಗಳು "ಜೋಕೆ! ಹಿಂದೆ ಅಮೂಲ್ಯವಾದ ಮುತ್ತು ರತ್ನಗಳನ್ನೂ ವಜ್ರವೈಡೂರ್ಯಗಳನ್ನೂ ಬಯಲಂಗಡಿಗಳಲ್ಲಿಟ್ಟು ಮಾರುತ್ತಿದ್ದ ವಿಜಯನಗರದ ರಾಯರ ಕಾಲವೀಗ ಉಳಿದಿಲ್ಲ. ನಿಮ್ಮ ಗಂಟು ಗದಡಿಗಳನ್ನು ಎಚ್ಚರದಿಂದ ನೋಡಿಕೊಳ್ಳಿ!" ಎಂದು ಹೇಳುವವರಂತೆ ನಮ್ಮ ಸಾಮಾನುಗಳನ್ನು ಇಳಿಸಿ, ತೋರಿಸಿ, ಹೋಗಿಬಿಡುವರು. 'ಹಮಾಲ ಹಮಾಲ' ಎನ್ನುವ ಕೂಲಿಯಾಳುಗಳಾಗಲಿ, ಯಾತ್ರಿಕರನ್ನು ದೂರದಿಂದಲೇ ಇದಿರುಗೊಂಡು ಆದರದಿಂದ ಬರಮಾಡಿಕೊಂಡು ದೇವರ ದರ್ಶನ ಮಾಡಿಸಿ ಕ್ಷೇತ್ರ ವಿಧಿ ಮುಂತಾದುವುಗಳಿಂದ ಅವರನ್ನೂ ಅವರ ಪಿತೃಗಳನ್ನೂ ಉದ್ಧರಿಸುವ ಪುರೋಹಿತರಾಗಲಿ ಅರ್ಚಕರಾಗಲಿ ಅಲ್ಲಿ ಇಲ್ಲದಿರುವುದರಿಂದ ಪಂಪಾಯಾತ್ರೆಗೆ ಹೋದ ನಾವು ಮಿಕ್ಕ ತೀರ್ಥಕ್ಷೇತ್ರಗಳಿಗೆ ಹೋದಾಗ ಕಾಣುವ ಸುಖ ಸೌಕರ್ಯಗಳನ್ನು ಇಲ್ಲಿ ಕಾಣಲಾರೆವು. ಮುನ್ನೋಟವಿಲ್ಲದ ಎಷ್ಟೋ ಜನ ಪ್ರವಾಸಿಕರು ನಿರಾಶರಾಗಿ 'ಇದೇನು ಹಾಳುಹಂಪೆ' ಎಂದು ನುಡಿದುದೂ ಉಂಟು.

ಮೋಟಾರಿನಿಂದ ಇಳಿದು ನಮ್ಮ ಗಂಟುಗದಡಿಗಳನ್ನು ಸಾಗಿಸಿಕೊಂಡು ಮುಂದೆ ಹೊರಟ ನಮಗೆ ಮೊದಲು ದಾರಿಯಲ್ಲಿ ಒಂದು ಭವ್ಯವಾದ ಗಣಪತಿ ವಿಗ್ರಹದ ದರುಶನವಾಗುವುದು. ಆನೆಗಿಂತ ಈ ವಿಗ್ರಹವು ದೊಡ್ಡದಾಗಿದ್ದರೂ ಅದಕ್ಕೆ "ಸಾಸುವೆಯ ಗಣಪ" ಎಂದು ಹೆಸರು. ಇಲ್ಲಿಂದ ಸ್ವಲ್ಪ ಅಂತರದಲ್ಲಿ ಇನ್ನೊಂದು ಗಣಪತಿವಿಗ್ರಹವಿದೆ. ಅದು ಇದಕ್ಕಿಂತಲೂ ದೊಡ್ಡದು; ಅದಕ್ಕೆ "ಕಡಲೆಯ ಗಣಪ" ಎಂದು ಹೆಸರಂತೆ. ಇವು ದೇವಲೋಕದ ಗಣಪತಿಯ ವಿರಾಟ್ ಸ್ವರೂಪದ ಮುಂದೆ ಏನೂ ಅಲ್ಲ, ಎಂಬ ಭಾವನೆಯಿಂದ ಇಷ್ಟು

ದೊಡ್ಡ ಮೂರ್ತಿಗಳನ್ನು ಕೂಡ ಸಾಸುವೆಯ ಗಣಪ ಕಡಲೆಯ ಗಣಪ ಎಂದು ಆ ಭಕ್ತರು ಹೇಳಿದರೋ? ಇಲ್ಲವೆ ಆ ಭಕ್ತಿಸಂಪನ್ನರ ಉದ್ದೇಶವೇನಿದ್ದಿತೋ ಅವಕ್ಕವರೇನು ಹೆಸರಿಟ್ಟುಕೊಂಡಿದ್ದರೋ ಗೊತ್ತಿಲ್ಲದ ಆಧುನಿಕ ಪ್ರವಾಸಿಕರು ಇವೆರಡರ ತುಲನೆಯನ್ನೂ ಅದ್ಭುತಾಕಾರವನ್ನೂ ಲಕ್ಷದಲ್ಲಿ ತಂದುಕೊಂಡು ವ್ಯಂಗ್ಯೋಕ್ತಿಯಿಂದ ಸಾಸುವೆ ಕಡಲೆಗಳ ಪ್ರಮಾಣದ ಹೋಲಿಕೆಯಿಂದ ಈ ಹೆಸರುಗಳನ್ನು ಕೊಟ್ಟರೋ ತಿಳಿಯದು. ಆ ವಿಗ್ರಹಗಳ ಈಗಿನ ಅವಸ್ಥೆಯನ್ನು ಕಂಡು 'ಮಾನವರಂತೆಯೇ ಮಾನವಕೃತ ದೇವ ವಿಗ್ರಹಗಳಿಗೂ ಏರಿಕೆ ಇಳಿಕೆಗಳಿರುವುವಲ್ಲಾ' ಎಂದುಕೊಂಡು ಮುಂದೆ ಸಾಗಬೇಕಾಗುವುದು. ವಿಶಾಲವಾದ ಕರಿಯ ಹಾಸುಗಲ್ಲುಗಳ ಮೇಲೆ ನಡೆಯುತ್ತ ತುಸ ದೂರಹೋಗುವಷ್ಟರಲ್ಲಿ ಪಂಪಾಪತಿ ವಿರೂಪಾಕ್ಷ ದೇವರ ಗುಡಿಯ ಪ್ರಾಕಾರಗಳೂ ಗೋಪುರಗಳೂ ಕಾಣಿಸತೊಡಗುವುವು. ನೂರಾರು ಮೆಟ್ಟಿಲುಗಳ ಒಂದೆರಡು ಸಾಲುಗಳನ್ನು ಇಳಿದು ಹೋಗಿ ಎಡಗಡೆಗೆ ತಿರುಗಿದರೆ ವಿಜಯನಗರದ ರಾಯರ ಕುಲದೇವತೆ ಶ್ರೀಪಂಪಾ ವಿರೂಪಾಕ್ಷ ದೇವರ ಗುಡಿಯ ಮಹಾದ್ವಾರವು ಇದಿರಿಗೆ ಕಾಣಿಸುವುದು. ಈ ಮಹಾದ್ವಾರದ ಗೋಪುರವು ನೆರೆಯಲ್ಲಿ ಕಾಣುವ ಹೈಮವಂತ ಮಾತಂಗ ಋಷ್ಯಮೂಕ ಮುಂತಾದ ರಾಮಾಯಣವರ್ಣಿತವಾದ ಪರ್ವತಗಳ ಶಿಖರಗಳಿಗೆ ಸಮಾನ ಎತ್ತರವಾಗಿ ಕಟ್ಟಲ್ಪಟ್ಟಿರುವುದೆಂದು ಹೇಳುವರು. ಈ ಗೋಪುರವು ಹನ್ನೊಂದು ನೆಲೆಗಳುಳ್ಳುದು. ಇದನ್ನು ಕನ್ನಡಿಗರ ಕೆಚ್ಚೆದೆಯ ಕಲಿಯೆಂಬ ಯಥಾರ್ಥ-ಅಭಿಧಾನವನ್ನು ಪಡೆದ ಕೃಷ್ಣದೇವರಾಯನು ಕಟ್ಟಿಸಿದನು. ಇದು ಭವ್ಯವಾಗಿದ್ದಂತೆ ಚಿತ್ರವಿಚಿತ್ರ ಕಲಾಕೌಶಲ್ಯದಿಂದ ಪ್ರೇಕ್ಷಣೀಯವೂ ಆಗಿದೆ. ಈ ಮಹಾದ್ವಾರದ ಒಳಬದಿಗೆ ವಿಸ್ತಾರವಾದ ಎರಡು ಪ್ರಾಕಾರಗಳುಂಟು. ಎರಡನೆಯ ಪ್ರಾಕಾರದ ನಡುವೆ ಶ್ರೀವಿರೂಪಾಕ್ಷನ ಮಂದಿರವಿದೆ. ಮೊದಲನೆಯ ಪ್ರಾಕಾರದಲ್ಲಿ ತುಂಗಭದ್ರೆಯ ಕಾಲುವೆಯೊಂದು ಹರಿದಿದೆ. ಈ ಪ್ರಾಕಾರಗಳಲ್ಲಿ ಹತ್ತು ಹನ್ನೆರಡು ಸಾವಿರ ಜನರು ಸಹಜವಾಗಿ ನೆರೆಯಬಹುದು. ಯುಗಾದಿ ಪ್ರತಿಪದೆಯ ದಿನ ಬಾಲರವಿಯ ಕಿರಣಗಳು ಈ ಎರಡೂ ಮಹಾದ್ವಾರಗಳನ್ನು ದಾಟಿ ವಿರೂಪಾಕ್ಷನ ಲಿಂಗದ ಮೇಲೆ ಹೋಗಿ ಬೀಳುವಂತೆ ಈ ಕಟ್ಟಡಗಳ ವಾಸ್ತು ರಚನೆಯಿದೆಯೆಂದು ಹೇಳುವರು.

ತಾಳೀಕೋಟೆಯ ಕಾಳಿಗವೆಂದು ಹೆಸರುಪಡೆದ ರಕ್ಕಸತಂಗಡಗಿಯ ಘನಘೋರ ಸಂಗ್ರಾಮದಲ್ಲಿ ವಿಜಯಶಾಲಿಗಳಾದ ಮಹಮ್ಮದೀಯ ಸೈನಿಕರು ರಾಜಧಾನಿಯನ್ನು ಪ್ರವೇಶಿಸಿ ಅಲ್ಲಿಯ ಕಟ್ಟಡಗಳನ್ನೆಲ್ಲ ನೆಲಸಮಮಾಡಿ ಮೂರ್ತಿಗಳನ್ನು ಭೇದಿಸಿ ಅತುಲ ವೈಭವಸಂಪನ್ನವಾದ ಆ ನಗರವನ್ನು ಸುಲಿದು ಸುಟ್ಟು ಸೂರೆಗೊಂಡರು. ಈ ಸುಲಿಗೆಯ ಮತ್ತು ಹಗೆ ತೀರಿಸಿಕೊಳ್ಳುವ ಕಾರ್ಯವನ್ನು ಲಕ್ಷಾವಧಿ ಸೈನಿಕರು ಆರು ತಿಂಗಳ ಕಾಲ ಬಿಟ್ಟುಬಿಡದೆ ನಡೆಯಿಸಿದರಂತೆ. ಆಗ ವಿಜಯನಗರದ ರಾಜಧಾನಿಯೊಳಗಿನ ಕಟ್ಟಡಗಳಲ್ಲಿ ಒಂದು ಕಲ್ಲಿನ ಮೇಲೆ ಇನ್ನೊಂದು ಕಲ್ಲು ಉಳಿಯಲಿಲ್ಲವೆಂದು ಹೇಳುವುದನ್ನು ಕೇಳಿದಾಗ ಯಾವ ಕನ್ನಡಿಗನ ಎದೆ ಕರಗಿ ಕಣ್ಣುಗಳಲ್ಲಿ ನೀರು ಸುರಿಯದು? ಹಂಪೆ ವಿಜಯನಗರಗಳಲ್ಲಿ ವಿರೂಪಾಕ್ಷನ ಮಂದಿರವಿಗ್ರಹಗಳ ಹೊರತು ಇನ್ನಾವುದೂ ಆ ಮೂರ್ತಿಭೇದಕರ ಕಣ್ಣು ತಪ್ಪಿ ಉಳಿಯಲಿಲ್ಲ. ಕಲಾನೈಪುಣ್ಯದ ಪ್ರದರ್ಶನಶಾಲೆಯೆನಿಸಿಕೊಳ್ಳಬಹುದಾದ ಎಷ್ಟೋ ಸುಂದರ ಮಂದಿರಗಳು ವಿಗ್ರಹವಿಲ್ಲದ ಹಾಳು ಕಟ್ಟಡಗಳಾಗಿ ಕಣ್ಣಕಪ್ಪಡಿ ಕಾಡಗುಬ್ಬಿ ಪಾರಿವಾಳಗಳ ಬೀಡಾಗಿ ದೆವ್ವಗಳ ಆಲಯಗಳಾಗಿರುವಾಗ ಇದೊಂದೇ ಮಂದಿರವು ಹೇಗೆ ಅಚ್ಚಳಿಯದೆ ಉಳಿಯಿತೆಂಬ ಮಾತಿಗೆ ಶ್ರೀವಿರೂಪಾಕ್ಷನೇ ಉತ್ತರ ಹೇಳಬೇಕು. ಈ ವಿಷಯದಲ್ಲಿ ಅಲ್ಲಿಯ ಅರ್ಚಕರು ಹೇಳುವ ಅನೇಕ ಕಥೆಗಳಲ್ಲಿ ಯಾವುದನ್ನು ನಂಬಬೇಕೋ ತಿಳಿಯದಂತಾಗುವುದು. ಏನಿದ್ದರೂ ವಿಜಯೋನ್ಮತ್ತರಾದ ಮಹಮ್ಮದೀಯ ಸೈನಿಕರ ಕೈಯೊಳಗಿಂದ ಪಾರಾಗಿ ಉಳಿದ ಇದೊಂದೇ ಪುರಾತನವಾದ ಕಟ್ಟಡವು ಕನ್ನಡಿಗರ ಬುದ್ಧಿಕುಶಲತೆ ಶಿಲ್ಪಕಲಾ ನೈಪುಣ್ಯ ಇವುಗಳನ್ನು ಸಾರುತ್ತ ಇಂದಿಗೂ ಬಹು ಗಾಂಭೀರ್ಯದಿಂದ ನಿಂತಿರುವುದು ನಮ್ಮ ಸುದೈವದ ಮಾತೆನ್ನಬೇಕು. ಪಂಪಾನಗರವಾಸಿಯಾದ ಕನ್ನಡ ಕವಿ ಹರಿಹರದೇವನು ಬೇಡಿಕೊಂಡಂತೆ “ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ'' ಎಂದು ಆಗಿನ ಭಕ್ತವೃಂದವು ಬೇಡಿಕೊಂಡುದರಿಂದ ಆತನ ಕರುಣೆಯಿಂದಲೇ ಈ ಕಟ್ಟಡವು ನಿರಾಪದವಾಗಿ ಉಳಿಯಿತೆಂದು ಭಾವುಕರು ಭಾವಿಸಿದರೆ ತಪ್ಪೇನು?

ವಿರೂಪಾಕ್ಷನ ಮಂದಿರದ ಹಿಂದುಗಡೆಯಲ್ಲಿ ಕನ್ನಡರಾಯರ ಮೆಚ್ಚಿಗೆಯ ಶ್ರೀಭುವನೇಶ್ವರಿಯ ಮಂದಿರವಿದೆ. ಇಲ್ಲಿಯೇ ಕನ್ನಡಿಗರ

ಭಾಗ್ಯೋದಯಕ್ಕೆ ಕಾರಣಭೂತರಾದ ವಿದ್ಯಾರಣ್ಯರು ಒಂದು ತಪ (ಹನ್ನೆರಡು ವರುಷ) ಕಾಲ ತಪಶ್ಚರ್ಯೆಗೈದು ಭುವನೇಶ್ವರಿಯನ್ನು ಮೆಚ್ಚಿಸಿ ಈ ಪ್ರದೇಶದಲ್ಲೆಲ್ಲ ಸುವರ್ಣವೃಷ್ಟಿಯನ್ನು ಕರೆಯಿಸಿದರಂತೆ. ಇದರ ನೆರೆಯಲ್ಲಿಯೇ ವಿರೂಪಾಕ್ಷನ ಗರ್ಭಗುಡಿಯ ಹಿಂಭಾಗದಲ್ಲಿ ಒಂದು ಚಿಕ್ಕ ಸುಂದರ ಮಂದಿರದಲ್ಲಿ ವಿದ್ಯಾರಣ್ಯಸ್ವಾಮಿಗಳ ಅಮೃತ ಶಿಲಾಮೂರ್ತಿಯುಂಟು. ಅದನ್ನು ನೋಡಿದೊಡನೆ ಆ ಮಹಾಮುನಿಯ ವೈರಾಗ್ಯಸಂಪನ್ನತೆ ರಾಜಕರಣನಿಪುಣತೆ ಲೋಕಪ್ರಿಯತೆ ಮುಂತಾದ ಗುಣಗಳು ನಮ್ಮ ಕಣ್ಣೆದಿರಿಗೆ ಕಟ್ಟುವುವಲ್ಲದೆ ಹೃದಯವು ಭಕ್ತಿಭಾವದಿಂದ ತುಂಬಿ ತಲೆಯು ತಾನಾಗಿ ಬಾಗುವುದು. ಸಮೀಪದಲ್ಲಿಯೇ ಪರಮಪಾವನ ತುಂಗಭದ್ರಾ ನದಿಯು ಎರಡು ಗುಡ್ಡಗಳ ನಡುವಿನ ಕೊಳ್ಳದಲ್ಲಿ ಭೋರ್ಗರೆಯುತ್ತ ಹರಿಯುತ್ತಿರುವುದು. ನದಿಯ ದಂಡೆಯ ಮೇಲಣ ಪ್ರಕೃತಿಸೌಂದರ್ಯವು ಅವರ್ಣನೀಯವಾಗಿದೆ. ಪಂಪಾಯಾತ್ರೆಗೆ ಹೊರಟ ನಾವು ಧಾರ್ಮಿಕ ವಿಧಿಗಳನ್ನೇನಾದರೂ ಮಾಡುವುದಿದ್ದರೆ ಈ ನದಿಯ ತೀರದಲ್ಲಿ ಮಾಡಬೇಕು. ಇತಿಹಾಸಪ್ರಸಿದ್ಧವಾದ ಈ ನಗರಕ್ಕೆ ಬಂದ ನಾವು ಮುಂದೆ ಹೇಳುವ ನೋಟಗಳನ್ನು ನೋಡದೆ ಇಲ್ಲಿಂದಲೇ ತಿರುಗಿ ಹೊರಡುವ ಸಂಭವವಿಲ್ಲ. ಈಗ ಕೇವಲ ಗುಡ್ಡಗಾಡಾಗಿ ಪರಿಣಮಿಸಿರುವ ನೆರೆಯ ಪ್ರದೇಶದಲ್ಲಿ ಎಲ್ಲಿ ನೋಡಿದರೂ ಪುರಾತನ ಮಂದಿರಗಳ ಇಲ್ಲವೆ ಕಟ್ಟಡಗಳ ಅವಶೇಷಗಳು ಗೋಚರವಾಗುವುವು. ಅವನ್ನೆಲ್ಲ ಕ್ರಮವಾಗಿ ನೋಡಿ ಐತಿಹಾಸಿಕ ವೃತ್ತಾಂತವನ್ನು ತಿಳಿದುಕೊಳ್ಳುವ ಅವಕಾಶವೂ ಅನುಕೂಲವೂ ನಮಗಿರದಿದ್ದರೂ ಒಂದು ವಿಧವಾದ ಮಂಕು ಲವಲವಿಕೆಯಿಂದ ಸಾಗಿದಾಗ ಕೋದಂಡರಾಮ, ಕೋಟಿಲಿಂಗ, ಸೀತೆಯ ಸೆರಗು ಮೊದಲಾದ ಗುಡಿಗುಂಡಾರಗಳು ನಮ್ಮ ಕಣ್ಣಿಗೆ ಬೀಳುವುವು. ತರುವಾಯ ಕೃಷ್ಣದೇವರಾಯನ ಕಾಲದಲ್ಲಿ ಕಟ್ಟಲಾರಂಭವಾಗಿ ಮುಂದಣ ಅರಸರಾದ ಅಚ್ಯುತರಾಯ ಸದಾಶಿವರಾಯರ ಕಾಲದಲ್ಲಿಯೂ ಮುಂದೆ ಸಾಗಿದ್ದ ಅಪ್ರತಿಮ ಸರ್ವಾಂಗಸುಂದರ ದೇವಾಲಯವೊಂದು ನಮಗೆ ಗೋಚರವಾಗುವುದು. ಇದೇ ವಿಜಯವಿಠ್ಠಲನ ಮಂದಿರ. ವಿಜಯನಗರದ ವೈಭವದೊಡನೆ ಇದರ ದೈವಗತಿಯೂ ಪತನಹೊಂದಿತು. ಇದರಷ್ಟು ಮನೋವೇಧಕವೂ ಪ್ರೇಕ್ಷಣೀಯವೂ ಆದ ಕಟ್ಟಡವು ಈ ಭಾಗ

ದಲ್ಲಿ ಇನ್ನೊಂದಿಲ್ಲ. ಈ ಕಟ್ಟಡದ ರಚನೆಯಲ್ಲಿ ಕನ್ನಡಶಿಲ್ಪಿಗಳು ಇನ್ನಿಲ್ಲದಷ್ಟು ನೈಪುಣ್ಯವನ್ನು ತೋರಿಸಿರುವರು. ಹೆಚ್ಚು ವರ್ಣನೆಗೆ ಸ್ಥಳವಿಲ್ಲದುದರಿಂದ ಒಂದೇ ಒಂದು ಮಾತನ್ನು ಇಲ್ಲಿ ಹೇಳುವ. ಈ ಮಂದಿರದ ಮುಖ್ಯಕಂಬಗಳಲ್ಲಿ ಒಂದೊಂದರ ಸುತ್ತಲೂ ೧೩ ಚಿಕ್ಕ ಕಂಬಗಳನ್ನು ನಿಲ್ಲಿಸಿ ಅವನ್ನು ಬಾರಿಸಿದರೆ ಸ, ರಿ, ಗ, ಮ ಮುಂತಾದ ಮಂಜುಳವಾದ ಮಂದ್ರ ತಾರ ಸಪ್ತಸ್ವರಗಳು ಹುಟ್ಟುವಂತೆ ರಚನೆಮಾಡಿರುವರು. ಮೂರ್ತಿ ಶಿಲ್ಪದಲ್ಲ ನಮ್ಮವರಿಗಿದ್ದ ಅಪ್ರತಿಮ ನೈಪುಣ್ಯವನ್ನು ತೋರ್ಪಡಿಸಿದ ಎಲ್ಲ ವಿಧದ ಮಾದರಿಗಳನ್ನು ನಾವು ಇಲ್ಲಿ ನೋಡಬಹುದು. ಆದರೆ ಅವೆಲ್ಲ ದೈವಗತಿಯಿಂದ ಅಸ್ತವ್ಯಸ್ತವಾಗಿ ಛಿನ್ನಭಿನ್ನವಾಗಿವೆ. ಇಲ್ಲಿಂದ ಮುಂದೆ ವಿಜಯನಗರಕ್ಕೆ ಹೋಗುವ ದಾರಿಯಲ್ಲಿ ಉಗ್ರ ನರಸಿಂಹ, ಬಡವಿಯ ಲಿಂಗ, ಉದ್ದಾನ ವೀರಭದ್ರ ಮೊದಲಾದ ಹಲವು ಚಿಕ್ಕ ದೊಡ್ಡ ಗುಡಿಗಳು ಗೋಚರವಾಗುವುವು. ಯಾವುದರಲ್ಲಿಯೂ ವಿಗ್ರಹವಿಲ್ಲ. ಕಲಾಕೌಶಲ್ಯದ ಆಗರವೆನಿಸುವ ಕಟ್ಟಡಗಳೆಲ್ಲ ಹರಿದು ಮುರಿದು ಗೂಗೆಗಳ ಬೀಡಾಗಿ ಹೋಗಿವೆ. ಆ ದಾರಿಯೊಳಗೆ ಮುಂದೆ ಸಾಗಿದರೆ 'ನಗಾರಖಾನೆ' ಎಂಬ ಕಟ್ಟಡವು ಕಾಣಬರುವುದು. ಅದು ಶತ್ರುಗಳ ಗಮನಾಗಮನ ನಿರೀಕ್ಷಣೆಗಾಗಿ ನಗರ ರಕ್ಷಕರು ನಿಂತು ನೋಡಲು ಅನುಕೂಲವಾಗುವಂತೆ ಎಲ್ಲಕ್ಕೂ ಹೆಚ್ಚು ಎತ್ತರವಾದ ಸ್ಥಳದಲ್ಲಿ ಕಟ್ಟಿದೆ. ಅದರ ಮೇಲೆ ನಿಂತು ನೋಡಿದರೆ ಸುತ್ತಲಿನ ನಿಸರ್ಗಸೌಂದರ್ಯವೂ ವಿಜಯನಗರದ ಇತಿಹಾಸ ಪ್ರಸಿದ್ಧವಾದ ಎಲ್ಲ ಭಾಗಗಳೂ ಏಕಕಾಲಕ್ಕೆ ಗೋಚರವಾಗಿ ಮನಸ್ಸು ಮುಗ್ಧವಾಗುವುದು. ವಿಜಯನಗರದೊಳಗಿನ ಗಜಶಾಲೆ, ಅಶ್ವಶಾಲೆ, ಮಜ್ಜನಶಾಲೆ, ದಸರೆಯ ದಿಬ್ಬ, ಸಭಾಮಂಟಪ ಮುಂತಾದ ಕಟ್ಟಡಗಳು ಈಗ ವಿಧ್ವಸ್ತವಾಗಿಹೋಗಿ ಆಯಾ ಸ್ಥಳಕ್ಕೆ ಹೋದಾಗ ಅವುಗಳ ಹೆಸರುಗಳನ್ನು ಕೇಳಿ ತಿಳಿದುಕೊಳ್ಳಬೇಕಾಗುವುದಲ್ಲದೆ ಅವನ್ನು ಸರಿಯಾಗಿ ಗುರುತಿಸಲು ಸಾಧ್ಯವಿಲ್ಲ. ರಾಯರ ವೈಭವಕಾಲದಲ್ಲಿ ಮೂವತ್ತು ಲಕ್ಷ ಜನವಸತಿಯುಳ್ಳ ಈ ಮಹಾ ನಗರವು ಈಗ ನಿರ್ಜನವಾಗಿ ಕಾಡಮೃಗಗಳ ಬೀಡಾದುದು ಕರಾಳ ಕಾಲನ ಮಹಿಮೆಯಲ್ಲದೆ ಮತ್ತೇನು ? ಹಂಪೆಯ ಉತ್ತರ ದಿಕ್ಕಿಗೆ ತುಂಗಭದ್ರೆಯ ಆಚೆಯ ದಂಡೆಗೆ ಆನೆಗುಂದಿಯಿದೆ. ವಿಜಯನಗರದ ಸ್ಥಾಪನೆಗಿಂತ ಮೊದಲು ಕನ್ನಡ ರಾಜರ ರಾಜಧಾನಿಯಾಗಿದ್ದ ಈ ನಗರವೂ ಸುತ್ತಲಿನ

ದುರ್ಗವೂ ಹಾಳಾಗಿ ಈಗ ಇದೊಂದು ಚಿಕ್ಕ ಹಳ್ಳಿಯಾಗಿದೆ. ಇಲ್ಲಿಂದ ಪಂಪಾಸರೋವರಕ್ಕೆ ಹೋಗುವ ದಾರಿಯಲ್ಲಿ ಹತ್ತುವ ಗುಡ್ಡಗಾಡನ್ನು ತೋರಿಸಿ ಇಲ್ಲಿಯೇ ಪೂರ್ವದ ಕಿಷ್ಕಿಂಧಾ ನಗರವಿದ್ದಿತೆಂದು ಹೇಳುವರು. ಹಾಗೆಯೇ ಪ್ರಕೃತಿದೇವಿಯ ಮನೋಹರವಾದ ಹಲವು ದೃಶ್ಯಗಳನ್ನು ನೋಡುತ್ತ ಮುಂದೆ ಸಾಗಿದರೆ ಪಂಪಾ ಸರೋವರವೆಂದು ಹೇಳುವ ಸುಮಾರು ೪೦ ಅಡಿ ಉದ್ದ, ೩೦ ಅಡಿ ಅಗಲ ಇರುವ ಚಿಕ್ಕ ಪುಷ್ಕರಿಣಿ ಬರುವುದು. ದಾರಿಯಲ್ಲಿ ಅಸಂಖ್ಯ ವಾನರ ವೃಂದವು ಅಣಕಿಸುತ್ತ ಹಿಂದಣ ವಾಲಿ ಸುಗ್ರೀವರ ಕಪಿಸೈನ್ಯದ ನೆನಪು ತಂದುಕೊಡುವುದು. ಆಗ ಈ ಕಪಿಸಮೂಹವೇ ರಾಮಾಯಣದಲ್ಲಿ ವರ್ಣಿತವಾದ ವಾನರ ಸೈನ್ಯವಾಗಿದ್ದಿತೋ ಎಂಬ ವಿಚಾರಣೀಯವಾದ ಮಾತೊಂದು ಮನಸ್ಸಿಗೆ ಹೊಳೆಯುವುದು. ಈ ಪ್ರದೇಶದಲ್ಲಿ ಸಂಚರಿಸುವಾಗ ಭಾವುಕರಾದ ಯಾತ್ರಿಕರ ಹೃದಯವು ಭಕ್ತಿಯಿಂದ ತುಂಬಿ ಬರುವುದು.

ಪಂಪಾಯಾತ್ರೆಗೆ ಹೊರಟ ನಾವು ಇಲ್ಲಿಯವರೆಗೂ ಮುಂದೇನಿದೆ ಮುಂದೇನಿದೆ ಎಂಬ ಕುತೂಹಲದಿಂದ ಮುಂದೆ ಮುಂದೆ ಸಾಗಿದೆವು. ಇನ್ನು ಹಿಂದಿರುಗಬೇಕು ಹೀಗೆ ಹಿಂದಿರುಗಿದಾಗ ಇಂತಹ ಬಲಾಢ್ಯವಾದ ಮಹಾ ಸಾಮ್ರಾಜ್ಯವೇ ಕಾಲಚಕ್ರದ ಗತಿಯಲ್ಲಿ ಸಿಕ್ಕಿ ಮಣ್ಣುಪಾಲಾಗಿರುವಾಗ ಅಲ್ಲಿನ ಒಂದು ಕೈಗಲ್ಲಿಗೂ ಕಡೆಯೆನಿಸುವ ನಮ್ಮ ಅಧಿಕಾರ ದರ್ಪ ವಿದ್ಯೆ ಮುಂತಾದುದರ ಹೆಮ್ಮೆ ತಾನಾಗಿ ಗಲಿತವಾಗಿ ಮನಸ್ಸು ಕರ್ತವ್ಯಸ್ಫೂರ್ತಿಯನ್ನು ಹೊಂದುವುದು; ಹಂಪೆಗೆ ಪೆಂಪು ತಂದ ಕನ್ನಡಿಗರ ಕುಲಗುರು ವಿದ್ಯಾರಣ್ಯಸ್ವಾಮಿಗಳ ಉದ್ಬೋಧಕ ದಿವ್ಯಚರಿತ್ರವನ್ನು ನೆನೆದು ಹುರುಪುಗೊಳ್ಳುವುದು; ವಿಜಯನಗರ ಸಾಮ್ರಾಜ್ಯವು ಮರೆತುಹೋದ ಸಾಮ್ರಾಜ್ಯವೆಂದು ಕೆಲವರು ಹೇಳಿದರೂ ಅದು ಎಂದೂ ಮರೆಯದಂಥ ಕನ್ನಡ ಸಾಮ್ರಾಜ್ಯವೆಂದು ಹೆಮ್ಮೆಬಡುವಂತೆ! ಕನ್ನಡಿಗರನ್ನು ಮತ್ತೆ ಎಚ್ಚರುಗೊಳಿಸಿದ ಶ್ರೀಪಂಪಾವಿರೂಪಾಕ್ಷನ ಅಗಾಧ ಲೀಲೆಗೆ ಬೆರಗುಬಡುವುದು.

# ೯. ಮಹಾರಾಣಿ ಲಕ್ಷ್ಮೀಬಾಯಿ-ಭವಿಷ್ಯದ ಸೂಚನೆ.

ಪುಣ್ಯನದಿ ಭಾಗೀರಥಿಯು ಹಿಮಾಲಯದಿಂದ ಇಳಿದು ಹರಿದ್ವಾರದ ಮಾರ್ಗವಾಗಿ ಮುಂದೆ ಬಂದ ಬಳಿಕ ಪುಣ್ಯ ಕ್ಷೇತ್ರವಾದ ಬ್ರಹ್ಮಾವರ್ತದ ನೆರೆಯಲ್ಲಿ ಹರಿಯುವುದು. ಬ್ರಹ್ಮಾವರ್ತವು ಬಯಲು ನಾಡಿನಲ್ಲಿರುವುದರಿಂದ ಯಾತ್ರಿಕರಿಗೆ ಅಲ್ಲಿಗೆ ಹೋಗಿಬರಲು ವಿಶೇಷ ಅನುಕೂಲವಿದೆ. ಉತ್ತರ ಹಿಂದುಸ್ಥಾನದಲ್ಲಿ, ಭಾಗೀರಥಿಯ ತೀರದಲ್ಲಿ, ಹಲವು ಪುಣ್ಯಕ್ಷೇತ್ರಗಳಿರುವುವಾದರೂ ಬ್ರಹ್ಮಾವರ್ತವು ಇನ್ನೊಂದು ಕಾರಣದಿಂದ ವಿಶೇಷವಾಗಿ ಜನರಲ್ಲಿ ಪ್ರಸಿದ್ಧವಾಗಿರುವುದು. **ಶ್ರೀಮಂತ ಬಾಜೀರಾವ ಪೇಶವೆಯು** ಕೆಲಕಾಲ ಬ್ರಹ್ಮಾವರ್ತ ಕ್ಷೇತ್ರದಲ್ಲಿ ಹೋಗಿ ಉಳಿದಿದ್ದನೆಂಬುದು ಬಹು ಜನರಿಗೆ ಗೊತ್ತಿದ್ದ ವಿಷಯವೇ ಸರಿ.

ಇಂದು ಹಿಂದುಗಳ ರಾಷ್ಟ್ರೀಯ ಪರ್ವಕಾಲವೆನಿಸುವ ವಿಜಯಾದಶಮಿ. ಹಿಂದು ರಾಜರಿಗೂ ಅವರ ಸೈನಿಕ ಸೇನಾಪತಿಗಳಿಗೂ ಇಂದು ಹೊಸ ಹುರುಪು ಬರುವುದು. ಲೋಕಕಂಟಕರಾದ ರಾಕ್ಷಸರನ್ನು ಸಂಹರಿಸಿದ ದೇವಿಯನ್ನು ಆಶ್ವಿನ ಶುದ್ಧ ಪ್ರತಿಪದೆಯಿಂದಲೂ ಆರಾಧಿಸಿ ನವಮಿಯ ದಿನ ತಮ್ಮ ಆಯುಧಗಳನ್ನೂ ಅಶ್ವಗಳನ್ನೂ ಪೂಜಿಸಿ ದಶಮಿಯ ಸುಮುಹೂರ್ತದಲ್ಲಿ ವೈರಿ ರಾಜರನ್ನು ಜಯಿಸುವುದಕ್ಕಾಗಿ ತಮ್ಮ ರಾಜ್ಯದ ಸೀಮೆಯನ್ನು ಉಲ್ಲಂಘಿಸಿ ದಂಡೆತ್ತಿ ಹೋಗುವ ರೂಢಿಯು ಹಿಂದು ರಾಜರಲ್ಲಿ ಪ್ರಚಾರದಲ್ಲಿದ್ದಿತೆಂದು ಬಹು ಜನರು ಪ್ರತಿಪಾದಿಸಿರುವರು. ಈ ಸೀಮೋಲ್ಲಂಘನದ ಪೂರ್ವದಲ್ಲಿ, ಮೊದಲು ಪರದೇಶದ ಮೇಲೆ ದಂಡೆತ್ತಿ ಹೋದಾಗ ತಂದ ಸಂಪತ್ತನ್ನು ತಮ್ಮ ಇಷ್ಟಮಿತ್ರರಿಗೆ ಹಂಚುತ್ತಿದ್ದರೆಂದೂ ಆ ರೂಢಿಯೇ ಈಗಲೂ ಉಳಿದು ವಿಜಯಾದಶಮಿಯ ದಿನ ಜನರು ತಮ್ಮ ಇಷ್ಟಮಿತ್ರರನ್ನು ಕಂಡು ಶಮೀಪತ್ರ, ಜೋಳದ ಎಲೆ ಮುಂತಾದುವುಗಳನ್ನು ಬಂಗಾರ ಬೆಳ್ಳಿ ಎಂದು ಕೊಡುಕೊಳ್ಳುವ ಪದ್ಧತಿ ಇಂದಿಗೂ ನಮ್ಮ ಪ್ರಾಂತದ ಹಲವು ಕಡೆಗಳಲ್ಲಿ ಇರುವು

ದೆಂದೂ ಹೇಳುವುದುಂಟು. ಏನಿದ್ದರೂ ಹಿಂದು ರಾಜರಿಗೂ ಅವರ ಸೈನಿಕ ಸೇನಾಪತಿಗಳಿಗೂ ದಸರೆಯ ದಿನವು ಒಳ್ಳೆಯ ಉತ್ಸಾಹಕರವಾದುದೆಂಬುದು ನಿಜ; ಅಂದು ಅವರು ತಮ್ಮವರ ಯುದ್ಧವಿದ್ಯೆಯ ಪ್ರದರ್ಶನವನ್ನೂ ಮಾಡುತ್ತಿದ್ದರು. ಆ ರೂಢಿಯನ್ನನುಸರಿಸಿ ಇಂದು ಬ್ರಹ್ಮಾವರ್ತದಲ್ಲಿ ಶ್ರೀಮಂತ ಬಾಜೀರಾಯನ ಆಶ್ರಯದಲ್ಲಿ ಮಹಾಸಮಾರಂಭವು ನಡೆದಿದೆ.

ಪ್ರಾತಃಕಾಲದಿಂದಲೂ ಜನರು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿ ಎಷ್ಟು ಹೊತ್ತಿಗೆ ಬಿಡುಗಡೆ ಹೊಂದುವೆವೋ ಎಂದು ಕಳವಳಿಸುತ್ತಿದ್ದರು. ಚಿಕ್ಕ ಚಿಕ್ಕ ಮಕ್ಕಳು ಕೂಡ ತಮ್ಮ ಆಟದ ಕತ್ತಿಕೋವಿಗಳನ್ನು ಸರಿಮಾಡಿಕೊಳುತ್ತಿದ್ದರು; ಕಾಲುಗಳ ನಡುವೆ ಒಂದು ಕೋಲನ್ನು ಸೇರಿಸಿಕೊಂಡು ಅತ್ತಿತ್ತ ಓಡಾಡುತ್ತ ಕುದುರೆಯ ಸವಾರಿಯೆಂದು ಹೇಳುತ್ತಿದ್ದರು. ತರುಣ ಶೂರರ ಬಾಹುಗಳು ಸ್ಫುರಣ ಹೊಂದುತ್ತಿದ್ದುವು. ತಮ್ಮ ಸಂತತಿಯ ಯುದ್ಧ ವಿದ್ಯೆಯ ಪ್ರದರ್ಶನವನ್ನು ನೋಡುವ ತವಕದಿಂದ ವೃದ್ಧರ ಕಣ್ಣುಗಳು ಆತುರಬಡುತ್ತಿದ್ದುವು. ತಮ್ಮ ಮಕ್ಕಳ ಮೇಲ್ಮೆಯನ್ನು ನೋಡಬೇಕೆಂಬ ವೀರಮಾತೆಯರ ಮನದ ಲವಲವಿಕೆಯು ಹೊತ್ತು ಏರುತ್ತ ಬಂದಂತೆ ಹೆಚ್ಚುತ್ತ ಬಂದಿತು.

ಗಂಗಾನದಿಯ ಸಮೀಪದಲ್ಲಿರುವ ಒಂದು ವಿಶಾಲವಾದ ದಿಣ್ಣೆಯ ಮೇಲೆ ಪೂರ್ವ ಪಶ್ಚಿಮ ಉತ್ತರ ದಿಕ್ಕುಗಳಲ್ಲಿ ಕಂಬಗಳನ್ನು ನೆಟ್ಟು ಅವುಗಳಿಗೆ ಗಳಗಳನ್ನು ಕಟ್ಟಿ ಮಧ್ಯದಲ್ಲಿ ವಿಶಾಲವಾದ ರಂಗವನ್ನು ಸಿದ್ಧಮಾಡಿದ್ದರು. ಸುತ್ತಲೂ ತಳಿರು ತೋರಣಗಳನ್ನು ಕಟ್ಟಿ ಹೂಮಾಲೆಗಳನ್ನು ಅಲೆಬಿಟ್ಟು ಆ ರಂಗಸ್ಥಳವನ್ನು ಸಿಂಗರಿಸಿದ್ದರು. ಸುಮಾರು ಎರಡು ಗಂಟೆ ಹೊಡೆದಿರಬಹುದು; ಮೈದಾನದಲ್ಲಿ ಜನರು ನೆರೆಯತೊಡಗಿದರು. ಪೂರ್ವದ ನಿಟ್ಟಿನಲ್ಲಿ ಗಂಡುಸರು ಕುಳಿತುಕೊಳ್ಳಬೇಕೆಂದೂ ಉತ್ತರದ ಕಡೆಗೂ ಪಶ್ಚಿಮಕ್ಕಿರುವ ದಿಣ್ಣೆಯ ಉತ್ತರದ ಕಡೆಯ ಕೆಲವು ಭಾಗದಲ್ಲಿಯೂ ಯಾರೂ ಹೋಗಬಾರದೆಂದೂ ಪಶ್ಚಿಮ ದಿಕ್ಕಿಗಿರುವ ಉಳಿದ ಭಾಗದಲ್ಲಿ ಹೆಂಗುಸರೂ ಹುಡುಗರೂ ಕುಳಿತುಕೊಳ್ಳಬಹುದೆಂದೂ ಗೊತ್ತಾಗಿದ್ದಿತು. ಬೆಳ್ಳಿಯ ಬೆತ್ತಗಳನ್ನು ಹಿಡಿದ ನಿಲುವಂಗಿಯ ಸಿಪಾಯಿಗಳು ಅದರಂತೆ ವ್ಯವಸ್ಥೆಯನ್ನು ಮಾಡುತ್ತಲಿದ್ದರು. ಉತ್ತರ ಈಶಾನ್ಯ ಕಡೆಗಳಲ್ಲಿ ಸಿಂಗರಿಸಿದ ಬಗೆ ಬಗೆಯ ಆಸನಗಳನ್ನಿಟ್ಟಿದ್ದರು.

ನಾಲ್ಕು ಹೊಡೆಯಿತು. ಉಗ್ರವಾದ ಬಿಸಿಲಿನ ತಾಪವು ಕುಂದುತ್ತ ಬರಲು ಸಂಧ್ಯಾಕಾಲದ ತಂಗಾಳಿ ಬೀಸಲಾರಂಭಿಸಿತು. ಮೈದಾನದ ತುಂಬ ಜನರು ನೆರೆದಿದ್ದರು. ಕೆಳಗೆ ನಿಲ್ಲುವುದಕ್ಕೂ ಸ್ಥಳವು ಸಿಕ್ಕದಂತಾಗಲು ಗಟ್ಟಿಗರಾದವರು ಗಿಡಗಳನ್ನೇರಿ ಕುಳಿತರು. ಅಷ್ಟರಲ್ಲಿ ಗಿಡಗಳ ಮೇಲಿದ್ದವರು, "ಜಯ! ರಘುವೀರ ಸಮರ್ಥ!" ಎಂದು ಜಯ ಧ್ವನಿ ಮಾಡಿದರು. ಅದನ್ನು ಕೇಳಿ ಕೆಲಸವಿಲ್ಲದೆ ಅತ್ತಿತ್ತಲಿನ ಹರಟೆಯಲ್ಲಿ ತೊಡಗಿದ್ದವರೆಲ್ಲರೂ ಎಚ್ಚತ್ತು ಎದ್ದುನಿಂತು ದಕ್ಷಿಣದ ಕಡೆಯ ರಾಜಮಾರ್ಗವನ್ನು ನಿರೀಕ್ಷಿಸ ತೊಡಗಿದರು. ಒಂದೆಡೆಗೆ ಗುಂಪಾಗಿ ಕುಳಿತು ತಂಬಾಕು ಸೇದುತ್ತಲಿದ್ದ ಸಿಲಂವಂಗಿಯ ಸಿಪಾಯಿಗಳು ಪುನಃ ತಮ್ಮ ಕರ್ತವ್ಯದಕ್ಷತೆಯನ್ನು ತೋರಿಸಲಾರಂಭಿಸಿದರು. ಅವರ ಕೈಯಲ್ಲಿಯ ಬೆಳ್ಳಿಯ ಬೆತ್ತಗಳು ಪುನಃ ಥಳಥಳಿಸಲಾರಂಭಿಸಿದುವು.

ಮೊದಲು ದೂರದಲ್ಲಿ ನಗಾರಿ ನೌಬತ್ತುಗಳು ಭೋರಿಡುವ ಧ್ವನಿಯು ಕೇಳಬಂದಿತು; ಆ ಮೇಲೆ ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಬರುವ ಶ್ರೀಮಂತ ಬಾಜೀರಾವ ಪೇಶವೆಯೂ ನೂರಾರು ಕುದುರೆಗಳ ಮೇಲೆ ಸರದಾರರೂ ಸವಾರರೂ ಬರುವುದು ಕಾಣಿಸಿತು. ಅವರ ಹಿಂದೆ ಹತ್ತೆಂಟು ಪಲ್ಲಕ್ಕಿಗಳೂ ಬಂದುವು. ಎಲ್ಲರೂ ಮೈದಾನಕ್ಕೆ ಬಂದು ಮುಟ್ಟಿದೊಡನೆಯೇ ನೆರೆದವರೆಲ್ಲ ಎದ್ದು ನಿಂತು "ಮಹಾರಾಜ ಶ್ರೀಮಂತ ಬಾಜೀರಾಯರಿಗೆ ಜಯವಾಗಲಿ!" ಎಂದು ಜಯಧ್ವನಿ ಮಾಡಿ ಸನ್ಮಾನಿಸಿದರು. ಶ್ರೀಮಂತನು ಆನೆಯಿಂದಿಳಿದುಹೋಗಿ ಗೊತ್ತಾದ ಆಸನದಲ್ಲಿ ಕುಳಿತ ಬಳಿಕ ಸರದಾರರೂ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತುಕೊಂಡರು. ಕೆಲಜನ ಕುದುರೆಯ ಸವಾರರು ವ್ಯವಸ್ಥೆಯನ್ನು ಕಾದುಕೊಳ್ಳುವುದಕ್ಕಾಗಿ ಮೈದಾನದ ಬೇರೆ ಬೇರೆ ಭಾಗಗಳಲ್ಲಿ ಹೋಗಿ ನಿಂತುಕೊಂಡರು. ಪಲ್ಲಕ್ಕಿಯಲ್ಲಿ ಬಂದ ಶ್ರೀಮಂತನ ಪರಿವಾರಕ್ಕೆ ಸೇರಿದ ಸ್ತ್ರೀಯರು ತಮಗೆಂದು ಗೊತ್ತಾಗಿದ್ದ ಸ್ಥಳದಲ್ಲಿ ಹೋಗಿ ಕುಳಿತರು. ಅಷ್ಟರಲ್ಲಿ ಐದು ಹೊಡೆಯಿತು. ನಿಯಮಿತ ಕಾಲವು ಒದಗಿತೆಂಬುದನ್ನು ಸೂಚಿಸುವುದಕ್ಕಾಗಿ ಒಂದು ತೋಫು ಹಾರಿತು; ಕೂಡಲೆ ಕಾರ್ಯಕ್ರಮಕ್ಕೆ ಆರಂಭವಾಯಿತು. ಆಗ ಅಲ್ಲಿ ನಡೆದ ಎಲ್ಲ ಕೆಲಸಗಳನ್ನು ವರ್ಣಿಸಲು ಅವಕಾಶವಿಲ್ಲದಿರುವುದರಿಂದ ಕೆಲವು ಮುಖ್ಯವಾದುವುಗಳನ್ನು ಮಾತ್ರ ಇಲ್ಲಿ ಬರೆಯುವೆವು.

ಮೊದಲು ಸೈನಿಕರ ಉಡಿಗೆತೊಡಿಗೆಗಳನ್ನು ಧರಿಸಿದ ಕೆಲವರು ರಂಗಸ್ಥಳಕ್ಕೆ ಬಂದು ಚಮತ್ಕಾರವಾಗಿ ಕತ್ತಿಗಳನ್ನು ತಿರುವಿ ತೋರಿಸಿದರು. ಅವರಲ್ಲಿ ಒಬ್ಬಿಬ್ಬರು ಹಣೆಗೆ ಹೂವಿನ ಚೆಂಡು ಕಟ್ಟಿಕೊಂಡು ಎದೆಗೆ ಕಟ್ಟಿದ ಕತ್ತಿಯನ್ನು ತಿರುವಿ ಅದರಿಂದ ಆ ಹೂವಿನ ಚೆಂಡನ್ನು ತುಂಡುತುಂಡಾಗಿ ಕತ್ತರಿಸಿ ಚೆಲ್ಲಿದರು. ಮತ್ತಿಬ್ಬರು, ಸುತ್ತಲೂ ನಿಂತ ಹದಿನಾರು ಜನರು ತಮ್ಮ ಮೇಲೆ ಏಕಕಾಲಕ್ಕೆ ಒಗೆದ ಹದಿನಾರು ಹದಿನಾರು ಲಿಂಬೆಯ ಹಣ್ಣುಗಳನ್ನು ಎರಡೆರಡು ಹೋಳಾಗಿ ಕತ್ತರಿಸಿದರು! ಸಿಪಾಯಿಗಳು ಮೂವತ್ತೆರಡು ಮೂವತ್ತೆರಡು ಲಿಂಬೆಯ ಹೋಳುಗಳನ್ನು ಆರಿಸಿ ತಂದು ಶ್ರೀಮಂತರ ಮುಂದೆ ಎಣಿಸಿ ಇರಿಸಿದರು. ಇದರಂತೆಯೇ ಕೆಲವರು ಭಾಲೆಗಳನ್ನು ಎಸೆಯುವುದರಲ್ಲಿಯೂ ಕೆಲವರು ಎಸೆದ ಭಾಲೆಯನ್ನು ತಪ್ಪಿಸಿಕೊಳ್ಳುವುದರಲ್ಲಿಯೂ ಕತ್ತಿಯ ಪೆಟ್ಟುಗಳನ್ನು ತಪ್ಪಿಸಿಕೊಳ್ಳುವುದರಲ್ಲಿಯೂ ತಮಗಿರುವ ಜಾಣ್ಮೆಯನ್ನು ತೋರಿಸಿದರು. ಕೆಲವರು ಕುಸ್ತಿಗಳನ್ನಾಡಿ ತೋರಿಸಿದರು. ತರುವಾಯ ಸುಮಾರು ಇಪ್ಪತ್ತು ವರುಷದ ತರುಣನೊಬ್ಬನು ಅಂಚಿನ ಧೋತರವನ್ನುಟ್ಟು ಬಿಳಿಯ ನಿಲುವಂಗಿಯನ್ನು ತೊಟ್ಟು ಜರತಾರಿಯ ಮುಂಡಾಸವನ್ನು ಧರಿಸಿಕೊಂಡು, ಹೆಗಲ ಮೇಲೆ ಜೋಡು ಕೊಳವೆಯ ಬಂದೂಕನ್ನು ಇಟ್ಟುಕೊಂಡು ಒಳ್ಳೆಯ ವೀರದರ್ಪವನ್ನು ಅಭಿನಯಿಸುತ್ತ ರಂಗಸ್ಥಳಕ್ಕೆ ಬಂದನು. ಕೂಡಲೆ ಎಲ್ಲರೂ ಸರಿದು ನಿಂತರು. ತರುವಾಯ ಅವನು ಶ್ರೀಮಂತರಿಗೂ ಸಭೆಗೂ ಕೊನೆಗೆ ತನ್ನ ಬಂದೂಕಿಗೂ ಪದ್ಧತಿಯಂತೆ ನಮಸ್ಕಾರ ಮಾಡಿ ಬಂದೂಕಿಗೆ ಕಾಡತೂಸನ್ನು ಹಾಕಿಕೊಂಡು ಸಿದ್ಧನಾಗಿ ಕುಳಿತನು. ಕೂಡಲೆ ಅಲ್ಲಿಂದ ಸುಮಾರು ಇನ್ನೂರು ಗಜ ದೂರದಲ್ಲಿ ಒಬ್ಬನು ಪದ್ಮಾಸನವನ್ನು ಹಾಕಿಕೊಂಡು ಸ್ಥಿರವಾಗಿ ಕುಳಿತುಕೊಳ್ಳಲು ಮತ್ತೊಬ್ಬನು ಅವನ ನಡುನೆತ್ತಿಯಮೇಲೆ ಒಂದು ಲಿಂಬೆಯ ಹಣ್ಣನ್ನು, ಕೆಳಗಿಟ್ಟ ಚಿಕ್ಕ ಉಂಗುರದ ಮೇಲೆ ನಿಲ್ಲಿಸಿ ದೂರ ಸರಿದು ನಿಂತನು. ಕೂಡಲೆ ಗುರಿಹೊಡೆಯುವವನು ಮತ್ತೊಮ್ಮೆ ತನ್ನ ಬಂದೂಕಿಗೆ ನಮಸ್ಕಾರ ಮಾಡಿ ಒಕ್ಕಣ್ಣಿನಿಂದ ಕ್ಷಣಕಾಲ ಗುರಿನೋಡಿ ಬಂದೂಕಿನ ಕಿವಿಯ ಮೇಲೆ ಬೆರಳಿಟ್ಟನು. ಎಲ್ಲರೂ ಭೀತಿವಿಸ್ಮಯಗಳಿಂದ ಬೆಪ್ಪಾಗಿ ಕುಳಿತಿದ್ದರು. ಮೊದಲು 'ಕಟ್' ಆಮೇಲೆ 'ಢಮ್!' ಎಂಬ ಶಬ್ದಗಳಾದುವು. ದೂರದಲ್ಲಿ

ಕುಳಿತವನ ತಲೆಯ ಮೇಲಿನ ಲಿಂಬೆಯ ಹಣ್ಣು ತುಂಡು ತುಂಡಾಗಿ ಸಿಡಿದು ಹೋಯಿತು. ಇದೇ ರೀತಿಯಾಗಿ ಮೂರುಸಾರೆ ನಡೆಯಿತು. "ವಾಹವ್ವಾ! ತಾತ್ಯಾಸಾಹೇಬ! ಮರಾಠರ ಹೆಸರು ಉಳಿಸಿದಿರಿ!" ಎಂಬ ಆನಂದ ಧ್ವನಿಯು ನಾಲ್ಕು ಕಡೆಗಳಿಂದಲೂ ಕೇಳಬಂದಿತು.

ಇಷ್ಟಾದ ಕೂಡಲೆ ಪುನಃ ತೋಫಿನ ಸಪ್ಪುಳವಾಯಿತು. ರಂಗಸ್ಥಳದ ನಡುವೆ ಮೂರು ಮೂರು ಅಡಿ ಎತ್ತರದ ಮೇಲೆ ಹತ್ತು ಅಡಿ ಅಂತರದಿಂದ ಎರಡು ಗಳಗಳನ್ನು ಕಟ್ಟಿದರು. ಅಷ್ಟರಲ್ಲಿ ಶರವೇಗದಿಂದ ಧಾವಿಸಿ ಬರುವ ಮೂರು ಕುದುರೆಗಳು ಕಾಣಿಸಿದುವು. ಮೊದಲು ಎರಡು ಕುದುರೆಗಳು ಜೋಡಿಯಾಗಿ ಮುಂದೆ ಬರುತ್ತಿದ್ದುವು. ಇನ್ನೊಂದು ಕುದುರೆ ಹತ್ತು ಹೆಜ್ಜೆ ಹಿಂದೆ ಇದ್ದಿತು. ಹಿಂದಿನ ಕುದುರೆಯ ಮೇಲೆ ಕುಳಿತಿದ್ದ ವ್ಯಕ್ತಿಯು ತನ್ನ ಕುದುರೆಗೆ "ಪ್ರತಾಪ! ನೀನಿಂದು ನನ್ನ ಮಾನವನ್ನು ಕಳೆವೆ!" ಎನ್ನುತ್ತ, ಕೈಯೊಳಗಿನ ಕಮ್ಚಿ (ಚಾಟಿ) ಯಿಂದ ಒಂದು ಪೆಟ್ಟನ್ನು ಬಲವಾಗಿ ಹೊಡೆದದ್ದೇ ತಡ, ಆ ಕಾಠೇವಾಡದ ಕುದುರೆ ನೆಲಕ್ಕೆ ಕಾಲನ್ನು ತಾಗಿಸುವುದೋ ಇಲ್ಲವೋ ಎಂಬುದು ಕೂಡ ತಿಳಿಯದ ಹಾಗೆ ಓಡತೊಡಗಿ ಮಿಕ್ಕವೆರಡೂ ಕುದುರೆಗಳನ್ನು ಹಿಂದೆ ಹಾಕಿ ಮುಂದುವರಿದು ಬಂದಿತು. ಇದನ್ನು ನೋಡಿ ಅವರಿಬ್ಬರೂ "ಮನೂ! ಮನೂ! ಇಂದು ನಮ್ಮನ್ನು ಅಪಮಾನಗೊಳಿಸ ಬೇಡ. ನಾವು ಗಂಡುಸರಾಗಿ ನಿನ್ನಿಂದ ಪರಾಜಿತರಾದೆವೆಂದರೆ ಮರಾಟರ ಮಾನಕ್ಕೆ ಭಂಗ ಬರುವುದು. ಕುದುರೆಯ ಲಗಾಮನ್ನು ಎಳೆದು ಹಿಡಿ" ಎಂದರು. "ನಾನಾಸಾಹೇಬ, ರಾವಸಾಹೇಬ, ಕೈಮೀರಿತು ಹೀಗೆ ನಿಮ್ಮ ವಿಚಾರವಿದ್ದರೆ ನಾನು ನಿಮ್ಮೊಡನೆ ಪಂದ್ಯಾಟಕ್ಕೆ ಬರುತ್ತಿರಲೇ ಇಲ್ಲ" ಮುಂದಿನ ಮಾತು ಹೊರಡುವಷ್ಟರಲ್ಲಿ ಕುದುರೆ ಮುಂದುವರಿದು ರಂಗಸ್ಥಳಕ್ಕೆ ಬಂದು ಬಿಟ್ಟಿತು. ಮಾತಿನ ಕಡೆಗೆ ಲಕ್ಷ್ಯ ಹೋದುದರಿಂದ ಹಿಂದಿನವರ ಕುದುರೆಗಳು ಮತ್ತೆರಡು ಹೆಜ್ಜೆ ಹಿಂದಾದುವು. ಮುಂದೆ ಬಂದ ಕುದುರೆಯು ರಂಗಸ್ಥಳದ ನಡುವಿನ ಗಳದ ಹತ್ತರ ಬಂದೊಡನೆಯೇ ತಟ್ಟನೆ ನಿಂತುಬಿಟ್ಟಿತು! ಮೇಲೆ ಕುಳಿತ ವ್ಯಕ್ತಿಯು ಎಷ್ಟು ಪ್ರಯತ್ನ ಮಾಡಿದರೂ ಅದು ಗಳವನ್ನು ಹಾರ ಲೊಲ್ಲದು. ಹತಾಶ! ನಿರಾಶ! ಬಹು ಪ್ರಯತ್ನ ಮಾಡಿದ ಮೇಲೆ ಕುದುರೆ ಹಾರಿತು. ಆದರೆ ಎರಡನೆಯ ಗಳವನ್ನು ಹಾರುವಾಗ ಅದರ ಮುಂಗಾಲು

ತಡೆದು ಮುಕ್ಕರಿಸಿ ಬಿದ್ದುಬಿಟ್ಟಿತು ಮೇಲಿನ ವ್ಯಕ್ತಿ ತಟ್ಟನೆ ಹಾರಿ ನೆಲದ ಮೇಲೆ ನಿಂತಿತು! "ಅಪಶಕುನ! ದುಷ್ಟ ಕುದುರೆ ಅಪಶಕುನ ಮಾಡಿತು!" ಎಂಬ ಧ್ವನಿಯು ನೆರೆದ ಜನರ ಸಂದಣಿಯೊಳಗಿಂದ ಕೇಳಬಂದಿತು. ಬಾಜೀರಾಯನು "ಶಾಬಾಸ್! ಮನೂಬಾಯೀ, ನಾನಾಸಾಹೇಬನೂ, ರಾವಸಾಹೇಬನೂ ನಿನ್ನ ಮುಂದೆ ವೀರರಲ್ಲ" ಎಂದು ಆನಂದೋದ್ಗಾರವನ್ನು ತೆಗೆದನು. ಹಿಂದಿನ ವೆರಡು ಕುದುರೆಗಳು ರಂಗಸ್ಥಳಕ್ಕೆ ಬಂದು ಮುಟ್ಟುವುದರೊಳಗಾಗಿ ಮತ್ತೆ ಹತ್ತೆಂಟು ಕುದುರೆಗಳು ಬಂದುವು. ಅವರೆಲ್ಲರೂ ತಮ್ಮಷ್ಟಕ್ಕೆ ಸರಿದು ಹೋದರು.

ಪುನಃ ತೋಫಿನ ಗರ್ಜನೆಯಾಯಿತು. ಬಹು ಜನ ಸೇವಕರು ಬಹು ಮೂಲ್ಯದ ವಸ್ತ್ರಾಲಂಕಾರಗಳನ್ನು ಬೆಳ್ಳಿ ಬಂಗಾರಗಳ ಹರಿವಾಣಗಳಲ್ಲಿ ತುಂಬಿ ತಂದು ಶ್ರೀಮಂತರ ಮುಂದಿರಿಸಿದರು. ಆಗ ಶ್ರೀಮಂತರು "ಮನೂಬಾಯಿ, ನೀನಿಂದು ಕುದುರೆಯ ಏರಾಟದಲ್ಲಿ ಮೊದಲು ಬಂದೆ. ಆದುದರಿಂದ ಈ ವಸ್ತ್ರಾಲಂಕಾರಗಳಲ್ಲಿ ಯಾವುದು ಬೇಕೋ ತೆಗೆದುಕೋ" ಎಂದರು.

ಮನು:—ಯಾವಳು ದೊಡ್ಡರಾಜ್ಯದ ಮಹಾರಾಣಿಯಾಗುವಳೋ ಅವಳಿಗೆ ಈ ವಸ್ತ್ರಾಲಂಕಾರಗಳು ಏಕೆ? ಕೊಡುವಂತಿದ್ದರೆ ನನಗೊಂದು ಸಂಸ್ಥಾನವನ್ನು ಕೊಡಿರಿ! ಒಂದು ಆನೆಯನ್ನು ಕೊಡಿರಿ!

ಏಳು ವರುಷದ ಹಸುಗೂಸಿನ, ಅದೂ ಹೆಣ್ಣು ಹುಡುಗಿಯ ದರ್ಪದ ಮಾತಿದು! ನೆರೆದವರೆಲ್ಲರೂ ಈ ಮಾತು ಕೇಳಿ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ಆದರೆ ಈ ಮಾತಿನಿಂದ ಶ್ರೀಮಂತನ ಹೃದಯಕ್ಕೆ ಮಾತ್ರ ಕಾದ ಕುಡದಿಂದ ಬರೆಯೆಳೆದಂತಾಯಿತು. ಅವನ ಕಣ್ಣುಗಳಿಂದ ದಳದಳ ನೀರು ಸುರಿಯಿತು. ಅವನು "ತಂಗೀ! ಸಂಸ್ಥಾನಗಳನ್ನು ಕೊಡುವ ಕಾಲವು ಹಿಂದಾಗಿಹೋಯಿತು. ಈಗ ಆ ಕಾಲವು ಉಳಿದಿಲ್ಲ. ನಾವೇ ನಮ್ಮ ಅನ್ನಕ್ಕಾಗಿ ಅನ್ಯರ ಮೋರೆಯನ್ನು ನೋಡುವ ಕಾಲವನ್ನು ಈಶ್ವರನು ಒದಗಿಸಿದ್ದಾನೆ. ನಿನಗೆ ನಾನು ಕುಳಿತುಕೊಳ್ಳುವ ಆನೆಯನ್ನೇ ಕೊಡುವೆನು; ಹೆಚ್ಚಿನದು ನಮ್ಮಲ್ಲಿಲ್ಲ" ಎಂದು ಬಹು ದುಃಖದೊಡನೆ ನುಡಿದನು.

ಇದನ್ನೆಲ್ಲ ನೋಡಿ ಶ್ರೀಮಂತನ ಬಳಿಯಲ್ಲಿಯೇ ಕುಳಿತಿದ್ದ ಒಬ್ಬ ಮಧ್ಯಮ ವಯಸ್ಸಿನ ಬ್ರಾಹ್ಮಣನು "ಮನೂ, ಮನೂ, ಇತ್ತ ಬಾರಕ್ಕಾ, ಆನೆಯನ್ನು ಸಾಕುವಷ್ಟು ಸೌಭಾಗ್ಯವು ನಮಗೆಲ್ಲಿದೆ? ಅದನ್ನೇಕೆ ಬೇಡಿದೆ?" ಎಂದನು.

ಮಗಳು "ಅಪ್ಪಾ, ಹಾಗೇಕೆ ಹೇಳುವಿರಿ? ಒಂದೇಕೆ, ಇಂಥ ಹತ್ತು ಆನೆಗಳನ್ನು ಸಾಕುವ ಯೋಗ್ಯತೆ ನನ್ನ ಅದೃಷ್ಟದಲ್ಲಿದೆ" ಎಂದು ತಟ್ಟನೆ ನುಡಿದಳು.

ಅತ್ತ, ಶ್ರೀಮಂತನು ಉಳಿದವರಿಗೆ ಅವರವರ ಯೋಗ್ಯತಾನುಸಾರ ಉಡುಗೊರೆಗಳನ್ನು ಕೊಟ್ಟು ಸನ್ಮಾನಿಸಿದನು. ಅಷ್ಟರಲ್ಲಿ ಸಾಯಂಕಾಲ ವಾಯಿತು. ಸಮಾರಂಭಸಮಾಪ್ತಿಸೂಚಕವಾದ ತೋಫು ಹಾರಿತು. ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು. ಶ್ರೀಮಂತನಿಗೆ ಅಂದಿನ ಸಮಾ ರಂಭವು ಆನಂದಕರವಾಗಲಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇತ್ತ ಮನೂಬಾಯಿಯು ತನ್ನ ತಂದೆಯ ಸಂಗಡ ಮನೆಯ ಹಾದಿಯು ಹಿಡಿದಳು. ನೂರು ಮಾರು ದೂರ ಹೋಗುವಷ್ಟರಲ್ಲಿ ಭವ್ಯಾಕೃತಿಯ ಒಬ್ಬ ಮಹಾಪುರುಷನು ಇದಿರಿಗೆ ಬಂದನು; ಆ ತಂದೆಮಕ್ಕಳನ್ನು ನೋಡಿದೊಡನೆ "ಜಯ! ರಘುವೀರ ಸಮರ್ಥ!" ಎಂದನು. ತಂದೆಗೆ ಸಂಧ್ಯಾಕಾಲದ ನಸು ಗತ್ತಲೆಯಲ್ಲಿ ತಾನು ಹಿಂದೆ ಎಂದೋ ಒಂದು ದಿನ ಈ ಮಹಾಪುರುಷನನ್ನು ಎಲ್ಲಿಯೋ ನೋಡಿದ್ದೆನೆಂಬ ಸಂಶಯವುಂಟಾಯಿತು. ತಂದೆಯು ಆತನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದುದನ್ನು ನೋಡಿ, ಮನೂಬಾಯಿಯೂ ನಮ ಸ್ಕಾರ ಮಾಡಿದಳು. ಆಗ ಆತನು ಅವಳನ್ನು ಹತ್ತಿರ ಕರೆದು ತಲೆಯಮೇಲೆ ಯೂ ಬೆನ್ನಮೇಲೆಯೂ ಕೈಯಾಡಿಸುತ್ತ "ಮನೂ, ಇಂದು ನಡೆದ ಸಂಗತಿ ಗಳನ್ನೆಲ್ಲ ಕೇಳಿದೆನು. ನೀನು ನಿಜವಾಗಿ ಮಹಾರಾಣಿಯಾಗುವೆ. ನೀನು ಹೇಳಿದಂತೆ ನಿನ್ನ ಅದೃಷ್ಟದಲ್ಲಿ ಹತ್ತಿಪ್ಪತ್ತು ಆನೆಗಳನ್ನು ಸಾಕುವ ಯೋಗ್ಯತೆ ಯಿರುವುದೇನೋ ನಿಜ. ಆದರೆ ಮಗೂ, ಏನು ಹೇಳಲಿ! ನಿನಗೆ ಪ್ರಪಂಚ ದಲ್ಲಿ ಸುಖವಿಲ್ಲ! ವಿಪತ್ತುಗಳಿಗೆ ಅಂಜದಿರು. ಧರ್ಮವನ್ನು ಕಾಪಾಡಿಕೋ! ಧರ್ಮವು ನಿನ್ನನ್ನು ಕಾಪಾಡುವುದು. ಇನ್ನೊಂದು ಮಾತು. ಆಪತ್ಕಾಲದಲ್ಲಿ ನಿನಗೆ ರಾವಸಾಹೇಬನೂ ತಾತ್ಯಾಸಾಹೇಬನೂ ಸಹಾಯ ಮಾಡುವರು. ಆದರೆ ತಾವು ಗಂಡಸರು ಎಂಬ ದುರಭಿಮಾನವನ್ನು ಬಿಟ್ಟು ಅವರು ನಿನ್ನ ಸಂಗಡ ಸರಿಯಾಗಿ ನಡೆದುಕೊಂಡಿದ್ದರೆ ಎಲ್ಲರ ಹಿತವೂ ಆಗುತ್ತಿತ್ತು. ಅವರು ಅದಕ್ಕೆ ಒಪ್ಪರು, ಉಪಾಯವಿಲ್ಲ. ಸೃಷ್ಟಿಕರ್ತನ ಲೀಲೆ ಅಗಾಧವಾದುದು. ಆತನನ್ನೇ ಮರೆಹೊಗು" ಎಂದನು.

ಈ ಮಾತುಗಳನ್ನು ಕೇಳುತ್ತಿದ್ದ ಮನೂಬಾಯಿಯ ತಂದೆ "ಸ್ವಾಮೀ, ಇದೇನು, ಹೀಗೆ ಹೇಳುತ್ತೀರಿ?" ಎಂದು ಆಶ್ಚರ್ಯದೊಡನೆ ಕೇಳಿದನು. ಮಗಳುಮಾತ್ರ ಶಾಂತರೀತಿಯಿಂದ ಏನೋ ಭವಿಷ್ಯದ ವಿಚಾರವನ್ನು ಯೋಚಿಸುವವಳಂತೆ ನಿಂತುಕೊಂಡಿದ್ದಳು. ಮಹಾಪುರುಷನು "ಅಣ್ಣಾ, ಆಶ್ಚರ್ಯಗೊಳ್ಳುವ ಕಾರಣವಿಲ್ಲ; ಇಂದಿನ ಈ ದಸರೆಯ ಉತ್ಸವದಿಂದ ಭವಿಷ್ಯದಲ್ಲಿ ನಡೆಯತಕ್ಕ ಒಂದು ಮಹಾಕಾರ್ಯದ ಸೂಚನೆಯಾಯಿತು; ಬ್ರಾಹ್ಮಣ ಪುತ್ರನಾದ **ಪರಶುರಾಮನು** ಅನ್ನಪ್ರಾಶನ ಸಮಾರಂಭದಲ್ಲಿ ಧನುವನ್ನು ಹಿಡಿದು ತನ್ನ ಮುಂದಿನ ಆಯುಃಕ್ರಮವನ್ನು ಸೂಚಿಸಿದಂತೆ ನಿನ್ನ ಮಗಳು ಇಂದು ತನ್ನ ಮುಂದಿನ ಆಯುಷ್ಯದ ಮಾರ್ಗವನ್ನು ಸೂಚಿಸಿದಳು" ಎನ್ನುತ್ತ ಅಲ್ಲಿಂದ ಹೊರಟುಹೋದನು. ತಂದೆಮಕ್ಕಳೂ ಮುಂದಕ್ಕೆ ನಡೆದು ತಮ್ಮ ಮನೆಯನ್ನು ಸೇರಿದರು.

ಮುಂದೆ ಒಂದೆರಡು ವರುಷಗಳಲ್ಲಿಯೇ ಕೆಲವು ಕಥಾಂತರಗಳು ನಡೆದು ಮಹಾಪುರುಷನ ಭವಿಷ್ಯದಂತೆಯೇ ಮನೂಬಾಯಿಯು ಮಹಾರಾಣಿಯಾಗುವ ಸಂದರ್ಭವು ಒದಗಿಬಂದಿತು. ಝಾಂಸಿಯ ಮಹಾರಾಜನಾದ ಗಂಗಾಧರರಾಯನೊಡನೆ ಮನೂಬಾಯಿಯ ವಿವಾಹಸಮಾರಂಭವು ಬಹು ವೈಭವದಿಂದ ನೆರವೇರಿತು. ಗೃಹಪ್ರವೇಶದ ದಿವಸ ಮನೂಬಾಯಿಯು ವಸ್ತ್ರಾಲಂಕಾರಭೂಷಿತಳಾಗಿ ಝಾಂಸಿಯ ಅರಮನೆಯನ್ನು ಪ್ರವೇಶಿಸುವಾಗ ಪ್ರತ್ಯಕ್ಷ ಲಕ್ಷ್ಮೀದೇವಿಯಂತೆಯೇ ತೋರಿದಳಾದುದರಿಂದ ಆವಳಿಗೆ "ಲಕ್ಷ್ಮೀಬಾಯಿ" ಎಂದು ಹೆಸರಿಟ್ಟರು. ಅಂದು ಒಬ್ಬ ಸಾಮಾನ್ಯ ಬ್ರಾಹ್ಮಣನ ಮಗಳಾಗಿದ್ದ ಮನೂಬಾಯಿಯು ಇಂದು "ಮಹಾರಾಣಿ ಲಕ್ಷ್ಮೀಬಾಯಿ" ಯಾದಳು. ವಿಧಿಯ ಮಹಿಮೆ ಅಗಾಧವಾದುದು. ಯಾವ ಕಾರ್ಯವು ನಮಗೆ ಕೇವಲ ಕಲ್ಪನಾತೀತವಾಗಿರುವುದೋ ಎಂದರೆ ಯಾವುದು ಕಲ್ಪನೆಗೂ ನಿಲುಕಲಾರದೋ, ಯಾವುದು ಕನಸಿನಲ್ಲಿ ಕೂಡ ಭಾಸವಾಗಲಾರದೋ ಅಂತಹ ಅಘಟಿತ ಘಟನೆಯನ್ನು ದೈವವು ನಿರಾಯಾಸವಾಗಿ ನೆರವೇರಿಸಬಲ್ಲುದು!

× × × × × ×

ಯಾವ ದೈವದ ಕೃಪೆಯಿಂದ ಬಡ ಬ್ರಾಹ್ಮಣನ ಮಗಳು ಮಹಾರಾಣಿಯಾದಳೋ ಅದೇ ದೈವದ ಅವಕೃಪೆಯಿಂದ ಮಹಾರಾಣಿ ಲಕ್ಷ್ಮೀಬಾಯಿಯು

ಹೊಟ್ಟೆಯ ಮಗನನ್ನು ಕಳೆದುಕೊಂಡು ಪುತ್ರಶೋಕಕ್ಕೆ ಗುರಿಯಾದಳು. ಪ್ರೀತಿಯ ಪತಿಯ ವಿಯೋಗದಿಂದ ವಿಧವೆಯಾಗಿ ಪತಿಶೋಕಕ್ಕೆಡೆಯಾದಳು. ಬ್ರಿಟಿಷರ ಅಕಾರಣ ವಿರೋಧಕ್ಕೆ ಬಲಿಬಿದ್ದು ರಾಜ್ಯವನ್ನು ಕಳೆದುಕೊಂಡು ನಿರ್ಗತಿಕಳಾದಳು. ಕೊನೆಗೊಂದು ದಿನ ರಣಭೂಮಿಯಲ್ಲಿ ವೈರಿಗಳ ಖಡ್ಗಕ್ಕೆ ಮೈಯೊಡ್ಡಿ ಇಹಲೋಕವನ್ನೇ ತೊರೆದು ನಡೆದಳು. ಪ್ರಪಂಚದಲ್ಲಿ ದೈವವು ಪ್ರಬಲವಾದುದೋ, ಪುರುಷಕಾರವು ಪ್ರಬಲವಾದುದೋ ಹೇಳಲು ಸಾಧ್ಯವಿಲ್ಲದಂತಾಗಿ ಹೋಯಿತು, ಈ ಮಹಾಮಹಿಮಳ ಅದ್ಭುತ ಚರಿತ್ರೆಯಿಂದ!

## ಅಂತ್ಯ.

೧೮೫೮ ನೆಯ ಇಸ್ವಿ ಜೂನ್ ೧೮ನೆಯ ತಾರೀಖಿನ (ಜ್ಯೇಷ್ಠ ಶುದ್ಧ ೭. ಸಂವತ್ ೧೯೧೫) ದಿವಸ ಪ್ರಾತಃಕಾಲ ಆಕಾಶದಲ್ಲಿ ಸಹಸ್ರರಶ್ಮಿ ಸೂರ್ಯನಾರಾಯಣನು ಉಜ್ವಲವಾದ ತೇಜಸ್ಸಿನಿಂದ ಒಪ್ಪುತ್ತಿದ್ದನು. ಮಹಾರಾಣಿ ಲಕ್ಷ್ಮೀಬಾಯಿಯು ಪುರುಷವೇಷವನ್ನು ಧರಿಸಿ ಕೈಯಲ್ಲಿ ಖಡ್ಗವನ್ನು ಹಿಡಿದು ಸುಂದರವೂ ಚಪಲವೂ ಆದ ಕುದುರೆಯ ಮೇಲೆ ಕುಳಿತು ಯುದ್ಧವನ್ನು ಆರಂಭಿಸಿದ್ದಳು. ವಿರುದ್ಧ ಪಕ್ಷದಲ್ಲಿ ಬ್ರಿಗೇಡಿಯರ್ ಸ್ಮಿತ್, ಕಪ್ತಾನ್ ಹೇನೆಜ್ ಮುಂತಾದ ಸೇನಾನಾಯಕರು ಹುರಿದುಂಬಿ ಕಾದುತ್ತಿದ್ದರು. ಮಹಾರಾಣಿಯ ಮೊದಲಿನ ದಿವ್ಯಾಶ್ವವು ಈಗ ಎರಡು ದಿನಗಳಿಂದಲೂ ಯುದ್ಧಮಾಡಿ ದಣಿದಿತ್ತಾದುದರಿಂದ ಆಕೆ ಆ ಕುದುರೆಯನ್ನು ಬಿಟ್ಟು ಸಿಂಧೆಯ ಅಶ್ವಾಲಯದೊಳಗಿಂದ ಒಂದು ಸುಂದರಾಶ್ವವನ್ನು ಆರಿಸಿಕೊಂಡು ಬಂದಿದ್ದಳು. ಮರಾಟಾಸೈನಿಕರು ಅನೇಕ ಕಾರಣಗಳ ಮೂಲಕ ಆಂತರಿಕ ಸ್ಫೂರ್ತಿಯಿಲ್ಲದೆ ಶತ್ರುಗಳು ಎರಿಬಂದ ಕೂಡಲೆ ರಣಭೂಮಿಯಿಂದ ಕಾಲ್ತೆಗೆದು ಓಡಿಹೋಗುತ್ತಿದ್ದರು. ಈ ರೀತಿ ವಿಶ್ವಾಸಘಾತುಕರಾದ ಸೈನಿಕರನ್ನು ಕಟ್ಟಿಕೊಂಡು ಮಹಾರಾಣಿಯು ಬ್ರಿಟಿಷ್ ಪಕ್ಷದ ವೀರಾಧಿವೀರರಾದ ಸೈನಿಕ ಸೇನಾಪತಿಗಳೊಡನೆ ಕಾದಾಡಬೇಕಾಗಿದ್ದಿತು.

ಮಹಾರಾಣಿಯು ಉಜ್ವಲವಾದ ವೀರಶ್ರೀಯಿಂದ ಮೆರೆಯುವ ಪುರುಷಸಿಂಹನಂತೆ ರಣರಂಗದಲ್ಲಿ ಒಪ್ಪುತ್ತಿದ್ದಳು. ಆಕೆಯ ತಲೆಯಮೇಲಿನ

ಟೀಪು:—ಈ ಎಲ್ಲ ವಿವರಣೆಯನ್ನು ಶ್ರೀ. ಕುರಡಿಯರ 'ಮಹಾರಾಣಿ ಲಕ್ಷ್ಮೀಬಾಯಿ' ಎಂಬ ಗ್ರಂಥದಲ್ಲಿ ಓದಬಹುದು.

ಜರಿಯ ಪೇಟಾದ ಹಿಂದಿನ ಸೆರಗು ಗಾಳಿಯಿಂದ ಅಳ್ಳಾಡುತ್ತಿದ್ದಿತು. ಮೈಮೇಲಣ ಅಚ್ಚುಕಟ್ಟಾದ ಕಸೆಯ ಅಂಗಿಯೂ ಮರಾಠಾ ಸೈನಿಕರು ಧರಿಸುವ ಬಿಗಿಯಾದ ನಿರಿಗೆಯ ಚಲ್ಲಣವೂ ಕಂಠದಲ್ಲಿಯ ಥಳಥಳಿಸುವ ಮುತ್ತಿನ ಕಂಠಿಯೂ ಆಕೆಯ ಸುಂದರವಾದ ಮೈಕಟ್ಟಿನಲ್ಲಿ ಎದ್ದುಕಾಣಿಸುತ್ತಿದ್ದುವು. ಆಕೆಯು ಏರಿದ ದಿವ್ಯಾಶ್ವವು ವಾಯುವೇಗದಿಂದ ಶತ್ರುಸೈನ್ಯದಲ್ಲಿ ಪುಟನೆಗೆದು ಹಾರುತ್ತಿದ್ದಿತು. ಕೈಯೊಳಗಿನ ಖಡ್ಗವು ಕೋಲ್ಮಿಂಚಿನಹಾಗೆ ಥಳಥಳಿಸಿ ಹೊಳೆದು ಕಾರ್ಮೋಡಗಳಂತಿರುವ ವೈರಿಸೈನಿಕರ ಹೃದಯವನ್ನು ಸೀಳಿ ತಲೆ ಗಡಿದು ನೆಲಕ್ಕುರುಳಿಸುತ್ತಿದ್ದಿತು.

ಇಂತು ಮಹಾರಾಣಿಯು ಅಪ್ರತಿಮ ಪರಾಕ್ರಮದಿಂದ ಅರಿಬಲವನ್ನು ಮುರಿದು ಮುಕ್ಕುತ್ತಿರುವ ಸಮಯದಲ್ಲಿ ಸರ್ ಹ್ಯೂ ರೋಜ್ ಸಾಹೇಬನು ಮುರಾರದ ರಣರಂಗದಲ್ಲಿ ಪೇಶವೆಯ ಸೈನ್ಯವನ್ನು ಹಿಮ್ಮೆಟ್ಟಿಸಿದನೆಂಬ ದುರ್ವಾರ್ತೆ ಬಂಡುಗಾರರ ಸೈನ್ಯದಲ್ಲಿ ನಾಲ್ಕು ಕಡೆಗೂ ಹಬ್ಬಿತು. ಮಹಾರಾಣಿಯ ಸಂಗಡ ಇದ್ದು ಆಕೆಯ ಧೈರ್ಯದ ಮೇಲೆ ಎಡಗೈಯಲ್ಲಿ ಜೀವ ಹಿಡಿದು ಕಾದುತ್ತಿದ್ದ ಸೈನಿಕರು ಈ ವಾರ್ತೆಯನ್ನು ಕೇಳಿ ಎದೆಗೆಟ್ಟು ಹಿಂದೆಗೆದರು. ಮಹಾರಾಣಿಯ ಧೈರ್ಯಗಿರಿಯು ಈಗಲೂ ಅವಿಚಲವಾಗಿಯೇ ಇದ್ದಿತು. ಆಕೆ ತಾನು ಹಿಂಭಾಗದಲ್ಲಿ ಕಾದಿಟ್ಟ ಕಾಲಾಳಿನ ಬಲವು ಬೇಕಾದಾಗ ಮುಂದೆ ಬಂದು ತನಗೆ ನೆರವಾಗಬಹುದೆಂಬ ನಂಬುಗೆಯಿಂದ ವೈರಿಗಳ ಮೇಲೆ ನುಗ್ಗಿಹೋದಳು. ಆದರೆ ದುರ್ದೈವದಿಂದ ಬ್ರಿಗೇಡಿಯರ್ ಸ್ಮಿತ್ ಸಾಹೇಬನು ಹಿಮ್ಮಗ್ಗಲಿನಿಂದ ಏರಿಬಂದು ರಾಣಿಯು ಕಾದಿಟ್ಟ ಕಾಲ್ಬಲವನ್ನು ಹಿಮ್ಮೆಟ್ಟಿಸಲು ಅದು ರಣರಂಗದಿಂದ ಕಾಲ್ದೆಗೆದು ಓಡಿಹೋಯಿತು! ಈಗ ಮಾತ್ರ ಮಹಾರಾಣಿಯು ಆಳಬಲದ ನೆರವನ್ನು ಮರೆತು ಕೇವಲ ತನ್ನ ತೋಳಬಲವನ್ನೇ ಆಶ್ರಯಿಸಬೇಕಾಯಿತು.

ಮರಾಟರ ವಿಶ್ವಾಸಘಾತುಕತನಕ್ಕಾಗಿ ಮಹಾರಾಣಿ ಮರಮರನೆ ಮರುಗಿದಳು. ಆಕೆ ಈಗ ಮೂರುದಿನಗಳಿಂದ ಅನ್ನನೀರುಗಳ ಪರವೆಯಿಲ್ಲದೆ ರಣರಂಗದಲ್ಲಿ ಮೆರೆಯುತ್ತಿದ್ದಳು. ಅರಿಬಲದ ಶವಗಳ ರಾಶಿಯನ್ನೂ ರುಧಿರ ಪ್ರವಾಹವನ್ನೂ ನೋಡಿ ಆಕೆ ತನ್ನ ಹಸಿವೆನೀರಡಿಕೆಗಳನ್ನು ಇಂಗಿಸಿಕೊಳ್ಳುತ್ತಿದ್ದಳು. ಇನ್ನುವಳಿಗೆ ಜಯದ ಆಶೆ ಉಳಿಯಲಿಲ್ಲ. ಮರಣಾನಂತರದಲ್ಲಿ

ಕೂಡ ತನ್ನ ಶರೀರವು ಶತ್ರುಗಳ ವಶವಾಗಕೂಡದೆಂಬ ಪ್ರಬಲವಾದ ಇಚ್ಛೆಯೊಂದು ಆಕೆಯ ಅಂತರಂಗದಲ್ಲಿ ಅಡಿಗಡಿಗೆ ಉದಯವಾಗುತ್ತಿದ್ದಿತು. ಕಾಶಿ ಮುಂದರೆಯರೆಂಬ ದಾಸಿಯರಿಬ್ಬರು, ರಾಮಚಂದ್ರರಾವ್ ದೇಶಮುಖ, ರಘುನಾಥಸಿಂಗ ಮುಂತಾದ ರಾಣಿಯ ಜೀವದ ಸ್ನೇಹಿತರು ಇಷ್ಟು ಜನರು ಮಾತ್ರ ಆಕೆಯನ್ನು ರಣರಂಗದಲ್ಲಿಯೂ ಸರ್ವದಾ ಅನುಸರಿಸಿಯೇ ಇದ್ದರು. ಮಹಾರಾಣಿಯು ಮುಂಭಾಗದಲ್ಲಿ ಏರಿಬರುತ್ತಿರುವ ವೈರಿಸೈನಿಕರನ್ನು ಕತ್ತಿಯನ್ನೆತ್ತಿ ಕಡಿಯುತ್ತಿರುವಾಗಲೇ ತನ್ನ ಸಂಗಡಿಗರನ್ನು ಕುರಿತು "ನನ್ನ ಮರಣಾನಂತರವೂ ಈ ಶರೀರವು ವೈರಿಗಳ ಕೈಸೇರದಂತೆ ನೋಡಿಕೊಂಡರೆ ನೀವು ನಿಜವಾಗಿ ಸ್ವಾಮಿನಿಷ್ಠರೆಂದು ತಿಳಿಯುವೆನು." ಎಂದು ದುಃಖೋದ್ಗಾರವನ್ನು ಹೊರಸೂಸಿದಳು. ಅನುಚರರು ತಮ್ಮ ಒಡತಿಯ ಹೇಳಿಕೆಗೆ ಸಮ್ಮತಿ ಕೊಡಲೋಸುಗ ಜಯಘೋಷಮಾಡಿದರು. "ಜಯ! ರಘುವೀರ ಸಮರ್ಥ!" ಎಂಬ ಧ್ವನಿಯನ್ನು ಕೇಳಿ ಮನಸ್ಸಿನ ಇಚ್ಛಾಪೂರ್ತಿಯ ಸ್ಫೂರ್ತಿಯಿಂದ ಮಹಾರಾಣಿಯ ಹೃದಯದ ರಣೋತ್ಸಾಹವು ಇಮ್ಮಡಿಸಿತು. ಆಕೆ ಒಮ್ಮೆ ಹಿಂದಿರುಗಿ ನೋಡಿದಳು. ಪ್ರೀತಿಯ ದತ್ತಪುತ್ರನು ನೆರೆಯಲ್ಲಿಯೇ ರಾಮಚಂದ್ರರಾವ್ ದೇಶಮುಖನ ಕುದುರೆಯ ಮೇಲೆ ಸುರಕ್ಷಿತನಾಗಿ ಕುಳಿತಿರುವದನ್ನು ನೋಡಿ ಆಕೆಯ ಮುಖವು ಆನಂದದಿಂದ ಅರಳಿತು. ಇಂತಹ ಪರಿಸ್ಥಿತಿಯಲ್ಲಿ ಹೆಚ್ಚುಹೊತ್ತು ರಣರಂಗದಲ್ಲಿ ಕಾಲಕಳೆಯುವದರಲ್ಲಿ ಏನೂ ಅರ್ಥವಿಲ್ಲವೆಂದು ಮಹಾರಾಣಿಗೆ ಭಾಸವಾದುದರಲ್ಲಿ ಆಶ್ಚರ್ಯವೇನು? ಆಕೆಯು ಅಲ್ಲಿಂದ ಪಾರಾಗಿ ಹೋಗಿ ಬೇರೊಂದು ಕಡೆ ಎಲ್ಲಿಯಾದರೂ ಭದ್ರವಾದ ದುರ್ಗವನ್ನು ಸೇರಿಕೊಂಡು ಮತ್ತೆ ಹೊಸ ಸೇನೆಯನ್ನು ಸಿದ್ಧಪಡಿಸಿಕೊಂಡು ಯುದ್ಧವನ್ನು ಆರಂಭಿಸಬೇಕೆಂದೂ ಅವ್ಯವಸ್ಥೆಯ ಆಗರವಾಗಿದ್ದ ಪೇಶವೆಯ ಮತ್ತು ಅವನ ಸೈನ್ಯದ ಸಹವಾಸವು ಇಲ್ಲಿಗೆ ಸಾಕೆಂದೂ ಯೋಚಿಸಿ ಈ ತನ್ನ ಮನೋಗತವನ್ನು ತನ್ನ ಅನುಯಾಯಿಗಳಿಗೆ ಸೂಚಿಸಿದಳು. ಈ ರೀತಿ ಮಹಾರಾಣಿಯು ಶತ್ರುಗಳ ಕೈಯೊಳಗಿಂದ ಪಾರಾಗಿ ಹೋಗುವ ಸಿದ್ಧತೆಯನ್ನು ಮಾಡಿಕೊಂಡು ಅವರ ಮೇಲೆ ಏರಿಹೋದಳು. ಮುಂದೆ ಬರುವ ವೈರಿಸೈನಿಕರನ್ನು ಕಡಿದು ಹಾಕುತ್ತ ವೈರಿಗಳ ಮಧ್ಯದಿಂದ ಶರವೇಗದಿಂದ ಧಾವಿಸುತ್ತ ನಡೆದಳು. ಅಷ್ಟರಲ್ಲಿ ಸಂಗಡ

ಇದ್ದ ಮುಂದರೆಯು ಒಬ್ಬ ಸೈನಿಕನ ಕತ್ತಿಯ ಕಡಿತವನ್ನು ಸಹಿಸಲಾರದೆ "ಅಕ್ಕಾ, ಸತ್ತೆನು! ಸತ್ತೆನು!" ಎಂದು ಕೂಗುತ್ತ ನೆಲಕ್ಕುರುಳಿದಳು. ಮಹಾರಾಣಿಯು ಆ ಕರುಣಸ್ವರವನ್ನು ಕೇಳಿದೊಡನೆ ತಿರುಗಿ ನಿಂತು ಆ ಸೈನಿಕನನ್ನು ಕಡಿದುಹಾಕಿ ಮುಂದಕ್ಕೆ ನಡೆದಳು. ಆದರೆ ದುರ್ದೈವವು ಪ್ರವಾಹರೂಪದಿಂದ ಅಲ್ಲಿಯೂ ಆಕೆಯ ಬೆನ್ನಟ್ಟಿ ಬಂದಿತು. ಎದುರಿಗಿರುವ ಚಿಕ್ಕದೊಂದು ಹಳ್ಳದ ಪ್ರವಾಹವನ್ನು ನೋಡಿ ಆಕೆಯ ಕುದುರೆ ಕಲ್ಲಿನಂತೆ ನಿಂತುಬಿಟ್ಟಿತು! ಈಗ ಮಾತ್ರ ಮಹಾರಾಣಿಯ ಧೈರ್ಯಗಿರಿ ಕುಸಿಯಿತು. ತನಗೆ ಈ ರಣರಂಗದಲ್ಲಿ ಮರಣವೇ ಗತಿಯೆಂಬುದನ್ನು ಆಕೆ ನಿಶ್ಚಯಿಸಿಕೊಂಡು ಬಿಟ್ಟಳು. ಅಪ್ರತಿಮ ವೀರನಾದ ಕರ್ಣನ ರಥವು ರಣಭೂಮಿಯಲ್ಲಿ ಹೂತು ನಿಂತಾಗ ಅವನಿಗಾದ ದುಃಖವನ್ನು ಪಾಠಕರು ಮಹಾಭಾರತದಲ್ಲಿ ಓದಿರಬಹುದು. ಮಹಾರಾಣಿಗೂ ಈಗ ಅಷ್ಟೇ ದುಃಖವಾಯಿತು. ಪರಿಪರಿಯಿಂದ ಪ್ರಯತ್ನಮಾಡಿ ನೋಡಿದಳು. ಏನು ಮಾಡಿದರೂ ಆ ಖೋಡಿ ಕುದುರೆ ಹಿಂದಿರುಗಿ ಶತ್ರುಗಳ ಸೇನೆಯನ್ನು ಸೇರಲು ಬಯಸುವುದೇ ಹೊರತು ಆ ಚಿಕ್ಕ ಜಲಪ್ರವಾಹವನ್ನು ದಾಟಲು ಒಪ್ಪದು! ಬಹುಜನ ಬ್ರಿಟಿಶ ಸೈನಿಕರು ಏರಿ ಬಂದುದನ್ನು ನೋಡಿದೊಡನೆ ಮಹಾರಾಣಿಯ ಖಡ್ಗವು ಮಿಂಚಿನಂತೆ ತಿರುಗಹತ್ತಿತು. ಪ್ರಬಲರಾದ ಬ್ರಿಟಿಷ ಸೈನಿಕರಿಗೆ ಮಹಾರಾಣಿಯ ಖಡ್ಗದ ಇದಿರಿಗೆ ಬರಲು ಧೈರ್ಯವಾಗಲಿಲ್ಲ. ಅವರ ಕಡಿವಾಣದ ಕೈಗಳು ಹಿಂದೆ ಹಿಂದೆ ಎಳೆಯಲು ಕುದುರೆಗಳು ಹಿಂಜರಿಯತೊಡಗಿದುವು ಆದರೆ ಎಷ್ಟು ಹೊತ್ತಿನವರೆಗೆ ಈ ಸ್ಥಿತಿ ಉಳಿದೀತು? ಒಬ್ಬನ ಬಲವಾದ ಕತ್ತಿಯ ಕಡಿತದಿಂದ ಮಹಾರಾಣಿಯ ತಲೆಯ ಬಲಭಾಗವು ಹಾರಿಹೋಯಿತು. ಕಣ್ಣುಗುಡ್ಡೆಯು ಹೊರಗೆ ಬಂದಿತು. ಇಂತಹ ಸ್ಥಿತಿಯಲ್ಲಿಯೂ ಮಹಾರಾಣಿಯು ತನ್ನ ವೈರಿಯ ಸೇಡು ತೀರಿಸಿಕೊಂಡು ಅವನನ್ನು ಕೊಲ್ಲದೆ ಬಿಡಲಿಲ್ಲ. ಆಕೆಗೆ ನೈಗಾವಲಿನ ರಾಮಚಂದ್ರರಾವ್ ದೇಶಮುಖನು ಮಾಡಿದ ಸಂಜ್ಞೆಯು ಕಾಣಿಸಿತೋ ಇಲ್ಲವೋ ತಿಳಿಯಲಿಲ್ಲ. ಆದರೆ ಆಕೆಯ ಕುದುರೆ ಮಾತ್ರ ತಟ್ಟನೆ ಎಡಕ್ಕೆ ಹೊರಳಿ ಶರವೇಗದಿಂದ ಧಾವಿಸಿ ಶತ್ರುಬಲದ ವ್ಯೂಹವನ್ನು ಭೇದಿಸಿಕೊಂಡು ಹೊರಗೆ ನಡೆಯಿತು. ಒಂದು ಮೈಲು ಮಾರ್ಗವನ್ನು ಕ್ಷಣಾರ್ಧದಲ್ಲಿ ಕ್ರಮಿಸಿ ಒಂದು ಆಲದ ಮರದ ಕೆಳಗೆ ತಟ್ಟನೆ ನಿಂತಿತು.

“ಜಯ ರಘುವೀರ ಸಮರ್ಥ!” ಎನ್ನುತ್ತ ಭವ್ಯ ಪುರುಷನೊಬ್ಬನು ಇದಿರಿಗೆ ಬಂದು ಕೈನೀಡಿ ಮಹಾರಾಣಿಯನ್ನು ಕುದುರೆಯಿಂದ ಇಳಿಸಿಕೊಂಡು ಮೂರು ನಾಲ್ಕು ಮಾರು ದೂರದಲ್ಲಿ ಮಾರ್ಗದ ಪಕ್ಕದಲ್ಲಿರುವ ಒಂದು ಪರ್ಣಕುಟಿಗೆ ಒಯ್ದು ಹುಲ್ಲು ಹಾಸಿಗೆಯ ಮೇಲೆ ಮಲಗಿಸಿದನು. ಅಷ್ಟರಲ್ಲಿ ರಾಮಚಂದ್ರರಾವ್ ದೇಶಮುಖನೂ ಇನ್ನಿಬ್ಬರು ಸರದಾರರೂ ಅಲ್ಲಿಗೆ ಬಂದರು. ಸಿದ್ಧನಾಥಸ್ವಾಮಿ ಒಳಗಿಂದ ತನ್ನ ಕಮಂಡಲು ತಂದು ಮಹಾ ರಾಣಿಯ ಬಾಯಿಗೆ ತೀರ್ಥವನ್ನೆರೆದನು. “ಮಗಳೇ, ಭಗವಂತನನ್ನು ಸ್ಮರಿಸು. ಇನ್ನು ಈ ಲೋಕದ ಯೋಚನೆ ಬೇಡ. ಆ ಲೋಕದಲ್ಲಿ ಮನಸ್ಸನ್ನಿಡು” ಎಂದನು. ಮಹಾರಾಣಿಗೆ ಮಾತಾಡಲು ಶಕ್ತಿಯಿರಲಿಲ್ಲ. ಆಕೆ ದಾಮೋದರ ರಾಯನ ಕಡೆಗೆ ದೃಷ್ಟಿಯನ್ನು ತಿರುಗಿಸಲು ಸ್ವಾಮಿಯು “ಮಗೂ, ನಾನ ರಿಯದುದು ಯಾವುದೂ ಇಲ್ಲ. ಎಲ್ಲವೂ ಈಶ್ವರಾಧೀನವಾದುದು. ನೀನು ಮಾಡತಕ್ಕದನ್ನೆಲ್ಲ ಮಾಡಿದೆ. ಇನ್ನು ಆತನ ಇಚ್ಛೆಯಿದ್ದಂತೆ ಆದೀತು. ನಾನು ಹಿಂದೆ ಎರಡು ಮೂರು ಬಾರಿ ಮಾತ್ರ ನಿನಗೆ ದರ್ಶನಕೊಟ್ಟಿರುವೆ ನಾದರೂ ಸದಾ ನಿನ್ನನ್ನು ಅನುಸರಿಸಿಯೇ ಇದ್ದೇನೆ. ನಿನಗೆ ಈಗ ಭಗವಂತನ ಚಿಂತನೆಯ ಹೊರತು ಬೇರೆ ಯೋಚನೆ ಬೇಡ. ಬಾಯಿಯಲ್ಲಿ ಆ ಭಗವನ್ನಾ ಮವನ್ನು ಉಚ್ಚರಿಸಲು ಸಾಧ್ಯವಿಲ್ಲದಿದ್ದರೆ ಮನಸ್ಸಿನಲ್ಲಿಯೇ ಆದರೂ ಧ್ಯಾನಿಸಿಕೊ” ಎನ್ನುತ್ತಿರಲು ಮಹಾರಾಣಿಯು ಕೈಜೋಡಿಸಿ “ಜ-ಯ! ರ-ಘು-ವೀ-ರ....” ಎನ್ನುತ್ತ ಕಣ್ಣು ಮುಚ್ಚಿದಳು.

ಸೈ! ಇಲ್ಲಿಗೆ ನಮ್ಮ ಲೇಖನಿ ನಿಂತಿತು. ಈ ಪ್ರಸ್ತಾವವನ್ನು ಇನ್ನೂ ಹೆಚ್ಚಾಗಿ ವರ್ಣಿಸಲು ನಮಗೆ ಸಾಧ್ಯವಿಲ್ಲ. “ಗ್ವಾಲ್ಹೇರಿಯ ರಣರಂಗದಲ್ಲಿ, ಭರತಖಂಡದ ಸ್ತ್ರೀರತ್ನವೆನಿಸಿ ಅದ್ವಿತೀಯ ಶೌರ್ಯಗುಣಮಂಡಿತಳಾಗಿ ಮೆರೆದ ಮಹಾರಾಣಿ ಲಕ್ಷ್ಮೀಬಾಯಿಯು ತನ್ನ ಈ ನಶ್ವರವಾದ ದೇಹವನ್ನು ಈಡಾಡಿ ಸೂರ್ಯಮಂಡಲವನ್ನು ಭೇದಿಸಿಕೊಂಡು ಹೋಗಿ ಪರಂಧಾಮ ವನ್ನು ಸೇರಿದಳು! ಇಹಲೋಕದಲ್ಲಿ ಕೀರ್ತಿಶರೀರದಿಂದ ಚಿರಸ್ಥಾಯಿನಿ ಯಾದಳು!” ಎಂದಿಷ್ಟೇ ಹೇಳಿ ಈ ವೀರರಸಪ್ರಧಾನವೂ ದುಃಖಾಂತವೂ ಆದ ಕಥೆಯನ್ನು ಮುಗಿಸುವೆವು. ಮುಂದಿನ ಐತಿಹಾಸಿಕ ಘಟನೆಗಳನ್ನು ಪಾಠಕರು ಇತಿಹಾಸದಲ್ಲಿ ಓದಿಕೊಳ್ಳಲಿ.

“ಗುಣಾಃ ಪೂಜಾಸ್ಥಾನಂ ಗುಣಿಷು ನಚ ಲಿಂಗಂ ನಚ ವಯಃ!”

# ೧೦. ಶುಕ ಶಿಶುವಿನ ಆತ್ಮವೃತ್ತ.

ಆ ಶುಕಶಿಶು ಶೂದ್ರಕಭೂಪಾಲನಿದಿರಿಗೆ ತನ್ನ ಸಮಾಚಾರವನ್ನು ಹೇಳತೊಡಗಿತು:— ಈ ಭರತಖಂಡದ ಮಧ್ಯದಲ್ಲಿ ವಿಂಧ್ಯಾಚಲದ ಸುತ್ತಲಿನ ಪ್ರದೇಶದಲ್ಲಿ ಒಂದು ದೊಡ್ಡ ಅಡವಿ ಹಬ್ಬಿದೆ. ಆ ಅಡವಿಯೊಳಗೆ ಗೋದಾವರೀನದಿಯ ದಂಡೆಯಮೇಲೆ ಅಗಸ್ತ್ಯ ಮಹಾಮುನಿಯ ಪಾವನವಾದ ಆಶ್ರಮವುಂಟು. ಅದರ ಬಳಿಯಲ್ಲಿರುವ ಪಂಚವಟಿಯಲ್ಲಿ, ತಂದೆಯ ವಚನವನ್ನು ಪಾಲಿಸುವುದಕ್ಕಾಗಿ ವನವಾಸಕ್ಕೆ ಹೊರಟ ಶ್ರೀರಾಮಚಂದ್ರನು ಕೆಲಕಾಲ ವಾಸಮಾಡಿದ್ದನು ಇದಕ್ಕೆ ಹೊಂದಿಯೇ ರಮಣೀಯವಾದ ಪಂಪಾಸರೋವರವಿದೆ. ಯಾವಾಗಲೂ ಅರಳಿದ ಕುಮುದ–ಕುವಲಯ–ಕಹ್ಲಾರಗಳಿಂದಲೂ ನಾನಾವಿಧ ಜಲವಿಹಂಗಮಗಳಿಂದಲೂ ಕಂಗೊಳಿಸುವ ಆ ಸರೋವರದ ಪಡುವಣ ದಂಡೆಯಲ್ಲಿ ಶ್ರೀರಘುರಾಮನು ಒಂದೇ ಕೂರಂಬಿನಿಂದ ಕೊಡೆದುರುಳಿಸಿದ ಸಪ್ತತಾಳವೃಕ್ಷಗಳ ನೆರೆಯಲ್ಲಿ ಒಂದು ಬಹು ದೊಡ್ಡ ಹಳೆಯ ಬೂರಲ ಮರವಿದೆ. ಅದರ ಬುಡವನ್ನು ಒಂದು ದೊಡ್ಡ ಹೆಬ್ಬಾವು ಸುತ್ತಿ ಹಾಕಿರುವುದರಿಂದ ಆ ಮರಕ್ಕೆ ಪಾತೆಯನ್ನು ಕಟ್ಟಿದೆಯೋ ಎಂದೆನಿಸುವುದು ಬಹಳ ಎತ್ತರದ ಮೇಲೆ ದೂರದವರೆಗೆ ಚಾಚಿದ ಅದರ ಟೊಂಗೆಗಳನ್ನು ನೋಡಿದರೆ ಈ ಮರವು ಮಾರುಹಾಕಿ, ಆಗಸವನ್ನು ಅಳೆಯತೊಡಗಿದೆಯೋ ಎಂದು ತೋರುವುದು. ಅದರ ಬೊಡ್ಡೆ ಬಹು ಎತ್ತರವಾಗಿರುವುದರಿಂದ ಅದು ಭೂಲೋಕವನ್ನೆಲ್ಲ ನೋಡಲೋಸುಗ ನಿಲುಕಿ ನಿಂತಂತೆ ಕಾಣಿಸುವುದು. ಇಂತಹ ಪ್ರಕಾಂಡವಾದ ಮರದ ಹೊದರುಗಳಲ್ಲಿಯೂ, ಟೊಂಗೆಗಳ ಸಂದುಗಳಲ್ಲಿಯೂ, ಎಲೆಗಳ ಇಟುಕರುಗಳಲ್ಲಿಯೂ ಗೂಡುಗಟ್ಟಿಕೊಂಡು ಗಿಳಿ ಗೊರವಂಕ ಕಾಡಗುಬ್ಬಿ ಕಬ್ಬಕ್ಕಿ ಮುಂತಾದ ಸಾವಿರಾರು ಹಕ್ಕಿಗಳು ಏನೂ ಅಂಜಿಕೆಯಿಲ್ಲದೆ ಸುಖವಾಗಿ ವಾಸಮಾಡುತ್ತಿರುವುವು. ಆ ಮರವು ಬಹಳ ಹಳೆಯದಾದುದರಿಂದ ಎಲೆಗಳು ಅಂಗಲಾಗಿದ್ದರೂ ಅದರ ತುಂಬ

ಕುಳಿತ ಹಕ್ಕಿಗಳ ಮರಿಗಳು ಆದರ ಚಿಗುರೆಲೆಗಳಂತೆ ಕಾಣಿಸುವುವು; ಇನ್ನೂ ಗರಿ ಮೂಡದ ಹಕ್ಕಿಗಳ ಮರಿಗಳು ಆ ಮರದ ಕಾಯಿಗಳ ಹಾಗೆ ತೋರುವುವು. ಆದರ ಮೇಲಿನ ಹಕ್ಕಿಗಳೆಲ್ಲ ಇರುಳು ಸುಖವಾಗಿ ಮಲಗಿ ಬೆಳಗಾದ ಕೂಡಲೆ ಎದ್ದು ಆಹಾರದ ಸಲುವಾಗಿ ದಿಕ್ಕುದಿಕ್ಕಿಗೆ ಹಾರಿಹೋಗುವುವು; ಸಂಜೆತನಕ ಅಲ್ಲಲ್ಲಿ ಮೇಯ್ದು ಮರಳಿ ಬರುವಾಗ ಗೂಡಿನಲ್ಲಿದ್ದ ಮರಿಗಳಿಗಾಗಿ ಹಣ್ಣಿನ ರಸವನ್ನೂ ಹಾಲುಗಾಳುಗಳನ್ನೂ ತಂದು ಗುಟುಕು ಕೊಟ್ಟು ಅವುಗಳನ್ನು ಸಲಹುವುವು.

ಈ ಮರದ ಒಂದು ಹಳೆಯ ಹೊದರಿನಲ್ಲಿ ನನ್ನ ತಾಯಿ-ತಂದೆಗಳು ವಾಸಮಾಡುತ್ತಿದ್ದರು. ಬಹುಕಾಲಕ್ಕೆ ನನ್ನ ತಾಯಿ ಬಸಿರಿಯಾಗಿ ನನ್ನನ್ನು ಹೆತ್ತು ಪ್ರಸವವೇದನೆಯಿಂದ ಆಗಲೇ ಮರಣಹೊಂದಲು ತಂದೆಯೇ ನನ್ನನ್ನು ಕಾಪಾಡಬೇಕಾಯಿತು. ನನ್ನ ತಂದೆ ಆಗ ಮುಪ್ಪಿನವನು. ಮಡದಿ ಕೈಬಿಟ್ಟುಹೋದ ದುಃಖದಲ್ಲಿಯೂ ಆತನು ನನ್ನನ್ನು ನೋಡಿ ಹೇಗೋ ತನ್ನ ದುಃಖವನ್ನು ಬದಿಗೊತ್ತಿ ಪ್ರೀತಿಯಿಂದ ನನ್ನನ್ನು ಸಲಹುತ್ತ ಕಾಲಕ್ಷೇಪ ಮಾಡುತ್ತಿದ್ದನು. ಮೈ ಸಡಿಲಾಗಿ, ಪುಚ್ಛಗಳುದುರಿ ಹಾರುವ ಶಕ್ತಿ ಕುಂದಿ ಹೊರಕ್ಕೆ ಹೋಗಲಾರದ ನನ್ನ ತಂದೆ ಹೇಗೋ ಮೆಲ್ಲಮೆಲ್ಲನೆ ಮರದ ಕೆಳಕ್ಕಿಳಿದು ಬೇರೆ ಹಕ್ಕಿಗಳ ಗೂಡುಗಳಿಂದ ಉದುರಿದ ಕಾಳುಗಳನ್ನಾರಿಸಿ ತಂದು ನನಗೆ ಗುಟುಕು ಕೊಟ್ಟು, ಉಳಿದರೆ ತಾನು ತಿಂದು ಕಷ್ಟದಿಂದ ಜೀವನ ಮಾಡುತ್ತಿದ್ದನು.

ಒಂದಾನೊಂದು ದಿನ ನಸುಕಿನಲ್ಲಿ ಮೂಡಣ ದಿಕ್ಕು ಬೆಳಗಿನ ಸಂಜೆ ಗೆಂಪಿನಿಂದ ರಂಜಿಸುತ್ತಿರಲು, ಜೇನು ಬಣ್ಣದ ರೆಕ್ಕೆಗಳುಳ್ಳ ಮುದಿಹಂಸನಂತೆ ಕಾಣಿಸುವ ಚಂದ್ರಮನು ಪಡುವಣ ಕಡಲಿಗಿಳಿಯುತ್ತಿರಲು, ದಿಙ್ಮಂಡಲದಲ್ಲೆಲ್ಲ ಮುದಿಜಿಂಕೆಯ ಮೈಗೂದಲಿನಂತಹ ಒಂದು ಬಗೆಯ ನಸುಬಿಳುವು ಹರಡಿಕೊಂಡಿರಲು ಆನೆಯ ರಕ್ತದಿಂದ ತೋದ ಸಿಂಹನ ಆಯಾಲುಗಳಂತೆಯೂ ಕರಗಿದ ಅರಗಿನ ಎಳೆಗಳಂತೆಯೂ ಉದ್ದವಾಗಿ ಮೇಲಕ್ಕೆ ಚಾಚಿದ ಸೂರ್ಯ ಕಿರಣಗಳನ್ನು ನೋಡಿದರೆ ಪದ್ಮರಾಗ ಮಣಿಗಳ ಕಡ್ಡಿಗಳಿಂದ ಮಾಡಿದ ಕಸಬರಗೆಯಿಂದ ನಕ್ಷತ್ರಪುಂಜವನ್ನು ಗುಡಿಸಿ ಆಕಾಶತಲವನ್ನು ಸ್ವಚ್ಛ ಮಾಡುವ ಕೆಲಸವು ನಡೆದಿದೆಯೋ ಎಂಬಂತೆ ತೋರುವುದು. ಬಡಗಣ

ದಿಕ್ಕಿನಲ್ಲಿ ಸಪ್ತರ್ಷಿಮಂಡಲವು ಸಂಧ್ಯೋಪಾಸನೆಗಾಗಿ ಮಾನಸಸರೋವರ ಕ್ಕಿಳಿಯುವುದೋ ಎಂಬಂತೆ ಕೆಳಕ್ಕೆ ಇಳಿಯುತ್ತಿರುವುದು. ತಪೋವನದ ಮುನಿಗಳ ಬೆಳಗಿನ ಹೋಮದ ಹೊಗೆಯು ಆಶ್ರಮದ ಗಿಡಗಳ ಟೊಂಗೆಗಳ ಮೇಲ್ಗಡೆಯಲ್ಲಿ ಪಾರಿವಾಳಗಳ ಸಾಲುಗಳಂತೆ ಸುತ್ತುವರಿಯುತ್ತ ಅತ್ತಿತ್ತ ಹರಡುತ್ತಿರುವುದು. ಬೆಳಗಿನ ನಸುಗಾಳಿಯು ಹಿಮಶೀಕರಗಳನ್ನು ತಳೆದು, ಹೂಬಳ್ಳಿಗಳನ್ನು ತೂಗಿಸಿ, ಕಮಲವನದ ಸುವಾಸನೆಯನ್ನು ಹೊತ್ತು ಮಂದಮಂದವಾಗಿ ಸುಳಿಯತೊಡಗಿತು. ವನಮೃಗಗಳು ಬೆಳಗಿನ ಈ ಗಾಳಿಗೆ ನಿದ್ದೆಗವಿದ ತಮ್ಮ ಕಣ್ಣಿನ ಎವೆಗಳನ್ನು ಸ್ವಲ್ಪ ತೆರೆಯುತ್ತ, ಆಕಳಿಸುತ್ತ ಮೈಮುರಿದುಕೊಳ್ಳುತ್ತ ಏಳತೊಡಗಿದುವು. ನಸುಕಿನಲ್ಲಿ ಎದ್ದ ಹಕ್ಕಿಗಳ ಕಿಲಕಿಲದಿಂದ ಅಡವಿಯೆಲ್ಲ ಗಜಬಜಿಸಿತು. ಅಷ್ಟರಲ್ಲಿ ಅದೇ ಆಗ ಮೂಡುತ್ತಿದ್ದ ಸೂರ್ಯನ ಕಿರಣಗಳಿಂದ ಆಕಾಶವು ಕೆಂಬಣ್ಣದಿಂದ ಬಳಿದಂತಾಯಿತು. ಆಗ ಬೂರಲ ಮರದಲ್ಲಿದ್ದ ಹಕ್ಕಿಗಳು ದಿಕ್ಕುದಿಕ್ಕಿಗೆ ಹೋಗತೊಡಗಿವೆ, ಅವುಗಳ ಮರಿಗಳು ಗೂಡುಗಳೊಳಗೆ ಸದ್ದಿಲ್ಲದೆ ನಿದ್ದೆಮಾಡುತ್ತಿವೆ, ನಾನು ತಂದೆಯ ಮಗ್ಗುಲಲ್ಲಿ ಸುಖವಾಗಿ ಮಲಗಿದ್ದೇನೆ ಈ ಸಮಯದಲ್ಲಿ ಭಯಂಕರವಾದ ಬೇಟೆಗಾರರ ಕೋಲಾಹಲವೊಂದು ಕೇಳಬಂದಿತು. ಆ ಕಾಲಕ್ಕೆ ವನವೆಲ್ಲ ಕ್ಷೋಭೆಗೊಂಡಿತು. ಗರ್ಜಿಸುವ ಸಿಂಹಗಳು, ಘೀಳಿಡುವ ಆನೆಗಳು, ಹೇಷಿಸುವ ಕಾಡುಕುದುರೆಗಳು, ಅರಚುವ ಕಾಡುಕತ್ತೆಗಳು, ಕೊಂಯ್ಕಿಡುವ ಕಾಡುಕೋಣಗಳು ಮುಂತಾದವು ಅತ್ತಿಂದಿತ್ತ ಓಡಾಡತೊಡಗಿದುವು. ಎಲೆಲೆ ಹಿಡಿಯಿರಿ, ಹೊಡೆಯಿರಿ, ಎಳೆಯಿರಿ, ಸೀಳಿರಿ, ತರುಬಿರಿ, ತರಿಯಿರಿ ಎಂದು ಕೂಗುವ ಬೇಡರ ಒದರಾಟಕ್ಕೆ ದೊಡ್ಡ ದೊಡ್ಡ ಮೃಗಗಳ ಕೈಕಾಲೇ ಹೋದುವು; ನನ್ನಂತಹ ದುರ್ಬಲ ಪ್ರಾಣಿಗಳ ಪಾಡೇನು? ಅವು ನೆತ್ತಿಯಿಂದಲೇ ಜೀವಬಿಟ್ಟುವು. ಆಗ ನಾನು ಅಂಜಿಕೆಯಿಂದ ನಡುಗುತ್ತ ತಂದೆಯ ಪಕ್ಕದಲ್ಲಿ ಇನ್ನಿಷ್ಟು ಅಡಗಿಕೊಂಡೆನು. ಬೇಡರ ಕೂಗಾಟವು ಇನ್ನೂ ಹೆಚ್ಚತೊಡಗಿತು; ಅಡವಿಯ ಮೃಗಗಳಿಗೆಲ್ಲ ಪ್ರಳಯಕಾಲವೇ ಒದಗಿದಂತಾಯಿತು.

ಕೆಲಹೊತ್ತಿನಲ್ಲಿ ಬೇಟೆಯ ಅಬ್ಬರವು ಅಡಗಿ ಅಡವಿಯು ಶಾಂತವಾಗುತ್ತಿದ್ದಿತು. ಆಗ ನಾನು ತಂದೆಯ ಪಕ್ಕದೊಳಗಿಂದ ಮೆಲ್ಲಮೆಲ್ಲನೆ ಹೊರ

ಹೊರಟು ಹೊದರಿನಲ್ಲಿಯೇ ಇಣಿಕಿ ಬೇಟೆಗಾರರ ಕಲಕಲವಾಗುತ್ತಿದ್ದ ದಿಕ್ಕಿಗೆ ನೋಡತೊಡಗಿದೆನು. ಅತ್ತ ಕಡೆಗೆ ಯಮರಾಜನ ಸೋದರನೋ, ನರಕದ ದ್ವಾರಪಾಲಕನೋ, ಪ್ರಳಯಕಾಲದ ಭೈರವನೋ ಎಂಬಂತೆ ಭಯಂಕರನಾದ ಬೇಡರ ನಾಯಕನು ತನ್ನಂತಹ ಹಲವು ಜನ ಕರಿಯ ಬೇಡರಿಂದೊಡಗೂಡಿ ಬರುತ್ತಿದ್ದನು. ಆತನ ಹೆಸರು ಮಾತಂಗಕನೆಂದು ಆಬಳಿಕ ತಿಳಿದು ಬಂದಿತು. ಆತನ ತಲೆಯ ಮೇಲಿನ ಉಂಗುರಗೂದಲು, ಆತನ ಉಗ್ರವಾದ ಮುಖದ ಎಡಬಲಭಾಗಗಳಲ್ಲಿ ಇಳಿದು, ಹೆಗಲ ಮೇಲೆ ಜೋಲಾಡುತ್ತಿದ್ದುವು. ಆತನ ಕಣ್ಣುಗಳು ದಾಸವಾಳ ಹೂವಿನಂತೆ ಕೆಂಪಗೆ ಕಾಣಿಸುತ್ತಿದ್ದುವು. ಮೈಗೆ ಅಲ್ಲಲ್ಲಿ ನೆತ್ತರ ಹನಿಗಳು ಸಿಡಿದಿದ್ದುವು. ಪಕ್ಕಗಳಲ್ಲಿ ದೊಡ್ಡ ದೊಡ್ಡ ಬೇಟೆಯ ನಾಯಿಗಳು ಬಗಳುತ್ತ ಬರುತ್ತಿದ್ದುವು. ನೋಡಿದರೆ ಯಾವನೋ ದೈತ್ಯನೊಬ್ಬನು ಕಾಡಮೃಗಗಳನ್ನೆಲ್ಲ ತಿನ್ನಲೋಸುಗ ಬಂದಿರುವನೋ ಎಂದು ತೋರಿತು. ಆ ಬೇಡರನ್ನು ಕಂಡು—ಅಯ್ಯೋ ಇವರು ಬಾಳುವುದು ಎಂತಹ ಕೀಳಾದ ಬಾಳು, ಇವರು ಮಾಡುವುದು ಎಂತಹ ದುಷ್ಕರ್ಮವು, ಇವರು ಆಚರಿಸುವುದು ಎಂತಹ ದುರಾಚರಣೆ, ಅಕ್ಕಟಾ! ಇವರಿಗೆ ನಿರ್ಜನವಾದ, ಅಡವಿಯೇ ಮನೆ, ಮದ್ಯಮಾಂಸಗಳೇ ಆಹಾರ, ಬಿಲ್ಲುಬಾಣಗಳೇ ಸೊತ್ತು ನಾಯಿಗಳೇ ಗೆಳೆಯರು, ಹೃದಯದಲ್ಲಿ ದಯೆಯ ಲೇಶವೂ ಇಲ್ಲ, ಪರಲೋಕ ಭಯವೆಂಬುದು ಇವರ ಹತ್ತಿರ ಬಾರದು; ಧರ್ಮವೆಂದರೇನೆಂಬುದನ್ನು ಇವರು ಕನಸಿನಲ್ಲಿಯೂ ಕಾಣರು ಎಂದು ನಾನು ಮನದಲ್ಲಿ ಆಲೋಚಿಸುತ್ತಿರುವಾಗ ಆ ಬೇಡರು ದಣಿವಾರಿಸಿಕೊಳ್ಳಲೋಸುಗ ನಾನಿದ್ದ ಮರದ ಅಡಿಗೇ ಬಂದು ಕೆಲಹೊತ್ತು ಕುಳಿತುಕೊಂಡರು. ಬಳಿಯಲ್ಲಿರುವ ಕೊಳದ ತಿಳಿನೀರನ್ನು ಕಮಲದೆಲೆಗಳ ದೊನ್ನೆಗಳಿಂದ ಕುಡಿದರು; ಕೆಲಹೊತ್ತು ಒರಗಿ ದಣಿವಾರಿದ ಬಳಿಕ ಎದ್ದು ಹೊರಟುಹೋದರು.

ಆ ಬೇಡರ ಗುಂಪಿನೊಳಗಿನ ಒಬ್ಬ ಮುದುಕನಿಗೆ ಆ ದಿವಸ ಬೇಟೆಯೊಂದೂ ಸಿಕ್ಕಿರಲಿಲ್ಲ. ಆದುದರಿಂದ ಆತನು ತನ್ನ ಗುಂಪಿನವರೊಡನೆ ಹೋಗದೆ ಆ ಮರದಡಿಯಲ್ಲಿಯೇ ಸ್ವಲ್ಪ ನಿಂತುಕೊಂಡನು. ಅವರು ಕಣ್ಮರೆಯಾಗಲು ಆತನು ತನ್ನ ಕೆಂಗಣ್ಣುಗಳಿಂದ ಆ ಮರವನ್ನು ಒಮ್ಮೆ ಬುಡದಿಂದ ತುದಿಯವರೆಗೆ ನಿಟ್ಟಿಸಿ ನೋಡಿದನು. ಆಗ ಅವನು ತನ್ನ ನೋಟದಿಂದ ಆ

ಮರದ ಮೇಲಿನ ಹಕ್ಕಿಗಳ ಆಯುಷ್ಯವನ್ನೇ ಹೀರುತ್ತಾನೋ ಎಂದೆನಿಸಿತು. ಅಹಾ! ಮನುಷ್ಯನಿಗೆ ಯಾವುದು ತಾನೇ ಅಸಾಧ್ಯ? ಸೋಪಾನಗಳಿಂದ ಅಟ್ಟವೇರುವಂತೆ ಆತನು ಆ ಮುಳ್ಳಿನ ದೊಡ್ಡ ಮರವನ್ನು ಸಹಜವಾಗಿ ಏರಿದನು; ಮತ್ತು ಹೊದರುಗಳಲ್ಲಿಯೂ ಗೂಡುಗಳಲ್ಲಿಯೂ ಕೈಹಾಕಿ ಹಕ್ಕಿಯ ಮರಿಗಳನ್ನು ಹೊರಗೆ ಹಿರಿಯತೊಡಗಿದನು. ಪಾಪ! ಹಲವು ಮರಿಗಳು ಹುಟ್ಟಿ ಇನ್ನೂ ಸ್ವಲ್ಪ ದಿನಗಳಾಗಿವೆ; ನಸುಗೆಂಪಾದ ಆ ಮರಿಗಳು ಆ ಬೂರಲಮರದ ಹೂಗಳಂತೆ ಕಾಣಿಸುವುವು. ಕೆಲವುಗಳಿಗೆ ಆಗ ತಾನೇ ರೆಕ್ಕೆ ಮೂಡುತ್ತಿವೆ; ಅವು ಆ ಮರದ ಚಿಗುರೆಲೆಗಳಂತೆ ಕಾಣಿಸುವುವು. ತಲೆ ಇನ್ನೂ ನಿಲ್ಲದೆ ನಡುಗುವಾಗ ಅವು ಆ ಬೇಡನಿಗೆ ಈ ಕೀಳು ಕೆಲಸವನ್ನು ಮಾಡಬೇಡವೆಂದು ಹೇಳುವುವೋ ಎಂದು ತೋರುವುದು. ಇಂತಹ ಸಣ್ಣಪುಟ್ಟ ಮರಿಗಳನ್ನು ಇದ್ದಲ್ಲಿಂದ ಹೊರದೆಗೆದು ಹಣ್ಣು ಹಿಡಿದಂತೆ ಕೈಯಲ್ಲಿ ಹಿಡಿದು ಗೋಣು ಮುರಿಮುರಿದು ನೆಲಕ್ಕೊಗೆಯತೊಡಗಿದನು. ನನ್ನ ತಂದೆ ತೀರ ಮುದುಕ. ಒಮ್ಮೆಲಿ ಒದಗಿದ ಈ ಅನಾಹೂತವನ್ನು ಕಂಡು ಆತನ ಕೈಕಾಲೇ ಹೋದುವು; ಥರಥರ ನಡುಗತೊಡಗಿದನು; ಬೆದರುಗಣ್ಣಿನಿಂದ ಅತ್ತಿತ್ತ ನೋಡತೊಡಗಿದನು. ಈ ಸಂಕಟದಿಂದ ಪಾರಾಗುವ ಹಂಚಿಕೆ ಹೊಳೆಯದಿರಲು ನನ್ನನ್ನು ತನ್ನ ರೆಕ್ಕೆಗಳಲ್ಲಿ ಇನ್ನಿಷ್ಟು ಅಡಗಿಸಿಕೊಂಡನು. ನಾನು ಆತನ ಕಡೆಗೆ ನೋಡಿದಾಗ ಆತನ ಕಣ್ಣುಗಳಲ್ಲಿ ನೀರು ಬಂದಿದ್ದುವು. ಅಷ್ಟರಲ್ಲಿ ಆ ನರಾಧಮನು ನಾವಿದ್ದ ಹೊದರಿನ ಹತ್ತಿರ ಬಂದು ಕೃಷ್ಣಸರ್ಪನಂತಿರುವ ತನ್ನ ಕರಿಗೈಯನ್ನು ಒಳಗೆ ಚಾಚಿ ನನ್ನ ತಂದೆಯನ್ನು ಹಿಡಿದನು. ನನ್ನ ತಂದೆ ಆ ಬೇಡನ ಕೈಯನ್ನು ಕೊಕ್ಕಿನಿಂದ ಕುಕ್ಕಿ ಕಡಿದು ಬೇಕಾದಷ್ಟು ಹೆಣಗಿದರೂ ಆ ರಕ್ಕಸನು ಸಿಟ್ಟಿನಿಂದ ಆತನನ್ನು ಹೊರಗೆಳೆದು ಗೋಣುಮುರಿದು ನೆಲಕ್ಕೊಗೆದನು. ತಂದೆಯ ರೆಕ್ಕೆಯಲ್ಲಿ ಅಡಗಿಕೊಂಡಿದ್ದ ನಾನು ಆ ದುರುಳನ ಕಣ್ಣಿಗೆ ಬೀಳಲಿಲ್ಲ. ತಂದೆಯ ಶರೀರದೊಡನೆ ನಾನು ಮರದ ಕೆಳಗಿನ ತರಗೆಲೆಗಳ ರಾಶಿಯಲ್ಲಿ ಬಿದ್ದುದರಿಂದ ನನಗೆ ಬಹಳ ಪೆಟ್ಟು ತಗಲಲಿಲ್ಲ. ಪ್ರಾಣಿಗಳಿಗೆ ತೀರ ಚಿಕ್ಕಂದಿನಲ್ಲಿ ಪ್ರೀತಿ ಹುಟ್ಟುವುದಿಲ್ಲವೆಂದು ತೋರುವುದು; ಅಂಜಿಕೆ ಮಾತ್ರ ಹುಟ್ಟಿದಂದೇ ಹುಟ್ಟುವುದು. ನಾನು ಆಗ ಕೇವಲ ಶಿಶು; ನನ್ನ ಅಂತಃಕರಣದಲ್ಲಿ ಇನ್ನೂ ಪ್ರೀತಿಯ ಸುಳಿವು ಇರಲಿಲ್ಲ. ಅಂಜಿಕೆ ಮಾತ್ರ ಹುಟ್ಟಿತು. ಅಂತೆಯೇ ಅದು ಪ್ರಾಣವನ್ನು

ತೋರಿಯಬೇಕಾದ ಸಮಯವಾಗಿದ್ದರೂ ನಾನು, ಸಾಕಿ ಸಲಹಿದ ತಂದೆಯನ್ನು ತೊರೆದು ಅತ್ಯಂತ ನಿರ್ದಯನಂತೆ ದೂರ ಹೋಗಬೇಕೆಂದು ಮಾಡಿದೆನು. ಇನ್ನೂ ನಿಲ್ಲಲು ಬಾರದ ಕಾಲು, ಹಾರಲು ಬಾರದ ರೆಕ್ಕೆ; ಏನು ಮಾಡಲಿ? ಬೀಳುತ್ತ ಏಳುತ್ತ ಹಾಗೂ ಹೀಗೂ ಮುಂದೆ ಸರಿಯುತ್ತ ಇನ್ನೊಬ್ಬ ತಂದೆ ಯನ್ನು ಆಶ್ರಯಿಸುವಂತೆ ಸಮೀಪದಲ್ಲಿರುವ ಒಂದು ತಮಾಲವೃಕ್ಷದ ಬುಡಕ್ಕೆ ಹೋದೆನು. ಅಷ್ಟರಲ್ಲಿ ಆ ಚಂಡಾಲನು ತಾನು ಕೊಂದ ಹಕ್ಕಿಗಳ ಮರಿಗಳ ನ್ನೆಲ್ಲ ಒಟ್ಟುಗೂಡಿಸಿ ಬಳ್ಳಿಗಳಲ್ಲಿ ಸುತ್ತಿ ತಲೆಯ ಮೇಲಿಟ್ಟುಕೊಂಡು ಬೇಡರ ಗುಂಪು ಹೋದ ದಾರಿಯ ಹಿಡಿದು ನಡೆದನು.

ತನ್ನ ಜೀವಕ್ಕಿಂತ ಹೆಚ್ಚಿಗೆ ಪ್ರೀತಿಯಿಂದ ಸಲಹಿದ ತಂದೆಯನ್ನು ಕಳೆದುಕೊಂಡ ಅಂತಹ ದುಃಖದಲ್ಲಿಯೂ ನನಗೆ ನೀರಡಿಕೆಯಾಯಿತು! ಇಷ್ಟು ಹೊತ್ತಿಗೆ ಆ ರಕ್ಕಸನು ದೂರ ಹೋಗಿರಬಹುದೆಂದು ಒಗೆದು ಸ್ವಲ್ಪ ತಲೆಯೆತ್ತಿ ಅತ್ತಿತ್ತ ನೋಡತೊಡಗಿದೆನು. ಸ್ವಲ್ಪ ತರಗೆಲೆ ಕದಲಿದರೂ ಸಾಕು, ಆ ದುರುಳನೇ ಮರಳಿ ಬಂದನೋ ಎಂದು ನನ್ನ ಎದೆಯೊಡೆದು ನೀರಾಗು ವುದು. ಏನಾದರೇನು? ಬದುಕಬೇಕೆಂಬಾಸೆ ದೊಡ್ಡದು; ಅದು ಯಾರನ್ನೂ ಬಿಟ್ಟಿಲ್ಲ. ಆಗ ನಾನು ಜೀವವನ್ನುಳಿಸಿಕೊಳ್ಳುವ ಆಸೆಯಿಂದ ಅತ್ತೊಮ್ಮೆ ಇತ್ತೊಮ್ಮೆ ಬೀಳುತ್ತ ಏಳುತ್ತ ಆ ಮರದಡಿಯಿಂದ ಮೆಲ್ಲಮೆಲ್ಲನೆ ಸರಿಯುತ್ತ ನೀರನ್ನು ಹುಡುಕತೊಡಗಿದೆನು.

ಆಗ ನನ್ನ ಮನದಲ್ಲಿ–ಅಹಾ, ಎಂತಹ ಸಂಕಟಕಾಲವೊದಗಿದರೂ ಬದುಕಬೇಕೆಂಬಾಸೆ ಯಾವ ಪ್ರಾಣಿಯನ್ನೂ ಬಿಡದಲ್ಲಾ ಎಂದು ಅಚ್ಚರಿ ಯಾಯಿತು; ಮತ್ತೆ ಅಯ್ಯೋ, ನನ್ನಂತಹ ಕಟುಕನಾರು, ನನ್ನ ತಂದೆ ಹೆಂಡತಿಯನ್ನು ಕಳೆದುಕೊಂಡ ದುಃಖಾಗ್ನಿಯಿಂದ ಬೆಂದು ಹೋಗಿದ್ದರೂ ಕನಿಕರದಿಂದಲೂ ಮೋಹದಿಂದಲೂ ನನ್ನನ್ನು ಸಲಹಿದನು; ಅಂತಹ ಪ್ರೀತಿಯ ತಂದೆಯನ್ನು ನಾನು ಆಗಲೇ ಮರೆತುಬಿಟ್ಟೆನಲ್ಲಾ, ನನ್ನಂತಹ ಕೃತಘ್ನನೂ ಚಂಡಾಲನೂ ನಾನೇ ಸರಿ, ಎಂದು ವ್ಯಸನವಾಯಿತು. ಹೀಗೆ ಬಳಲುತ್ತಿರುವಾಗ ದೂರದಿಂದ ಹಂಸಪಕ್ಷಿಗಳ ಇಂಚರವು ಅಸ್ಪಷ್ಟವಾಗಿ ಕೇಳಬರಲು ನೆರೆಯಲ್ಲಿ ಸರೋವರವಿರಬಹುದೆಂದು ಊಹಿಸಿದೆನು. ಆಗಳಂತೂ ಆ ಸರೋವರವನ್ನು ಯಾವಾಗ ಕಂಡೇನು, ನೀರನ್ನು ಯಾವಾಗ ಕುಡಿದೇನು ಎಂಬ ಆತುರವು ಹೆಚ್ಚಿಬಿಟ್ಟಿತು.

ಇಷ್ಟರಲ್ಲಿ ಮಧ್ಯಾಹ್ನವಾಯಿತು. ಬಿಸಿಲಿನ ಬೇಗೆಗೆ ನೆಲವೆಲ್ಲ ಕಾಯ್ದು ಹೋಯಿತು. ನೆಲದ ಕಾವಿಗೆ ನನ್ನ ಮೈ ಹುರುಪಳಿಸತೊಡಗಿತು. ಸಾಯಬಾರದೆಂದು ಬೇಕಾದಷ್ಟು ಗಟ್ಟಿಮನಸ್ಸು ಮಾಡಿಕೊಂಡಿದ್ದರೂ ಈ ಹೊತ್ತಿಗೆ ಮಾತ್ರ ದೇವರೇ, ನನ್ನ ಕಣ್ಣುಗಳನ್ನೇಕೆ ಮುಚ್ಚಲೊಲ್ಲೆ ಎಂದೆನಿಸಿಬಿಟ್ಟಿತು. ನಾಲ್ಕೂ ಕಡೆಗೆ ಕಣ್ಣಿಗೆ ಕತ್ತಲೆ ಕವಿಯಿತು. ಗಂಟಲು ಪೀಕಿ ಬಳಲಿ ಬೆಂಡಾಗಿ ಬಸವಳಿದು ಮೈಮರೆತು ಬಿದ್ದುಬಿಟ್ಟೆನು.

ಈ ಸ್ಥಳಕ್ಕೆ ಸನಿಯದಲ್ಲಿಯೇ ಜಾಬಾಲಿ ಎಂಬ ಬಹು ದೊಡ್ಡ ಋಷಿಯ ಆಶ್ರಮವಿದೆ; ಆತನ ಮಗನಾದ ಹಾರೀತನೆಂಬವನು ಈ ಹೊತ್ತಿಗೆ ಹಲವು ಜನ ಮುನಿಕುಮಾರರನ್ನೊಡಗೊಂಡು ಇದೇ ದಾರಿಯ ಹಿಡಿದು ಸ್ನಾನಕ್ಕೆ ನಡೆದಿದ್ದನು. ಬಂಗಾರದಿಂದಲೋ ಮಿಂಚಿನಿಂದಲೋ ಮಾಡಿದಂತಿದ್ದ ಆತನ ಮೈಯನ್ನು ನೋಡಿದೊಡನೆ ನನ್ನ ಕಣ್ಣು ಕುಕ್ಕಿದುವು. ತಲೆಯ ಮೇಲಿನ ಜಡೆ, ಹಣೆಯ ಮೇಲಿನ ವಿಭೂತಿ, ಎಡಗೈಯೊಳಗಿನ ಕಮಂಡಲು, ಬಲಗೈಯೊಳಗಿನ ಯೋಗದಂಡ, ಹೆಗಲಮೇಲಿನ ಕೃಷ್ಣಾಜಿನ, ಕೊರಳೊಳಗಿನ ಯಜ್ಞೋಪವೀತ ಇವುಗಳಿಂದೊಪ್ಪುವ ಆತನ ಶಾಂತ ಸುಂದರ ಮೂರ್ತಿಯನ್ನು ನೋಡಿದೊಡನೆ ಪರಮ ಕಾರುಣಿಕನಾದ ಸಾಕ್ಷಾಚ್ಛಂಕರನೇ ನನ್ನನ್ನು ಕಾಪಾಡಲೋಸುಗ ಬಂದನೋ ಎಂದೆನಿಸಿತು.

ಸಾಧುಗಳ ಹೃದಯವು ಸ್ವಾಭಾವಿಕವಾಗಿ ಕರಗುವಂತಹದು. ನನ್ನ ದುರವಸ್ಥೆಯನ್ನು ನೋಡಿದೊಡನೆ ಆತನಿಗೆ ದಯೆ ಬಂದಿತು. ಮತ್ತು ನನ್ನ ಕಡೆಗೆ ಬೆರಳುಮಾಡಿ ತನ್ನ ಗೆಳೆಯರನ್ನು ಕುರಿತು ನೋಡಿದಿರಾ, ಇಲ್ಲೊಂದು ಗಿಳಿಮರಿ ಕಾಣಿಸುತ್ತಿದೆ; ಇದು ಈ ಬೂರಲಮರದ ಮೇಲಿನ ಗೂಡಿನೊಳಗಿಂದ ಕೆಳಗೆ ಬಿದ್ದಿರಬಹುದು; ಇದೋ ನೋಡಿರಿ, ವಕವಕ ಬಾಯಿಬಿಡುತ್ತಿದೆ! ಇದು ಬಹಳ ನೀರಡಿಸಿದಂತಿದೆ; ನೀರನ್ನು ಹಾಕದಿದ್ದರೆ ಇದು ಇನ್ನು ಬಹಳ ಹೊತ್ತು ಬದುಕಲಾರದು; ಇದನ್ನು ಸರೋವರಕ್ಕೆ ಒಯ್ದು ಬಾಯಲ್ಲಿ ನೀರನ್ನು ಹನಿಸುವ; ಬದುಕಬಹುದು, ಎಂದು ಹೇಳಿ ನನ್ನನ್ನು ನೆಲದ ಮೇಲಿಂದ ಎತ್ತಿಕೊಂಡನು. ಮೈ ಕಾಯ್ದ ನನಗೆ ಆತನ ತಂಗೈಯಲ್ಲಿ ಆಪ್ಯಾಯನವೆನಿಸಿತು. ಆತನು ಸರೋವರಕ್ಕೆ ಹೋದೊಡನೆ ನನ್ನ ಚುಂಚುವನ್ನು ಮೇಲೆಮಾಡಿ, ಅದನ್ನು ಸ್ವಲ್ಪ ಬಿಡಿಸಿ ತನ್ನ ಬೆರಳ ತುದಿಯಿಂದ ನನ್ನ

ಬಾಯಲ್ಲಿ ಹನಿ ಹನಿ ನೀರನ್ನು ಬಿಡತೊಡಗಿದನು. ನೀರು ಕುಡಿದ ಬಳಿಕ ನಾನು ಶಾಂತನಾದೆನು. ಬಳಿಕ ಆತನು ನನ್ನ ಮೈ ತೊಳೆದು ಕಮಲದೆಲೆಯ ಮರೆಯಲ್ಲಿ ನನ್ನನ್ನು ಮಲಗಿಸಿದನು. ತರುವಾಯ ಮುನಿಕುಮಾರರೊಡನೆ ಸ್ನಾನ ಸಂಧ್ಯಾವಂದನಾದಿಗಳನ್ನು ತೀರಿಸಿಕೊಂಡು ನನ್ನನ್ನು ಸಂಗಡ ತೆಗೆದುಕೊಂಡು ಆಶ್ರಮಕ್ಕೆ ತೆರಳಿದನು.

ತಪೋವನವನ್ನು ಕಂಡು ನನಗೆ ಬಹಳ ಸೊಗಸೆನಿಸಿತು. ಅಲ್ಲಿಯ ಗಿಡಬಳ್ಳಿಗಳು ಎಲೆ ಹೂ ಕಾಯಿಗಳಿಂದ ಕಂಗೊಳಿಸುವುವು; ಹಣ್ಣುಗಳ ಭಾರದಿಂದ ಒರಗಿರುವುವು ಏಲಾ ಲವಂಗ ತರುಗಳೂ ತೆಂಗು ಅಡಕೆ ಮರಗಳೂ ಫಲಭರದಿಂದ ತೊನೆದಾಡುವುವು. ಅಲ್ಲಿ ಇಡುಗಿದ ಸುಗಂಧಕ್ಕೆ ಮರುಳಾಗಿ ತುಂಬಿಗಳು ಝೇಂಕರಿಸುತ್ತ ಅತ್ತಿಂದಿತ್ತ ಅಲೆದಾಡುವುವು. ಸಂಪಿಗೆ, ಮಾವು, ಪಾದರಿ, ಪಾರಿಜಾತ ಮೊದಲಾದ ಗಿಡಗಳು, ಅವುಗಳಿಗೆ ಹಬ್ಬಿದ ಮಲ್ಲಿಗೆ ಜಾಜಿ ಮೊದಲಾದ ಬಳ್ಳಿಗಳು ಇವುಗಳಿಂದ ಅಲ್ಲಲ್ಲಿ ಬಳ್ಳಿಮನೆಗಳುಂಟಾಗಿರುವುವು. ಋಷಿಗಳು ದಿನಾಲು ಮಾಡುವ ಹೋಮದ ಹೊಗೆ ಹಿಡಿದು ಆಶ್ರಮದ ನೆರೆಯ ಮರಬಳ್ಳಿಗಳ ಎಲೆಗಳು ಮಾಸಲು ಬಣ್ಣದವಾಗಿರುವುವು. ಹೂಗಳ ಮತ್ತು ಹೋಮಧೂಮದ ಕಂಪನ್ನು ಸುತ್ತಲೂ ಹರಡುತ್ತ ತಂಗಾಳಿಯು ಸುಳಿಯುತ್ತಿರುವುದು. ಮುನಿಕುಮಾರರು ಕೆಲವರು ವೇದಘೋಷದಲ್ಲಿ, ಕೆಲವರು ಶಾಸ್ತ್ರಾಲೋಚನೆಯಲ್ಲಿ, ಕೆಲವರು ಧರ್ಮನಿರೂಪಣದಲ್ಲಿ ತೊಡಗಿರುವರು. ಜಿಂಕೆಗಳು ಕಾಡಾಕಳುಗಳು ಆಶ್ರಮದೊಳಗೆಲ್ಲ ನಿರ್ಭಯವಾಗಿ ಸಂಚರಿಸುವುವು. ಆಶ್ರಮತರುಗಳ ಮೇಲೆ ಶುಕಶಾರಿಕಾದಿ ಪಕ್ಷಿಗಳು ಕುಳಿತು ಹಣ್ಣುಗಳನ್ನು ಕಡಿಕಡಿದು ಚೆಲ್ಲುತ್ತ ತಮ್ಮ ಇಂಚರದಿಂದ ಕಿವಿಗೆ ಹಬ್ಬವನ್ನುಂಟುಮಾಡುತ್ತಿರುವುವು. ಆಶ್ರಮಪ್ರದೇಶದಲ್ಲೆಲ್ಲ ಪಾವಿತ್ರ್ಯವೂ ಒಂದು ಬಗೆಯ ಸಂಯಮವೂ ನೆಲೆಸಿರುವುದು.

ಆಶ್ರಮದೊಳಗೆ ಹೋದಬಳಿಕ ನನ್ನ ಹರ್ಷವು ಇಮ್ಮಡಿಸಿತು. ಅಲ್ಲಿ ಒಂದೆಡೆಯಲ್ಲಿ ಎಳಚಿಗುರೆಲೆಗಳಿಂದೊಪ್ಪುವ ರಕ್ತಾಶೋಕವೃಕ್ಷದ ಬುಡದಲ್ಲಿ ಗೋಮಯದಿಂದ ಸಾರಿಸಿ ರಂಗವಲ್ಲಿ ಹಾಕಿದ ನೆಲದ ಮೇಲೆ ಹಾಸಿದ ಪವಿತ್ರವಾದ ವೇತ್ರಾಸನದ ಮೇಲೆ ಭಗವಾನ್ ಜಾಬಾಲಿ ಮಹರ್ಷಿಯು ಕುಳಿತಿದ್ದನು. ಬೇರೆ ಹಲವು ಜನ ಮುನಿಗಳು ಆತನ ಸುತ್ತಲು ದೂರದಲ್ಲಿ

ಕೃಷ್ಣಾಜಿನ ವ್ಯಾಘ್ರಾಜಿನಗಳ ಮೇಲೆ ಕುಳಿತಿದ್ದರು. ಜಾಬಾಲಿ ಮುನಿಯು ಬಹಳ ದಿನದವನು. ಮುಪ್ಪಿನಿಂದ ಆತನ ಜಡೆಗಳೂ ಮೈಗೂದಲುಗಳೂ ಬಿಳಿಯವಾಗಿವೆ. ಮೈಮೇಲೂ ಮೋರೆಯ ಮೇಲೂ ನಿರಿಗೆಗಳು ಬಿದ್ದಿವೆ. ಗಲ್ಲಗಳು ಕುಸಿದಿವೆ; ನರಗಳೂ ಎಲುವುಗಳೂ ಎದ್ದಿವೆ; ಕಣ್ಣುಗಳು ಹೂತಿವೆ: ಆತನನ್ನು ನೋಡಿದ ಕೂಡಲೆ ನನ್ನ ಮನದಲ್ಲಿ ಅಂಜಿಕೆಯೂ, ಅಚ್ಚರಿಯೂ ಏಕಕಾಲದಲ್ಲಿ ಉಂಟಾದುವು. ಆ ಮಹರ್ಷಿಯು ಅತ್ಯಂತ ಪ್ರಭಾವ ಶಾಲಿಯು; ಆತನ ಮಹಿಮೆಯಿಂದ ತಪೋವನದ ಪಶುಪಕ್ಷಿಗಳಲ್ಲಿ ಕೂಡ ಹಗೆತನ ಹೊಟ್ಟೆಕಿಚ್ಚು ಮೊದಲಾದ ಆಳಿಗುಣಗಳ ಸುಳಿವೇ ಇಲ್ಲ. ನವಿಲುಗಳು ಗರಿಗೆದರಿ ನಿಂತುಕೊಂಡು ಬಿಸಿಲಿನಿಂದ ಬಳಲಿದ ಸರ್ಪಗಳಿಗೆ ನೆಳಲನ್ನುಂಟುಮಾಡುವುವು; ಹೆಣ್ಣು ಸಿಂಹಗಳು ಹಸಿದು ಬಂದ ಚಿಗರೆಯ ಮರಿಗಳಿಗೆ ಮೊಲೆಯುಣಿಸುವುವು; ಆನೆಗಳ ಮರಿಗಳು ಚಿಣ್ಣಾಟವಾಡುತ್ತ ತಮ್ಮ ಸೊಂಡಿಲುಗಳಿಂದ ಸಿಂಹಗಳನ್ನೆಳೆಯುವುವು; ಜಿಂಕೆಗಳು ಹುಲಿಗಳೊಡನೆ ಸರಸವಾಡುವುವು. ಇದನ್ನೆಲ್ಲ ನೋಡಲು ಕಲಿಕಾಲಭಯದಿಂದ ಕೃತಯುಗವು ಈ ತಪೋವನದಲ್ಲಿ ಬಂದು ನೆಲಸಿದೆಯೋ ಎಂದು ತೋರುವುದು. ಆಶ್ರಮ ತರುಗಳ ಮೇಲೆ ನಾರುಮಡಿಗಳನ್ನು ಒಗೆದು ಒಣಗಹಾಕಿರುವರು, ಟೊಂಗೆಗಳಿಗೆ ಕಮಂಡುಲು, ಜಪಮಾಲೆ ಇವುಗಳನ್ನು ತೂಗಹಾಕಿರುವರು; ಬುಡದಲ್ಲಿ ಕೃಷ್ಣಾಜಿನಗಳನ್ನು ಹಾಸಿರುವರು; ಇದರಿಂದ ಆ ಮರಗಳು ತಪಸ್ಸಿಗೆ ಕುಳಿತಿವೆಯೋ ಎಂಬಂತೆ ತೋರುವುದು.

ಇದನ್ನೆಲ್ಲ ನಾನು ನೋಡುತ್ತಿರುವಷ್ಟರಲ್ಲಿ ಹಾರೀತಕುಮಾರನು ನನ್ನನ್ನು ಅದೇ ರಕ್ತಾಶೋಕವೃಕ್ಷದ ನೆಳಲಲ್ಲಿ ಕುಳ್ಳಿರಿಸಿ ತಂದೆಗೆ ನಮಸ್ಕಾರ ಮಾಡಿ ಒಂದು ದರ್ಭಾಸನದ ಮೇಲೆ ಕುಳಿತುಕೊಂಡನು. ಅಲ್ಲಿ ಇದ್ದ ಬೇರೆ ಮುನಿಕುಮಾರರು ನನ್ನನ್ನು ಕಂಡು ಕುತೂಹಲದಿಂದ ಹಾರೀತನನ್ನು ಕುರಿತು ಮಿತ್ರಾ, ಈ ಗಿಳಿಮರಿ ನಿನಗೆ ಎಲ್ಲಿ ದೊರೆಯಿತು ಎಂದು ಕೇಳಿದರು. ಹಾರೀತನು ತನಗೆ ನಾನು ದೊರೆತ ಬಗೆಯನ್ನು ವಿವರಿಸಿ ಹೇಳಿದನು. ಹಾರೀತನು ಹೇಳಿದುದನ್ನು ಕೇಳಿ ಜಾಬಾಲಿಮುನಿಯು ಸೋಜಿಗಬಟ್ಟು ನನ್ನನ್ನು ನೋಡಿದನು. ಆತನ ದೃಷ್ಟಿ ನನ್ನ ಮೇಲೆ ಬೀಳಲು ನಾನು ಧನ್ಯನೆಂದು ತಿಳಿದುಕೊಂಡೆನು. ಆತನು ನನ್ನ ಗುರುತು ಹಿಡಿದವನಂತೆ ಮೇಲೆ ಮೇಲೆ ನೋಡಿ,

ಇದು ತನ್ನ ದುಷ್ಕರ್ಮದ ಫಲವನ್ನು ಅನುಭೋಗಿಸುತ್ತಿದೆ ಎಂದು ನುಡಿದನು. ಆ ಮುನಿ ತ್ರಿಕಾಲದರ್ಶಿಯು; ಸಮಸ್ತ ಜಗತ್ತನ್ನು ಅಂಗೈನೆಲ್ಲಿಯಂತೆ ನೋಡುವವನು; ಅದೃಷ್ಟವು ಕೂಡ ಆತನಿಗೆ ಪ್ರತ್ಯಕ್ಷದಂತೆ ಇರುವುದು. ಎಲ್ಲರೂ ಆತನ ತಪಃಪ್ರಭಾವಕ್ಕೆ ಬೆರಗುಬಡುವರು; ಆದುದರಿಂದ ಆ ಮುನಿ ನನ್ನ ವಿಷಯವಾಗಿ ನುಡಿದುದರಲ್ಲಿ ಯಾರೂ ಸಂಶಯಗೊಳ್ಳಲಿಲ್ಲ. ಮುನಿಕುಮಾರರೆಲ್ಲ ಆಶ್ಚರ್ಯದಿಂದ ಸ್ವಾಮಿ, ಇದು ಯಾವ ದುಷ್ಕರ್ಮವನ್ನು ಮಾಡಿದೆ, ಯಾವ ಫಲವನ್ನು ಅನುಭೋಗಿಸುತ್ತಿದೆ, ಪೂರ್ವಜನ್ಮದಲ್ಲಿ ಯಾವ ವಂಶದಲ್ಲಿ ಹುಟ್ಟಿತ್ತು, ಈಗ ಪಕ್ಷಿಯಾಗಿ ಏಕೆ ಜನಿಸಿತು ಇದನ್ನೆಲ್ಲ ವಿವರಿಸಿ ನಮ್ಮ ಕುತೂಹಲವನ್ನು ಹೋಗಲಾಡಿಸಬೇಕು ಎಂದು ಬೇಡಿಕೊಂಡರು.

ಆಗ ಜಾಬಾಲಿ ಮುನೀಶ್ವರರು ಮಕ್ಕಳೇ, ಈ ಕಥೆ ವಿಸ್ಮಯಕುತೂಹಲಗಳನ್ನು ಹುಟ್ಟಿಸುವಂತಹದು; ಆದರೆ ಬಹಳ ದೊಡ್ಡದು; ಸ್ವಲ್ಪ ಹೊತ್ತಿನಲ್ಲಿ ಮುಗಿಯಲಾರದು. ಈಗ ಸಂಜೆಯಾಗುತ್ತ ಬಂದಿತು. ನಾನು ಸ್ನಾನ ಸಂಧ್ಯಾವಂದನಾದಿಗಳನ್ನು ಮಾಡಬೇಕು; ನೀವೂ ನಿಮ್ಮ ಸಂಧ್ಯಾವಂದನೆ ಅಗ್ನಿಕಾರ್ಯಗಳನ್ನು ಮುಗಿಸಿರಿ. ಇದಕ್ಕೆ ಆಹಾರ ಹಾಕಿ ನೀವೂ ಊಟ ಮಾಡಿ ನಿಶ್ಚಿಂತರಾಗಿ ಕುಳಿತುಕೊಂಡು ವಿಸ್ತಾರವಾದ ಇದರ ಕಥೆಯನ್ನು ಕೇಳುವಿರಂತೆ. ನಾನು ಹೇಳುತ್ತ ನಡೆದಂತೆ ಇದಕ್ಕೂ ತನ್ನ ಪೂರ್ವಜನ್ಮದ ನೆನಪು ಆಗುವುದು; ಎಂದು ನುಡಿದರು. ಕೂಡಲೆ ಮುನಿಕುಮಾರರೆಲ್ಲ ನಿತ್ಯ ಕರ್ಮಗಳಿಗಾಗಿ ಅಲ್ಲಿಂದ ಎದ್ದು ನಡೆದರು.

ಅಷ್ಟರಲ್ಲಿ ಅಸ್ತಮಯ ಸಮಯವಾಗುತ್ತ ಬಂದಿತು. ಮುನಿಗಳು ರಕ್ತ ಚಂದನ ಮಿಶ್ರವಾದ ಅರ್ಘ್ಯವನ್ನು ಕೊಡಲು ಆ ರಕ್ತಚಂದನವನ್ನು ಮೈಗೆ ಬಳಿದುಕೊಂಡನೋ ಎಂಬಂತೆ ಸೂರ್ಯನಾರಾಯಣನು ರಕ್ತವರ್ಣನಾದನು. ಜೇನುತುಪ್ಪದ ಬಣ್ಣದ ಎಳಬಿಸಿಲು ನೆಲವನ್ನು ಬಿಟ್ಟು ಕಮಲವನಗಳನ್ನು, ಕಮಲವನಗಳನ್ನು ಬಿಟ್ಟು ವೃಕ್ಷಾಗ್ರಗಳನ್ನು, ವೃಕ್ಷಾಗ್ರಗಳನ್ನು ಬಿಟ್ಟು ಪರ್ವತಶಿಖರಗಳನ್ನು ಹತ್ತಿ ನಡೆಯಿತು ದಿನಮಣಿಯು ಪಾರಿವಾಳಗಳ

ಕಾಲಿನಂತಹ ಕೆಂಬಣ್ಣವನ್ನು ತಳೆದು ಅಸ್ತಂಗತನಾದನು. ಸಂಧ್ಯಾಕಾಲದ ಮಂದಮಾರುತನಿಂದ ಮರಗಳ ತುದಿಗಳು ಅಲ್ಲಾಡುತ್ತಿರಲು ಆ ಮರಗಳು ಪಕ್ಷಿಗಳನ್ನು ಗೂಡುಗಳಿಗೆ ಬರಲೋಸುಗ ಕೈಬೆರಳುಗಳಿಂದ ಕರೆಯು ತ್ತಿವೆಯೋ ಎಂಬಂತೆಯೂ ಆ ಪಕ್ಷಿಗಳು ಬರುವಾಗಿನ ಕಿಲಕಿಲವು ಅವು ಆ ಮರಗಳಿಗೆ ಉತ್ತರಕೊಡುತ್ತಿವೆಯೋ ಎಂಬಂತೆಯೂ ತೋರುವುದು. ಆಗ ಮುನಿಗಳು ಸಂಧ್ಯೋಪಾಸನೆಗೆ ಕುಳಿತರು. ಹಗಲು ಸೂರ್ಯನಿಗೆ ಅಂಜಿ ಪರ್ವತಗುಹೆಗಳನ್ನಾಶ್ರಯಿಸಿದ ಕತ್ತಲೆ ಈಗ ಹೊರಬೀಳತೊಡಗಿತು. ಸೂರ್ಯನ ಪ್ರತಾಪಕ್ಕಂಜಿ ಕಳ್ಳರಂತೆ ಅಡಗಿಕೊಂಡಿದ್ದ ಗ್ರಹನಕ್ಷತ್ರಗಳು ಈಗ ಕತ್ತಲೆಯಲ್ಲಿ ಗಗನಮಾರ್ಗದಿಂದ ಹೊರಗೆ ಬರಲಾರಂಭಿಸಿದುವು. ಅಷ್ಟರಲ್ಲಿ ಚಂದ್ರೋದಯವಾಗಲು ಕತ್ತಲೆಯೆಲ್ಲ ಕ್ರಮದಿಂದ ಎತ್ತಲೋ ಅಡಗಿ ಹೋಯಿತು. ಆಶ್ರಮಪ್ರದೇಶವೆಲ್ಲ ಬೆಳ್ಳಗೆ ಕಾಣಿಸತೊಡಗಿತು. ಅಷ್ಟರಲ್ಲಿ ನಾಲ್ಕು ಗಳಿಗೆ ರಾತ್ರಿಯಾಯಿತು.

ಹಾರೀತನು ಆಹಾರಾದಿಗಳನ್ನು ಮುಗಿಸಿಕೊಂಡು ನನ್ನನ್ನು ಎತ್ತಿ ಕೊಂಡು ಋಷಿಕುಮಾರರೊಡನೆ ತಂದೆಯ ಬಳಿಗೆ ಬಂದನು. ಆಗ ಜಾಬಾಲಿ ಮುನಿಯು ವೇತ್ರಾಸನದ ಮೇಲೆ ವಿಶ್ರಮಿಸಿದ್ದನು. ಜಾಲಪಾದನೆಂಬ ಶಿಷ್ಯನು ಬೀಸಣಿಕೆ ಬೀಸುತ್ತಿದ್ದನು. ಹಾರೀತನು ಕೈಜೋಡಿಸಿಕೊಂಡು ತಂದೆಯ ಹತ್ತಿರ ನಿಂತು ವಿನಯದಿಂದ ಮುನಿವರ, ನಾವೆಲ್ಲರೂ ಈ ಗಿಳಿಮರಿಯ ಸಮಾಚಾರವನ್ನು ಕೇಳಲೋಸುಗ ಕುತೂಹಲವುಳ್ಳವರಾಗಿ ಬಂದಿದ್ದೇವೆ. ತಾವು ಅದನ್ನು ಅನುಗ್ರಹಿಸಿ ಹೇಳಿದರೆ ಕೃತಕೃತ್ಯರಾಗುವೆವು ಎಂದನು.

ಮುನಿಕುಮಾರರೆಲ್ಲರೂ ಏಕಾಗ್ರಚಿತ್ತರಾಗಿ ಕುಳಿತುಕೊಂಡಿರುವುದನ್ನು ಕಂಡು ಜಾಬಾಲಿ ಮುನೀಶ್ವರರು ಶುಕ ಶಿಶುಸಮಾಚಾರವನ್ನು ಹೇಳತೊಡ ಗಿದರು.

## ೧೧. ಶಿಕ್ಷೆ (ಕಥೆ).

ಬಾಲ್ಯದಲ್ಲಿ ತಂದೆಯಿಲ್ಲದ ವಿಷಮ ಪರಿಸ್ಥಿತಿಯನ್ನೂ ಹಲವು ಕಷ್ಟತಾಪತ್ರಯಗಳನ್ನೂ ಲೆಕ್ಕಿಸದೆ, ಪ್ರಾಥಮಿಕ ಶಾಲೆಯಲ್ಲಿ ನಾನು ಪ್ರತಿಯೊಂದು ಇಯತ್ತೆಯ ಪರೀಕ್ಷೆಯಲ್ಲಿ ಇನಾಮನ್ನು ಪಡೆಯುತ್ತ, ಬುದ್ಧಿಶಾಲಿಯೆಂದು ಉಪಾಧ್ಯಾಯ (ಮಾಸ್ತರ) ರಿಂದ ಹೊಗಳಿಸಿಕೊಳ್ಳುತ್ತ ನಡೆದುದನ್ನು ಕಂಡು, ಅಂತಃಕರಣಬಡುವ ತಾಯಿಯೊಬ್ಬಳೇ ಏಕೆ, ನೆರೆಹೊರೆಯವರು ಕೂಡ ಮುಂದೆ ಈತನು "ಮಾಮಲೇತಿ, ಮುನಸೂಫಿ" ಪದವಿಯನ್ನು ಪಡೆಯುವನೆಂದು ಹಾರಯಿಸಿದ್ದರು. ಮಿಡಲ್‌ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆಯಲ್ಲಿ ಮೊದಲನೆಯ ನಂಬರನ್ನು ಪಡೆದು ಇಂಗ್ಲಿಶ್‌ಸ್ಕೂಲಿಗೆ ಹೋಗುವ ಸುಯೋಗವೊದಗಿದರೂ, ನಾನು ದೈವದ ವಿಷಮ-ವಕ್ರದೃಷ್ಟಿಯಿಂದ ಪರಭಾಷಾಭ್ಯಾಸಕ್ಕೆ ಶರಣುಹೊಡೆದು ತಾಯ್ನುಡಿಯಲ್ಲಿಯೇ ವಿದ್ಯಾಭ್ಯಾಸವನ್ನು ಮಾಡಿ ಪ್ರಾ. ಸ್ಕೂ. ಲೀ. ಸ. ಪರೀಕ್ಷೆಯಲ್ಲಿ ಮೊದಲನೆಯ ನಂಬರನ್ನು ಪಡೆದೆನು. ಮುಂದೆ ನನ್ನ ಗ್ರಹಚಾರದಿಂದ ೩ ವರ್ಷ ಕಲಿಸುವ ಧಾರವಾಡದ ಟ್ರೇನಿಂಗ್ ಕಾಲೇಜು ಒಂದೇವರ್ಷ ಕಲಿಸುವ ಟ್ರೇ. ಸ್ಕೂಲಾಗಿ ಮಾರ್ಪಟ್ಟದ್ದರಿಂದ ಅದರಲ್ಲಿಯೇ ಒಂದು ವರ್ಷದ ತಪಶ್ಚರ್ಯವನ್ನು ಮುಗಿಸಿಕೊಂಡು ಶಿಕ್ಷಕನಾಗಿ ಬಂದದ್ದನ್ನು ಕಂಡು ನಮ್ಮವರಿಗೆಲ್ಲ ತೀರ ಅಸಮಾಧಾನವಾಯಿತು. "ಮಾಮಲೇತಿ, ಮುನಸೂಫಿ" ಗಳ ಕನಸಿನಲ್ಲಿದ್ದ ಅನುತಪ್ತವಾದ ನನ್ನ ಮನಸ್ಸನ್ನು "ಎಲ್ಲ ಉದ್ಯೋಗಗಳಲ್ಲಿ ಶಿಕ್ಷಣವೇ ಮಿಗಿಲಾದ ಸನ್ಮಾನವುಳ್ಳದ್ದು" ಎಂಬ ವಾಕ್ಯವೂ, ಘನತರವಾದ ಶಿಕ್ಷಣಶಾಸ್ತ್ರದಲ್ಲಿ ಹೇಳಿದ--"ಶಿಕ್ಷಕನು ಭಾವಿರಾಷ್ಟ್ರ ನಿರ್ಮಾತನು" (ನೇಶನ್ ಬಿಲ್ಡರ್) ಎಂಬ ವಾಕ್ಯವೂ ತಮ್ಮಲ್ಲಡಕವಾದ ಬೋಧಾಮೃತವನ್ನು ತಳಿದು ಸ್ವಲ್ಪ ತಣ್ಣಗೆ ಮಾಡಿ, ತಾಯ್ನಾಡಿನ ಈಗಿನ ದುರ್ದಶೆಯ ಕಾಲದಲ್ಲಿ ಅನೇಕ ಭೋಗ-ವಿಲಾಸಾದಿಗಳನ್ನು ತುಚ್ಛೀಕರಿಸಿ, ಸ್ವಾರ್ಥಶೂನ್ಯವಾದ

ಉಪಾಧ್ಯಾಯವೃತ್ತಿಯಿಂದ ಭಾವಿರಾಷ್ಟ್ರ ನಿರ್ಮಾತನಾಗುವುದೇ ಈ ಕಾಲಕ್ಕೆ ಪ್ರತಿಯೊಬ್ಬ ಸುಶಿಕ್ಷಿತನ ಕರ್ತವ್ಯವೆಂದು ಮನಸ್ಸಿಗೆ ಸಮಾಧಾನ ಹೇಳಿ ಅಂಗೀಕೃತ ಕಾರ್ಯವನ್ನು ಉತ್ಸಾಹದಿಂದ ಮಾಡತೊಡಗಿದೆನು.

ನನ್ನ ಸಂಬಳವು ೨೫ ರೂ. ಪೂರ್ಣವಾಗಿದ್ದರೂ ಟಿಕೇಟು (ಸ್ಟ್ಯಾಂಪು) ಒಂದಾಣೆಯನ್ನು ಹೊಡೆದುಕೊಂಡು ಹೋಗುತ್ತಿದ್ದುದರಿಂದ ೨೪|||≶ ರೂ. ಮಾತ್ರ ನನ್ನ ಕೈಗೆ ಬರುತ್ತಿತ್ತು. ನಮ್ಮ ಶಾಲೆಯ ವೃದ್ಧರಾದ ಹೆಡ್‌ಮಾಸ್ತರರು ಈತನು ಹೊಸ ಟ್ರೇಂಡನೆಂಬ ಸಂಭ್ರಮದಿಂದ ಅದುವರೆಗೆ ತಾವು ಕಲಿಸುತ್ತ ಬಂದ ಪ್ರಾ. ಸ್ಕೂ. ಲೀ. ಪ. ಪರೀಕ್ಷೆಯ ಕ್ಲಾಸನ್ನು ನನಗೆ ಒಪ್ಪಿಸಿದರು. ಬಾಲಕರ ವರ್ಗಕ್ಕೆ ಹೊಸ ಪದ್ಧತಿಯ 'ರ ಠ ಈ ಕ' ಕ್ರಮದ ಅಕ್ಷರಾಭ್ಯಾಸ ಮೊದಲಾದ ವಿಷಯಗಳು ಹೊಸದಾಗಿ ಆ ಶಿಕ್ಷಣಕ್ರಮವನ್ನು ಕಲಿತುಬಂದ ನನ್ನಿಂದಲೇ ಚೆನ್ನಾಗಿ ಜರುಗುವುವೆಂದು ಅಭಿಪ್ರಾಯಪಟ್ಟದ್ದರಿಂದ ಆ ವರ್ಗದ ಆ ವಿಷಯಗಳಿಗೂ ನಾನೇ ಹೊಣೆಗಾರನಾದೆನು. ಇದಲ್ಲದೆ ಹೊಸ ಪದ್ಧತಿಯ ಡ್ರಿಲ್ಲು, ಚಿತ್ರಕಲೆ ಮೊದಲಾದುವುಗಳಲ್ಲಿ ಸಂಪಾದಿಸಿದ ನನ್ನ ಪ್ರಾವೀಣ್ಯವೂ ನನಗೇ ಮುಳುವಾಯಿತು. ಶಾಲೆಯ ನೋಡಬಂದವರ ಮನಸ್ತುಷ್ಟಿಗಾಗಿಯೂ, ಗಡಿಯಾರ-ಝಾಂಗಟಿ ಮೊದಲಾದ ವರಗಳ ಸಂಪಾದನೆಗಾಗಿಯೂ ಮಾಡಬೇಕಾದ ಸಂಗೀತ, ಸಂಭಾಷಣ, ಬಾಲನಾಟಕ ಮೊದಲಾದ ಪ್ರಸಂಗಗಳೂ ನನ್ನನ್ನೇ ಅಂಟಿಕೊಂಡವು. ನನ್ನ ದಿನದ ದುಡಿಮೆಗೂ ಸಂಬಳಕ್ಕೂ ಇರುವ ಅನನುರೂಪತೆಯನ್ನು ಕಂಡು ಕನಿಕರಬಟ್ಟು ಹೆಡ್‌ಮಾಸ್ತರರು—ಅಯ್ಯಾ, ಸಣ್ಣ ಸಂಬಳದ ಹೊಸ ಶಿಕ್ಷಕನಿಗೆ ಇಷ್ಟೆಲ್ಲ ವಿಷಯಗಳನ್ನು ಕಲಿಸುವ ಸುಯೋಗವೊದಗಿದ್ದು ಒಳ್ಳೆಯದೆಂದೇ ಭಾವಿಸಬೇಕೆಂದೂ ನಿನ್ನ ಕೆಲಸವು ಮೂರು ವರ್ಷವೂ ಒಳ್ಳೆಯದೆಂದು ಶಾಲಾಧಿಕಾರಿಗಳು ನಿರ್ಣಯಿಸಿದರೆ ಆ ತರುವಾಯ ಸಂಬಳವು ಇಡಿ ೧ ರೂಪಾಯಿ ಹೆಚ್ಚಿಗೆ ಆಗದಿರಲಾರದೆಂದೂ ಸಮಾಧಾನ ಹೇಳಿದರು. ಈ ಸಮಾಧಾನಕ್ಕೆ ನನ್ನ ಮನಸ್ಸು ಒಪ್ಪಲಿಲ್ಲ. ಅದು, ಕೆಲಸವು ಸ್ವಲ್ಪ ಕಡಿಮೆಯಾಗುವ ಸುಯೋಗವೂ ಸಂಬಳವು ಇನ್ನಿಷ್ಟು ಹೆಚ್ಚುವ ಸುಯೋಗವೂ ಒಳ್ಳೆಯದೆಂಬುದನ್ನು ಹೇಳುತ್ತಿದ್ದಿತು.

ಏನೇ, ಆಗಲಿ, ಸ್ವಾರ್ಥವನ್ನು ಬದಿಗೊತ್ತಿ ಭಾವಿರಾಷ್ಟ್ರನಿರ್ಮಾತನಾಗಲು ಒಪ್ಪಿಕೊಂಡ ಬಳಿಕ ದುಡ್ಡು ಕಾಸು ಮೊದಲಾದ ಸಣ್ಣ ವಿಷಯ

ಗಳಲ್ಲಿ ದೃಷ್ಟಿಯಿಟ್ಟು ಮನಸ್ಸನ್ನು ಸಂಕುಚಿತವಾಗಿ ಮಾಡಿಕೊಳ್ಳುವದು ಅನುಚಿತವಲ್ಲವೇ? ಆದುದರಿಂದ ೨೪ ರೂ. ೧೫ ಆಣೆಯಿಂದಲೇ ಭಾವಿರಾಷ್ಟ್ರ ನಿರ್ಮಾಣದ ಮಹಾಕಾರ್ಯವನ್ನು ಭರದಿಂದ ನಡೆಯಿಸತೊಡಗಿದೆನು. ಕೆಲವು ತಿಂಗಳುಗಳ ಅನುಭವದಿಂದ ಸ್ವಲ್ಪ ಸಂಬಳದಲ್ಲಿ ಬಹಳ ಕೆಲಸಗಳನ್ನು ಮಾಡುವುದಕ್ಕೆ ದೊರೆತುದೊಂದೇ ಸುಯೋಗವಲ್ಲವೆಂದೂ, ಈ ರಾಷ್ಟ್ರನಿರ್ಮಾಣದ ಪವಿತ್ರ ಕಾರ್ಯದಲ್ಲಿ ಇನ್ನೂ ಹಲವು ಸುಯೋಗಗಳುಂಟೆಂದೂ ಕಂಡು ಬಂದಿತು. ಈ ಸುಯೋಗಗಳಲ್ಲಿ ರಜೆಯನ್ನು ಪಡೆದ ಉಪಾಧ್ಯಾಯರ ಕ್ಲಾಸುಗಳು ನನ್ನ ಕ್ಲಾಸಿನ ಕೋಣೆಯಲ್ಲಿಯೇ ಕುಳಿತುಕೊಳ್ಳತೊಡಗಿದ್ದರಿಂದ ಆ ಕ್ಲಾಸುಗಳನ್ನು ನೋಡಬೇಕಾದದ್ದೊಂದು ಸುಯೋಗವು ಮುಖ್ಯವಾದದ್ದು. ಶಾಲೆಯ ವಿರಾಮ ಕಾಲದಲ್ಲಿ ಕಾಗದಪತ್ರಗಳ ಕೆಲಸವನ್ನು ನೋಡಿಕೊಳ್ಳಬೇಕಾದುದು ಎರಡನೆಯ ಸುಯೋಗವು. ಸಭ್ಯವಾದ ಎತ್ತಿಗೆ ಎರಡು ಗೋಣಿಗಳೆಂದು ಹೇಳುವದುಂಟಲ್ಲವೇ? ಇದರಿಂದ ವಿರಾಮ ಘಂಟೆಯು ಇದ್ದೂ ನನ್ನ ಪಾಲಿಗೆ ಇಲ್ಲದಾಯಿತು. ಸಾಯಂಕಾಲ ಶಾಲೆ ಬಿಟ್ಟೊಡನೆ ಮನೆಗೆ ಹೋಗಬೇಕೆಂದರೆ ಮೂರುಸಂಜೆಯಾಗುವವರೆಗೆ ಶಾಲೆಯನ್ನು ಹಾಕಿ ಕೀರ್ತಿಯನ್ನು ಗಳಿಸಿದ ಹೆಡ್ ಮಾಸ್ತರರು ಐದು ಗಂಟೆಯ ತರುವಾಯ ಕೆಲವು ಕ್ಲಾಸುಗಳಿಗೆ ಡ್ರಿಲ್ಲನ್ನಿಟ್ಟು, ನಾನು ಮಾಡಿಸುವದನ್ನು ತಾವು ನೋಡಿ ಸಂತೋಷಬಡುತ್ತಿದ್ದುದರಿಂದ ಅವರಿಗಾಗಿ ನಾನು ಸಾಯಂಕಾಲದ ವಿಶ್ರಾಂತಿಯ ಒಂದು ಗಂಟೆಯ ಆಶೆಗೂ ನೀರನ್ನು ಬಿಟ್ಟು, ಅರ್ಧಾಹಾರ ಕ್ಷೀಣರೂ ರೋಗಗ್ರಸ್ತರೂ ಆದ ನಮ್ಮ ಬಾಲಕರ ದೇಹಯಷ್ಟಿಗಳನ್ನು ಪುಷ್ಟಿಗೊಳಿಸುವ ವ್ಯರ್ಥಪ್ರಯಾಸವನ್ನು ಅಂಗೀಕರಿಸಬೇಕಾಯಿತು.

ಈ ಮೇರೆಗೆ ಎಲ್ಲವೂ ಸುಲಲಿತವಾಗಿ ನಡೆದಿದ್ದರೂ ಅದೃಷ್ಟದ ಕುಚೇಷ್ಟೆಯಿಂದ ನನ್ನ ಭಾವಿರಾಷ್ಟ್ರನಿರ್ಮಾಣಕಾರ್ಯವು ಸರಿಯಾಗಿ ಸಾಗಲೊಲ್ಲದು. ನಾನು ದೂರದ ಊರಿಗೆ ಹೋಗಿ ಹೊಟ್ಟೆ-ಬಟ್ಟೆಗಳನ್ನು ನಿರ್ವಹಿಸುವುದಕ್ಕೆ ಸಂಕಟಬಡಿಸುವ ಆ ಸಣ್ಣ ಸಂಬಳದಲ್ಲಿ ಯಾರ ಸಲುವಾಗಿ ಹಗಲಿರುಳು ಹೆಣಗುತ್ತಿದ್ದೆನೋ ಆ ಬಾಲಕವೃಂದವೇ— ಆ ಭಾವಿರಾಷ್ಟ್ರವೇ— ನನ್ನ ಅಂಗೀಕೃತ ಕಾರ್ಯದ ಗತಿಯನ್ನು ತಡೆದುಹಿಡಿಯಿತು. ಆ ಪ್ರಿಯ ಶಿಷ್ಯರೆಲ್ಲರ ಹೆಸರುಗಳು ಈಗ ಸ್ಮೃತಿಪಥದಿಂದ ದೂರವಾಗಿ ಹೋಗಿದ್ದರೂ ಕೆಲವು ಜನ

ಹಿರಿಯ ಮಣಿಗಳ ಹೆಸರನ್ನು ಮಾತ್ರ ನಾನು ಮರೆಯಲಾರೆನು. ಅವರಲ್ಲಿ ಒಮ್ಮೆಲಿ ನೆನಪಿಗೆ ಬರುವವರೆಂದರೆ ಮುರುವಿನ ತಿರಕ, ಒಗ್ಗಾಲಿ ತಿಪ್ಪ ಇವರಿಬ್ಬರು. ವರ್ಷವರ್ಷಕ್ಕೆ ಮಕ್ಕಳನ್ನು ಹೆತ್ತರೂ ಒಂದು ಮಗುವಿನ ಮೋರೆಯನ್ನು ಕೂಡ ಮೂರು ತಿಂಗಳಿಗಿಂತ ಹೆಚ್ಚುಕಾಲ ನೋಡದ ಮಕ್ಕಳುಗಡಿಕೆಯಾದ ತಿರಕನ ತಾಯಿಯು ಹಲವು ದೇವರಿಗೆ ಹರಕೆಯ ಹೊತ್ತು ಈ ಪುತ್ರರತ್ನವನ್ನು ಹೆತ್ತಿದ್ದಳು. ಮತ್ತು ಐದು ಮನೆಗಳಲ್ಲಿ ಒಂದೊಂದು ದುಡ್ಡಿನಂತೆ ತಿರಿಕೆಯ ಬೇಡಿ ಯಮನವರನ್ನು ಬೆದರಿಸಿ ಓಡಿಸುವುದಕ್ಕಾಗಿ ತಿರಕನ ಮೂಗಿನಲ್ಲಿ ತಿರಿಕೆಯ ಮುರುವನ್ನು ಚುಚ್ಚಿಸಿದ್ದಳು. ಈ ಕಾರಣದಿಂದಲೇ ಓರಿಗೆಯವರು ಆತನನ್ನು ಮುರುವಿನ ತಿರಕನೆಂದು ಕರೆಯುತ್ತಿದ್ದರು. ತಿಪ್ಪನಿಗೆ ಒಗ್ಗಾಲಿ ಎಂಬ ವಿಶೇಷಣವು ಸ್ವೋಪಾರ್ಜಿತವು. ಒಂದು ಕಾಲು ಇನ್ನೊಂದಕ್ಕಿಂತ ಉದ್ದದಲ್ಲಿ ಸ್ವಲ್ಪ ಕಡಿಮೆಯಾಗಿದ್ದುದರಿಂದ ನಡೆದಾಡುವಾಗ ಒಂದು ಕಡೆಗೆ ಒಲೆದು ನಡೆಯುತ್ತಿದ್ದುದರಿಂದ ಚೇಷ್ಟೆಗಾಗಿ ಆತನನ್ನು ಒಗ್ಗಾಲಿಯೆಂದು ಕರೆಯುತ್ತಿದ್ದರು. ತಿಪ್ಪನು ನಡಿಗೆಯಲ್ಲಿ ಒಗ್ಗಾಲಿಯಾಗಿದ್ದಂತೆ ಒಂದೊಂದು ಇಯತ್ತೆಯನ್ನು ದಾಟುವುದಕ್ಕೂ ಒಗ್ಗಾಲಿಯಾಗಿ ಒಂದಕ್ಕಿಂತ ಹೆಚ್ಚಿಗೆ ವರ್ಷಗಳು ಹಿಡಿಯುತ್ತಿದ್ದುದನ್ನು ನೋಡಿದರೆ ಆತನ ವಿದ್ಯಾ-ಬುದ್ಧಿಗಳು ಅಷ್ಟಕ್ಕಷ್ಟೇ ಬೆಳೆದಿರಬೇಕೆಂದು ತೋರಿದರೂ, ಆತನ ವಯಸ್ಸೂ ಕುಚೇಷ್ಟೆಯೂ ಮಾತ್ರ ಅತ್ಯಧಿಕವಾಗಿ ಬೆಳೆದಿದ್ದುವು. ಈ ಎರಡು ಸಾಧನಗಳಿಂದ ಆತನು ಸಹಜವಾಗಿ ಸಹಪಾಠಿಗಳಲ್ಲಿ ಹಿರಿಯ ಹುದ್ದರಿಯಾಗಿದ್ದನು ವರ್ಗದಲ್ಲಿ ನಡೆಯುವ ಎಲ್ಲ ಕುಚೇಷ್ಟೆಗಳಿಗೆ ಒಗ್ಗಾಲಿ ತಿಪ್ಪನೂ ಆತನ ಚತುರ ಶಿಷ್ಯನಾದ ಮುರುವಿನ ತಿರಕನೂ ಮೂಲವಾಗಿದ್ದರು.

ನಾನು ಸಾಲೆಯ ಕೆಲಸಕ್ಕೆ ಹಾಜರಾದ ಕೆಲವು ದಿವಸಗಳಲ್ಲಿಯೇ ಇವರು ತಮ್ಮ ಪ್ರಭಾವವನ್ನು ನನ್ನ ದೃಷ್ಟಿಗೆ ಹಾಕಿದರು. ಮತ್ತು ಯುದ್ಧವಿಲ್ಲದೆ ಅವರು ನನ್ನ ಅಧೀನತೆಯನ್ನು ಒಪ್ಪಿಕೊಳ್ಳುವವರಲ್ಲವೆಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟರು. ಅವರಿಬ್ಬರೂ ಆಗ ೫ನೆಯ ಇಯತ್ತೆಯಲ್ಲಿದ್ದರು; ಏನಾದರೊಂದು ಕುಚೇಷ್ಟೆಯನ್ನು ಮಾಡಿ ಶಾಂತತಾಭಂಗಮಾಡಿ ವರ್ಗದ ವ್ಯಾಸಂಗಕ್ಕೆ ಅಡ್ಡಿಯನ್ನೊದಗಿಸುವರು. ಒಂದಾನೊಂದು ದಿವಸ ಇತಿಹಾಸವನ್ನು ಕಲಿಸುವಾಗ ನಾನು ತಿರಕನನ್ನು ಕುರಿತು ಶೇರಶಹನು

ಹೇಗೆ ಮಡಿದನು ? ಎಂದು ಕೇಳಿದೆನು. ತಿರಕನು ಉತ್ತರವನ್ನು ಹೇಳುವ ಮೊದಲೇ ತಿಪ್ಪನು—" ಜೀವಹೋಗಿ ಮಡಿದನು " ಎಂದು ಹೇಳಿಬಿಡೋ ಎಂದು ಕಲಿಸಿಕೊಟ್ಟನು. ವಿದ್ಯಾರ್ಥಿ ಶಿಕ್ಷಕನ ಈ ಅಧಿಕಪ್ರಸಂಗಕ್ಕೆ ಬೇಸತ್ತು, ಒಮ್ಮೆ ಇದರ ಇತ್ಯರ್ಥವನ್ನು ಮಾಡಿಯೇ ತೀರಬೇಕೆಂದು ನಾನು ಆ ದಿನ ಮೊದಲೇ ನಿರ್ಧರಿಸಿದ್ದೆನು. ಆದುದರಿಂದ ತಿರಕನನ್ನು ಬಿಟ್ಟು, ನೀನೇ ಹೇಳು ಎಂದು ತಿಪ್ಪನಿಗೆ ಆ ಪ್ರಶ್ನವನ್ನು ಮರಳಿ ಕೇಳಿದೆನು ತಿಪ್ಪನು-ತಿರಕನಿಗೆ ಈ ಪ್ರಶ್ನ ಕೇಳಿರುವಿರಿ, ಅವನೇ ಹೇಳಲಿ ಎಂದನು. ನಾನು-ಈ ಮೊದಲು ಅವನನ್ನು ಕೇಳಿದ್ದು ನಿಜ; ಆದರೆ ಈಗ ನಿನ್ನನ್ನು ಕೇಳುತ್ತೇನೆ; ನೀನೇ ಈ ಪ್ರಶ್ನದ ಉತ್ತರವನ್ನು ಹೇಳು ಎಂದೆನು. ಆತನು ದರ್ಪದಿಂದ—ಶೇರಶಹನು ದಿಲ್ಲಿಯಲ್ಲಿ, ನಾನು ಇಲ್ಲಿ; ಆತನ ಮರಣಕಾಲದಲ್ಲಿ ನಾನೆಲ್ಲಿ ಅಲ್ಲಿದ್ದೆನು ? ಬಹಳಮಾಡಿ ಅವನು ಜೀವಹೋಗಿ ಮಡಿದಿರಬಹುದು ಎಂದು ಹೇಳಿದನು. ಈ ಉತ್ತರವು ಮುಗಿಯುವುದಕ್ಕೆ ಮುಂಚೆಯೇ ಆತನ ಬೆನ್ನಮೇಲೂ ಮೋರೆಯ ಮೇಲೂ ಅವಕಾಶವಿಲ್ಲದೆ ನನ್ನ ಹೊಡೆತಗಳ ಸುರಿಮಳೆಗೆ ಆರಂಭವಾಯಿತು. ಶಾರೀರಿಕ ಶಿಕ್ಷೆಯನ್ನು ಯಾವ ವಿದ್ಯಾರ್ಥಿಗೂ ಮಾಡಬಾರದು, ಮಾಡಿದರೆ ಶಿಕ್ಷಕನು ದಂಡಿಸಲ್ಪಡುವನು ಎಂಬುದಾಗಿ ಶಾಲಾಧಿಕಾರಿಗಳ ಅಂಜಿಕೆಯಿದ್ದರೂ ಈ ದಿವಸ ಯಾವದೂ ನೆನಪಿನಲ್ಲಿ ಉಳಿಯಲಿಲ್ಲ. ಬಹು ದಿವಸಗಳಿಂದ ಹೊತ್ತಿಕೊಂಡು ಬಂದ ಸಿಟ್ಟಿನ ಬೆಂಕೆಗೆ ಈದಿನ ನಡೆದ ಪ್ರಸಂಗವು ಗಾಳಿಯು ಬೀಸಿದಂತಾದುದರಿಂದ ಅದು ಭಗ್ಗನೆ ಉರಿಯೆದ್ದು ನನ್ನಲ್ಲಿದ್ದ ವಿಚಾರಶಕ್ತಿಯನ್ನು ದಹಿಸಿಬಿಟ್ಟಿತು. ಎದುರಿಗೆ ತಿಪ್ಪನ ಹೊರತು ಇನ್ನೇನೂ ಕಾಣಿಸದಂತಾಯಿತು.

ನಾನು ಎಷ್ಟು ಹೊತ್ತಿನ ವರೆಗೆ ಆತನನ್ನು ಹೊಡೆದೆನೆಂಬುದನ್ನರಿಯೆನು. ಬಹಳ ವೇಳೆಯ ತರುವಾಯ ತಿಪ್ಪನು ಇನ್ನು ತಾಳಲಾರದೆ ಬೊಬ್ಬೆ ಹೊಡೆದದ್ದರಿಂದ ನಾನು ಎಚ್ಚತ್ತೆನು. ಹೀಗೆ ಒಮ್ಮೆಲೆ ಏರಿಹೋಗಿ ಎಚ್ಚರದಪ್ಪಿ ಮನವಾರೆ ಹೊಡೆಯತೊಡಗಿದುದಕ್ಕೆ ತಿಪ್ಪನು ಮೊದಲಿಗೆ ಮುಂದುಗಾಣದವನಾಗಿ, ಬಳಿಕ ಈ ದಿನ ಗತಿಗಾಣೆನೆಂದು ನಿಶ್ಚಯಿಸಿ, ಹಣ್ಣಾಗಿ ಆರ್ತಧ್ವನಿಯಿಂದ ಮೊರೆಯಿಟ್ಟು—ಸರ್, ಇನ್ನೆಂದೂ ಹೀಗೆ ಮಾಡುವದಿಲ್ಲ; ಸರ್, ದಯಮಾಡಿ ಹೊಡೆಯಬೇಡಿರಿ, ಕ್ಷಮಿಸಿರಿ ಎಂದು ಬೇಡಿಕೊಳ್ಳಲಾರಂಭಿ

ಸಿದನು. ತಿಪ್ಪನು ಹೀಗೆ ಶರಣಾಗತನಾಗಿ ಒಪ್ಪಂದಕ್ಕೆ ಬಂದದ್ದನ್ನು ಕಂಡು ಕ್ಲಾಸಿನಲ್ಲಿ ಮುದ್ದು ತಿರಕನ ವರೆಗೆ ಎಲ್ಲರೂ ಅಂಜಿ ಬೆಪ್ಪಾಗಿ ಕುಳಿತಿದ್ದರು. ಅವರ ಅಂಜಿದ ಇಳಿಮೋರೆಗಳನ್ನೂ ಹೊಯ್ದಾಟವಿಲ್ಲದ ಶರೀರಗಳನ್ನೂ ಕಂಡು "ಪ್ರಹಾರೇಣ ಧನಂಜಯ" ಎಂಬ ಉಕ್ತಿಯು ಸಾರ್ಥಕತೆಯು ಕೂಡಲೆ ನನ್ನ ಲಕ್ಷ್ಯದಲ್ಲಿ ಬಂದಿತು. ಅಂದಿನಿಂದ ವರ್ಗದಲ್ಲಿ ಶಾಂತತಾ ಭಂಗದ ಪ್ರಯತ್ನವೇ ಕಂಡುಬರಲಿಲ್ಲ. ಮತ್ತು ಒಗ್ಗಾಲಿ ತಿಪ್ಪನೇ ಎಲ್ಲರನ್ನು ಕುರಿತು—ಇವನು ತಲೆತಿರುಕ ಸನ್ನಿ ಮಾಸ್ತರನು, ಹೊಡೆಯುವಾಗ ಈತನಿಗೆ ಎಚ್ಚರಿಕೆಯೇ ಉಳಿಯುವುದಿಲ್ಲ. ಕೈಗೆ ಸಿಕ್ಕಿದರೆ ಒಮ್ಮೆ ನಿಜವಾಗಿ ಕೊಂದೇ ಬಿಟ್ಟಾನು. ತಮ್ಮಗಳಿರಾ, ಚೇಷ್ಟೆಯು ನಿಲ್ಲಿಸಿರಿ ಎಂದು ಹೇಳತೊಡಗಿದನು. ತಿಪ್ಪನಿಗೆ ನನ್ನ ಶಾರೀರಬಲದ ಅನುಭವವು ಬಂದುದರಿಂದ ಆತನು ಹುದುಗಿ ಕೊಂಡೇ ಇರತೊಡಗಿದನು.

"ಪ್ರಹಾರೇಣ ಧನಂಜಯ" ಎಂಬ ಮಂತ್ರಕ್ಕೆ ಬೊಗ್ಗದವನೆಂದರೆ ಸೇನಬೋವರ ಯಂಕನು. ಬಡಕನಾಗಿ ಸಪ್ಪಗೆ ಮೋರೆ ಮಾಡಿಕೊಂಡು ಯಾವಾಗಲೂ ಗುಮ್ಮನಗುಸಕನಾಗಿ ಒಳಗೊಳಗೇ ಚೇಷ್ಟೆಮಾಡಿ ಮತ್ತೆ ತಟಸ್ಥನಾಗಿರುತ್ತಿದ್ದ ಆತನ ಕುಶಲತನವು ಅವರ್ಣನೀಯವಾಗಿತ್ತು. ಎಲ್ಲ ಕುಚೇಷ್ಟೆಗಳಿಗೆ ಆತನು ಪ್ರವರ್ತಕನಾಗಿದ್ದರೂ ಯಾವಾಗಲೂ ಹೊರಗೆ ಸಭ್ಯ ನಾಗಿಯೇ ಕಾಣಿಸುತ್ತಿದ್ದನು. ಆ ಕರಿಯನ ಕುಚೇಷ್ಟೆಯು ಬಗೆಯೇ ಬೇರೆ. ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು. ಮಾಸ್ತರರ ಚಂಚಿ, ನಸ್ಯದ ಡಬ್ಬಿ ಇವುಗಳನ್ನು ಬಯಲಿಗೆ ತರುವುದು, ಅವರ ಮೊಚ್ಚೆಗಳನ್ನು ಸ್ಥಳಾಂತರ ಮಾಡುವುದು, ಸಹಪಾಠಿಗಳಲ್ಲಿ ಒಬ್ಬೊಬ್ಬರಿಗೆ ಜಗಳವನ್ನು ಹುಟ್ಟಿಸುವುದು, ಅವರಲ್ಲೊಬ್ಬನಿಗೆ ಚೇಷ್ಟೆಯ ಹೆಸರನ್ನಿಟ್ಟು ರೇಗಿಸುವುದು ಮೊದಲಾದ ಶಾಂತ ತಾಭಂಗದ ಸಾಮಾನ್ಯ ಮಾರ್ಗಗಳನ್ನವಲಂಬಿಸುವುದನ್ನು ಅವನು ಹೀನತೆಯೆಂದು ಭಾವಿಸುವನು; ಮತ್ತು ಆ ಉಪಾಯಗಳನ್ನವಲಂಬಿಸುವವ ರನ್ನು ಕೈಯಲ್ಲಾಗದ ಹೇಡಿಗಳೆಂದು ಜರೆಯುವನು. ಸಾಲೆಯೊಳಗಿನ ಎಲ್ಲ ವಿದ್ಯಾರ್ಥಿಗಳನ್ನು ರೇಗಿಸುವಂತಹ ಉಪನಾಮಗಳು ಆತನ ಚುರುಕು ತಲೆ ಯೊಳಗಿಂದಲೇ ಹೊರಟಂಥವು. ಶಿಕ್ಷಕರ ಅಂಗವೈಕಲ್ಯ, ಇಂದ್ರಿಯ ವೈಕಲ್ಯ, ಮುಖವಿಕಾರ ಮೊದಲಾದ ಸಹಜದೋಷಗಳನ್ನವಲಂಬಿಸಿ ತಕ್ಕ ನಾಮ

ಕರಣಮಾಡಿ ಅವೆಲ್ಲವನ್ನು ಸೇರಿಸಿ ಸಣ್ಣದೊಂದು ಹಾಡನ್ನು ಕಟ್ಟಿ ಅದನ್ನು ಆಗಾಗ ಹಾಡುವದು ಆತನ ರಸಿಕತನವಾಗಿತ್ತು. ಒಮ್ಮೆ ಆತನ ಕ್ಲಾಸಮಾಸ್ತರನು ರಜೆಯ ಪಡೆದು ಹೋದಾಗ ಬೇರೆ ಕ್ಲಾಸಿನ ನಿದ್ದೆಬಡಕ ಮುದುಕ ಮಾಸ್ತರನು ಆ ಕ್ಲಾಸಿಗೆ ನಿಯಮಿಸಲ್ಪಟ್ಟಿದ್ದನು. ಕ್ಲಾಸಿಗೆ ಕಠಿಣವಾದ ಅಂಕಗಣಿತದ ಉದಾಹರಣಗಳನ್ನು ಹೇಳಿ ಇಲ್ಲವೆ ನುಡಿಗನ್ನಡಿಯನ್ನು ಒಪ್ಪಿಸಿಕೊಳ್ಳಲಿಕ್ಕೆ ಹಿರಿಯಮಣಿಗೆ ಹೇಳಿ ಕುರ್ಚಿಯ ಮೇಲೆ ನಿದ್ದೆಮಾಡುವದು ಆತನ ಪದ್ಧತಿ. ಹಾಗೆ ಆತನೊಮ್ಮೆ ನಿದ್ದೆಹೋದಾಗ ಯಂಕನು ಆ ಕ್ಲಾಸಿನ ಕೋಣೆಯೊಳಗಿನ ಎಲ್ಲ ಹುಡುಗರನ್ನು ಹೆಡ್‌ಮಾಸ್ತರರ ಅಪ್ಪಣೆಯಾಗಿದೆಯೆಂದು ಹೇಳಿ ಹೊರಹೊರಡಿಸಿ ಆ ಕೋಣೆಯ ಬಾಗಿಲ-ಕಿಡಕಿಗಳನ್ನು ಮೆಲ್ಲಗೆ ಇಕ್ಕಿ ಬಾಗಿಲ ಕದಕ್ಕೆ ಚಿಲಕವನ್ನು ಹಾಕಿ ಎಲ್ಲ ಹುಡುಗರೊಡನೆ ಆಟದ ಬಯಲಿಗೆ ಹೋಗಿಬಿಟ್ಟನು. ಶಾಲೆ ಬಿಟ್ಟ ಗೊಂದಲದಲ್ಲಿಯೂ ಆ ಶಿಕ್ಷಕನಿಗೆ ಎಚ್ಚರಿಕೆಯಾಗಲಿಲ್ಲ. ಸಾಯಂಕಾಲಕ್ಕೆ ಎಚ್ಚತ್ತ ಆ ಶಿಕ್ಷಕನು ಆ ಕತ್ತಲೆಯ ಕೋಣೆಯಲ್ಲಿ ಬಾಗಿಲನ್ನು ಹುಡುಕುತ್ತಿರುವಾಗ ಗುಂಡಿನ ಚೌಕಟ್ಟು, ಕರಿಯ ಹಲಗೆಯ ಕುದುರೆ ಮೊದಲಾದವುಗಳಿಗೆ ಹಾಯ್ದು ತಲೆಗೆ ಪೆಟ್ಟು ಮಾಡಿಕೊಂಡು, ಕೊನೆಗೆ ಸಮೀಪದ ಮನೆಯಲ್ಲಿದ್ದ ಸಾಲೆಯ ಸಿಪಾಯಿಯನ್ನು ಕೂಗಿ ಬಾಗಿಲ ತೆರೆಯಿಸಿಕೊಂಡು, ಒಳಗೆ ನೋಡದೆ ಹಾಗೆಯೇ ಬೀಗ ಹಾಕಿದ್ದಕ್ಕೆ ಆತನ ಮೇಲೆ ರೇಗಿ ಮನೆಗೆ ಹೋದನು. ಮರುದಿನ ಹೆಡ್‌ಮಾಸ್ತರರ ಬಳಿಯಲ್ಲಿ ಯಂಕನ ಮೇಲಿನ 'ಫಿರ್ಯಾದಿ' ಯನ್ನು ಆ ಶಿಕ್ಷಕನು 'ದಾಖಲ' ಮಾಡಿದನು. ಯಂಕನು ತಾನು ಮಾಡಿದ್ದನ್ನೆಲ್ಲ ಒಪ್ಪಿಕೊಂಡನು. ಮತ್ತು ತಾನು ಯಾವ ದುರ್ಬುದ್ಧಿಯಿಂದಲೂ ಹಾಗೆ ಮಾಡಲಿಲ್ಲವೆಂದೂ, ಕಲಿಸಿ ಕಲಿಸಿ ದಣಿದ ಮಾಸ್ತರರಿಗೆ ಚೆನ್ನಾಗಿ ನಿದ್ದೆಹತ್ತಲಿಯೆಂದು ಆ ತರದ ವ್ಯವಸ್ಥೆ ಮಾಡಿದ್ದೆನೆಂದೂ, ಇದರಲ್ಲಿ ತಪ್ಪುಂಟೆಂದು ತನಗೆ ತೋರಲಿಲ್ಲವೆಂದೂ ಹೇಳಿದನು. ಹೆಡ್‌ಮಾಸ್ತರರು—ಅದು ಏನೇ ಇರಲಿ, ಕ್ಲಾಸಿನ ವೇಳೆಯಲ್ಲಿ ಶಿಕ್ಷಕರು ನಿದ್ದೆಹೋದರೆ ನಿದ್ರಾಭಂಗ ಮಾಡಿ ಎಬ್ಬಿಸುವುದೇ ವಿದ್ಯಾರ್ಥಿಗಳ ಕರ್ತವ್ಯವೆಂದು ತೀರ್ಪು ಹೇಳಿದರು.

ಕೆಲವು ತಿಂಗಳುಗಳ ತರುವಾಯ ಮತ್ತೆ ಒಂದು ದಿನ ಆ ನಿದ್ದೆಬಡಕ ಮುದುಕ ಮಾಸ್ತರರು ಯಂಕನ ಕ್ಲಾಸಿಗೆ ಬಂದರು. ಪದ್ಧತಿಯ ಮೇರೆಗೆ

ಅವರನ್ನು ತೂಕಡಿಕೆಯಿಂದ ಆರಂಭಿಸಿ ಗೊರಿಕೆಹೊಡೆಯುವ ವರೆಗೆ ನಿದ್ದೆಯು ಆಕ್ರಮಿಸಲು ಯಂಕನು ಅವರ ಎದುರಿಗೆ ಬಂದು ಅವರ ಮೈಹಿಡಿದು ಅತ್ತಿತ್ತ ಅಲ್ಲಾಡಿಸುತ್ತ ಒಮ್ಮೆಲೆ ದೊಡ್ಡ ದನಿಯಿಂದ ಕೂಗಿದನು. ಇದರಿಂದ ಪಾಪ ! ಆ ಮುದುಕರ ನಿದ್ರಾಭಂಗವಾದದ್ದೇನೋ ನಿಜ; ಆದರೆ ಆ ದೊಡ್ಡ ಕೂಗಿಗೆ ಅವರ ಹೃದಯಭಂಗವೂ ಆಯಿತೋ ಏನೋ ಎಂಬ ಸಂಶಯವಾಯಿತು. ಇದರಿಂದ ಅವರ ಎದೆಯೊಳಗೆ ಧಸ್ಸೆಂದು ಅಂಜಿಕೆ ಕುಳಿತದ್ದರಿಂದ ೩ ದಿವಸ ಶಾಲೆಗೆ ಬರುವುದಕ್ಕಾಗದೆ ಅನಿವಾರ್ಯವಾಗಿ ಕಿರುಕುಳ ರಜೆಯನ್ನು ಪಡೆದು ಮನೆಯಲ್ಲಿರಬೇಕಾಯಿತು. ಹೆಡ್ ಮಾಸ್ತರರು ಹಾಗೇಕೆ ಕೂಗಿದೆಯೆಂದು ಕೇಳಿದ್ದಕ್ಕೆ ಯಂಕನು–ಸರ್, ತಾವು ನಿದ್ರಾಭಂಗ ಮಾಡತಕ್ಕದ್ದೆಂದು ಅಪ್ಪಣೆ ಕೊಟ್ಟಿದ್ದರಿಂದಲೇ, ಕ್ಲಾಸಿನಲ್ಲಿ ನಡೆದ ಗೊಂದಲವನ್ನು ಮೀರುವಂತಹ ದನಿಯಾದರೆ ಮಾತ್ರ ಅವರಿಗೆ ಎಚ್ಚರಿಕೆಯಾಗುವದೆಂದು ತಿಳಿದು ಹಾಗೆ ಒದರಿದೆನೆಂದೂ, ತಪ್ಪಾಗಿದ್ದರೆ ತನ್ನನ್ನು ಕ್ಷಮಿಸಬೇಕೆಂದೂ ಹೇಳಿಕೊಂಡನು.

ಮತ್ತೊಮ್ಮೆ ಒದಗಿದ ಒಂದು ಸಮಾಚಾರವನ್ನು ಕೇಳಿದ್ದೆನು. ಅದೇನೆಂದರೆ, ರಿಷ್ಟ್‌ವಾಚ್, ಕ್ರಾಪ್ ಮೊದಲಾದ ಹೊಸ ಫ್ಯಾಶನುಗಳಿಂದ ಮಂಡಿತನಾದ ಬಿಗುವಿನ ಇನ್ನೊಬ್ಬ ಹೊಸ ಟ್ರೇಂಡನ ಉರಿದಾಟವನ್ನು ಕಡಿಮೆ ಮಾಡಿದ್ದು. ಅದು ಬಹು ಚಮತ್ಕಾರವಾದದ್ದು. ಆ ಶಿಕ್ಷಕನಿಗೆ ತಂಬಾಕನ್ನು ಹಾಕಿಕೊಳ್ಳುವ ಚಟವು ಈಚೆಗೆ ಪ್ರಬಲವಾಗಿತ್ತು. ತಾಸು ತಾಸಿಗೆ ಹೊರಗೆ ಹೋಗಿ ಚಂಚಿಯನ್ನು ಬಿಚ್ಚಿ ೫–೬ ಮಿನಿಟುಗಳನ್ನು ಕಳೆಯುವುದು ಆತನ ವಾಡಿಕೆ- ಚಂಚಿಯನ್ನು ಮರೆತು ಬಂದ ದಿವಸ ಇಲ್ಲವೆ ತಂಬಾಕು ತೀರಿದ ದಿವಸ ಸಾಲೆಯ ಸಿಪಾಯಿಯ ಬಳಿಯಲ್ಲಿ ತಂಬಾಕನ್ನು ಬೇಡಿ ಹಾಕಿಕೊಳ್ಳುವನು. ಒಂದು ದಿವಸ ಯಂಕನು ಒಂದಕ್ಕೆ ಹೋಗುವ ನೆವ ಹೇಳಿ ಹೊರಗೆ ಬಂದು ಮಾಸ್ತರರು ತಂಬಾಕನ್ನು ಬೇಡುವರೆಂದೂ, ತೀವ್ರ ತರಬೇಕೆಂದೂ ಸಿಪಾಯಿಗೆ ಹೇಳಿದನು. ಪ್ರತಿತಿಂಗಳು ಸ್ವಲ್ಪ ಹಣವು ಸಲ್ಲುತ್ತಿದ್ದುದರಿಂದ ಸಿಪಾಯಿಯು ಕೂಡಲೆ ತಂಬಾಕನ್ನು ಕೊಡಲೋಸುಗ ಹೊರಟನು. ಇತ್ತ ಯಂಕನು ಹೆಡ್ ಮಾಸ್ತರರ ಕಡೆಗೆ ಹೋಗಿ ನಮ್ಮ ಕ್ಲಾಸಿನಲ್ಲಿ ಬಹಳ ಸೋರುತ್ತಿರುವುದೆಂದೂ, ಎಲ್ಲ ಹುಡುಗರ ಪುಸ್ತಕಗಳು ತೋದುಹೋಗುತ್ತಿರುವುವೆಂದೂ, ತಾವು ಬಂದು ಒಮ್ಮೆ ನೋಡಿ ಹೋಗಬೇಕೆಂದೂ ಹೇಳಿ ಅವರ

ಗಿಂತ ಮೊದಲು ತಾನು ಕ್ಲಾಸಿನಲ್ಲಿ ಬಂದು ಸಭ್ಯ ಬಾಲಕನಂತೆ ಕುಳಿತು ಕೊಂಡನು. ಆ ಶಿಕ್ಷಕನು ಸಿಪಾಯಿಯೊಡನೆ ಹರಟೆ ಹೊಡೆಯುತ್ತ ತಂಬಾಕಿಗೆ ಕೈನೀಡಿದ್ದನು; ಸಿಪಾಯಿಯು ತಂಬಾಕನ್ನು ಆ ಶಿಕ್ಷಕನ ಕೈಯಲ್ಲಿ ಹಾಕು ತ್ತಿದ್ದನು; ಆ ಹೊತ್ತಿಗೆ ಸರಿಯಾಗಿ ಹೆಡ್‌ಮಾಸ್ತರರು ಅಲ್ಲಿ ಬಂದರು. ಮಾಳಿಗೆ ನೋಡುವದನ್ನು ಮರೆತು ಅವರು ಸೋಜಿಗಬಟ್ಟು ಅಲ್ಲಿ ಸ್ವಲ್ಪ ನಿಂತಂತೆ ಮಾಡಿ ಹೊರಗೆ ಹೋಗಿಬಿಟ್ಟರು. ಆ ಶಿಕ್ಷಕನಿಗೆ ನಾಚಿಕೆಯಿಂದ ತಲೆಹೊಡೆದಂತಾಯಿತು. ಕೆಲವು ದಿವಸಗಳ ಹಿಂದೆ ಯಂಕನನ್ನು ಹೊಡೆದದ್ದ ರಿಂದ ಈ ದುಷ್ಫಲವು ಒದಗಿತೆಂಬುದು ಆ ಶಿಕ್ಷಕನಿಗೆ ತಟ್ಟನೆ ಹೊಳೆಯಿತು. ಈ ತರದ ಅತರ್ಕಿತೋಪಾಯಗಳಿಂದ ತನ್ನನ್ನು ಛಲಿಸುವದಕ್ಕೆ ಬೇಸತ್ತು ಆ ಶಿಕ್ಷಕನು ಯಂಕನೊಡನೆ ಅಹಿಂಸಾಮಯ ಅಸಹಕಾರವ್ರತವನ್ನು ಕೈಕೊಂಡನು. ತನಗೆ ಬಡಿತಗಳು ತಪ್ಪಿದ್ದಕ್ಕಾಗಿ ಯಂಕನೂ ಸುಮ್ಮನೆ ಇರತೊಡಗಿದನು.

ಆದರೆ ಯಂಕನ ಈ ಉದಾಸೀನವೃತ್ತಿಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನಿಸಿದವನು ತಿಪ್ಪನು. ನಾನು ಹಾಕಿದ ಹೊಡೆತಗಳಿಂದ ತಿಪ್ಪನು ಸೋಲನ್ನು ಒಪ್ಪಿಕೊಂಡಿದ್ದರೂ ಮುಯ್ಯವನ್ನು ತೀರಿಸಿಕೊಳ್ಳುವ ಸಂಧಿಯನ್ನು ಹುಡುಕುತ್ತಲೇ ಇದ್ದನು. ಆದದರಿಂದ ಆತನು ಯಂಕನಿಗೆ ಶರಣುಹೋಗಿ ನನ್ನ ವಿರುದ್ಧವಾಗಿ ಆತನನ್ನು ಹುರಿಗೊಳಿಸತೊಡಗಿದನು. ಯಂಕನು ಸುಮ್ಮನೆ ಪರರಿಗೆ ತೊಂದರೆಗೊಳಿಸುವುದಕ್ಕೆ ಒಪ್ಪದಿರಲು ತಿಪ್ಪನು—ಚೀ ಹೊಡತಕ್ಕೆ ಅಂಜುವ ಹೇಡಿ, ಸುಮ್ಮನೆ ಪೌರುಷ ಬಡಿಯಬೇಡ ಎಂದು ಜರೆದನು. ಅದಕ್ಕೆ ಯಂಕನು—ಅಯ್ಯಾ, ಈ ಯಂಕನು ಹೊಡೆತಗಿಡತಗಳಿಗೆ ಅಂಜುವ ಹೇಡಿ ಯಲ್ಲವೆಂಬದನ್ನು ಚೆನ್ನಾಗಿ ನೆನಪಿನಲ್ಲಿಡು ಎಂದು ಹೇಳಿದನು. ಯಂಕನ ಈ ಮಾತು ನಿರರ್ಥಕವಾದ ಹರಟೆಯೊಳಗಿನ ಮಾತಲ್ಲವೆಂಬುದು ಸಲ್ಪ ದಿವಸ ಗಳಲ್ಲಿ ನನ್ನ ನಿದರ್ಶನಕ್ಕೆ ಬಂದಿತು.

ಬೇಸಿಗೆಯ ಸೂಟಿಯು ಮುಗಿದ ಮಾರನೆಯ ದಿವಸ ಸೂಟಿಯಲ್ಲಿ ಗಣಿ ತದ ಉದಾಹರಣಗಳನ್ನು ಬಿಡಿಸಿ ಬರೆದು ತರಬೇಕೆಂದು ಹೇಳಿದ ಪುಸ್ತಕ ಗಳನ್ನು ನೋಡತೊಡಗಿದೆನು. ಆ ಕ್ಲಾಸಿನ ಮಾಸ್ತರರು ರಜೆಪಡೆದು ಹೋದ ದರಿಂದ ಇದೊಂದು ನನ್ನ ಹೊಸ ಕೆಲಸವು. ಉದಾಹರಣೆಗಳನ್ನು ಬಿಡಿಸಿ

ಕೊಂಡು ಬಾರದವರು ಆಟದ ತಾಸಿನಲ್ಲಿ ಆಟಕ್ಕೆ ಹೋಗದೆ ಕ್ಲಾಸಿನಲ್ಲಿ ಇದ್ದು ದಿನಾಲು ಐದರಂತೆ ಬಿಡಿಸಿ ತೋರಿಸಿ ಬಳಿಕ ಆಟಕ್ಕೆ ಹೋಗಬೇಕೆಂದು ನಾನು ಶಿಕ್ಷೆಯನ್ನು ವಿಧಿಸಿದೆನು. ಈ ಶಿಕ್ಷೆಯನ್ನು ಹೊಂದಿದ ವಿದ್ಯಾರ್ಥಿಗಳಲ್ಲಿ ಯಂಕನು ಒಬ್ಬನು. ಆದರೆ ಎಲ್ಲ ವಿದ್ಯಾರ್ಥಿಗಳು ನನ್ನ ಅಪ್ಪಣೆಯಂತೆ ಉದಾಹರಣಗಳನ್ನು ಬಿಡಿಸತೊಡಗಿದರೂ ಯಂಕನು ಸುಮ್ಮನೆ ಕುಳಿತು ಬಿಟ್ಟನು. ಅದನ್ನು ನೋಡಿದ ನನ್ನ ಧೈರ್ಯವು ಕಡಿಮೆಯಾಗತೊಡಗಿತು. ೫॥ ಗಂಟೆಯ ಹೊತ್ತಿಗೆ ಎಲ್ಲರೂ ಗಣಿತಗಳನ್ನು ಬಿಡಿಸಿ ತೋರಿಸಿ ಆಟಕ್ಕೆ ಹೋದರೂ ಯಂಕನು ಮೊದಲಿನಂತೆ ತಣ್ಣಗೆ ಕುಳಿತಿರುವನು. ನಾನು ಅಧೈರ್ಯವನ್ನು ತೋರಗೊಡದೆ ಯಂಕನ ಬಳಿಗೆ ಬಂದು—ಅಯ್ಯಾ, ನೀನು ಸೂಟಿಯಲ್ಲಿ (ಬಿಡುವಿನಲ್ಲಿ) ಗಣಿತಗಳನ್ನೇಕೆ ಬಿಡಿಸಿಕೊಂಡು ಬರಲಿಲ್ಲ? ಎಂದು ಕೇಳಿದೆನು.

ಆತನು ಗಂಭೀರಭಾವದಿಂದ—ಸರ್, ಸಮಯವು ದೊರೆಯಲಿಲ್ಲ ಎಂದ್ಶ ಹೇಳಿದನು. ನಾನು ಆಶ್ಚರ್ಯಬಟ್ಟಂತೆ ತೋರಿಸಿ—ಯಂಕಾ, ಸೂಟಿಯ ಇಡಿ ತಿಂಗಳಲ್ಲಿ ಏನೂ ಅವಕಾಶವೇ ದೊರೆಯಲಿಲ್ಲವೇ? ಎಂದು ಕೇಳಿದೆನು.

ಆತನು—(ಮೊದಲಿನಂತೆ ಗಂಭೀರಭಾವದಿಂದಲೇ) ಸರ್, ಹೌದು, ಅವಕಾಶ ದೊರೆಯಲಿಲ್ಲ.

ನಾನು—ಈಗ ಅವಕಾಶ ಕೊಟ್ಟಿದೆಯಷ್ಟೇ? ಈಗಲೂ ಏಕೆ ಮಾಡಲ್ಲೊಲ್ಲೆ?

ಆತನು—(ಪ್ರೌಢತನದಿಂದ) ಸರ್, ಆಟಕ್ಕೆ ಹೋಗುವುದಕ್ಕಾಗಿ ಗಣಿತಗಳನ್ನು ಬಿಡಿಸಹೇಳಿರುವಿರಿ; ನಾನು ಬಿಡಿಸದೆ ಸುಮ್ಮನೆ ಕುಳಿತಿರುವೆನು. ಇದರಿಂದ ನನಗೆ ಆಟಕ್ಕೆ ಹೋಗುವ ಮನಸ್ಸಿಲ್ಲೆಂಬುದನ್ನು ತಾವು ಸಹಜವಾಗಿ ತಿಳಿಯಬಹುದಲ್ಲವೇ?

ನಾನು ಮೋರೆಯ ಗಂಟಿಕ್ಕಿ ಹಾಗೆಂದರೇನು? ಎಂದೆನು. ಆತನು ಸ್ವಲ್ಪವೂ ಅಂಜದೆ—ಹಾಗೆಂದರೆ, ನಾನು ಆಟಕ್ಕೆ ಹೋದರೂ ಆ ಹೇಡಿ ಹುಡುಗರೊಡನೆ ಬೇಸರದ ಆಟಗಳನ್ನು ಆಡಿ ವೇಳೆಯ ಕಳೆಯಬೇಕು, ಅದಕ್ಕಿಂತ ಗಣಿತಗಳನ್ನು ಬಿಡಿಸದಿದ್ದರೆ ತಮ್ಮ ಸನ್ನಿಧಾನದಲ್ಲಿಯೇ ಸುಖವಾಗಿ ವೇಳೆಯನ್ನು ಕಳೆಯುವುದಕ್ಕೆ ದೊರೆಯುವುದು; ಇದೇ ಲೇಸೆಂದು ಹಾಗೆ

ಮಾಡಿದೆನು ಎಂದನು. ನನ್ನೊಡನೆ ಇಷ್ಟು ಔದ್ಧತ್ಯವೇ ? ಹೀಗೆ ನಿರ್ದಾಕ್ಷಿಣ್ಯ ವಾಗಿ ಮಾತಾಡುವುದೇ ? ನನಗೆ ತಾಳಿಕೊಳ್ಳುವುದು ಹೇಗೆ ಆಗಬೇಕು ? ಯಂಕನ ಮಾತು ಮುಗಿಯುವದರೊಳಗೇ ಆತನ ಮೋರೆ-ತಲೆ-ಬೆನ್ನು-ತೊಡೆ ಮೊದಲಾದ ಸರ್ವಾಂಗಗಳಲ್ಲಿ ನನ್ನ ಬೆತ್ತದ ಹೊಡೆತಗಳ ಸುರಿಮಳೆಗೆ ಆರಂಭ ವಾಯಿತು. ಆತನಿಗೆ ನನ್ನ ಸನ್ನಿಧಾನದ ಸುಖದ ಅನುಭವವನ್ನು ಚೆನ್ನಾಗಿ ಕೊಡಲಾರಂಭಿಸಿದೆನು. ತಿಪ್ಪನಿಗೆ ಬಿದ್ದ ಮೊದಲಿನ ಪ್ರಹಾರದ ತಿದ್ದಿ ಬೆಳೆಯಿ ಸಿದ ದ್ವಿತೀಯಾವೃತ್ತಿಯಿದು. ಆದರೆ ಯಂಕನು ಅದಕ್ಕೆ ಸ್ವಲ್ಪವೂ ಕದಲ ಲಿಲ್ಲ; ಸ್ವಲ್ಪವೂ ಧ್ವನಿದೆಗೆಯಲಿಲ್ಲ. ನನ್ನ ಹೊಡೆತಗಳಿಂದ ಮುರಿದು ಹೋದ ಕೈಯೊಳಗಿನ ಬೆತ್ತವು ಆತನ ತಲೆಗೆ ಬಡಿದಲ್ಲಿ ಸ್ವಲ್ಪ ರಕ್ತವು ಹೊರಟಿತು. ರಕ್ತದರ್ಶನದಿಂದ ಕೈಕಾಲುಗೆಟ್ಟು ನಾನು ಕೈಯೊಳಗಿನ ಮುರಿದ ಬೆತ್ತ ವನ್ನು ಬದಿಗೆ ಒಗೆದೆನು. ಯಂಕನು ಆಗಲೂ ಬೇರೆ ಬೆತ್ತವನ್ನು ತಂದು ಇನ್ನಿಷ್ಟು ಹೊಡೆಯುವದಿದ್ದರೆ ಆಗಲಿ, ಎಂದು ಆಗ್ರಹಗೊಳಿಸಿದನು. ನಾನು ಮನಸ್ಸಿನ ಕ್ಷೋಭದಿಂದಲೂ ಸಿಟ್ಟಿನಿಂದಲೂ ನಡುಗುತ್ತ ಲಾಯಬ್ರರಿ ಕೋಣೆಯ ಕಡೆಗೆ ನಡೆದೆನು.

ಹೆಚ್ಚಿಗೆ ಹೊಡೆದದ್ದಕ್ಕೆ ಆಗ ನನ್ನ ಮನಸ್ಸಿಗೆ ನಿಜವಾಗಿ ಅಸಮಾಧಾನ ವಾಗತೊಡಗಿತ್ತು. ಶಿಕ್ಷೆಯಿಂದ ಫಲವಾಗದಿರುವುದರಿಂದುಂಟಾದ ಮನಃಕ್ಷೋ ಭದಿಂದಲೂ, ಹೆಚ್ಚಿಗೆ ಹೊಡೆದೆನೆಂಬ ಅಸಮಾಧಾನದಿಂದಲೂ ಬಳಲಿ ಹೋದ ನಾನು ಯಾರೂ ಇಲ್ಲದ ಆ ಲಾಯಬ್ರರಿ ಕೋಣೆಯಲ್ಲಿ ಅತ್ತು ಬಿಟ್ಟೆನು. ಕೆಲಹೊತ್ತಿನಲ್ಲಿ ಯಂಕನು ಅಲ್ಲಿಗೆ ಬಂದು ನನ್ನ ಆ ಸ್ಥಿತಿಯನ್ನು ಕಂಡು ಚಕಿತನಾಗಿ ನಿಂತನು. ನಾನು ಇಳಿದನಿಯಿಂದ—ಯಂಕಾ, ಈ ದಿನ ಇಷ್ಟು ಹೊಡೆತಗಳನ್ನು ಏಕೆ ತಿಂದೆ ತಮ್ಮಾ, ಎಂದು ಕೇಳಿದೆನು. ಆತನು— ಕೂಡಲೆ ನನ್ನ ಪಾದಗಳನ್ನು ಗಟ್ಟಿಯಾಗಿ ಹಿಡಿದು ಸರ್, ತಾವು ದುಃಖಿಸು ವಿರೇಕೆ ? ನನ್ನ ತಲೆಗೇನೂ ಆಗಿಲ್ಲ, ಎಂದು ವಿನಯದಿಂದ ನುಡಿದನು.

ಅಂತಹ ಉದ್ಧತ ವಿದ್ಯಾರ್ಥಿಯ ಬಾಯಿಯ ಈ ಮೃದುವಚನವನ್ನು ಕೇಳಿ ನನ್ನ ದುಃಖವು ಹೆಚ್ಚಿತು. ನಾನು ಆತನ ಮೈಮೇಲೆ ಕೈಯಾಡಿಸುತ್ತ, ತಮ್ಮಾ, ಏಕೆ ನನ್ನನ್ನು ರೇಗಿಸಿ ನಿನಗೂ ಕಷ್ಟವನ್ನು ಮಾಡಿಕೊಂಡು, ನನ್ನನ್ನೂ ಕಷ್ಟಕ್ಕೆ ಗುರಿಮಾಡಿದೆ ? ಎಂದು ಕೇಳಿದೆನು.

ಆತನು—ಸರ್, ತಮ್ಮ ವಿರುದ್ಧವಾಗಿ ಇನ್ನೆಂದೂ ನಡೆಯುವುದಿಲ್ಲ; ನಾಳೆ ಎಲ್ಲ ಗಣಿತಗಳನ್ನು ಬಿಡಿಸಿ ತೋರಿಸುವೆನು, ಎಂದು ಬೇಡಿಕೊಂಡನು. ಆಗಲೂ ಆತನು ನನ್ನ ಪಾದಗಳನ್ನು ಬಿಟ್ಟಿರಲಿಲ್ಲ. ಮತ್ತೆ ಆತನು—ಸರ್, ನನಗೆ ಪೆಟ್ಟು ಏನೂ ಹತ್ತಿಲ್ಲ, ಇಂತಹ ಹೊಡೆತಗಳನ್ನು ದಿನಾಲು ತಿನ್ನುತ್ತಿದ್ದೇನೆ. ತಮಗೆ ಮಾತ್ರ ಈದಿನ ಕಷ್ಟವನ್ನು ಕೊಟ್ಟೆನು, ಇನ್ನೆಂದಿಗೂ ತಮ್ಮ ವಿರುದ್ಧವಾಗಿ ನಡೆಯುವದಿಲ್ಲ, ತಮ್ಮ ಪಾದದಾಣೆಯಿಂದಲೂ ಇನ್ನೊಮ್ಮೆ ಹೀಗೆ ಮಾಡುವದಿಲ್ಲ, ದಯಮಾಡಿ ಕ್ಷಮಿಸಿರಿ ಎಂದು ಬೇಡಿಕೊಳ್ಳ ತೊಡಗಿದನು.

ಮರುದಿನವೇ ಆತನು ಎಲ್ಲ ಗಣಿತಗಳನ್ನು ಬಿಡಿಸಿ ತಂದು ತೋರಿಸಿದನು. ಮುಂದೆ ಅವನಂತಹ ಶಾಂತ-ಸಭ್ಯವಿದ್ಯಾರ್ಥಿಯನ್ನು ನಾನೆಂದೂ ಕಾಣಲಿಲ್ಲ. ಆತನು ಹೀಗೆ ಮಾಸ್ತರರ ಅಂಕೆಯೊಳಗೆ ಹೋದದ್ದನ್ನು ಕಂಡು ಉಳಿದ ವಿದ್ಯಾರ್ಥಿಗಳು ಚೇಷ್ಟೆಮಾಡಲು—ಅಯ್ಯಾ, ನಿಮಗೇನು ತಿಳಿಯುತ್ತದೆ? ನಮ್ಮ ಮಾಸ್ತರರು ಕೇವಲ ತಂದೆಯಂತೆ ಹೊಡೆಯುವದನ್ನಷ್ಟೇ ಮಾಡುವದಿಲ್ಲ, ತಾಯಿಯಂತೆ ಅತ್ತು ಬಿಡುವರು ಎಂದು ಹೇಳುವನು ನಾನು ನಿಜವಾಗಿ ಅತ್ತೇ ಆತನನ್ನು ಗೆದ್ದೆನು. ಈ ವಿಷಯದಲ್ಲಿ ನನಗೇನೂ ನಾಚಿಕೆಯಿಲ್ಲ.

ಅಂದಿನಿಂದ ಆತನು ನನ್ನಲ್ಲಿ ಅತ್ಯಂತ ವಿಧೇಯತೆಯಿಂದ ನಡೆದುಕೊಳ್ಳಲಾರಂಭಿಸಿದನು. ಆರಂಭದಲ್ಲಿ ಆತನು ಬುದ್ಧಿವಂತನಾದ ಹುಡುಗನೆಂದು ಹೆಸರಾಗಿದ್ದನು. ಆದರೆ ತಾಯಿ ಸತ್ತಬಳಿಕ ತಂದೆಯ ಶಿಕ್ಷೆ, ತಾಯಿಯ ರಕ್ಷೆ ಇವೆರಡರ ಸ್ಥಾನವನ್ನು ಮೊದಲಿನದೊಂದೇ ಆಕ್ರಮಿಸಿತ್ತು. ಆ ಬಳಿಕ ಮಲತಾಯಿಯ ಗೃಹಪ್ರವೇಶಮಂಗಲವಾದ ತರುವಾಯ ಮತ್ತು ಆಕೆಯ ಶುಭಾಕಾಂಕ್ಷೆಯಿಂದ ಆ ಶಿಕ್ಷೆಯು ಪಾಶವಶಿಕ್ಷೆಯಾಗಿ ಪರಿಣಮಿಸಿತು. ಅಂದಿನಿಂದ ಆತನು ಮೊಂಡನಾಗಿ ದುಷ್ಟತನವನ್ನು ಮಾಡುವದರಲ್ಲಿಯೇ ಪ್ರವೀಣನಾಗುತ್ತ ಬಂದನು. ಎಲ್ಲ ಶಿಕ್ಷೆಯನ್ನೂ ಆತನು ಲೆಕ್ಕಿಸದಂತಾದನು. ಯಾರನ್ನೂ ಮನ್ನಿಸದಂತಾದನು. ಆದರೆ ಆ ದಿವಸ ನಾನು ಪ್ರೇಮ ತೋರಿಸಿದ್ದನ್ನು ಕಂಡು ಆತನು ನನ್ನಲ್ಲಿ ನಂಬುಗೆಯುಳ್ಳವನಾದನು.

ಮುಂದೆ ಆತನು ಬಹಳ ವೇಳೆಯನ್ನು ನನ್ನ ಮನೆಯಲ್ಲಿಯೇ ಕಳೆಯುತ್ತ ಹಾಯ್‌ಸ್ಕೂಲಿನ ಶಿಕ್ಷಣವನ್ನೂ ಪಡೆದನು. ಆತನ ವಿಧೇಯತನದ ಒಳ್ಳೆಯ ನಡತೆಗೆ ಮೆಚ್ಚಿ ನಾನು ಮನಃಪೂರ್ವಕವಾಗಿ ಆತನಿಗೆ ನೆರವಾಗುತ್ತ ಬಂದೆನು. ಬೂದಿಮುಚ್ಚಿದ ಕೆಂಡದಂತಾಗಿದ್ದ ಆತನ ಬುದ್ಧಿಯು ಮತ್ತೆ ತಳತಳ ಹೊಳೆಯಲಾರಂಭಿಸಿತು.

೬ ವರ್ಷಗಳ ತರುವಾಯ ಒಂದು ದಿನ ಹಾಯ್‌ಸ್ಕೂಲಿನ ದೊಡ್ಡ ಹಾಲಿನಲ್ಲಿ ಎಲ್ಲ ವಿದ್ಯಾರ್ಥಿಗಳೂ, ಶಿಕ್ಷಕರೂ, ಊರ ಸಭ್ಯಗೃಹಸ್ಥರೂ ಆನಂದದಿಂದ ನೆರೆದಿರುವರು. ಎಲ್ಲ ವಿದ್ಯಾರ್ಥಿಗಳೂ, ಶಿಕ್ಷಕರೂ ತಮ್ಮ ಶಾಲೆಯ ಒಬ್ಬ ವಿದ್ಯಾರ್ಥಿಯು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಮೊದಲನೆಯ ನಂಬರನ್ನು ಪಡೆದನೆಂದು ಅಭಿಮಾನದಿಂದ ಆತನ ಸಂಮಾನವನ್ನು ಮಾಡುವುದಕ್ಕೆ ಉತ್ಕಂಠಿತರಾಗಿರುವರು. ಆ ಮಹಾಸಭೆಯಲ್ಲಿ ಆ ವಿದ್ಯಾರ್ಥಿಗೆ ಸಂಮಾನದ ಪದಕವನ್ನು ಕೊಡುವುದಕ್ಕೆಂದು ಅಧ್ಯಕ್ಷಮಹಾಶಯರು ಕರೆಯಲು ಆತನು ಆ ನೆರೆದ ಸಭೆಯಲ್ಲಿ ಎಲ್ಲಕ್ಕೂ ಮೊದಲು ನನ್ನ ಪಾದಗಳಿಗೆ ವಂದನೆ ಮಾಡಿ ನನ್ನ ಪಾದಧೂಲಿಯನ್ನು ತಲೆಯಲ್ಲಾಂತು ಎಲ್ಲ ವಿದ್ಯಾರ್ಥಿಗಳ ಆನಂದ ಕೋಲಾಹಲದಲ್ಲಿ ತನಗೆ ತನ್ನ ಶಾಲೆಯಿಂದ ದೊರೆತ ಸಂಮಾನದ ಪದಕವನ್ನು ಸ್ವೀಕರಿಸಿದನು. ಆತನೇ ನನ್ನನ್ನು ಮೊದಲು ಕಾಡಿದ ಸೇನಬೋವರ ಯಂಕನು. ಈ ದಿನ ಅಧ್ಯಕ್ಷರು ಆತನನ್ನು ವೇಂಕಟರಾಯನೆಂದು ಕರೆದದ್ದನ್ನೂ, ಆತನಿಗೆ ದೊರೆತ ಹೆಚ್ಚಿನ ಸಂಮಾನವನ್ನೂ ನೋಡಿ ನನ್ನ ಕಣ್ಣುಗಳು ಮತ್ತೆ ಬಾಷ್ಪಪೂರ್ಣವಾದುವು.

ಈಗ ಕುಲಕರಣಿ ವೆಂಕಟರಾಯರು ದೊಡ್ಡ ಆಫೀಸರರು. ಆದರೂ ತಮ್ಮ ಮೊದಲಿನ ದರಿದ್ರ ಶಿಕ್ಷಕನಾದ ನನ್ನಲ್ಲಿ ಅವರು ಎಲ್ಲರಿಗಿಂತ ಹೆಚ್ಚಿಗೆ ಅಭಿಮಾನವನ್ನೂ ಪೂಜ್ಯಬುದ್ಧಿಯನ್ನೂ ಇಟ್ಟುಕೊಂಡಿರುವರು. ಅವರನ್ನು ನೋಡಿದಾಗಳೆಲ್ಲ ಬೆತ್ತದ ಶಿಕ್ಷೆಗಿಂತ ಪ್ರೀತಿಯ ಶಿಕ್ಷೆಯು ಹೆಚ್ಚು ಕಾರ್ಯಕಾರಿಯೆಂಬುದು ನನ್ನ ನೆನಪಿನಲ್ಲಿ ಬರುವುದು.

## ೧೨. ಗದಾಯುದ್ಧವೂ ಭೀಮಸೇನನ ನೀತಿಯೂ.

ಭೀಮಸೇನನು ಪಾಂಡವರಲ್ಲಿ ಎರಡನೆಯವನು. ವಾಯುದೇವರ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಜನಿಸಿದವನು. ಮಹಾ ಧರ್ಮಿಷ್ಠನು; ಮಹಾಬಲಿಷ್ಠನು. ಈತನಲ್ಲಿ ಸಾವಿರಾನೆಗಳ ಬಲವಿತ್ತೆಂಬುದನ್ನೂ ಈ ಬಲದಿಂದ ಪಾಂಡವರಿಗೆ ಬಹಳ ಪ್ರಯೋಜನವಾಯಿತೆಂಬುದನ್ನೂ ಈತನ ಚರಿತ್ರವನ್ನೋದಿದವರೆಲ್ಲ ಬಲ್ಲರು. ಆದರೆ ಭೀಮಸೇನನ ನೀತಿಯು ಯಾವ ತರದ್ದೆಂಬುದನ್ನು ಹಲವರು ಅರಿಯರು.

ಯಾರು ಎಂತೋ ಅವರೊಡನೆ ಅಂತೆಯೆ ನಡೆಯಬೇಕೆಂಬುದೇ ಭೀಮಸೇನನು ಆಚರಿಸಿ ತೋರಿಸಿದ ನೀತಿಯು. ಏಕಚಕ್ರನಗರದ ದುರ್ಬಲ ಪ್ರಜೆಗಳ ಮೇಲೆ ತನ್ನ ಪಾಶವಬಲದಿಂದ ಅನ್ಯಾಯದ ಬಲುಮೆಯನ್ನು ನಡೆಯಿಸುತ್ತಿದ್ದ ಬಕಾಸುರನನ್ನು ಭೀಮಸೇನನು ಮಲ್ಲಯುದ್ಧದಲ್ಲಿ ಇದಿರಿಸಿ ತನ್ನ ಬಲದಿಂದಲೇ ಮುರಿದನು. ವಿರಾಟನಗರದಲ್ಲಿ ಅಜ್ಞಾತವಾಸದಲ್ಲಿರುವಾಗ ತಮ್ಮ ಮಡದಿಯಾದ ದ್ರೌಪದಿಯ ಮೇಲೆ ಬಲಾತ್ಕಾರ ಮಾಡಲೆಳಸಿದ ನೀಚ ಕೀಚಕನನ್ನು ವಧಿಸುವಲ್ಲಿ ಭೀಮಸೇನನು ಸ್ವಲ್ಪ ಮರೆಮೋಸವನ್ನೂ ಪ್ರಯೋಗಿಸಿದನು. ಕುರುಕ್ಷೇತ್ರದಲ್ಲಿ ಮಾಡಿದ ಗದಾಯುದ್ಧದಲ್ಲಿ ದುರ್ಯೋಧನನ ವಧೆ ಮಾಡಿ ಭೀಮಸೇನನು ಈ ಕಲಿಕಾಲದ ನೀತಿಯು ಯಾವುದೆಂಬುದನ್ನು ಸ್ಪಷ್ಟವಾಗಿ ತೋರಿಸಿದನು.

ಗದಾಯುದ್ಧವೆಂಬುದು ಗದೆಗಳನ್ನು ಹಿಡಿದು ಒಬ್ಬರಿಗೊಬ್ಬರು ಇದಿರಿಗೆ ನಿಂತು ಅವುಗಳಿಂದ ಹೊಡೆದಾಡಿ ಮಾಡುವ ಯುದ್ಧವು. ಈ ಯುದ್ಧದಲ್ಲಿ ಭೀಮಸೇನನಿಗೆ ದುರ್ಯೋಧನನು ಇದಿರಾಳು. ದುರ್ಯೋಧನನೂ ಸಾಮಾನ್ಯ ವೀರನಲ್ಲ; ಗದಾಯುದ್ಧ ಮಾಡುವುದರಲ್ಲಿ ಬಹಳ ಪರಿಶ್ರಮಮಾಡಿದವನು; ಭೀಮಸೇನನಿಗಿಂತ ಹೆಚ್ಚಿಗೆ ನೈಪುಣ್ಯವನ್ನು ಸಂಪಾದಿಸಿದವನು. ಭಾರತಯುದ್ಧದಲ್ಲಿ ದುರ್ಯೋಧನನೊಬ್ಬನನ್ನುಳಿದು ಎಲ್ಲ ಕೌರವರೂ

ಹತ್ತರಾಗಿ ಹೋದ ಬಳಿಕ ಪಾಂಡವರು ಜಯಶೀಲರಾದಂತೆಯೇ ಸರಿ. ಆದರೆ ದುರ್ಯೋಧನನೊಬ್ಬನು ಜೀವಂತನಾಗಿರುವವರೆಗೆ ಪೂರ್ಣಜಯವು ದೊರೆ ತಂತೆ ಆಗಿರಲಿಲ್ಲ. ಆಗ ಭೀಮಸೇನನು ದುರ್ಯೋಧನನನ್ನು ಯುದ್ಧದಲ್ಲಿ ಕೆಡಹಬೇಕೆಂದು ಹವಣಿಸುತ್ತಿರಲು ದುರ್ಯೋಧನನು ವೈಶಂಪಾಯನ ಎಂಬ ಸರೋವರದಲ್ಲಿ ಅಡಗಿಕೊಂಡು ಕುಳಿತಿದ್ದನು. ಇನ್ನು ಸ್ವಲ್ಪಕಾಲವನ್ನು ನೂಕಿದರೆ ತೀರ್ಥಯಾತ್ರೆಗೆ ಹೋದ ಮಹಾಬಲಶಾಲಿಯಾದ ಬಲರಾಮನು ಆತನಿಗೆ ಸಹಾಯಕನಾಗಿ ಬರುವನೆಂದು ಭೀಷ್ಮರ ಸಲಹೆ; ದುರ್ಯೋಧನನ ಆಸೆ. ಆದರೆ ಅಸಹಾಯನಾದವನು ಸಸಹಾಯನಾಗಿ ಯುದ್ಧಮಾಡಲಿ ಎಂದು ಅವಕಾಶ ಕೊಡುವುದಕ್ಕೆ ದುಷ್ಟ ದುರ್ಯೋಧನನು ತಕ್ಕವನಾಗಿರಲಿಲ್ಲ. ಆದದರಿಂದ ಶ್ರೀಕೃಷ್ಣನ ಸೂಚನೆಯಿಂದ ಭೀಮಸೇನನು ಆ ಕೂಡಲೆ ದುರ್ಯೋಧನನನ್ನು ಹುಡುಕಿಸಿ ಅಡಗಿದುದಕ್ಕೆ ಪರಿಪರಿಯಿಂದ ಮೂದಲಿಸಿ ಹಳಿದು ಹುರಿಗೊಳಿಸಿ ಗದಾಯುದ್ಧಕ್ಕೆ ಬರಮಾಡಿಕೊಂಡನು.

ದುರ್ಯೋಧನನೊಡನೆ ಧರ್ಮಯುದ್ಧವನ್ನು ಮಾಡಿಯೇ ಆತನನ್ನು ಕೆಡಹಬಹುದೆಂದಿದ್ದ ಭೀಮಸೇನನು ಮೊದಲು ಗದಾಯುದ್ಧದ ನಿಯಮಗಳನ್ನನುಸರಿಸಿದ ಯುದ್ಧವನ್ನೇ ಆರಂಭಿಸಿದನು. ಭೀಮನು ಈ ವರೆಗೆ ಭಾರತ ಯುದ್ಧದಲ್ಲಿ ದೊರೆತ ಜಯದಿಂದ ಉಬ್ಬಿದವನು; ಈಗಲೂ ಜಯವು ತನ್ನನ್ನು ಬಿಟ್ಟು ಎಲ್ಲಿ ಹೋಗಿದೆಯೆಂಬ ಹೆಮ್ಮೆ ಅವನಲ್ಲಿದೆ. ಆದರೆ ದುರ್ಯೋಧನನು ತಮ್ಮಂದಿರನ್ನೂ ಮಕ್ಕಳನ್ನೂ ಪ್ರಿಯಮಿತ್ರನನ್ನೂ ಎಲ್ಲರನ್ನೂ ಕಳೆದುಕೊಂಡು ಏಕಾಕಿಯಾದವನು. ಅವನಿಗೆ ಈಗ ಜೀವಕ್ಕಿಂತ ಮರಣವೇ ಲೇಸೆನಿಸಿದೆ. ಇಂತಹ ಶತ್ರುವು ಜೀವದಾಸೆಯಿಲ್ಲದೆ ಮೈಮೇಲೆ ಏರಿಬರುವುದರಿಂದ ಬಹಳ ಭಯಂಕರನು. ಆದದರಿಂದ ಭೀಮಸೇನನಿಗೆ ಸೋಲುವ ಹೊತ್ತು ಬಂದದ್ದು ಸಹಜವು. ದುರ್ಯೋಧನನ ಹೊಡೆತದಿಂದ ಭೀಮಸೇನನಿಗೆ ಮೂರ್ಛೆಯೊದಗಿತು. ಭೀಮಸೇನನು ಮತ್ತೆ ಎದ್ದಬಳಿಕ ಇನ್ನು ತಡಮಾಡುವುದು ಸರಿಯಲ್ಲವೆಂದು ದುರ್ಯೋಧನನ ತೊಡೆಗಳಿಗೆ ಗದೆಯಿಂದ ಬಲವಾಗಿ ಪ್ರಹರಿಸಲು ಆತನ ತೊಡೆಗಳು ಮುರಿದುಹೋದುವು. ಅವನು ದೊಪ್ಪನೆ ನೆಲಕ್ಕುರುಳಿದನು. ಇನ್ನು ಬಹಳ ಹೊತ್ತು ಬದುಕುವ ಬಲವು ಆತನಲ್ಲಿ ಉಳಿಯಲಿಲ್ಲ. ಆಗ ಭೀಮಸೇನನು ನೆಲದ ಮೇಲೆ ಬಿದ್ದಿರುವ

ದುರ್ಯೋಧನನ ತಲೆಯನ್ನೂ ಕಿರೀಟವನ್ನೂ ಎಡಗಾಲಿನಿಂದ ಒದೆದು ತನ್ನ ಮೊದಲಿನ ಪ್ರತಿಜ್ಞೆಗಳನ್ನು ನೆರವೇರಿಸಿದನು. ೧೮ ದಿನಗಳಿಂದ ನಡೆದುಬಂದ ಭಾರತಯುದ್ಧವು ಮುಗಿಯಿತು. ಭೀಮಸೇನನು ಕೊನೆಯ ಜಯವನ್ನು ಸಂಪಾದಿಸಿದನು.

ಈ ಗದಾಯುದ್ಧದಲ್ಲಿ ಭೀಮಸೇನನು ದುರ್ಯೋಧನನ ತೊಡೆಗಳಿಗೆ ಹೊಡೆತಹಾಕಿದ್ದೂ, ಆತನು ಮೃತಪ್ರಾಯನಾಗಿ ನೆಲಕ್ಕುರುಳಿದ ಬಳಿಕ ಅವನ ತಲೆಯನ್ನೂ ಕಿರೀಟವನ್ನೂ ಒದೆದದ್ದೂ ಅನ್ಯಾಯಗಳಲ್ಲವೇ ? ಗದಾಯುದ್ಧದಲ್ಲಿ ಹೊಕ್ಕುಳ ಕೆಳಗಡೆಗೆ ಹೊಡೆಯಬಾರದೆಂಬ ನಿಯಮವುಂಟು. ದುರ್ಯೋಧನನು ಕೂಡ ಭೀಮಸೇನಿಗೆ ಮೂರ್ಛೆಯೊದಗಿದಾಗ ಸುಮ್ಮನೆ ಇದ್ದನು. ಹೀಗಿರಲು ವಿಚಾರಶೀಲನಾದ ಭೀಮಸೇನನು ಧರ್ಮಯುದ್ಧದ ನಿಯಮವನ್ನು ಮುರಿದು ಹಾಗೆ ತೊಡೆಗಳಿಗೆ ಹೊಡೆಯಬಹುದೇ ? ನೆಲಕ್ಕೆ ಬಿದ್ದ ಬಳಿಕ ಆತನ ತಲೆಯನ್ನೂ ಕಿರೀಟವನ್ನೂ ಒದೆಯುವುದು ನ್ಯಾಯ್ಯವೇ? ದುರ್ಯೋಧನನು ಪಟ್ಟಾಭಿಷಿಕ್ತನಾದ ಚಕ್ರವರ್ತಿ ರಾಜನು; ಹನ್ನೊಂದು ಅಕ್ಷೋಹಿಣೀ ಸೇನೆ ಅವನ ವಶದಲ್ಲಿ; ಅಸಂಖ್ಯ ಮಾಂಡಲಿಕರಾಜರೂ, ಮಿತ್ರರಾಜರೂ ಭಾರತಯುದ್ಧದಲ್ಲಿ ಆತನ ಸಹಾಯಕ್ಕೆ ಬಂದಿದ್ದರು. ಇಂಥ ಮಹಾರಾಜಾಧಿರಾಜನ ತಲೆಯನ್ನೂ ಆತನ ಸಾಮ್ರಾಜ್ಯಸೂಚಕವಾದ ಕಿರೀಟವನ್ನೂ ಒದೆಯುವುದು, ಅದರಲ್ಲಿಯೂ ಆತನು ಸಾಯುವ ಸ್ಥಿತಿಯಲ್ಲಿದ್ದಾಗ ಒದೆಯುವುದು ಅದೆಂತಹ ನ್ಯಾಯ್ಯವು ? ಅದೆಂತಹ ಪೌರುಷವು? ಇದಲ್ಲದೆ ದುರ್ಯೋಧನನು ಭೀಮಸೇನನಿಗೆ ಅಣ್ಣನಾಗಬೇಕು. ಅಣ್ಣನಿಗೆ ತೋರಿಸುವ ಮರ್ಯಾದೆ ಇದೇ ಏನು ? ಗದಾಯುದ್ಧವನ್ನು ನೋಡಲು ಬಂದ ಹಲವರಿಗೆ ಇದು ಸರಿದೋರಲಿಲ್ಲ. ಬಲರಾಮನು ಭೀಮಸೇನನ ಈ ಕೃತಿಗೆ ಹೇಸಿ ಕೋಪಗೊಂಡು ಕೆಂಡದಂತಾದನು. ಭೀಮಸೇನನ ಪ್ರತ್ಯಕ್ಷ ಅಣ್ಣನಾದ ಧರ್ಮರಾಜನೇ ಈ ಕೃತಿಯು ಅನುಚಿತವೆಂದು ಮರುಗಿದನು. ಹೀಗಿರಲು ಇದೇ ಏನು ನಾವು ಹೇಳಹೊರಟ ಭೀಮಸೇನನ ನೀತಿ ಎನ್ನುವಿರಾ ?

ಭೀಮಸೇನನು ದುಃಶಾಸನನ ಎದೆಯ ರಕ್ತವನ್ನು ಹೀರುವೆನೆಂದೂ ದುರ್ಯೋಧನನ ತೊಡೆಗಳನ್ನು ಮುರಿಯುವೆನೆಂದೂ ಆತನ ತಲೆಯನ್ನೂ

ಕಿರೀಟವನ್ನೂ ಒಡೆಯುವೆನೆಂದೂ ಭಾರತಯುದ್ಧಕ್ಕಿಂತ ಬಹುಕಾಲ ಮುಂಚೆಯೇ ಪ್ರತಿಜ್ಞೆಮಾಡಿದ್ದನು. ತಾವು ಮಾಡಿದ ಪ್ರತಿಜ್ಞೆಗಳನ್ನು ಪೂರೈಸುವುದು ಎಲ್ಲರ, ವಿಶೇಷವಾಗಿ ಕ್ಷತ್ರಿಯರ ಕರ್ತವ್ಯವು.

" ಸತ್ಯಕ್ಕಾಗಿ ಹೆಣಗುವ ತೇಜಸ್ವಿಗಳು ಹಿಂದೆಮುಂದೆ ನೋಡದೆ ಪ್ರಾಣವನ್ನಾದರೂ ಬಿಟ್ಟಾರಲ್ಲದೆ ಪ್ರತಿಜ್ಞೆಯನ್ನು ಬಿಡಲಾರರು " * ಎಂದು ನೀತಿನಿಪುಣರಾದ ವಿದ್ವಾಂಸರು ಹೇಳುತ್ತಾರೆ. ಪ್ರತಿಜ್ಞಾಪಾಲನವು ಸತ್ಯದಲ್ಲಿ ಸಮಾವೇಶವಾಗುವುದು. ಹೀಗಿದ್ದ ಬಳಿಕ ಭೀಮಸೇನನು ತನ್ನ ಪ್ರತಿಜ್ಞೆಗಳಂತೆ ನಡೆದರೆ ಎಂದರೆ ಸತ್ಯವನ್ನು ಪಾಲಿಸಿದರೆ ಅದರಲ್ಲಿ ಅನೀತಿಯೇನು ಎಂದು ಸಮಾಧಾನ ಹೇಳಬಹುದು; ಆದರೆ ಅರಸನಾದ ಅಣ್ಣನ ತಲೆಯನ್ನೂ ಕಿರೀಟವನ್ನೂ ಒಡೆಯುವೆನೆಂಬುದೇ ಮೊದಲಾದ ಈ ಪ್ರತಿಜ್ಞೆಗಳು ಉಚಿತವೇ, ಪ್ರತಿಜ್ಞೆಗಳನ್ನು ನೆರವೇರಿಸುವುದಕ್ಕೆ ಮೋಸಗಾರಿಕೆಯನ್ನು ಅವಲಂಬಿಸಬಹುದೇ ಎಂಬುದು ವಿಚಾರಣೀಯವು.

ಯಾವುದೊಂದೂ ಮಾತು ನೀತಿಸಮ್ಮತವಹುದೋ ಅಲ್ಲವೋ ಎಂಬುದನ್ನು ನೋಡಬೇಕಾದರೆ ಮೊದಲು ಆ ಮಾತು ನಡೆದ ಕಾಲವನ್ನು ಲಕ್ಷ್ಯದಲ್ಲಿ ತರಬೇಕು. ಏಕೆಂದರೆ, ಯುಗಯುಗಕ್ಕೆ ನೀತಿಯ ತಕ್ಕಡಿಯ ಪರಡಿಗೆಗಳು ಮೇಲೆ ಕೆಳಗೆ ಆಗುತ್ತಿರುತ್ತವೆ. ಕೃತಯುಗದಲ್ಲಿ ಇನ್ನೊಬ್ಬನಿಗೆ ಕೇಡನ್ನು ಬಗೆಯುವ ಬುದ್ಧಿಯೇ ಹುಟ್ಟುತ್ತಿರಲಿಲ್ಲವಾದುದರಿಂದ ದುಷ್ಟರನ್ನು ಕಂಡು ಹೇಗೆ ನಡೆಯಬೇಕೆಂಬ ವಿಚಾರವೇ ಆಗ ಇರಲಾರದು. ತ್ರೇತಾಯುಗದಲ್ಲಿ ಒಬ್ಬನು ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ಅವನ ಮುಂದೆ ನೀಡುವುದೇ ನೀತಿಯಾಗಿರಬಹುದು. ದ್ವಾಪರಯುಗದಲ್ಲಿ ಕೆನ್ನೆಯ ಮೇಲೆ ಹೊಡೆಯಬಂದವನ ಕೈಯನ್ನು ತಡೆದು ಹಿಡಿಯುವುದು ನೀತಿಯಾಗಿರಬಹುದು. ಆದರೆ ಕಲಿಯುಗದಲ್ಲಿ ತನ್ನ ಕೆನ್ನೆಗೆ ಹೊಡೆಯಬಂದವನ ಕೈಯನ್ನು ತಡೆಯುವದಷ್ಟೇ ಅಲ್ಲದೆ ತಿರುಗಿ ಕಣ್ಣಿಗೆ ಕತ್ತಲೆ ಕವಿಯುವಂತೆ ಆತನ ಕೆನ್ನೆಗೆ ಹೊಡೆಯುವುದೇ ನೀತಿಯಾಗುವುದು.

---

* " तेजस्विनः सुखमसूनपि संत्यजन्ति ।
सत्यव्रतव्यसनिनो न पुनः प्रतिज्ञाम ॥ "

" ಯುಗಗಳು ಪರಿವರ್ತಿಸುತ್ತ ಬಂದಹಾಗೆ ಜನರು ಹ್ರಾಸ (ಅವನತಿ) ಹೊಂದುತ್ತ ನಡೆದುದರಿಂದ ಯುಗಯುಗಕ್ಕೆ ಧರ್ಮಗಳು ಅಥವಾ ನೀತಿಗಳು ಭಿನ್ನವಾಗುವುವು. " ಎಂದು ಭಾರತದಲ್ಲಿ ಹೇಳಿದೆ. ‡

ಭೀಮ ದುರ್ಯೋಧನರ ಗದಾಯುದ್ಧವು ನಡೆದ ಕಾಲದಲ್ಲಿ ಕಲಿಯುಗವು ಆರಂಭವಾಗಿತ್ತು. ಭೀಮನು ಯುಗಕ್ಕೆ ತಕ್ಕ ನೀತಿಯನ್ನು ಆಚರಿಸಿದನು.

ಇನ್ನು ಕಲಿಯುಗದ ಮನುಷ್ಯನು ಕೂಡ ನಿಷಿದ್ಧವಲ್ಲದ ಕೆಲವು ಕೃತಯುಗದ ನೀತಿಗಳನ್ನು ಆಚರಿಸಬಹುದು. ' ತುಷ್ಯತು ದುರ್ಜನಃ ' ಎಂಬ ನ್ಯಾಯದಂತೆ ಒಬ್ಬ ಸಜ್ಜನನು, ದುಷ್ಟನು ಬಂದು ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ಮುಂದೆ ನೀಡಬಹುದು; ಅದು ಅವನ ಕ್ಷಮಾಗುಣದ ಸಾಧನದ ಮಹಿಮೆ. ಆದರೆ ಹೇಡಿತನದಿಂದ ಆತನು ಹಾಗೆ ಆಚರಿಸುತ್ತಿದ್ದರೆ ಯಾವ ಕಾಲದಲ್ಲಾದರೂ ಅದು ಅನೀತಿಯೇ ಸರಿ. ಹೇಡಿಯು ಗಂಡುಸೂ ಅಲ್ಲ, ಹೆಂಗುಸೂ ಅಲ್ಲ ಎಂದು ದೊಡ್ಡವರು ಹೇಳುತ್ತಾರೆ.

† ಯಾವನು ಅನ್ಯಾಯವನ್ನು ಕಂಡು ಕೋಪಗೊಳ್ಳುವನೋ ಯಾವನು ಅಪಮಾನವನ್ನು ತಾಳಿಕೊಳ್ಳುವುದಿಲ್ಲವೋ ಆತನೇ ಗಂಡುಸು. ಅತಿರಿಕ್ತವಾದ ತಾಳ್ಮೆಯುಳ್ಳ ಹೇವವಿಲ್ಲದ ವ್ಯಕ್ತಿಯು ಗಂಡುಸೂ ಅಲ್ಲ, ಹೆಂಗುಸೂ ಅಲ್ಲ ಎಂದು ಮಹಾಭಾರತದಲ್ಲಿ ಹೇಳಿದೆ.

× ಅಪಮಾನದಿಂದ ಸಿಟ್ಟು ಬಾರದ ಮನುಷ್ಯನ ಗೆಳೆತನದಿಂದೇನು ? ಹಗೆತನದಿಂದೇನು ? ಎಂದು ಭಾರವಿಕವಿಯು ಹೇಳಿದ್ದಾನೆ.

ಭೀಮಸೇನನು ಮೊದಲಿನಿಂದಲೂ ಈ ತರದ ಪ್ರಕೃತಿಯ ಗಂಡುಸು. ಅನ್ಯಾಯಕ್ಕೆ ಕ್ಷಮೆಯೂ, ಅಪಮಾನಕ್ಕೆ ತಾಳ್ಮೆಯೂ ಆತನಿಗೆ ಕನಸಿನಲ್ಲಿ

---

‡ अन्ये कृतयुगे धर्मास्त्रेतायां द्वापरे परे ।
अन्ये कलियुगे नृणां युगह्रासानुरूपतः ॥

ಮನು. ೧೮೫, ಮ ಭಾ.

† एतावानेव पुरुषो यदमर्षी यदक्षमी ।
क्षमावान्निरमर्षश्च नैव स्त्री न पुनः पुमान् ॥ ಮ. ಭಾ.

× अमर्षशून्येन जनस्य जन्तुना न जातहार्देन न विद्विषा दरः

ಭಾರವಿಕೃತ ಕಿರಾತಾರ್ಜುನೀಯ

ಕೂಡ ಬಾರವು. ದುರ್ಯೋಧನನು, ನೀರಲ್ಲಿ ಮುಳುಗಿಸಿ, ಮನೆಗೆ ಬೆಂಕೆ ಹತ್ತಿಸಿ ಪಾಂಡವರನ್ನು ನಾಶಗೊಳಿಸಬೇಕೆಂದು ಪ್ರಯತ್ನಿಸಿದಾಗಲೇ ಭೀಮ ಸೇನನು ಕೌರವರನ್ನು ಇಕ್ಕುವವನು. ಆದರೆ ಅಗ್ರಜಭಕ್ತಿಯು ಆತನನ್ನು ಹಿಂದೆಳೆಯುತ್ತಿತ್ತು. ಜೂಜಿನ ಮೋಸ, ದ್ರೌಪದೀವಸ್ತ್ರಾಪಹರಣ ಇವುಗಳಂತಹ ಘೋರ ಪ್ರಸಂಗಗಳಲ್ಲಂತೂ ಅಗ್ರಜಭಕ್ತಿಯು ಎಳೆ ಹರಿದು ಹೋಗುವುದರಲ್ಲಿತ್ತು. ಜೂಜಿನಾಟದಲ್ಲಿ ದುರ್ಯೋಧನನು ಶಕುನಿಯ ಮೋಸಗಾರಿಕೆಯಿಂದ ಪಾಂಡವರ ಸರ್ವಸ್ವವನ್ನೂ ಸೆಳೆದುಕೊಂಡು ರಾಜ್ಯಾಧಿಪತ್ಯವನ್ನು ಸಂಪಾದಿಸಿದುದು ಶುದ್ಧ ಅನ್ಯಾಯವಲ್ಲವೇ ? ಮತ್ತು ಧರ್ಮರಾಜನು ಸೋತುದರಿಂದ ದ್ರೌಪದಿಯು ತನ್ನ ದಾಸಿಯಾದಳೋ ಇಲ್ಲವೋ ಆ ವಿಚಾರ ವಿರಲಿ, ತನ್ನ ಮನೆತನಕ್ಕೆ ಸೇರಿದವಳೂ, ರಾಜಪುತ್ರಿಯೂ, ರಾಜಪತ್ನಿಯೂ, ಪಟ್ಟಾಭಿಷಿಕ್ತಳೂ ಆದ ಕ್ಷತ್ರಿಯ ರಮಣಿಯು ರಜಸ್ವಲೆಯಾಗಿದ್ದಾಗ ಹೇಳದೆ ಇಲ್ಲದೆ ಏಕವಸ್ತ್ರಧಾರಣಿಯಾದ ಆಕೆಯ ಹೆಳಲನ್ನು ಹಿಡಿದು ಎಳತರಿಸಿ ರಾಜಸಭೆಯಲ್ಲಿ ಅಪಮಾನಗೊಳಿಸಿದುದು ಅನ್ಯಾಯದ ಪರಮ ಕಾಷ್ಠೆಯಲ್ಲವೇ ? ತನ್ನ ಬಂಧುಗಳ ಪತ್ನಿಯೂ, ಪತಿವ್ರತಾಶಿರೋಮಣಿಯೂ ಆದ ದ್ರೌಪದಿಗೆ ತನ್ನ ತೊಡೆಗಳನ್ನು ತಟ್ಟಿ ತೋರಿಸಿದುದರಲ್ಲಿ ಅನ್ಯಾಯದ ಮೇರೆಯು ಕೂಡ ಮೀರಿಹೋದುದರಲ್ಲಿ ಏನಾದರೂ ಉಳಿಯಿತೇ ?

ಮಡದಿಗೆ ಯಾವ ದುಷ್ಟನು ತೊಡೆಗಳನ್ನು ತಟ್ಟಿಕೊಂಡು ತೋರಿಸಿದನೋ ಆತನ ತೊಡೆಗಳನ್ನು ಪುಡಿಪುಡಿಮಾಡಿಬಿಡುವುದು, ಗಂಡುಸಾದವನ ಕರ್ತವ್ಯವಲ್ಲವೇ ? ಯಾವ ತಲೆಯಲ್ಲಿ ಜೂಜಿನ ಮೋಸಗಾರಿಕೆಯ ದುರ್ವಿಚಾರವು ಹುಟ್ಟಿತೋ ಆ ತಲೆಯನ್ನು ಎಡಗಾಲಿನಿಂದ ಒದೆಯಬೇಕಾದುದು ನೀತಿವಂತ ಪುರುಷನ ಕರ್ತವ್ಯವಲ್ಲವೇ ? ಯಾವ ಕಿರೀಟದ–ಅರಸೊತ್ತಿಗೆಯ–ಬಲದಿಂದ ದುಷ್ಟನು ತನ್ನ ಮಡದಿಯ ಉಟ್ಟ ಬಟ್ಟೆಯನ್ನು ಸೆಳೆಯುವಂತಹ, ನೀಚತನದ ಪರಮಸೀಮೆಯನ್ನು ಮುಟ್ಟಿದ ಅಪಮಾನಕರ ದುಷ್ಕೃತ್ಯವನ್ನೆಸಗಿದನೋ ಆ ಕಿರೀಟವನ್ನು ಎಡಗಾಲಿನಿಂದ ಒದೆಯುವದು, ಅದು ರಾಜಮುಕುಟವಲ್ಲ; ಅದೊಂದು ಪತಿವ್ರತಾದ್ರೋಹನ ತಲೆಯ ಮೇಲಿನ ಕೆಂಡದ ರಾಶಿಯೆಂದು ಜಗತ್ತಿಗೆ ತೋರಿಸಬೇಕಾದುದು, ಸ್ತ್ರೀಯರ ಸಮ್ಮಾನವನ್ನು ಕಾಯುವ ಗಂಡುಸಿನ, ಹೆಂಡತಿಯ ಪಾತಿವ್ರತ್ಯದ ಗೌರವವನ್ನು ಕಾಯುವ

ಷತಿಯ ಕರ್ತವ್ಯವಲ್ಲವೇ? ಈ ಕರ್ತವ್ಯಗಳನ್ನು ಭೀಮಸೇನನಂತಹ ಮಹಾಸತ್ವನಾದ ಪುರುಷವರನು ಆ ಆ ಅಪರಾಧಗಳು ನಡೆದಾಗಲೇ ಮಾಡುವವನು; ಆದರೆ ಕೃತಯುಗದ ನೀತಿಯ ಮೋಹವುಳ್ಳ ಅಗ್ರಜನಾದ ಧರ್ಮರಾಜನು ತಡೆದು ಹಿಡಿದುದರಿಂದ ಆತನ ಮರ್ಯಾದೆಯನ್ನು ಕಾಯುವುದಕ್ಕಾಗಿ ಆಗ ಸುಮ್ಮನಿದ್ದು ಸಮಯ ಬಂದಾಗ ಈ ಕರ್ತವ್ಯಗಳನ್ನು ನೆರವೇರಿಸಿಯೇ ತೀರುವೆನೆಂದು ಪ್ರತಿಜ್ಞೆ ಮಾಡಿದುದೂ ಆ ಪ್ರತಿಜ್ಞೆಗಳನ್ನು ಪೂರೈಸಿದುದೂ ಭೀಮಸೇನನಿಗೆ ಅತ್ಯಂತ ಭೂಷಣವಾಗಿದೆ. ಭೀಮಸೇನನು ಎಡಗಾಲಿನಿಂದ ಒದೆದ ಬಳಿಕ ರಣರಂಗದಲ್ಲಿ ಉರುಳಾಡುತ್ತಿದ್ದ ದುರ್ಯೋಧನನನ್ನು ತೋರಿಸಿ ಮುಡದಿ ದ್ರೌಪದಿಯನ್ನು ಸಮಾಧಾನಗೊಳಿಸುವಾಗ ಭೀಮಸೇನನು ಆಡಿದ ಮಾತನ್ನು ಕೇಳಿರಿ—

ಮುಳಿಸಿಂ ನಂಜಿಕ್ಕಿ ಕೊಂದಂದಿನ ಜತುಗೃಹದೊಳ್ ಸುಟ್ಟ ಕೌಟಿಲ್ಯದುರ್ವೀ- ।
ತಳಮಂ ಜೂದಾಡಿ ಗೆಲ್ದಂದಿನ ನಿಜಕಬರೀಸೀವಿಬಂಧಂಗಳಂ ದೋ ।
ರ್ವಳದಿಂದಂ ತಮ್ಮನಿಂದಂ ತೆಗೆಯಿಸಿ ನಡೆದಾ ನೀಚನಾ ದ್ರೋಹನಾ ಸಂ- ।
ಚಳನಾ ಚಂಡಾಲನಾ ಪಾತಕನಿರವನಿದಂ ನೋಡು ಪಂಕೇಜವಕ್ತ್ರೇ ॥

ರನ್ನನ ಗದಾಯುದ್ಧ ೮-೪೫.

—ಕಮಲಮುಖಿಯಾದ ಪ್ರಿಯೇ, ನಮ್ಮ ಮೇಲಿನ ಅಸಮಾಧಾನದಿಂದ ವಿಷ ಹಾಕಿ ಹಿಂಸೆ ಪಡಿಸಿದ, ಆ ದಿವಸ ಅರಗಿನ ಮನೆಯಲ್ಲಿ ನಮ್ಮನ್ನು ಸುಡಲೆಳಸಿದ, ಆ ದಿವಸ ಮೋಸಗಾರಿಕೆಯಿಂದ ಜೂಜಾಡಿ ರಾಜ್ಯವನ್ನು ಗೆದ್ದ, ತಮ್ಮನಿಂದ ಆ ದಿವಸ ನಿನ್ನ ಹೆಳಲನ್ನು ಹಿಡಿದೆಳೆಯಿಸಿ ಸೀರೆಯನ್ನು ಸೆಳೆಯಿಸಿದ ಈ ನೀಚನ, ಈ ದ್ರೋಹಿಯ, ಈ ಚಂಡಾಲನ ಈ ಪಾಪಿಯ ಈ ದುರವಸ್ಥೆಯನ್ನು ನೋಡು.

ಈ ಮಾತಿನಲ್ಲಿ ಭೀಮನಲ್ಲಿ ಬಹು ದಿವಸಗಳಿಂದ ಹೊತ್ತಿಹೊಗೆಯುತ್ತಿದ್ದ ರೋಷಾಗ್ನಿಯು ಭಗ್ಗನೆ ಉರಿದು ಹೇಗೆ ಶಾಂತವಾಗುತ್ತಿದೆಯೆಂಬುದು ಕಂಡುಬರುತ್ತಿದೆ. ಇಷ್ಟೊಂದು ಅನರ್ಥಗಳನ್ನು ಮಾಡಿದ ದ್ರೋಹಿಗೆ ಶಿಕ್ಷೆಯೇನೋ ಅವಶ್ಯವಾಗಿ ಆಗಲೇಬೇಕು; ಆತನು ಬಲಿಷ್ಠನಾಗಿದ್ದು ನಾವು

ಮಾಡುವ ಶಿಕ್ಷೆಯನ್ನು ಆತನು ತಪ್ಪಿಸಿಕೊಳ್ಳುವವನಾದರೆ ಆತನಿಗೆ ಮೋಸಗಾರಿಕೆಯಿಂದಲಾದರೂ ಶಿಕ್ಷೆಯನ್ನು ಮಾಡಲೇಬೇಕು; ಮೋಸಗಾರನಾದ ದುರ್ಯೋಧನನನ್ನು ಮೋಸಗಾರಿಕೆಯಿಂದಲೇ ಕೊಲ್ಲಬೇಕೆಂದು ನೀತಿವಿಶಾರದನಾದ ಶ್ರೀಕೃಷ್ಣನು ಭೀಮಸೇನನಿಗೆ ಗದಾಯುದ್ಧವು ಪ್ರಾರಂಭವಾಗುವದಕ್ಕೆ ಮೊದಲೇ ಹೇಳಿಟ್ಟಿದ್ದನು. ಭೀಮಸೇನನು ಗದಾಯುದ್ಧದ ನಿಯಮವನ್ನು ಮುರಿದು ಹೊಕ್ಕಳ ಕೆಳಗೆ ಹೊಡೆದುದು ತೀರ ಅನ್ಯಾಯವಾಯಿತೆಂದು ಬಲರಾಮನು ಭೀಮನ ಮೇಲೆ ಕೋಪಗೊಂಡು ಏರಿ ಹೋಗುವಾಗ ಶ್ರೀಕೃಷ್ಣನು ನಡುವೆ ಬಂದು-ಅಣ್ಣಾ, "ಪ್ರಾಪ್ತಂ ಕಲಿಯುಗಂ ವಿದ್ಧಿ" ಈಗ ಕಲಿಯುಗವು ಪ್ರಾಪ್ತವಾಗಿದೆ; ಮತ್ತು ಭೀಮಸೇನನ ಪ್ರತಿಜ್ಞೆಗಳನ್ನು (ಅವುಗಳ ಕಾರಣಗಳನ್ನು) ಲಕ್ಷ್ಯದಲ್ಲಿ ತಾ; ಎಂಪರೆ ನಿನ್ನ ಈ ಕೋಪವು ಶಾಂತವಾಗುವುದೆಂದು ಸಮಾಧಾನ ಹೇಳಿರುತ್ತಾನೆ. ಅಕ್ಷಮ್ಯವಾದ ಅಪರಾಧಗಳಿಗೆ ಕಲಿಯುಗದಲ್ಲಿ ಪ್ರತಿಶಿಕ್ಷೆಯನ್ನು ಮಾಡುವುದು ತಪ್ಪಲ್ಲ. ಅಪರಾಧಿಯು ದಾರಿಯು ತಪ್ಪಿ ನಡೆದಿರುವಾಗ ಪ್ರತಿಶಿಕ್ಷೆ ಮಾಡುವವನು ಅಪರಾಧಿಗೆ ಶಿಕ್ಷೆಯನ್ನು ಮಾಡುವ ಕೆಲಸದಲ್ಲಿ ಸ್ವಲ್ಪ ದಾರಿಯು ಬಿಟ್ಟು ನಡೆಯುವ ಸಂದರ್ಭವೊದಗಿದರೂ ತಪ್ಪುಗಾರನಿಗೆ ಶಿಕ್ಷೆಯನ್ನು ಹೊಂದಿಸುವದನ್ನೇ ಗುರಿಯಾಗಿಟ್ಟುಕೊಂಡಿದ್ದರೆ, ಆ ಕೆಲಸದಲ್ಲ ಅದು ತಪ್ಪೆಂದೆಣಿಸಲ್ಪಡುವುದಿಲ್ಲವೆಂಬ ಶ್ರೀಕೃಷ್ಣನ ಅಭಿಪ್ರಾಯವು ಗದಾಯುದ್ಧಕ್ಕೆ ಆರಂಭವಾಗುವ ಮೊದಲು ಹೇಳಿದ ಈ ಮಾತುಗಳಿಂದ ಸ್ಪಷ್ಟವಾಗುತ್ತದೆ.

‡ "ಭೀಮಸೇನನು ಧರ್ಮಯುದ್ಧಮಾಡಿ ಜಯಿಸಲಾರನು. ಅನ್ಯಾಯದಿಂದ ಯುದ್ಧಮಾಡಿ ನಿಶ್ಚಯನಾಗಿ ದುರ್ಯೋಧನನನ್ನು ಕೊಲ್ಲಬಹುದು. ದೇವತೆಗಳು ಮಾಯೆಯಿಂದ ದೈತ್ಯರನ್ನು ಗೆದ್ದರೆಂದು ನಾವು ಕೇಳಿರುವೆವು. ಆದುದರಿಂದ ಈ ವೀರನಾದ ವೃಕೋದರನು ಮಾಯೆಯನ್ನು ಅವಲಂಬಿಸಲಿ."

---

‡ भीमसेनस्तु धर्मेण युद्धयमानो न जेष्यात ।
अन्यायेन तु युद्धयन् वै हन्यादेव सुयोधनम् ॥
मायया निर्जिता देवैरसुरा इति नः श्रुतम् ।
तस्मान्मायामयं वीर आतिष्ठतु वृकोदरः ॥ म. भा.

ದುರ್ಯೋಧನನು ಇಷ್ಟು ಕೇಡುಗಳನ್ನು ಮಾಡಿದ ದ್ರೋಹಿಯಾಗಿರುವಾಗ ಆತನು ಅಣ್ಣನೆಂದು ಕ್ಷಮಿಸುವದು ಭೀಮಸೇನನಿಗೆ ಎಂದೂ ಸಮ್ಮತವಾಗಲಾರದು. ಕಾರ್ಯಾಕಾರ್ಯಗಳ ವಿಚಾರವಿಲ್ಲದ ಗುರುವನ್ನು ಕೂಡ ಪರಿತ್ಯಜಿಸಬೇಕೆಂದು ನೀತಿಶಾಸ್ತ್ರಜ್ಞರು ಹೇಳುತ್ತಿರುವಾಗ ಭೀಮನು ದುರ್ಯೋಧನನಂತಹ ಅಣ್ಣನನ್ನು ಹೊಡೆದುಹಾಕಿದುದರಲ್ಲಿ ದೋಷವೇನೂ ಇಲ್ಲವೆಂಬುದು ಸ್ಪಷ್ಟವಿದೆ.

ಭೀಮಸೇನನು ಆಚರಿಸಿ ತೋರಿಸಿದ ಈ ನೀತಿಗೆ "ಮುಯ್ಯಕ್ಕೆ ಮುಯ್ಯ" ಶಠಂಪ್ರತಿ ಶಾಠ್ಯಂ ( शठंप्रति शाठ्यम् ) ಎಂದು ಹೇಳುವರು. [ ಮರಾಠಿಯಲ್ಲಿ ಈ ನೀತಿಗೆ "जशास तसे" ಎಂದೆನ್ನುವರು. ] ಬರಬರುತ್ತ ಕಲಿಪ್ರಾಬಲ್ಯದ ಈ ಕಾಲದಲ್ಲಿ 'ಸೇರಿಗೆ ಸವ್ವಾಸೇರು' (ಜಪಾವು) ಆಗದೆ ಮನುಷ್ಯನು ಬದುಕುವಂತಿಲ್ಲ. ನಮಗೆ ಅನ್ಯಾಯವನ್ನು ಮಾಡಿದವನ ಕೂಡ ನಾವು ಹೇಗೆ ಆಚರಿಸಬೇಕೆಂಬೀ ವಿಷಯದಲ್ಲಿ ಕಲಿಯುಗದ ನೀತಿಗೆ ಆದಿಪ್ರವರ್ತಕನು ಭೀಮಸೇನನೇ ಸರಿ. ಕಲಿಯುಗದಲ್ಲಿ ಬಾಳಬೇಕೆಂದಿದ್ದರೆ ನೀವು ಈ ಆಚರಣೆಯನ್ನು ಅನುಸರಿಸಿರಿ ಎಂದು ಆತನು ನಮಗೆ ಬೋಧಿಸಿರುವನು; ವಾಯುದೇವರ ಅವತಾರವೆನಿಸಿದ ಭೀಮಸೇನನು ಯುಗಧರ್ಮಗಳನ್ನು ಚೆನ್ನಾಗಿ ಬಲ್ಲವನು; ಧರ್ಮರಾಜನ ನೀತಿಯನ್ನು ಆತನು ಆಚರಿಸಿ ತೋರಿಸಬಹುದಾಗಿತ್ತು. ಆದರೆ ದುಷ್ಟರಿಂದ ಸಜ್ಜನರು ನಾಶಹೊಂದಬಾರದೆಂದೇ ದುಷ್ಟರೊಡನೆ ಕಲಿಯುಗದಲ್ಲಿ ಹೇಗೆ ನಡೆಯಬೇಕೆಂಬುದನ್ನು ತೋರ್ಪಡಿಸಿರುವನು. ಪರರ ಅನ್ಯಾಯವನ್ನು ತಾಳಿಕೊಳ್ಳದಂತಹ ಸತ್ವವನ್ನೂ, ದುಷ್ಟರಿಗೆ ಮುಯ್ಯಕ್ಕೆ ಮುಯ್ಯ ಮುಟ್ಟಿಸುವ ಬಲವನ್ನೂ ಭೀಮಸೇನನು ನಮಗೆ ದಯಪಾಲಿಸಲಿ. ಜಯಬಲಭೀಮ!

# ೧೩. ನಮ್ಮ ಸ್ವಾತಂತ್ರ್ಯಯುದ್ಧದ ಎರಡು ಪ್ರಕರಣಗಳು.

## ೧. ಉಪಕ್ರಮಣಿಕೆ.

ಧರ್ಮಭೂಮಿಯಾದ ಭರತಖಂಡದ ಸೌಭಾಗ್ಯಕ್ಕೆ ಕಾರಣವಾದ ಅನೇಕ ಪುಣ್ಯನದಿಗಳಲ್ಲಿ ಗಂಗಾನದಿ ಮುಖ್ಯವಾದುದು. ಶಿವನ ಆವಾಸವಾದ ಕೈಲಾಸಪರ್ವತದಲ್ಲಿ ಉಗಮಹೊಂದಿದ ಆ ಪುಣ್ಯವಾಹಿನಿಯು ದಾರಿಯಲ್ಲಿ ಅನೇಕಾನೇಕ ಗಿರಿ-ಕಂದರಗಳನ್ನು ದಾಟಿ ಅನೇಕಾನೇಕ ಚಿಕ್ಕ ದೊಡ್ಡ ಪ್ರವಾಹಗಳನ್ನೊಡಗೊಂಡು ಉತ್ತರ ಹಿಂದುಸ್ಥಾನದ ಬಯಲುನಾಡಿಗೆ ಬರುವಳು ಆ ಗಂಗಾಮಾತೆಯು ಎರಡು ದಂಡೆಗಳೂ ಹಿಮಾಲಯದ ಅಂಚಿನಲ್ಲಿ ಘೋರಾರಣ್ಯದಿಂದ ಆವೃತವಾಗಿರುವುವು. ಇಂತಹ ಗುಡ್ಡಗಾಡಿನಲ್ಲಿಯೂ ಘೋರಾರಣ್ಯಲ್ಲಿಯೂ ಪ್ರವಹಿಸುವ ಗಂಗಾನದಿಯ ಇತ್ತಡಿಗಳಲ್ಲಿ ಅನೇಕ ಪುಣ್ಯಸ್ಥಳಗಳು ನೆಲೆಸಿರುವುವು. ಅವುಗಳಲ್ಲಿ ಬ್ರಹ್ಮಾವರ್ತವು ಒಂದು. ಬ್ರಹ್ಮಾವರ್ತದಿಂದ ಮುಂದೆ ಹತ್ತೆಂಟು ಮೈಲುಗಳ ಅಂತರದಲ್ಲಿ ಅರ್ವಾಚೀನ ಇತಿಹಾಸದಲ್ಲಿ ಹೆಸರುಗೊಂಡಿದ್ದ ಕಾನಪುರವಿರುವುದು. ಬಹ್ಮಾವರ್ತ ಕಾನಪುರಗಳೆರಡೂ ಗಂಗಾನದಿಯ ದಂಡೆಯಲ್ಲಿರುವಂತೆ ಪೇಶಾವರದಿಂದ ಕಲಕತ್ತೆಗೆ ಹೋಗಿರುವ ಸುಪ್ರಶಸ್ತವಾದ ರಾಜಮಾರ್ಗದ ಅಂಚಿನಲ್ಲಿಯೂ ಇರುವುವು. ಈ ಊರುಗಳ ನಡುವೆ ಘೋರ ಕಾನನವು ಮುಸುಕಿದೆ.

ಈ ಕಾನನದ ನಡುವೆ ಒಂದು ಸುಂದರ ಶಿವಾಲಯವುಂಟು. ಹಿಂದೆ ಬಹು ರಮ್ಯವಾಗಿದ್ದ ಆ ಶಿವಾಲಯವು ಈಗ ಜೀರ್ಣವಾಗಿಹೋಗಿದೆ. ಒಂದು ಗೋಡೆ ಬಿದ್ದುಹೋಗಿ ಮೇಲೆ ಹುಲ್ಲು ಬೆಳೆದಿದೆ. ಶಿವಾಲಯದ ಗೋಡೆಯವರೆಗೂ ಸುತ್ತಲು ಅಡವಿ ಬೆಳೆದುದರಿಂದ ದೂರದಿಂದ ನೋಡುವವರಿಗೆ ಗಿಡಗಳ ಗುಂಪೇ ಕಾಣಿಸುವುದಲ್ಲದೆ ಶಿವಾಲಯವು ಕಾಣಿಸದು. ಶಿವಾಲಯದ ಮುಂಭಾಗದಲ್ಲಿ ತುಸ ದೂರದಲ್ಲಿ ಮೇಲೆ ಹೇಳಿದ ರಾಜಮಾರ್ಗವು ಹಾಯ್ದಿರುವುದು. ಅದಕ್ಕೆ ಹೊಂದಿ ಗಂಗಾನದಿ; ನದಿಗೆ ಇಳಿಯುವುದಕ್ಕೆ ಕಟ್ಟಿದ ಸೋಪಾನಗಳು. ಕೆಳಗೆ ವಿಶಾಲವಾದ ಪಾತ್ರದಲ್ಲಿ ಹರಿಯುವ ಗಂಗಾ

ಪ್ರವಾಹವು ಕಂಡರೂ ಕಾಣಿಸದಷ್ಟು ಅತಿ ಮಂದವಾಗಿ ಚಲಿಸುತ್ತಿರುವುದು. ಇಂತಹ ಪ್ರಶಾಂತವಾದ ಸ್ಥಳದಲ್ಲಿ ಆ ಶಿವಾಲಯಕ್ಕೆ ತುಸ ದೂರದಲ್ಲಿ ಚಿಕ್ಕದೊಂದು ಗುಡಿಸಲಿನಲ್ಲಿ ಆನಂದಮಿಶ್ರನೆಂಬ ಸಂನ್ಯಾಸಿ ವಾಸವಾಗಿರುವನು.

ರಾತ್ರಿ ಹತ್ತು ಗಂಟೆಯಾಗಿರಬಹುದು. ಆನಂದಮಿಶ್ರನು ಪಾದುಕೆಗಳನ್ನು ಮೆಟ್ಟಿಕೊಂಡು ತನ್ನ ಗುಡಿಸಲಿನಿಂದ ಹೊರಗೆ ಬಂದನು. ಬಲಗೈಯಲ್ಲಿ ಕಮಂಡುಲು; ಎಡಗೈಯಲ್ಲಿ ಉರಿಯುತ್ತಿರುವ ಚಿಕ್ಕ ಪಂಜು. ಪಂಜಿನ ಬೆಳಕಿನಲ್ಲಿ ಆನಂದಮಿಶ್ರನು ಮುಂದೆ ಸಾಗಿ ಸೋಪಾನವನ್ನಿಳಿದು ಸ್ನಾನ ಮಾಡಿ, ಶಿವಾಲಯಕ್ಕೆ ಬಂದು ನಿತ್ಯದಂತೆ ಪೂಜೆಯನ್ನು ಸಾಂಗಗೊಳಿಸಿದನು. ಆ ಬಳಿಕ ಹೊರಗೆ ಬಂದು "ಕುಮಾರ ಕುಮಾರ" ಎಂದು ಕೂಗಿದನು. ದೂರದಲ್ಲಿ "ಗುರುದೇವ" ಎಂದುದು ಕೇಳಿಸಿತು. ಕೂಡಲೆ ಅವಸರದಲ್ಲಿ ಎಡವುತ್ತ ಮಧ್ಯಮ ವಯಸ್ಸಿನ ಮನುಷ್ಯನೊಬ್ಬನು ಅಲ್ಲಿಗೆ ಬಂದು ಸಾಷ್ಟಾಂಗ ನಮಸ್ಕಾರ ಮಾಡಿ ನಿಂತನು. "ಕುಮಾರ, ದೇವಾಧಿದೇವ ಮಹಾದೇವನ ಪ್ರಸಾದವನ್ನು ಸ್ವೀಕರಿಸು. ಆತನ ಅನುಗ್ರಹದಿಂದ ನೀನು ಕೃತಕಾರ್ಯನಾಗುವೆ. ಧರ್ಮವನ್ನೂ ಸತ್ಯವನ್ನೂ ಕಾಪಾಡಿಕೊಳ್ಳು. ದೀನಾನಾಥರನ್ನು ಮರೆಯದಿರು. ಪ್ರಾಣಿಹಿಂಸೆಯು ಅಧರ್ಮವಾದರೂ ಕ್ಷತ್ರಿಯವೃತ್ತಿಯನ್ನು ಕೈಕೊಂಡಾಗ ರಣಭೂಮಿಯಲ್ಲಿಯೂ ಆತ್ಮರಕ್ಷಣೆಗಾಗಿಯೂ ಅದು ಕ್ಷಮ್ಯವು. ನಿಶ್ಶಸ್ತ್ರರಾದವರ ಮೇಲೆ ಕೈಯೆತ್ತಬೇಡ. ಶರಣಾಗತರನ್ನು ರಕ್ಷಿಸುವುದೂ ವಚನವನ್ನು ಕಾದುಕೊಳ್ಳುವುದೂ, ಸದಾ ಪ್ರಜೆಗಳ ಹಿತವನ್ನೇ ಬಯಸುವುದೂ ರಾಜಧರ್ಮಗಳು;" ಎನ್ನುತ್ತ ಆನಂದಮಿಶ್ರನು ಶಿವಪ್ರಸಾದವನ್ನು ನೀಡಿದನು. ಆಗಂತುಕನು ಅದನ್ನು ಸ್ವೀಕರಿಸಿ "ಗುರುದೇವಾ, ತಮ್ಮ ಆಜ್ಞೆಯನ್ನು ಅಕ್ಷರಶಃ ಪಾಲಿಸುವೆನು" ಎನ್ನುತ್ತ ಆತನ ಪಾದಗಳಿಗೆರಗಿದನು

ಆನಂದಮಿಶ್ರನು ಶಿವಾಲಯದ ಮುರಿದುಳಿದ ಒಂದೇ ಕದವನ್ನು ಮುಂದೆ ಮಾಡಿ ಹೊರಗೆ ಬಂದನು. ಇಬ್ಬರೂ ನಾಲ್ಕು ಹೆಜ್ಜೆ ಮುಂದೆ ಸಾಗುವಷ್ಟರಲ್ಲಿ ಆನಂದಮಿಶ್ರನು ಕಿವಿಗೊಟ್ಟು ಆಲಿಸಿ "ಕುಮಾರ, ಅವರು ಬಂದರು. ನಾನು ಕುಟೀರಕ್ಕೆ ಹೋಗಿ ಉಪಕರಣಗಳನ್ನು ಇಟ್ಟು ಬೇರೆ ಬಟ್ಟೆಯನ್ನು ಹಾಕಿಕೊಂಡು ಬರುವೆನು," ಎನ್ನುತ್ತ ಮುಂದೆ ಸಾಗಿದನು.

ಅಸ್ಪಷ್ಟವಾಗಿದ್ದ ಖುರಗಳ ಸಪ್ಪಳವು ಸ್ಪಷ್ಟವಾಗತ್ತ ಬಂದಿತು. ರಾಜಮಾರ್ಗದಲ್ಲಿ ಎರಡು ಕುದುರೆಗಳು ಒಂದೇ ವೇಗದಿಂದ ಒಂದರ ಮಗ್ಗುಲಲ್ಲಿ ಒಂದು ನಡೆದಿದ್ದುವು. ಶಿವಾಲಯದ ಕಾಲುದಾರಿಯು ಬಳಿಗೆ ಬಂದೊಡನೆ ಒಬ್ಬನು ಸಂಜ್ಞೆಮಾಡಿದನು. ಇಬ್ಬರೂ ಕುದುರೆಯಿಂದಿಳಿದು ಕಡಿವಾಣ ತೆಗೆದು ಅವುಗಳನ್ನು ಮೇಯಲಿಕ್ಕೆ ಬಿಟ್ಟರು. ಅಷ್ಟರಲ್ಲಿ ಆನಂದಮಿಶ್ರನೂ, ಕುಮಾರ ಸಾಹೇಬನೂ ಅಲ್ಲಿಗೆ ಬಂದರು. ಇನ್ನು ಮುಂದೆ ಅವರಾಡುವ ಮಾತುಗಳಿಗೆ ಸರಿಯಾದ ಅರ್ಥವಾಗಬೇಕಾದರೆ ಅವರ ಪರಿಚಯವಿರುವುದು ಆವಶ್ಯಕ.

ಕುಮಾರನೆಂದು ಹೇಳಲ್ಪಟ್ಟವನು ನಮ್ಮ ಕಥಾನಾಯಕ; ಶ್ರೀಮಂತ ನಾನಾಸಾಹೇಬ ಪೇಶವೆ; ಎರಡನೆಯ ಬಾಜೀರಾಯನ ಎರಡನೆಯ ದತ್ತಪುತ್ರನು. ಆನಂದಮಿಶ್ರ ಠಾಕೂರನು ಸಂನ್ಯಾಸಿ, ವೇದವೇದಾಂಗಗಳಲ್ಲಿಯೂ ಫಲಜ್ಯೋತಿಷ್ಯದಲ್ಲಿಯೂ ನಿಷ್ಣಾತನು; ಆತನು ನಾನಾಸಾಹೇಬನ ಗುರು. ಆ ಶಿವಾಲಯವು ಆತನ ಆವಾಸ. ಇವರಿಬ್ಬರ ದರ್ಶನಕ್ಕಾಗಿಯೂ ಆಪ್ತಾಲೋಚನೆಗಾಗಿಯೂ ಇನ್ನಿಬ್ಬರು ಮುಹಮ್ಮದೀಯರು ಬಂದಿರುವರು. ಅವರಲ್ಲಿ ಒಬ್ಬನು ತರುಣನು. ಸುಸಂಘಟಿತವಾದ ಅವಯವಗಳೂ ಶುಭ್ರವಾದ ಮುಖದಲ್ಲಿಯ ಅಚ್ಚ ಕಪ್ಪಾದ ಗಡ್ಡಮೀಶೆಗಳೂ ಆತನು ಸುಂದರಾಂಗನೆಂದು ಹೇಳುತ್ತಿದ್ದುವು. ಸೂಕ್ಷ್ಮವಾದ ರೇಶಿಮೆಯ ಉಡುಗೆತೊಡುಗೆಗಳೂ ಬಂಗಾರದ ಜರಿಯ ಶಿರೋಭೂಷಣವೂ ಹಿಂದೆ ಅಲೆಯುಬಿಟ್ಟ ಅದರ ಸೆರಗೂ ಪಂಜಿನ ಬೆಳಕಿನಲ್ಲಿ ತಳತಳಿಸಿ ಹೊಳೆದು ಆತನು ಶ್ರೀಮಂತನೆಂದು ಸೂಚಿಸುತ್ತಿದ್ದುವು. ಆತನು ಶ್ರೀಮಂತ ನಾನಾಸಾಹೇಬನ ಬಹುಕಾಲದ ಅನುಚರ; ಹಿತಾಕಾಂಕ್ಷಿ; ಮಂತ್ರಿ. ಅಜೀಮುಲ್ಲಾಖಾನನೆಂದು ಆತನ ಹೆಸರು. ಇನ್ನೊಬ್ಬನು ನಮಗೆ ಅಪರಿಚಿತನು. ಐವತ್ತೈದಕ್ಕೆ ಮಿಕ್ಕು ಆತನ ವಯಸ್ಸಿರಬಹುದು. ಸ್ಥೂಲದೇಹಿಯಾಗಿದ್ದರೂ ಪ್ರತಿ ಅವಯವವೂ ಪ್ರಮಾಣಾನುರೂಪವಾಗಿ ಬಳೆದು ಸುದೃಢವಾಗಿದ್ದುದರಿಂದ ವಿರೂಪನಾಗಿರಲಿಲ್ಲ. ಆತನೂ ಮುಹಮ್ಮದೀಯನು. ಆದರೆ ಭಾರತೀಯ ಮುಹಮ್ಮದೀಯರ ಹಾಗೆ ಆತನ ಮುಖಲಕ್ಷಣವಿರಲಿಲ್ಲ. ಉಡುಗೆತೊಡುಗೆಗಳೂ ತುಸ ಭಿನ್ನತರದವು. ಅಜೀಮುಲ್ಲಾಖಾನನು ಈತನು ರಶಿಯದ ದರ್ಬಾರಿನ ಗುಪ್ತಚಾರನೆಂದು ಪರಿಚಯ ಮಾಡಿಕೊಟ್ಟನು.

ಎಲ್ಲರೂ ಸಾವಕಾಶವಾಗಿ ಮುಂದೆ ಸಾಗಿ ಗಂಗಾನದಿಯ ಸೋಪಾನಕ್ಕೆ ಮುಟ್ಟಿದರು. ಆನಂದಮಿಶ್ರನು ಅತಿಥಿಗಳನ್ನು ಕುರಿತು ಉಪಾಹಾರದ ಮಾತೆತ್ತಲು "ತಾವಿಬ್ಬರೂ ಒಂದೇ ಗಳಿಗೆ ಮೊದಲು ಕಾನಪುರದಲ್ಲಿ ಊಟಮಾಡಿ ಬಂದಿರುವುದರಿಂದ ತಮಗಾಗಿ ಶ್ರಮಪಡುವ ಕಾರಣವಿಲ್ಲ. ನಿಮ್ಮ ಉಪಾಹಾರವು ಆಗಿರದಿದ್ದರೆ ಅದ ತರುವಾಯವೇ ಮಾತಾಡುವ" ಎಂದರು. ಆನಂದಮಿಶ್ರನು "ನಮಗಿಂದು ಏಕಾದಶಿ; ನಿರಾಹಾರ; ಪಾರ್ವತೀಪತಿಯು ಪಾದತೀರ್ಥದ ಹೊರತು ಇನ್ನೇನನ್ನೂ ಗ್ರಹಿಸುವುದಿಲ್ಲ" ಎಂದನು.

**ಗು. ಚಾ:**-ಸರಿ ಸರಿ. ಕುಮಾರಸಾಹೇಬರೂ ಎಂದಿನಿಂದ ವ್ರತೋಪವಾಸಗಳನ್ನು ಕಲಿತರು? ಹಾ! ಮರೆತೆ. ಅವರು ಈಗ ಕೆಲವು ದಿನಗಳಿಂದಲೂ ತೀರ್ಥಯಾತ್ರೆಗಾಗಿ ಊರೂರು ತಿರುಗುತ್ತಿದ್ದರೆಂದು ಕೇಳಿದ್ದೇನೆ.

**ಕುಮಾರ:**—ಹಿಂದುಮಹಮ್ಮದೀಯರಿಬ್ಬರೂ ಸೇರಿ ಒಂದೇ ಉದ್ದೇಶದಿಂದ ಕಲಕತ್ತೆಯಿಂದ ಪೇಶಾವರದ ವರೆಗಿನ ಹಲವು ಪುಣ್ಯಕ್ಷೇತ್ರಗಳಲ್ಲಿ ಸಂಚರಿಸಿ ಬಂದೆವು. ಅದರ ಫಲವನ್ನು ಮಾತ್ರ ಭಗವಂತನು ಯಾವರೀತಿ ಕರುಣಿಸುವನೋ ತಿಳಿಯದು.

**ಆನಂದಮಿಶ್ರ:**—ಸತ್ಕರ್ಮಕ್ಕೆ ಸತ್ಫಲವು ನಿಶ್ಚಿತವಾದುದು. ಭಗವಂತನ ರಾಜ್ಯದಲ್ಲಿ ಅನ್ಯಾಯವಿಲ್ಲ; ಪಕ್ಷಪಾತವಿಲ್ಲ; ಧರ್ಮರಕ್ಷಣೆಯು ಭಗವಂತನ ಕರ್ತವ್ಯ; ಆ ಕರ್ತವ್ಯಕ್ಕಾಗಿ ಯತ್ನಿಸುವವರನ್ನು ಆತನು ಎಂದೂ ಕೈಬಿಡನು. "ಯತೋ ಧರ್ಮಸ್ತತೋ ಜಯಃ"

**ಅಜೀಮುಲ್ಲಾ:**—ಠಾಕೂರ ಸಾಹೇಬ, ತಮ್ಮ ಜ್ಯೋತಿಷ್ಯವು ಈ ವಿಷಯದಲ್ಲಿ ಏನು ಹೇಳುತ್ತಿದೆ? ಮೊನ್ನೆ ಕಾನಪುರದಲ್ಲಿ ಒಬ್ಬ ಮೌಲ್ವಿಯು ರಮಲ ಹೇಳಿದ್ದಾನೆ. ಸದ್ಯದಲ್ಲಿಯೇ ಈ ಧರ್ಮಬಾಹಿರರು ದೇಶಬಿಟ್ಟು ಓಡಿ ಹೋಗುವರಂತೆ.

**ಆನಂದಮಿಶ್ರ:**— ಖಾನಸಾಹೇಬ, ನಮ್ಮ ಗಣಿತವು ಹಿಂದೆ ಎಂದೂ ತಪ್ಪಾಗಿಲ್ಲ. ಒಂದು ನೂರು ವರ್ಷ ಕಾಲಕ್ಕಿಂತ ಹೆಚ್ಚಿಗೆ ಒಂದು ಗಳಿಗೆಯೂ ಅವರು ಈ ದೇಶದಲ್ಲಿ ನಿಲ್ಲಲಾರರು. ೧೭೫೭ ನೆಯ ಇಸವಿಯ ಜೂನ್ ತಿಂಗಳ ೨೩ ನೆಯ ತಾರೀಖಿಗೆ ಪ್ಲಾಸಿಯ ಕಾಳಗವಾಯಿತು. ಅಂದಿನಿಂದ ಕಂಪನಿ ಸರಕಾರವು ಈ ದೇಶದಲ್ಲಿ ಕಾಲೂರಿತು. ಬರುವ ಜೂನ್ ತಿಂಗಳಿಗೆ ಒಂದು ನೂರು ವರ್ಷಗಳು ತುಂಬುವುವು.

**ಗುಪ್ತಚಾರ:**—ನಾನು ಹಿಂದುಸ್ಥಾನದ ಇತಿಹಾಸವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದೇನೆ. ರಾಮದಾಸ ಸ್ವಾಮಿಗಳು ಶಿವಾಜಿ ಮಹಾರಾಜನಿಂದ ಮಹಾರಾಷ್ಟ್ರ ರಾಜ್ಯವನ್ನು ಸ್ಥಾಪಿಸಿದರು. ವಿದ್ಯಾರಣ್ಯ ಸ್ವಾಮಿಗಳು ವಿಜಯ ನಗರದ ಸಾಮ್ರಾಜ್ಯ ಸ್ಥಾಪನೆಗೆ ಮೂಲಕಾರಣವಾದರು. ನಾನು ಮಹಮ್ಮದೀಯನಾಗಿ ನಮ್ಮ ಹಗೆಗಳನ್ನು ಹೊಗಳುವುದೇಕೆಂದು ಆಲೋಚಿಸಕೂಡದು ಆಯಾ ವ್ಯಕ್ತಿಗಳು ನಮಗೆ ಹಗೆಗಳಾಗಿದ್ದರೂ ಅವರಲ್ಲಿದ್ದ ಶೌರ್ಯವೀರ್ಯಗಳೂ ಕರ್ತೃತ್ವಶಕ್ತಿಯೂ ನಮಗೆ ವೈರಿಗಳಲ್ಲ. ತಾವು ಈ ಶ್ರೀಮಂತರ ಗುರುಗಳು. ತಮ್ಮ ಉಪದೇಶ ಆಶೀರ್ವಾದಗಳ ಪ್ರಭಾವದಿಂದ ಕುಮಾರಸಾಹೇಬರು ಈ ವಿಧರ್ಮಿಯರನ್ನು ಹೊಡೆದೋಡಿಸಿ ಧನ್ಯರಾಗಲಿ. ಭಾರತಮಾತೆಯು ಸ್ವತಂತ್ರಳಾಗಲಿ.

**ಆನಂದಮಿಶ್ರ:**—ಭಗವಂತನ ಇಚ್ಛೆಯಿದ್ದಂತೆ ಆದೀತು. ನಾವು ಮಾಡುವುದನ್ನು ಮಾಡಬೇಕು.

**ಅಜೀಮುಲ್ಲಾ:**—ನಮ್ಮ ದೇಶಬಾಂಧವರೆಲ್ಲರೂ ಒಮ್ಮನಸ್ಸಿನಿಂದ ಮುಂದೆ ಬಂದರೆ, ಹಿಂದು ಮಹಮ್ಮದೀಯರೆಂಬ ಭೇದಭಾವವನ್ನು ಮರೆತು ಹೆಗಲಿಗೆ ಹೆಗಲು ಹತ್ತಿಸಿ ಕೆಲಸಮಾಡಿದರೆ, ಮೂರೇ ದಿನಗಳಲ್ಲಿ ಈ ಕಂಪನಿಯವರು ಸುದ್ದಿಯಿಲ್ಲದೆ ಹಡಗು ಹತ್ತುವರು. ಇವರು ನಿಜವಾಗಿ ವೀರರಲ್ಲ. ರಶಿಯದ ಝಾರರೊಡನೆ ಹೂಡಿದ ಯುದ್ಧದಲ್ಲಿ ಇವರು ಏನೇನು ಶತಕೃತ್ಯ ಮಾಡಿದರೆಂಬುದನ್ನು ನಾನು ಮೊನ್ನೆ ಇಂಗ್ಲಂಡಿನಿಂದ ತಿರುಗಿ ಬರುವಾಗ ತಿಳಿದುಕೊಂಡು ಬಂದಿರುವೆನು. ಸೆಬಾಸ್ಟೆಪೂಲದ ಕಾಳೆಗದಲ್ಲಿ ಇಂಗ್ಲಿಷರೂ ಫ್ರೆಂಚರೂ ಸದ್ದಿಲ್ಲದೆ ಓಡಿಹೋದರು.

**ಗುಪ್ತಚಾರ:**—ನಿಮ್ಮವರೇ ನಿಮಗೆ ಹಗೆಗಳಾಗಿದ್ದಾರೆ. ಸಮಯವು ಒದಗಿಬಂದರೆ ಇಂಗ್ಲಿಷರ ಹೇಡಿತನವನ್ನು ನೀವೂ ನೋಡಬಹುದು. ನಿಮ್ಮ ದೇಶೀಯ ಸೈನಿಕರೇ ಅವರಿಗೆ ರಾಜ್ಯವನ್ನು ಗೆದ್ದುಕೊಟ್ಟರು. ಇನ್ನು ಮುಂದೆಯೂ ಅವರೇ ಕೊಡಲಿಯ ಕಾವಿನಂತೆ ತಮ್ಮ ಕುಲಕ್ಕೆ ತಾವೇ ಮೃತ್ಯುವಾಗಿ ಪರಿಣಮಿಸದಿದ್ದರೆ ಸಾಕು.

**ನಾನಾಸಾಹೇಬ:**—ನಮ್ಮೊಳಗಿನ ರಾಜತಂತ್ರಗಳ ಒಡಕು, ಧರ್ಮದ ತೊಡಕು, ಸ್ವಾರ್ಥದ ಕಲಕುಮಲಕು ಇವು ಅವರಿಗೆ ಅನುಕೂಲವಾದುವು.

ಉಂಡಮನೆಯ ಗಳ ಎಣಿಸುವಂತಹ ಹಲವರು ಪಾಷಂಡಿಗಳೂ ಅವರನ್ನು ಕೂಡಿದರು. ತಕ್ಕಡಿಯನ್ನು ಹಿಡಿದುಕೊಂಡು ಇಲ್ಲಿಗೆ ಬಂದ ಬಣಜಿಗರು ರಾಜ್ಯಸೂತ್ರವನ್ನು ಕೈಕೊಂಡು ರಾಜಾಧಿರಾಜರಾಗಿ ಮೆರೆಯುವುದಕ್ಕೆ ಇವೇ ಮೂಲ ಕಾರಣಗಳಾದುವು.

**ಗುಪ್ತಚಾರ:**—ಮಹಮ್ಮದೀಯರು ನಿಮಗೆ ವಿಧರ್ಮೀಯರಾದರೂ ವಿದೇಶೀಯರಲ್ಲ. ಅವರು ಈ ದೇಶದಲ್ಲಿ ವಾಸಮಾಡಿ ಭಾರತವಾಸಿಗಳಾಗಿ ನಿಮ್ಮ ಬಂಧುಗಳಾಗಿದ್ದಾರೆ. ಹಿಂದು ಮಹಮ್ಮದೀಯರಿಬ್ಬರೂ ತಮಗೆ ಸಾಮಾನ್ಯರಾದ ವೈರಿಗಳನ್ನು ಇದಿರಿಸುವಾಗ ತಮ್ಮ ತಮ್ಮೊಳಗಿನ ವೈಮನಸ್ಯವನ್ನು ಬದಿಗಿಡುವುದು ಇಬ್ಬರಿಗೂ ಹಿತಕರವು. ಇಬ್ಬರಿಗೂ ಆವಶ್ಯಕವು.

**ಆನಂದಮಿಶ್ರ:**—ನಮ್ಮ ಸಾಮಾನ್ಯ ಜನತೆಯು ತನಗೊದಗಿರುವ ಆಪತ್ತನ್ನು ಅರಿಯಲಾರದಷ್ಟು ಅಜ್ಞಾನಾಂಧಕಾರದಲ್ಲಿ ಮುಳುಗಿರುವುದು. ಪುಣ್ಯಭೂಮಿ ಭರತಖಂಡದ ಅನ್ನನೀರುಗಳ ಗುಣದಿಂದ ಅವರೆಲ್ಲರೂ ಒಂದೇ ಸ್ವಭಾವದವರಾಗಿ ಪರಿಣಮಿಸಿದ್ದಾರೆ. ಅವರಿಗೆ ಕಲಹ ಬೇಡ, ದ್ವೇಷಬೇಡ; ಎಲ್ಲರೂ ಶಾಂತಿಪ್ರಿಯರು. ಯಾರು ಅರಸರಾದರೂ ನಮ್ಮ ದಿನದ ಕಷ್ಟ ಬಿಡುವುದೇ ಎನ್ನುವರು. ವೈಯಕ್ತಿಕ ಜೀವನದ ಗೊಂದಲದಲ್ಲಿ ಜನಾಂಗ ಜೀವನದ ಕಲ್ಪನೆಯು ಅವರಿಗೆ ತಿಳಿಯದಾಗಿದೆ. ವೈಯಕ್ತಿಕ ಹಿತವನ್ನು ಮರೆತು ಜನಾಂಗದ ಹಿತವನ್ನು ಬಯಸುವ ಉದಾರಬುದ್ಧಿಯು ಜನರಲ್ಲಿ ಹೆಚ್ಚಿದಂತೆ ಆ ಜನಾಂಗದ ಶಕ್ತಿ ಹೆಚ್ಚುವುದು ನಮ್ಮ ಸಾಮಾನ್ಯಜನತೆಯಲ್ಲಿ ಇನ್ನೂ ಈ ಕಲ್ಪನೆ ಹುಟ್ಟಿಯೇ ಇಲ್ಲ.

**ಗುಪ್ತಚಾರ:**—ಸಾಮಾನ್ಯಜನತೆಯು ಹೀಗೆ ತಟಸ್ಥವಾಗಿದ್ದರೂ ಇರಲಿ. ಭರತಖಂಡದ ಸೇನಾಬಲವು ಅಷ್ಟು ಸಾಮಾನ್ಯವಾಗಿಲ್ಲ ಇಂತಹ ಕೋಟಿ ಕೋಟಿ ಜನವಸತಿಯ ದೇಶದಲ್ಲಿ ಕೇವಲ ೨೩ ಸಾವಿರ ಬ್ರಿಟಿಷ ಸೈನಿಕರಿರುವರು. ಸಾಮಾನ್ಯ ಜನತೆಯನ್ನು ಬಿಟ್ಟರೂ ಒಂದಕ್ಕೆ ಇಪ್ಪತ್ತರಷ್ಟು ಪ್ರಮಾಣದಲ್ಲಿರುವ ಏತದ್ದೇಶೀಯ ಸೈನಿಕರೆಲ್ಲರೂ ಒಂದಾಗಿ ಒಮ್ಮನಸ್ಸಿನಿಂದ ಎದ್ದು ನಿಂತರೆ ಪರದಾಸ್ಯಪಂಕದಲ್ಲಿ ಉರುಳಾಡುತ್ತಿರುವ ಭರತಖಂಡದ ಭಾಗ್ಯಲಕ್ಷ್ಮಿಯು ನಾಳೆಯೇ ಸ್ವಾತಂತ್ರ್ಯಸುಖವನ್ನು ಅನುಭವಿಸುವಳು.

**ಅಜೀಮುಲ್ಲಾ ಖಾನ:**—ನಿಜವಾಗಿ ಹೇಳಿದಿರಿ ನಾವೂ ಅದನ್ನೇ ಆಲೋಚಿಸಿರುವೆವು. ಭಾರತೀಯ ಸೇನಾಬಲವನ್ನು ನಮ್ಮ ವಶ ಮಾಡಿಕೊಂಡ ಹೊರತು ಅನ್ಯ-ಉಪಾಯವಿಲ್ಲ. ನೂತನವಾಗಿ ಬ್ರಿಟಿಷರು ಪ್ರಚಾರದಲ್ಲಿ ತಂದಿರುವ ಜನರಲ್ ಸರ್ವೀಸ್ ಆಕ್ಟಿನಿಂದ ಸೈನಿಕರಲ್ಲಿ ಅಸಂತೋಷವು ಹೆಚ್ಚಿದೆ. ಅವರ ರಾಜನಿಷ್ಠೆ ನಷ್ಟಪ್ರಾಯವಾಗಿದೆ. ಈ ಕಾಯಿದೆಯಿಂದ ಪೃಥ್ವಿಯ ಯಾವ ಭಾಗದಲ್ಲಿ ಬ್ರಿಟಿಷರು ಯುದ್ಧವನ್ನು ಹೂಡಿದರೂ ಭಾರತೀಯ ಸೈನಿಕರು ಅಲ್ಲಿಗೆ ಹೋಗಬೇಕಾಗುವುದು. ಧರ್ಮನಿಷ್ಠ ಹಿಂದುಗಳು ಹಡಗಿನಲ್ಲಿ ಕುಳಿತು ಪರಧರ್ಮೀಯರೊಡನೆ ಆಹಾರ ವ್ಯವಹಾರ ಮಾಡಿ ಕುಲಗೆಟ್ಟು ಪತಿತರಾಗಿ ಪರದೇಶಗಳಿಗೆ ಹೋಗಿ ಅಲ್ಲಿ ಯುದ್ಧಮಾಡಿ ಬ್ರಿಟಿಷರಿಗೆ ರಾಜ್ಯವನ್ನು ಗಳಿಸಿಕೊಡಬೇಕಂತೆ. ಅವರು ಭಾರತೀಯರ ವೀರಶ್ರೀಯನ್ನೂ, ಧನ ಧಾನ್ಯಬಲವನ್ನೂ ಉಪಯೋಗಿಸಿಕೊಂಡು ಸಾಮ್ರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ತೊಡಗಿರುವರು.

**ಗುಪ್ತಚಾರ:**—ನಾನೂ ಹಲವು ಸೇನಾನಿವಾಸಗಳಲ್ಲಿ ಸಂಚರಿಸಿ ಬಂದಿರುವೆನು. ಉಗ್ರವಾದ ಸೈನ್ಯದ ಶಾಸನಗಳಿಂದಲೂ ಅಧಿಕಾರಿಗಳ ನಿಷ್ಕರುಣೆಯ ಹೇಯವಾದ ನಡತೆಯಿಂದಲೂ ದೇಶೀಯ ಸೈನಿಕರೂ ಅಧಿಕಾರಿಗಳೂ ಅತಿಶಯ ಅಸಂತುಷ್ಟರಾಗಿರುವರು; ಉದ್ವಿಗ್ನರಾಗಿರುವರು. ತುಬಾಕಿಯನ್ನು ಸರಿಯಾಗಿ ಹಿಡಿಯಲು ಕೂಡ ಬಾರದ ಗೌರವರ್ಣದ ಸಾಹೇಬರು, ಹಲವು ಕಾಳಗಗಳಲ್ಲಿ ತೋಫಿನ ಗುಂಡಿಗೆ ಎದೆಗೊಟ್ಟು ಕಾದಿ ಜಯಶಾಲಿಗಳಾಗಿ ಬ್ರಿಟಿಷ ರಾಜ್ಯಸ್ಥಾಪನೆಗೆ ಸಹಾಯ ಮಾಡಿದ ಸೈನಿಕ ಸೇನಾಧಿಕಾರಿಗಳ ಎದೆಯ ಮೇಲೆ ಲೆಫ್ಟಿನೆಂಟ್, ಕರ್ನಲ್ ಮುಂತಾದ ಅಧಿಕಾರಿಗಳಾಗಿ ಬಂದು ನಿಲ್ಲುವರು. ಮತ್ತು ಮಾತು ಮಾತಿಗೆ " ಡ್ಯಾಮ್, ನಿಗ್ರೋ " ಎಂದು ತುಚ್ಛೀಕರಿಸಿ ಮಾತಾಡುವರು. ದೇಶೀಯ ಸೈನಿಕರ ಗುಣಕ್ಕೆ ಆದರವಿಲ್ಲ; ಶ್ರಮಕ್ಕೆ ಬೆಲೆಯಿಲ್ಲ; ಸಾಹಸಕ್ಕೆ ಪ್ರತಿಫಲವಿಲ್ಲ; ಅವರ ಯೋಗ್ಯತೆಗೆ ತಕ್ಕ ಸ್ಥಾನಮಾನಗಳಿಲ್ಲ. ಇವಕ್ಕೆಲ್ಲಾ ವರ್ಣಭೇದವೊಂದೇ ಕಾರಣ. ಆದುದರಿಂದ ಪ್ರತಿ ಸೇನಾನಿವಾಸವೂ ಅಸಂತೋಷ ಉದ್ವೇಗಗಳ ಆಗರವಾಗಿ ಪರಿಣಮಿಸಿದೆ.

**ಆನಂದಮಿಶ್ರ:**—ಇನ್ನೂ ಅನೇಕ ಕಾರಣಗಳಿಂದ ಬ್ರಿಟಿಷರು ಏತದ್ದೇಶೀಯರ ಪ್ರೀತಿ ವಿಶ್ವಾಸಗಳನ್ನು ಕಳೆದುಕೊಂಡಿರುವರು. ಅಯೋಧ್ಯಾ ಪ್ರಾಂತವನ್ನು ಕೈವಶಮಾಡಿಕೊಂಡು, ಮೊಗಲ್ ಬಾದಷಹರ ಅಧಿಕಾರ ವೈಭವಗಳನ್ನು ನಷ್ಟಗೊಳಿಸಿ ಮಹಮ್ಮದೀಯರ ವೈರವನ್ನು ಕಟ್ಟಿಕೊಂಡರು. ಸಾತಾರೆ ಝಾಂಸಿ ಪಂಜಾಬಗಳ ರಾಜ್ಯಗಳನ್ನು ಅಪಹರಿಸಿದುದರಿಂದ ಜನತೆಯ ಮತ್ತು ರಾಜಕುಟುಂಬಗಳ ವಿಶ್ವಾಸವು ಹಾರಿಹೋಗಿರುವುದು. ಬ್ರಿಟಿಷರಿಗೂ ಏತದ್ದೇಶೀಯರ ಮೇಲೆ ಎಳ್ಳಷ್ಟೂ ನಂಬುಗೆಯಿಲ್ಲವಾಗಿದೆ. **ಈ ಅವಿಶ್ವಾಸವನ್ನೇ ನಾವು ಮುಖ್ಯ ಆಧಾರವಾಗಿ ಅವಲಂಬಿಸಬೇಕು.**

ಆನಂದಮಿಶ್ರನ ಮಾತುಗಳನ್ನು ಕೇಳಿ ನಾನಾಸಾಹೇಬನು-ವಿಷಣ್ಣವದನನಾಗಿ ಕುಗ್ಗಿದ ದನಿಯಿಂದ "ಗುರುದೇವಾ, ತಾವು ಹೇಳುವ ಮಾತು ಮರಾಟರಿಗೆ ಇನ್ನೂ ಗೊತ್ತಾಗಿಲ್ಲ. ಮರಾಠಾ ವೀರರು ರಾಜ್ಯಶ್ರೀಯೊಡನೆ ವೀರಶ್ರೀಯನ್ನೂ ಕ್ಷತ್ರಿಯ ತೇಜಸ್ಸನ್ನೂ ಕಳೆದುಕೊಂಡು ಹತವೀರ್ಯರಾಗಿರುವರು. ಅವರ ಮನಸ್ಸು ಅಭಿಮಾನಶೂನ್ಯ; ಬುದ್ಧಿ ವಿಚಾರಶೂನ್ಯ; ಶರೀರವು ಶಕ್ತಿಶೂನ್ಯ" ಎಂದನು.

**ಅಜೀಮುಲ್ಲಾ ಖಾನ:**—ಹಾಗಲ್ಲ, ಕಮಾರಸಾಹೇಬ; ಮನುಷ್ಯನ ಸ್ಥಿತಿಯೇ ಹಾಗಿರುವುದು. ಸ್ವತಂತ್ರಜೀವನದ ವಾತಾವರಣದಲ್ಲಿರುವವರು ಸ್ವಾತಂತ್ರ್ಯಪ್ರಿಯರಾಗುವರು. ಪಂಜರದಲ್ಲಿ ಬೆಳೆದ ಹಕ್ಕಿಗೆ ಪಂಜರವಾಸವೇ ಸುಖವೆನಿಸುವುದು. ನಾನು ಮಹಮ್ಮದೀಯ ಸೈನಿಕರ ಮನಸ್ಸನ್ನು ಚೆನ್ನಾಗಿ ಪರೀಕ್ಷಿಸಿರುವೆನು. ಅವರೆಲ್ಲರೂ ಮೊಗಲ್ ಸಾಮ್ರಾಜ್ಯದ ವಿನಾಶದಿಂದಲೂ ಅಯೋಧ್ಯೆಯ ರಾಜ್ಯದ ದುರವಸ್ಥೆಯಿಂದಲೂ ಉದ್ವಿಗ್ನರಾಗಿರುವರು. ಮೊಗಲ್ ಸಾಮ್ರಾಜ್ಯದ ಪುನರುದ್ಧಾರವಾಗುವುದೆಂದರೆ ಅಖಿಲ ಮಹಮ್ಮದೀಯರೂ ಒಂದಾಗಿ ಬ್ರಿಟಿಷರ ಮೇಲೆ ತಿರುಗಿ ಬೀಳುವರು.

**ಕುಮಾರ:**—ಸರಿ, ಆ ವೃದ್ಧ-ಗತಪ್ರಾಣ-ಬಹಾದ್ದೂರಷಹನಿಗಾಗಿ ನಾವು ಯುದ್ಧವನ್ನು ಹೂಡಬೇಕು. ಅಯೋಧ್ಯೆಯ ರಾಜ್ಯವೂ ಆ ನವಾಬನಿಗೆ ಬೇಕೇ ಬೇಕು.

**ಗುಪ್ತಚಾರ:**—(ತನ್ನ ಜೇಬಿನಿಂದ ಒಂದು ಕಾಗದವನ್ನು ಹೊರಗೆ ತೆಗೆದು ನೆಲದ ಮೇಲೆ ಬಿಡಿಸಿಟ್ಟು ಕೈಯಲ್ಲಿ ಪಂಜನ್ನು ಹಿಡಿದು,) ಇಲ್ಲಿ

ನೋಡಿರಿ! ನಿಮ್ಮ ನಿಮ್ಮೊಳಗೆ ವೈಮನಸ್ಯವು ಬೇಡ. ಹಿಂದು ಮಹಮ್ಮದೀಯರೊಳಗೆ ಐಕ್ಯವಿಲ್ಲದುದರಿಂದಲೇ ಭರತಭೂಮಿಯ ಅವಸ್ಥೆ ಇಷ್ಟು ಕರುಣಾಜನಕವಾಗಿ ಪರಿಣಮಿಸಿದೆ. ನರ್ಮದಾನದಿಯ ದಕ್ಷಿಣಕ್ಕೆ ಕನ್ಯಾಕುಮಾರಿಯವರೆಗೆ ಹಬ್ಬಿರುವ ವಿಶಾಲವಾದ ಭೂಭಾಗವನ್ನು ಈ ನಕಾಶೆಯಲ್ಲಿ ಹಸುರು ಬಣ್ಣದಿಂದ ತೋರಿಸಿದೆ; ಈ ಅಖಿಲ ಭೂಭಾಗಕ್ಕೆ ತಾವು ಸ್ವತಂತ್ರ ರಾಜರಾಗಬೇಕು. ತಮ್ಮ ರಾಜಧಾನಿ ಪುಣೆ. ಆಗ್ರಾದಿಂದ ಪೂರ್ವಕ್ಕೆ ಬ್ರಹ್ಮದೇಶದವರೆಗೆ ಹಬ್ಬಿರುವ ಪ್ರದೇಶವು ಹಳದಿಯಲ್ಲಿ ಚಿತ್ರಿತವಾಗಿದ್ದು ಅಯೋಧ್ಯೆಯ ನವಾಬನ ರಾಜ್ಯವನ್ನು ಸೂಚಿಸುವುದು. ಲಖನೌ ನಗರವು ಆತನ ರಾಜಧಾನಿ. ಭರತಖಂಡದ ಮಿಕ್ಕುಳಿದ ಭಾಗವನ್ನು ನೀಲೀ ಬಣ್ಣದಿಂದ ರಂಜಿಸಿದೆ. ಇದು ಉಳಿದೆರಡು ಭಾಗಗಳಿಗಿಂತಲೂ ಚಿಕ್ಕದಾಗಿದ್ದು ಮೊಗಲ್ ಬಾದಷಹನು ಅದರ ಒಡೆಯನಾಗುವನು. ಆದರೆ ಇನ್ನೊಂದು ಮಾತಿದೆ. ಪುಣೆಯ ಮಹಾರಾಷ್ಟ್ರಾಧಿಪತಿಗಳೂ, ಲಖನೌವಿನ ಮಹಮ್ಮದೀಯ ಸುಭೇದಾರರೂ ತಮ್ಮ ತಮ್ಮ ರಾಜ್ಯಗಳಲ್ಲಿದ್ದ ಚಿಕ್ಕ ಪುಟ್ಟ ರಾಜರ ಹಿತವನ್ನು ನೋಡಿಕೊಂಡು ಅವರಿಂದ ಕಾಣಿಕೆಗಳನ್ನು ಪಡೆದು ಸ್ವತಂತ್ರ ರಾಜರಾಗಿರಬಹುದು. ಆದರೆ ಅವರು ದಿಲ್ಲಿಯ ಬಾದಷಹನ ನಾಮಮಾತ್ರ ಅಧಿಕಾರವನ್ನು ಒಪ್ಪಿಕೊಂಡಿರಬೇಕು. ಮತ್ತು ಈ ಸಾರ್ವಭೌಮಪದದ ಕುರುಹೆಂದು ಪ್ರತಿವರ್ಷ ಕೆಲವು ಆನೆ ಕುದುರೆಗಳನ್ನೂ ಕೆಲ ಕಾಣಿಕೆಯನ್ನೂ ಕೊಡಬೇಕು.

ನಾನಾಸಾಹೇಬನು ಮರುಮಾತಾಡಲಿಲ್ಲ. ನೀರವವಾಗಿ ಕುಳಿತು ಗಂಗಾನದಿಯನ್ನು ನೋಡಿದನು.

**ಆನಂದಮಿಶ್ರ:**—ಮಹಾರಾಷ್ಟ್ರ-ರಾಜ್ಯಲಕ್ಷ್ಮಿಯು ದಿಲ್ಲೀಶ್ವರನ ಅನುಗೃಹೀತ ದಾಸಿಯೆಂಬುದನ್ನು ಒಪ್ಪಿಕೊಳ್ಳಲು ಕುಮಾರಸಾಹೇಬನು ಅನುಮಾನಪಡುವಂತಿದೆ.

**ಗುಪ್ತಚಾರ:**—ಪ್ರಸ್ತುತದ ಪರಿಸ್ಥಿತಿಯೇ ಹಾಗಿದೆ. ಭರತಖಂಡದಲ್ಲಿ ಬಹುಕಾಲದ ಮೊದಲೇ ಸ್ಥಾಪಿತವಾದ ಮೊಗಲ್ ಸಾಮ್ರಾಜ್ಯವು ಬ್ರಿಟಿಷರ ತಂತ್ರಗಳಿಂದ ನಷ್ಟಪ್ರಾಯವಾಗಿದ್ದರೂ ಜನತೆಯ ಮನಸ್ಸಿನಲ್ಲಿ ಅದರ ವಿಷಯದಲ್ಲಿ ಉಂಟಾಗಿರುವ ಆದರ ಅಭಿಮಾನಗಳು ಇನ್ನೂ ನಷ್ಟ

ವಾಗಿಲ್ಲ; ಬಹುಜನ ಸಮಾಜದ ಒಲವನ್ನು ಅನುಲಕ್ಷಿಸುವುದು ರಾಜಕರಣ ಪಟುಗಳ ಅವಶ್ಯ ಕರ್ತವ್ಯವು.

**ಅಜೀಮುಲ್ಲಾ ಖಾನ:**—ಕುಮಾರಸಾಹೇಬ, ನಾನು ಮುಹಮ್ಮದೀಯರ ಅಭಿಮಾನದಿಂದ ಹೀಗೆ ಮಾತಾಡುವೆನೆಂದು ಭಾವಿಸಕೂಡದು. ತಾವು ನನ್ನನ್ನು ಬಾಲ್ಯದಿಂದ ಬಲ್ಲಿರಿ. ನಾನು ತಮ್ಮ ಅಭಿಮಾನದಿಂದಲೇ ಈ ಮಾತನ್ನು ಹೇಳುವೆನು. ತಮ್ಮ ಹಿತಕ್ಕಾಗಿಯೇ ತಾವು ಈ ಮಾತನ್ನು ಸಮ್ಮತಿಸಬೇಕು ಇವರು (ಗುಪ್ತಚರ) ಅಖಿಲ ಸೇನಾನಿವಾಸಗಳಲ್ಲಿ ಸಂಚರಿಸಿ ಬಹುಜನ ರಾಜಕರಣಪಟುಗಳ ಅನುಮತಿಯಿಂದ ಈ ಯೋಜನೆಯನ್ನು ಸಿದ್ಧಪಡಿಸಿರುವರು. ಇದರಿಂದ ಹಿಂದು ಮುಹಮ್ಮದೀಯರಿಬ್ಬರಿಗೂ ಸಮಾಧಾನವಾಗುವುದು ಇಬ್ಬರ ಹಿತವೂ ಸಾಧಿಸುವುದು.

**ಆನಂದಮಿಶ್ರ:**—ಒಂದು ಕಾಲದಲ್ಲಿ ಮುಹಮ್ಮದೀಯರು ಭರತಖಂಡದಲ್ಲಿ ಸಾಮ್ರಾಜ್ಯಾಧಿಪತ್ಯವನ್ನು ಪಡೆದರು. ಇನ್ನೊಂದು ಕಾಲದಲ್ಲಿ ಮಹಾರಾಷ್ಟ್ರೀಯರು ಅವರನ್ನು ಮೀರಿ ರಾಜಾಧಿರಾಜರಾಗಿ ಮೆರೆದರು. ಮೊದಲು ದೇಶದ ಹಿತ, ಆ ಬಳಿಕ ವ್ಯಕ್ತಿಯ ಹಿತ. ನಾವಿಂದು ದೇಶದ ಉದ್ಧಾರಕ್ಕಾಗಿ ಯತ್ನಿಸಬೇಕಾಗಿದೆ. ಒಂದು ಧರ್ಮದವರ, ಒಬ್ಬ ಅರಸನ ಹಿತಕ್ಕಾಗಿ ಅಲ್ಲ ಆದುದರಿಂದ ಈ ವಾದವನ್ನು ನಿಲ್ಲಿಸಿ ಮುಂದಿನ ಕಾರ್ಯದ ರೂಪರೇಷೆಯನ್ನು ಗೊತ್ತುಮಾಡಿಕೊಂಡು ಕಾರ್ಯಾರಂಭ ಮಾಡುವ.

**ಅಜೀಮುಲ್ಲಾ ಖಾನ:**—ಅದೂ ಆಗಿದೆ, ಪ್ರತಿಸೇನಾನಿವಾಸದಲ್ಲಿಯೂ ನಮ್ಮ ಅನುಚರರನ್ನು ಗೊತ್ತುಮಾಡಿಕೊಂಡು ಬಂದಿರುವೆವು. ಒಂದೊಂದು ಸೇನಾನಿವಾಸದಲ್ಲಿಯೂ ಮೂವರು ದೇಶೀಯ ಸೇನಾಧಿಕಾರಿಗಳು ನಮ್ಮ ಸಂಘದ ಪತಿಯಿಂದ (ಪರವಾಗಿ) ಕೆಲಸ ಮಾಡಬೇಕೆಂದು ಗೊತ್ತಾಗಿದೆ. ಭರತಭೂಮಿ ಧರ್ಮಭೂಮಿ. ಧರ್ಮನಾಶದ ಭೀತಿಯಿಂದ ನಮ್ಮವರು ಜಾಗ್ರತರಾಗುವಷ್ಟು ಇನ್ನೇತರಿಂದಲೂ ಆಗರು. ಮಹಾಸಾಮ್ರಾಜ್ಯ ಸ್ಥಾಪನೆಮಾಡುವೆವೆಂದರೂ ಅದರಲ್ಲಿ ಅವರಿಗೆ ಅಂತಹ ಅಭಿಮಾನ ಹುಟ್ಟದು. ಇಂತಹ ಸಾಮ್ರಾಜ್ಯಸ್ಥಾಪನೆಯ ವಿಚಾರದಿಂದ ಕೆಲವರ ಮನಸ್ಸಿನಲ್ಲಿ ಉತ್ಸಾಹವುಂಟಾದರೂ ಅವರ ಅಂತಃಕರಣವು ಅಷ್ಟು ಚಲವಿಚಲವಾಗಲಾರದು. ಆದರೆ ಧರ್ಮನಾಶದ ಭೀತಿಯಿಂದ ಎಲ್ಲರೂ ತುಳಿದೆಬ್ಬಿಸಿದ

ಭುಜಂಗನ ಹಾಗೆ ಬುಸುಗುಟ್ಟುತ್ತ ಎದ್ದು ನಿಲ್ಲುವರು. ವಿಧವಾವಿವಾಹದ ಕಾಯದೆ, ಜನರಲ್ ಸರ್ವಿಸ್ ಆಕ್ಟು ಇವುಗಳಿಂದ ಜನತೆಯ ಮತ್ತು ಸೈನಿಕರ ಮನಸ್ಸಿನಲ್ಲಿ ಧರ್ಮನಾಶದ ಭೀತಿಯ ಅಂಕುರವು ಮೊಳೆತಿರುವುದು. ಅದನ್ನೇ ನೀರೆರೆದು ಬೆಳೆಯಿಸಿ ಫಲಿಸುವಂತೆ ಮಾಡಬೇಕು. ಕಲಕತ್ತೆಯಿಂದ ಪೇಶಾವರದ ವರೆಗಿನ ಯಾವತ್ತು ಸೇನಾನಿವಾಸಗಳಲ್ಲಿ ನಮ್ಮವರು ಫಕೀರರಾಗಿ, ಬೈರಾಗಿಗಳಾಗಿ, ಭಿಕ್ಷುಗಳಾಗಿ ಸಂಚರಿಸಿ ಜನಜಾಗ್ರತೆಯನ್ನುಂಟು ಮಾಡಬೇಕು ಸಾತಾರೆಯ ರಂಗೂಬಾಪೂಜಿಯವರಂತಹ ರಾಜತಂತ್ರ ಪ್ರವೀಣರು ದಕ್ಷಿಣದಲ್ಲಿ ಕೆಲಸ ಮಾಡಲು ಒಪ್ಪಿಕೊಂಡಿರುವರು. ತಾತ್ಯಾಟೋಪಿಯವರಂತಹ ರಣಪಟುಗಳು ಸೇನಾನಾಯಕರಾಗಿ ಕಾರ್ಯ ಮಾಡಲು ತುದಿಗಾಲ ಮೇಲೆ ನಿಂತಿರುವರು.

**ಆನಂದಮಿಶ್ರ:**—ನಿಮ್ಮಂತಹ ಕಾರ್ಯಕುಶಲರೂ ಬುದ್ಧಿಶಾಲಿಗಳೂ ಕೆಲಸವನ್ನು ಕೈಕೊಂಡ ಬಳಿಕ ನಾವು ಹೆಚ್ಚಿಗೆ ಆಲೋಚನೆ ಮಾಡಬೇಕಾದ ಆವಶ್ಯಕತೆಯೇ ಉಳಿಯದು. ಆದರೂ ಕಾರ್ಯಕ್ರಮದ ರೂಪರೇಷೆ ಎಲ್ಲರಿಗೂ ಗೊತ್ತಾಗಿರುವುದು ಒಳ್ಳೆಯದೆಂದು ನಾಲ್ಕುಮಾತು ಹೆಚ್ಚಿಗೆ ಕೇಳಬೇಕಾಗಿದೆ. ಒಳರಂಗ ಯುದ್ಧವು ಎಂದು ಪ್ರಾರಂಭವಾಗುವುದು?

**ಅಜೀಮುಲ್ಲಾಖಾನ:**-(೧೮೫೭) ಮೇ ತಿಂಗಳ ೩೦ ನೆಯ ತಾರೀಖಿನ ಮಧ್ಯರಾತ್ರಿಯ ವೇಳೆಗೆ ಸರಿಯಾಗಿ ಅಖಿಲ ಭರತಖಂಡದಲ್ಲಿಯೂ ವಿದ್ರೋಹಾಗ್ನಿಯು ಪ್ರಜ್ವಲಿತವಾಗುವುದು. ಮೇ ತಿಂಗಳ ಬಿಸಿಲಿನ ಸಂತಾಪದಲ್ಲಿ ಯುರೋಪಿಯನ್ ಸೈನಿಕರು ಹುರಿದು ಬೀಳುವರು. ಅದೇ ಕಾಲಕ್ಕೆ ಅವರ ಮೇಲೆ ಲೋಹಾಗ್ನಿಯ ವೃಷ್ಟಿಯನ್ನು ಸುರಿಸಿ ಸುಟ್ಟುಬಿಡಬೇಕು. ಒಡನೆಯೇ ಮಳೆಗಾಲವು ಪ್ರಾರಂಭವಾಗುವುದರಿಂದ ನಮ್ಮವರ ವಿರುದ್ಧ ಯುದ್ಧಮಾಡುವುದಕ್ಕೆ ದೂರದೂರದ ಪ್ರದೇಶಗಳಿಂದ ಸೈನ್ಯವನ್ನು ಒಂದುಗೂಡಿಸುವುದು ಅವರಿಗೆ ಅಸಾಧ್ಯವಾಗುವುದು.

**ಗುಪ್ತಚಾರ:**—ಅಖಿಲ ಭರತಖಂಡದಲ್ಲಿಯೂ, ಏಕಕಾಲಕ್ಕೆ ಯುದ್ಧಾರಂಭವಾಗಬೇಕು. ಒಡನೆಯೇ ಸಾಮ್ರಾಜ್ಯಸ್ಥಾಪನೆಯ ಕಾರ್ಯವೂ ನಡೆಯಲೇಬೇಕು. ಭಾರತೀಯ ಸೈನಿಕರ ಅಭಿಮಾನಕ್ಕೆ ಕಾರಣವಾದ ಸಾಮ್ರಾಜ್ಯಸ್ಥಾಪನೆಯಾದ ಹೊರತು ಎಲ್ಲ ಕಾರ್ಯಗಳು ಏಕಕೇಂದ್ರವಾಗಿ

ನಡೆಯಲಾರವು; ಶಕ್ತಿಯು ಏಕೀಕರಣವಾಗಲಾರದು. ಮೊದಲು ದಿಲ್ಲಿ, ಲಖನೌ, ಪುಣೆ, ಝಾಂಸಿ ಮುಂತಾದ ಕಡೆಗಳಲ್ಲಿ ರಾಜಾಧಿರಾಜರು ವಿರಾಜಿಸಿ ಅವರ ಆಜ್ಞೆಯಂತೆ ಸೈನಿಕರೂ ಜನತೆಯೂ ಕೆಲಸಕ್ಕೆ ತೊಡಗಬೇಕು.

**ಆನಂದಮಿಶ್ರ:**—ನಿರ್ದಿಷ್ಟ ಸಮಯವು ಒದಗುವವರೆಗೂ ಯಾರೂ ಯಾವ ಸಂಗತಿಯನ್ನೂ ಬಹಿರಂಗಪಡಿಸಕೂಡದು. ಎಂತಹ ಆಪತ್ತಿನಲ್ಲಯೂ ಇನ್ನೊಬ್ಬರ ಹೆಸರು ಒಡೆಯಲಾಗದು

ಇದೇ ರೀತಿ ಇನ್ನೂ ಅನೇಕ ಮಾತುಕತೆಗಳು ನಡೆದ ತರುವಾಯ ಪರಸ್ಪರ ಪ್ರೀತಿವಿಶ್ವಾಸಗಳ ಆಣೆ ಭಾಷೆಗಳಾದ ಬಳಿಕ ಎಲ್ಲರೂ ಮುಂದಿನ ಕಾರ್ಯಕ್ರಮದ ಹಾಗು ಪರಿಣಾಮದ ವಿಷಯದಲ್ಲಿ ಆಲೋಚಿಸುತ್ತ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು. ಏಕಾದಶಿಯ ಶೀರ್ಣಶರೀರದ ಚಂದ್ರನು ಮೂಡಲಲ್ಲಿ ಮೂಡಿ ಬಂದು ಧರೆಯನ್ನು ಬೆಳಗತೊಡಗಿದನು. ನಿಶಾಂತ ಯಾಮವು ಸಮೀಪಿಸಿತು ಪಕ್ಷಿಗಳ ಕಲಕಲ ನಿನಾದವು ಪ್ರಾರಂಭವಾಯಿತು.

## ೨. ಉಪಸಂಹಾರ.

ಭರತಖಂಡದ ಗೌರವರಕ್ಷಣೆಗೆ ಸಹಾಯವಾದ ಪರ್ವತೋತ್ತಮ ಹಿಮಾಲಯದ ದಕ್ಷಿಣ ಅಂಚಿನಲ್ಲ ನೇಪಾಳದ ರಾಜ್ಯದ ಮೇರೆಯಲ್ಲಿ ಗಂಗೆಯ ಚಿಕ್ಕದೊಂದು ಶಾಖಾನದಿ ಹರಿದಿರುವುದು. ಅದರ ದಂಡೆಯಲ್ಲಿ ದಿಪಖರಿ ಎಂಬುದೊಂದು ಚಿಕ್ಕ ಹಳ್ಳಿ. ಹತ್ತೆಂಟು ಚಿಕ್ಕ ಕುಟುಂಬಗಳು ವಾಸವಾಗಿ ರುವ ಆ ಹಳ್ಳಿಗೆ ಸಮೀಪಿಸಿದ ಅಡವಿಯಲ್ಲಿ ನದಿಯ ತೀರದಲ್ಲ ನಾನಾ ಸಾಹೇಬನು ತನ್ನ ಅಲ್ಪ ಪರಿವಾರದೊಡನೆ ವಾಸವಾಗಿದ್ದನು. ಸುಮಾರು ಹತ್ತು ಗಳಿಗೆ ರಾತ್ರಿಯಾಗಿರಬಹುದು. ಚತುರ್ಥಿಯ ಚಂದ್ರನು ಮೂಡಲಿ ನಲ್ಲಿ ಆದೇ ಉದಯಹೊಂದಿ ಮೇಲೆ ಬರುತ್ತಿದ್ದನು. ಗಾಢಾಂಧಕಾರದಲ್ಲಿ ಮುಳುಗಿಹೋಗಿದ್ದ ಭೂದೇವಿಯು ಅಮೃತಕರನ ಧವಲ ಕಿರಣಗಳಿಂದ ಮುಗುಳ್ನಗೆ ನಗುವಂತೆ ತೋರಿತು. ವಸಂತಕಾಲದ ಪ್ರಾರಂಭದ ಆ ಸಮಯವು ವನಸ್ಪತಿಗಳಿಗೂ ಕ್ರಿಮಿ-ಕೀಟಕ ಪಶುಪಕ್ಷಿಗಳಿಗೂ ಆನಂದದಾಯಕ ವಾಗಿದ್ದಿತು. ಅಡವಿಯೊಳಗಿನ ಕಾಲುದಾರಿಯಲ್ಲಿ ಮೆಲ್ಲಡಿಯಿಡುತ್ತ ದೂರ ದಲ್ಲಿ ಮಿನುಗುತ್ತಿರುವ ದೀಪದ ಬೆಳಕನ್ನು ಗುರಿಯಾಗಿಟ್ಟುಕೊಂಡು ಪಿಸು

ಮಾತಿನಲ್ಲಿ ಏನೇನೋ ಆಡಿಕೊಳ್ಳುತ್ತ ಮೂವರು ದಾರಿಕಾರರು ಮುಂದೆ ಸಾಗಿದ್ದರು. ಅವರಲ್ಲಿ ಒಬ್ಬನು ಯುರೋಪಿಯನನು; ಒಬ್ಬನು ದೇಶೀಯ ಗೃಹಸ್ಥನು; ಮೂರನೆಯವನು ಆ ಅರಣ್ಯದ ನಿವಾಸಿ, ಮಾರ್ಗದರ್ಶಕನು. ಅವರ ಹಿಂದೆಯೇ ತುಸು ದೂರದಲ್ಲಿ ಕಾಷಾಯವಸ್ತ್ರವನ್ನುಟ್ಟು ದಂಡಕಮಂಡಲುಗಳನ್ನು ಧರಿಸಿದ ಸಂನ್ಯಾಸಿಯೊಬ್ಬನು ಹೊರಟಿದ್ದನು.

ನಾನಾಸಾಹೇಬನ ದೇಹಾರೋಗ್ಯವು ಚೆನ್ನಾಗಿರಲಿಲ್ಲ ತೆರಾಯಿ ಪ್ರದೇಶದ ತಂಪುಹವೆಯಲ್ಲಿ ಆತನು ಮಲೆಜ್ವರದಿಂದ ಪೀಡಿತನಾಗಿದ್ದನು; ಪತ್ನಿ ಸುಮಿತ್ರಾದೇವಿಯು ಪಾದದೆಡೆಯಲ್ಲಿ ಕುಳಿತು ಪತಿಯ ಪಾದಸೇವೆಮಾಡುತ್ತಿದ್ದಳು. ಕುಸುಮಕೋಮಲೆಯಾದ ಹನ್ನೆರಡು ವರುಷದ ಬಾಲಿಕೆಯೊಬ್ಬಳು ಆತನ ತಲೆದಿಂಬಿನ ಬಳಿಯಲ್ಲಿ ಅಧೋವದನೆಯಾಗಿ ಕುಳಿತಿದ್ದಳು. ರೋಗಿಯು "ಕುಸುಮಾ, ತುಸ ಬಿಸಿನೀರು ತಾ." ಎಂದನು. ಬಾಲಿಕೆಯು ಗುಡಿಸಲಿನ ಒಳಗೆ ಹೋಗಿ ಬಿಸಿನೀರು ತಂದಳು ಮತ್ತು "ಅತ್ತಿಗೆ, ಅಲ್ಲಿ ನೋಡು ಯಾರೋ ಬರುವಂತಿದೆ" ಎನ್ನುತ್ತ ಎದುರಿಗೆ ಬೆರಳೆತ್ತಿ ತೋರಿಸಿದಳು. ಅಷ್ಟರಲ್ಲಿ ಅವರ ಅನುಚರನೊಬ್ಬನು ಬಂದು "ಯಾರೋ ಮಹಾರಾಜರನ್ನು ಕಾಣಲು ಬಂದಿರುವರು." ಎಂದನು. ಅತಿಥಿಗಳು ಹತ್ತಿರ ಬಂದು ಸಾಂಕೇತಿಕ ಭಾಷೆಯಲ್ಲಿ ಏನೇನೋ ಮಾತಾಡಿದರು. ನಾನಾಸಾಹೇಬನು ತನ್ನ ತಂಗಿ-ಶ್ರೀಮಂತ ಬಾಜೀರಾಯನ ಮಗಳು— ‡ ಕುಸುಮಾವತಿಯು ತಂದುಕೊಟ್ಟ ನೀರು ಕುಡಿದು, ದಿಂಬಿಗೆ ಒರಗಿ ಕುಳಿತು "ಸಾಹೇಬ! ಬಹುಕಾಲದ ತರುವಾಯ ತಮ್ಮ ದರುಶನವಾಯಿತು. ಅಂದು ತ್ರ್ಯಂಬಕೇಶ್ವರನ ಮಂದಿರದಲ್ಲಿ ಆನಂದಮಿಶ್ರ ಸ್ವಾಮಿಯವರ ಸಮಕ್ಷ ಮಾತಾಡಿದ ತರುವಾಯ ತಮ್ಮನ್ನು ನೋಡುವದಾಗಲಿಲ್ಲ ಅಂತ್ಯಕಾಲವು ಸಮೀಪಿಸಿರುವಾಗ ಮತ್ತೆ ತಮ್ಮ ದರುಶನವಾದುದು ನಮ್ಮ ನಿಮ್ಮ ಪೂರ್ವಜನ್ಮದ ಋಣಾನುಬಂಧದ ನಿದರ್ಶಕವಾಗಿದೆ," ಎನ್ನುತ್ತ ನಿಟ್ಟುಸಿರುಬಿಟ್ಟನು.

---

‡ ಮುಂದೆ ಈಕೆಯನ್ನು ಗ್ವಾಲ್ಹೇರಿಯ ಸುಪ್ರಸಿದ್ಧ ಸರದಾರ ಬಾಬಾಸಾಹೇಬ ಆಪಟೆಯವರ ಚಿರಂಜೀವ ರಾವಸಾಹೇಬ ಆಪಟೆಯವರಿಗೆ ಕೊಟ್ಟು ಲಗ್ನವಾಯಿತು. ಈಕೆಯು ೧೯೧೭ ನೆಯ ಇಸವಿಯಲ್ಲಿ ಕಾಲಾಧೀನಳಾದಳು. ಶ್ರೀಮಂತ ನಾನಾಸಾಹೇಬನ ಮರಣದ ಸ್ಥಾನಕಾಲಗಳ ವಿಷಯದಲ್ಲಿ ಈಕೆಯು ಹೇಳಿದ್ದ ಮಾತುಗಳನ್ನು ಮಹಾರಾಷ್ಟ್ರ ಇತಿಹಾಸಕಾರರೊಬ್ಬರು ಸಂಗ್ರಹಿಸಿರುವರು; ಅವನ್ನೇ ಇಲ್ಲಿ ಹೇಳಿದೆ.

**ಸಾಹೇಬ:**—ಕುಮಾರಸಾಹೇಬ, ತಾವು ಚಿಂತಿಸುವ ಕಾರಣವಿಲ್ಲ. ನಾವು ಮಾಡಬೇಕಾದುದನ್ನು ಮಾಡಿದೆವು. ನಮಗೆ ಬೇಕಾದುದೂ ದೊರೆಯಿತೆನ್ನಬೇಕು. ಕಂಪನಿಯ ಸರಕಾರವು ಹಾಳಾಗಿ ಹೋಗಿ ವಿಕ್ಟೋರಿಯಾ ಮಹಾರಾಣಿಯವರ ಆಳಿಕೆ ಪ್ರಾರಂಭವಾಗಿದೆ. ಇದು ನಮ್ಮ ವಿಜಯದ ನಿದರ್ಶಕವಲ್ಲವೆ?

**ನಾನಾ:**—ತಾವು ಈ ಮಹಾಸಂಗ್ರಾಮದಲ್ಲಿ ಎಲ್ಲೆಲ್ಲಿ ಎಂಥೆಂಥ ಕಾರ್ಯಗಳನ್ನು ಕೈಕೊಂಡಿದ್ದಿರೆಂಬುದನ್ನು ತಿಳಿಯಲು ಬಯಸುವೆನು.

**ಸಾಹೇಬ:**—ಅಂದು ಸ್ವಾಮಿಯವರ ಸಮಕ್ಷ ಆಣೆ ಭಾಷೆಗಳಾದ ಬಳಿಕ ನಾನು ಅಜೀಮುಲ್ಲಾಖಾನನೊಡನೆ ಕಾನಪುರಕ್ಕೆ ಹೋಗಿ ಬಳಿಕ ಬರೇಲಿಯ ಸೇನಾನಿವಾಸಕ್ಕೆ ತೆರಳಿದೆನು. ಅಲ್ಲಿಯ ಸೈನಿಕರು ಉತ್ತೇಜಿತರಾಗಿ ದಂಗೆಯನ್ನು ಸಾರಿದ ತರುವಾಯ ಅವರೊಡನೆ ದಿಲ್ಲಿಗೆ ಹೋದೆನು. ಅಲ್ಲಿ ಹಲವರು ದೇಶೀಯ ಸೈನಿಕಸೇನಾಧಿಕಾರಿಗಳನ್ನೂ ನಾಗರಿಕ ಪ್ರಮುಖರನ್ನೂ ಕಂಡು ಮಾತಾಡಿ ಸೇನಾಪತಿ ಬಖತ್ ಖಾನನ ಸ್ನೇಹವನ್ನು ಗಳಿಸಿಕೊಂಡೆನು. ದಿಲ್ಲಿಯಲ್ಲಾದ ಮಹಾಸಂಗ್ರಾಮದಲ್ಲಿ ನಾನು ಮುಖ್ಯ ಗೋಲಂದಾಜನಾಗಿ ಕೆಲಸಮಾಡಿದೆನು. ಸಪ್ಟೆಂಬರ ತಿಂಗಳ ೧೪ನೆಯ ತಾರೀಖಿನ ದಿನದ ತುಮುಲ ಸಂಗ್ರಾಮದಲ್ಲಿ ನಾನು ಬಹುಜನ ವಿರೋಧಿಗಳನ್ನು ಮಣ್ಣುಗೂಡಿಸಿದೆನು. ದಿಲ್ಲಿಯ ಪರಾಜಯದ ತರುವಾಯ ಮಥುರೆಗೆ ಹೋಗಿ ಬಂಡುಗಾರರ ಸೈನ್ಯವು ಯಮುನೆಯನ್ನು ದಾಟಿ ಪಾರಾಗುವ ಅನುಕೂಲತೆ ಮಾಡಿಕೊಟ್ಟೆನು. ಸೇನಾಪತಿ ಬಖತ್‌ಖಾನನ ಮತ್ತು ಫಿರೋಜಷಹನ ಸೈನ್ಯದಲ್ಲಿ ವೈಮನಸ್ಯದ ಮೂಲಕ ಉಂಟಾದ ಅವ್ಯವಸ್ಥೆಯನ್ನು ನಾನೇ ಸರಿಪಡಿಸಿಕೊಂಡು ಆ ಸೈನಿಕರೊಡನೆ ಲಕನೌವಿಗೆ ಹೋದೆನು. ಲಕನೌವಿನಲ್ಲಿ ದಂಗೆಗಾರ ಸೈನ್ಯವು ಸೋತಬಳಿಕ ಅಲ್ಲಿಂದ ೫೭ ಮೈಲು ದೂರದಲ್ಲಿದ್ದ ರುರಿಯಾ ದುರ್ಗಕ್ಕೆ ಹೋದೆನು. ಎಪ್ರಿಲ್ (೧೮೫೮) ತಿಂಗಳ ೧೪ನೆಯ ತಾರೀಖಿಗೆ ಬ್ರಿಟಿಷ ಸೈನ್ಯವು ಆ ದುರ್ಗವನ್ನು ಮುತ್ತಿದಾಗ ದುರ್ಗದ ನಡುವೆ ಇದ್ದ ಎತ್ತರವಾದ ಗಿಡದ ಮೇಲೇರಿ ಕುಳಿತು ಸೇನಾಪತಿ ಹೋಪ್‌ಗ್ರ್ಯಾಂಟ್ ಮೊದಲಾದ ಹಲವರನ್ನು ಗುರಿಯಿಟ್ಟು ಗುಂಡಿನಿಂದ

ಸುಟ್ಟೆನು. † ರುರಿಯಾ ದುರ್ಗವು ನಮ್ಮ ಕೈಬಿಟ್ಟಬಳಿಕ ಬರೇಲಿಗೆ ಹೋದೆನು. ನಬಾಬಗಂಜದ ಯುದ್ಧದಲ್ಲಿ ಬಖತ್ ಖಾನನು ಮರಣಹೊಂದಿದ ತರುವಾಯ ನಾವು ನೇಪಾಳದ ರಾಜ್ಯವನ್ನು ಸೇರಿದೆವು. ನೊವೆಂಬರ ತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾದ ವಿಕ್ಟೋರಿಯಾ ಮಹಾರಾಣಿಯವರ ಜಾಹೀರನಾಮೆ ಯಿಂದ ಬಹುಜನ ಸೈನಿಕರೂ ಸೇನಾಧಿಕಾರಿಗಳೂ ಯುದ್ಧದ ಹಂಬಲವನ್ನು ಬಿಟ್ಟುಬಿಟ್ಟರು. ರಾಣಿಯವರ ಜಾಹೀರನಾಮೆಯು ತಾತ್ಕಾಲಿಕವಾಗಿರುವು ದೆಂದೂ ತಮಗೊದಗಿದ ಕುತ್ತ ದಾಟಿದ ಬಳಿಕ ರಾಣಿಯ ಸರಕಾರವು ಕಂಪನಿಯ ಸರಕಾರದ ಮರಿಯಾಗಿ ಪರಿಣಮಿಸಿ ಜಾಹೀರನಾಮೆಯು ಸತ್ತ ಕಾಗದವಾಗುವುದೆಂದೂ ಹೇಳಿ ಅವರನ್ನು ಹುರುಪುಗೊಳಿಸಲು ಯತ್ನಿ ಸಿದುದೆಲ್ಲ ವ್ಯರ್ಥವಾಯಿತು. ಆಗ ನನಗೆ ಬೇರೆ ದಾರಿ ತೋರದಾಯಿತು ಅಷ್ಟರಲ್ಲಿ ಸೇನಾಪತಿ ತಾತ್ಯಾಟೋಪಿಯು ಉತ್ತರ ಹಿಂದುಸ್ತಾನದ ಅಡವಿ ಗಳಲ್ಲಿ ಅಲೆದಾಡುತ್ತ ಬ್ರಿಟಿಷ ಸೈನ್ಯವನ್ನು ಅತ್ತಿತ್ತ ಕುಣಿಸಾಡುತ್ತಿರುವ ನೆಂದು ತಿಳಿಯಿತು. ನಾವೆಲ್ಲರೂ ಆತನನ್ನು ಅನುಸರಿಸಿ ಹೊರಟೆವು

**ನಾನಾ:**—ಸಾಹೇಬ, ಭಾರತಮಾತೆಯು ತಮಗೆ ಚಿರಋಣಿಯಾ ಗಿರುವಳು. ನನಗೆ ಇತ್ತೀಚಿಗೆ ತಾತ್ಯಾಟೋಪಿಯ ಸಮಾಚಾರವೇ ತಿಳಿದಿಲ್ಲ.

**ಸಾಹೇಬ:**—ನಾನು ಆತನ ವಿಷಯದಲ್ಲಿ ಅನೇಕ ಸಂಗತಿಗಳನ್ನು ತಿಳಿದಿರುವೆನು. ಗ್ವಾಲ್ಹೇರಿಯ ರಣರಂಗದಲ್ಲಿ ಭಾರತಮಾತೆಯ ಗೌರವ ಮುಕುಟದೊಳಗಿನ ಉಜ್ವಲ ರತ್ನವೆನಿಸಿದ ಮಹಾರಾಣಿ ಲಕ್ಷ್ಮೀಬಾಯಿಯು ಅದೃಶ್ಯಳಾದ ತರುವಾಯ ತಾತ್ಯಾಟೋಪಿಯು ತನ್ನ ಅಲ್ಪ ಬಲದೊಡನೆ ಪಾರಾಗಿ ನಡೆದನು. ಗ್ವಾಲ್ಹೇರ, ಝಾಸಿ, ಗುಣಾ, ಸಿಪ್ರಿ, ನಸಿರಾಬಾದ ಮುಂತಾದ ಹಲವು ಕಡೆಗಳಲ್ಲಿ ಬ್ರಿಟಿಷ ಸೈನ್ಯವು ಆತನ ಮಾರ್ಗವನ್ನು ಅಡ್ಡಗಟ್ಟಿ ನಿಂತಿದ್ದಿತು. ಆತನು ಮರಾಟರ "ಗೋರಿಲ್ಲಾ ವಾರ್ ಫೇರ್" ಪದ್ಧತಿಯನ್ನು ಬ್ರಿಟಿಷ ಸೈನಿಕರ ಅನುಭವಕ್ಕೆ ಆಡಿಗಡಿಗೆ ತಂದುಕೊಡುತ್ತ ಅವರ ಕಣ್ಣು ತಪ್ಪಿಸಿ ಓಡಾಡುತ್ತಿದ್ದನು. ಈ ಸ್ಥಿತಿಯಲ್ಲಿ ಆತನು ಒಂಬತ್ತು ತಿಂಗಳುಗಳ ವರೆಗೆ ಬ್ರಿಟಿಷ ಸೈನ್ಯವನ್ನು ಅತ್ತಿತ್ತ ಕುಣಿದಾಡಿಸಿದನು.

---

† Forbes mitchell, Reminiscenceetc. Appendix, B.

ಗ್ವಾಲ್ಹೇರಿಯಿಂದ ೪೪ ಮೈಲು ದೂರದಲ್ಲಿ ನರವರ ಎಂಬಲ್ಲಿಯ ಜಮೀನುದಾರ ಮಾನಸಿಂಗನು ಗ್ವಾಲ್ಹೇರಿಯ ಸರಕಾರದ ವಿರುದ್ಧ ಪುಂಡಾಟಿಕೆ ನಡೆಯಿಸಿದನೆಂಬ ಕಾರಣದಿಂದ ಬ್ರಿಟಿಶರು ಆತನ ಮೇಲೆ ದಂಡೆತ್ತಿ ಹೋಗಿದ್ದರು. ನಿರಾಶ್ರಿತನಾದ ಮಾನಸಿಂಗನು ತಾತ್ಯಾಟೋಪಿಯ ಆಶ್ರಯವನ್ನು ಕೋರಿದನು. ಆಶ್ರಿತ ರಕ್ಷಣಪರಾಯಣನಾದ ತಾತ್ಯಾಟೋಪಿಯು ಆತನಿಗೆ ಆಶ್ರಯ ಕೊಟ್ಟು ತನ್ನ ಸೈನ್ಯದಲ್ಲಿ ಒಂದು ಅಧಿಕಾರದ ಸ್ಥಳವನ್ನು ಕೊಟ್ಟನು. ಈ ನೀಚ ಮಾನಸಿಂಗನೇ ತನ್ನ ಕವಡೆಯ ಸ್ವಾರ್ಥಕ್ಕಾಗಿ ವಿಶ್ವಾಸಘಾತಮಾಡಿ ತನ್ನ ಆಶ್ರಯದಾತನ ಸರ್ವನಾಶಕ್ಕೆ ಕಾರಣವಾದನು.

**ನಾನಾ:**— ಸಾಹೇಬ, ಅದಕ್ಕೇನು ಮಾಡುವುದು? ಸ್ವಾರ್ಥವು ಪಾಪದ ತಾಯಿ. ತಾತ್ಯಾಟೋಪಿಯು ಈಗ ಬದುಕಿರುವನಷ್ಟೇ?

**ಸಾಹೇಬ:**— ಕುಮಾರಸಾಹೇಬ, ಆ ಮಹಾಪುರುಷನು ಈಗ ಈ ಲೋಕದಲ್ಲಿ ಇಲ್ಲ; ಸ್ವರ್ಗಲೋಕದಲ್ಲಿದ್ದು ತನ್ನವರು ಮಾಡುತ್ತಿರುವ ಸತ್ಕರ್ಮ ದುಷ್ಕರ್ಮಗಳನ್ನು ನೋಡುತ್ತಲಿದ್ದಾನೆ. ಮಾತೃಭೂಮಿಯ ಉದ್ಧಾರಕ್ಕಾಗಿ ಸರ್ವಸ್ವವನ್ನೂ ಧಾರೆಯೆರೆದು ತ್ರಿಕರಣಶುದ್ಧಿಯಿಂದ ಕಾರ್ಯಮಾಡುವ ಮಹಾತ್ಮರ ಆತ್ಮಯಜ್ಞದಿಂದ ಭಾರತಮಾತೆಯು ಸ್ವಾತಂತ್ರ್ಯ ಸುಖವನ್ನು ಅನುಭವಿಸುವ ಕಾಲವನ್ನು ನಿರೀಕ್ಷಿಸುತ್ತಲಿದ್ದಾನೆ.

" ಅಯ್ಯೋ! ದೈವವೇ! ........" ರೋಗಿಯು ಮೂರ್ಛಿತನಾದನು. ಬಾಲಿಕೆ ಕುಸುಮಾವತಿಯು ಆತನ ಬಾಯಿಗೆ ನೀರೆರೆದಳು. ರೋಗಿಯು ಚೇತರಿಸಿಕೊಂಡು " ಸಾಹೇಬ, ಮುಂದೇನಾಯಿತು...." ಎಂದನು.

**ಸಾಹೇಬ:** — ಎಪ್ರಿಲ್ ತಿಂಗಳ ಪ್ರಾರಂಭದಲ್ಲಿ ಮಾನಸಿಂಗನು ತಾತ್ಯಾಟೋಪಿಯನ್ನು ಕಂಡು ಕೆಲವು ಜನ ಸೈನಿಕರನ್ನೂ ಅಲ್ಪ ಸ್ವಲ್ಪ ಅನ್ನ ಸಾಮಗ್ರಿಯನ್ನೂ ಕೂಡಿಸಿಕೊಂಡು ಎರಡು ಮೂರು ದಿನಗಳಲ್ಲಿಯೇ ತಿರುಗಿ ಬರುವೆನೆಂದೂ ಅಲ್ಲಿಯ ವರೆಗೂ ಇಲ್ಲಿಯೇ ಇರಬೇಕೆಂದೂ ಹೇಳಿ ಗುಪ್ತ ಸ್ಥಳದಿಂದ ಹೊರಟುಹೋದನು. ತಾತ್ಯಾಟೋಪಿಯೊಡನೆ ಈಗ ಸೈನ್ಯವಿರಲಿಲ್ಲ. ಒಬ್ಬ ಅಡುಗೆಯವನು, ಒಬ್ಬ ಕೆಲಸ ಮಾಡುವ ಆಳು, ಎರಡು ಕುದುರೆಗಳು, ಒಂದು ಸಾಮಾನು ಹೊರುವ ಹೇಸರಗತ್ತೆ, ಇವಿಷ್ಟೇ ಆತನ ಸರಂಜಾಮುವಾಗಿದ್ದಿತು. ವಿಶ್ವಾಸಘಾತುಕ ಮಾನಸಿಂಗನು ಬ್ರಿಟಿಷ

ರೊಡನೆ ಸಂಚು ನಡೆಯಿಸಿ ತಾತ್ಯಾಟೋಪಿಯನ್ನು ಹಿಡಿದುಕೊಡುವ ಕಾಯಕ ವನ್ನು ಒಪ್ಪಿಕೊಂಡಿದ್ದನು. ಎಪ್ರಿಲ್ ತಿಂಗಳ ೭ನೆಯ ತಾರೀಖಿನ ದಿನ ಮಾನಸಿಂಗನು ತಿರುಗಿ ಬಂದನು. ತಾತ್ಯಾಟೋಪಿಯು ಆಲಿವಾರ ಸಂಸ್ಥಾನ ದಲ್ಲಿ ಪಾರಣವೆಂಬ ಘೋರಾರಣ್ಯದ ನಡುವೆ ಮೇಲೆ ಹೇಳಿದ ಅಲ್ಪಪರಿವಾರ ದೊಡನೆ ವಾಸವಾಗಿದ್ದನು. ರಾವಸಾಹೇಬ ಪೇಶವೆಯೂ ನಾನೂ ಬೇರೊಂದು ಅನುಕೂಲವಾದ ಸ್ಥಲವನ್ನು ನೋಡಿಕೊಂಡು ಬರುವುದಕ್ಕೆ ಹೋಗಿದ್ದೆವು. ತಾತ್ಯಾನು ಇಂತಹ ಕಷ್ಟಮಯ ಕಾಲದಲ್ಲಿಯೂ ನಿಶ್ಚಿಂತನಾಗಿ ನಿದ್ದೆಮಾಡು ತ್ತಿದ್ದನು. ದೈವಯೋಗದಿಂದ ತನಗುಂಟಾದ ವಿಪತ್ತಿನಿಂದ ಆತನ ಮನಸ್ಸಿನ ಶಾಂತಿ ಭಂಗಹೊಂದಲಿಲ್ಲ. ಆತನು "ಭಗವಂತನನ್ನು ಸ್ಮರಿಸಿ ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆ; ಲಾಭಾಲಾಭ ಜಯಾಪಜಯಗಳು ಆತನಿಗೆ ಸೇರಿದುವು." ಎಂದು ಅಡಿಗಡಿಗೆ ಎನ್ನುತ್ತಿದ್ದನು. ಸುಖದುಃಖಗಳು ಆತನನ್ನು ಹಿಗ್ಗಿಸಲಿಲ್ಲ; ತಗ್ಗಿಸಲಿಲ್ಲ. ಮಧ್ಯರಾತ್ರಿಯ ಸಮಯದಲ್ಲಿ ಕೆಲವು ಜನ ಬ್ರಿಟಿಷ ಸೈನಿಕರೂ ಅವರ ನಾಯಕ ಮೀಡ ಸಾಹೇಬನೂ ಸಂಚುಗಾರ ಮಾನಸಿಂಗನು ತೋರಿಸಿದ ದಾರಿಯಲ್ಲಿ ಸಾವಕಾಶವಾಗಿ ಸಾಗಿಬಂದು ನಿದ್ರಾವಶನಾಗಿದ್ದ ತಾತ್ಯಾಟೋಪಿಯನ್ನು ಸೆರೆಹಿಡಿದರು. ಮೀಡ್ ಸಾಹೇಬನ ಮಗ್ಗುಲಲ್ಲಿ ನಿಂತಿರುವ ಕೃತಘ್ನ ಮಾನಸಿಂಗನ ಮುಖವನ್ನು ಪಂಜಿನ ಬೆಳಕಿನಲ್ಲಿ ನೋಡಿದಾಗ ಬಲೆಯಲ್ಲಿ ಬಿದ್ದ ಸಿಂಹನಂತಾದ ವೀರಾಧಿವೀರ ತಾತ್ಯಾಟೋಪಿಯ ಮನಸ್ಸಿನಲ್ಲಿ ಹುಟ್ಟಿದ ರೋಷಾವೇಶಗಳನ್ನೂ ಪಾಪಿ ಮಾನಸಿಂಗನ ಆ ಕಾಲದ ಮನೋಭಾವನೆಯನ್ನೂ ಮುಖಚರ್ಯೆಯನ್ನೂ ನಾನು ವರ್ಣಿಸಲಾರೆನು. ಇಂತಹ ಪಾಪಾಚರಣೆಯ ಪ್ರತಿಫಲವೆಂದು ಮಾನಸಿಂಗನಿಗೆ ಕಳೆದುಹೋಗಿದ್ದ ಜಹಗೀರು ಮರಳಿ ದೊರೆಯಿತು. ಮೀಡ್ ಸಾಹೇಬನು ತಾತ್ಯಾಟೋಪಿಯನ್ನು ಸಿಪ್ರಿಗೆ ಒಯ್ದನು. ಕಂಪನಿಯು ಸರಕಾ ರದ ವಿರುದ್ಧ ಬಂಡಾಯ ಹೂಡಿದನೆಂಬ ಆರೋಪದಿಂದ ಆತನಿಗೆ ೧೮೫೯ನೇ ಇಸವಿಯ ಎಪ್ರಿಲ್ ತಿಂಗಳ ೧೭ ನೆಯ ತಾರೀಖಿಗೆ ದೇಹಾಂತ ಶಿಕ್ಷೆ ವಿಧಿಸ ಲ್ಪಟ್ಟಿತಂತೆ. ತನಗೆ ಶಿಕ್ಷೆಯನ್ನು ವಿಧಿಸಲು ಕಂಪನಿಯ ಸರಕಾರಕ್ಕೆ ಅಧಿಕಾ ರವಿಲ್ಲವೆಂಬ ವಿಷಯದ ಆತನ ಪ್ರತಿಪಾದನೆ ತುಂಬ ವಿಚಾರಾರ್ಹವಾಗಿದ್ದರೂ ಅದನ್ನವರು ಲಕ್ಷಿಸಲೇ ಇಲ್ಲವಂತೆ.

"ಮಂಗಲಸಿಂಹ ಪಾಂಡೆಯು ಪ್ರಥಮಾಹುತಿಯಿಂದ ಪ್ರಾರಂಭವಾದ ಮಹಾರಣಯಜ್ಞವು ಎರಡು ವರ್ಷಗಳ ತರುವಾಯ ನರಕೇಸರಿ ತಾತ್ಯಾ ಟೋಪಿಯ ಪೂರ್ಣಾಹುತಿಯಿಂದ ಪೂರ್ಣವಾದಂತಾಯಿತು." ಗುಡಿಸಲಿನ ಮುಂಭಾಗದಲ್ಲಿ ಗಿಡದ ನೆಳಲಿನಲ್ಲಿ ನಿಂತವರು ಯಾರೋ ಹೀಗೆಂದರು. ನಾನಾಸಾಹೇಬನು ಸ್ಮೃತಿ ತಪ್ಪಿ ನೆಲಕ್ಕೆ ಒರಗಿದನು.

"ರಾಮ! ರಾಮ! ರಾಮ!" ಎನ್ನುತ್ತ ಸಂನ್ಯಾಸಿಯೊಬ್ಬನು ಅಕ ಸ್ಮಾತ್ ಅಲ್ಲಿಗೆ ಬಂದು ತನ್ನ ಕಮಂಡಲೂದಕದಿಂದ ರೋಗಿಯ ಕಣ್ಣೊರಿಸಿ ಬಾಯಿಗೂ ತುಸ ನೀರೆರೆದನು. ರೋಗಿಯು ಚೇತರಿಸಿಕೊಂಡು ಇದಿರಿಗಿರುವ ಆನಂದಮಿಶ್ರ ಸ್ವಾಮಿಯನ್ನು ನೋಡಿ "ಗುರುದೇವ" ಎನ್ನುತ್ತ ಆತನ ಪಾದಗಳ ಮೇಲೆ ಉರುಳಿ ಕಣ್ಣೀರು ಸುರಿಸಿದನು.

**ಆನಂದಮಿಶ್ರ:**—ವತ್ಸಾ! ಎಲ್ಲವನ್ನೂ ಕೇಳಿ ತಿಳಿದಿರುವೆನು. ನೀನು ಅಳುವುದೇಕೆ? ಭಾರತಮಾತೆಯು ನಿಮ್ಮಂತಹ ಸತ್ಪುತ್ರರ ಆತ್ಮಯಜ್ಞದಿಂದಲೇ ಪುನೀತಳಾಗಬೇಕು. ನೀವು ಮಾಡಿದುದು ಸಾಮಾನ್ಯ ಕೆಲಸವಲ್ಲ. ನೀವು ಪ್ರಾರಂಭಿಸಿದ ಮಹಾಸಂಗ್ರಾಮವು ವಿಚಿತ್ರ ಪರಿಸ್ಥಿತಿಯುಳ್ಳುದಾಯಿತು. ಕೃಷಿಜೀವಿಗಳಾದ ಭಾರತವಾಸಿಗಳು ಸದಾ ಶಾಂತಿಪ್ರಿಯರು; ಕ್ರಾಂತಿಯು ಅವರಿಗೆ ಬೇಕಾಗಿರಲಿಲ್ಲ. ಅಖಿಲ ಜನತೆಯಲ್ಲಿ ಧರ್ಮಭಯದ ಮೂಲಕವಾದ ಜಾಗ್ರತೆಯನ್ನುಂಟುಮಾಡಿ ಸ್ವಾತಂತ್ರ್ಯಯುದ್ಧವನ್ನು ಸಾರುವುದೂ ಸಾಧ್ಯವಾಗಲಿಲ್ಲ. ಭಾರತೀಯರಲ್ಲಿ ಇನ್ನೂ ಏಕರಾಷ್ಟ್ರೀಯತ್ವದ ಕಲ್ಪನೆ ಹುಟ್ಟಿಲ್ಲ. ಕಾನಪುರ, ದಿಲ್ಲಿ, ಲಖನೌ, ಝಾಂಸಿ, ಬರೇಲಿ ಮುಂತಾದ ಕಡೆಗಳಲ್ಲಿ ರಾಜ್ಯಕ್ರಾಂತಿಯನ್ನು ಸಾರಿದರೂ ಹೈದರಾಬಾದ ಭೋಪಾಳ ಮುಂತಾದ ಮಹಮ್ಮದೀಯ ರಾಜ್ಯಗಳೂ ಇಂದೂರು, ಬಡೋದೆ, ಗ್ವಾಲ್ಹೇರಿ ಮುಂತಾದ ಹಿಂದು ಸಂಸ್ಥಾನಗಳೂ ಈ ರಣಕಲ್ಲೋಲದಲ್ಲಿ ಸೇರ್ಪಡೆಯಾಗಲಿಲ್ಲ. ಸ್ವಾಭಿಮಾನಿಗಳೂ ಸ್ವರಾಜ್ಯಪ್ರೇಮಿಗಳೂ ಸ್ವಧರ್ಮನಿಷ್ಠರೂ ಆದ ಕೆಲವರು ತೇಜಸ್ವಿಗಳು ಮಾತ್ರ ಧರ್ಮನಾಶದ ಭೀತಿಯಿಂದಲೂ ಕಂಪನಿಯ ಅಧಿಕಾರಿಗಳ ಸ್ವೈರ ವರ್ತನೆಯಿಂದಲೂ ಅಸಂತುಷ್ಟರಾದ ಸೈನಿಕರ ನೆರವಿನಿಂದ ಈ ಮಹಾಸಂಗ್ರಾಮವನ್ನು ಮುಂದೆ ಸಾಗಿಸಿದರು. ಇದು

ವ್ಯವಹಾರದೃಷ್ಟಿಯಿಂದ ಯಶಸ್ವಿಯಾಗದೆ ಇದ್ದರೂ ಆ ಮಹನೀಯರ ಅಪೂರ್ವ ಆತ್ಮತ್ಯಾಗಕ್ಕೆ ತಕ್ಕ ಪ್ರತಿಫಲವು ದೊರೆಯದೆ ಹೋಯಿತೆನ್ನುವಂತಿಲ್ಲ.

**ಸಾಹೇಬ:**—ಕುಮಾರಸಾಹೇಬ, ಈ ಮಾತು ನಿಜವೇ ಸರಿ. ಅಖಿಲ ಭರತಖಂಡವೂ ಈ ಯುದ್ಧದಲ್ಲಿ ತೊಡಗದೆಯಿದ್ದರೂ ಅಡ್ಡಿಯಿರಲಿಲ್ಲ. ಯುದ್ಧಕ್ಕೆ ಸಿದ್ಧವಾದ ಬಂಡುಗಾರ ಸೈನ್ಯವು ಕೂಡ ಉಚ್ಛೃಂಖಲವೃತ್ತಿಯಿಂದ ಸ್ವೇಚ್ಛಾಚಾರಿಯಾಗಿ ಆಯುಧಪಾಣಿಗಳಾದ ಪುಂಡುಗಾರರ ತಂಡದಂತಾಗಿ ಸ್ವಪಕ್ಷದವರಿಗೆ ಭಯಾವಹವಾಗಿಯೂ ಶತ್ರುಗಳಿಗೆ ಹೀನಾಯವಾಗಿಯೂ ಪರಿಣಮಿಸಿತು. ರಣಕುಶಲನಾದ ಒಬ್ಬ ಸೇನಾಪತಿಯ ಆಜ್ಞೆಗೆ ಅಧೀನವಾಗಿ ಕೆಲಸ ಮಾಡದೆ ಇದ್ದುದರಿಂದ ಆ ಪ್ರಚಂಡ ಸೇನೆಯ ಶಕ್ತಿ ಸಾಹಸಗಳು ವ್ಯರ್ಥವಾದುವು. ಭಾರತವಾಸಿಗಳೆಲ್ಲರೂ ಭಾರತಮಾತೆಯ ಪುತ್ರರೆಂಬುದನ್ನು ಮರೆತುಬಿಟ್ಟು ಹಿಂದು ಮಹಮ್ಮದೀಯರೆಂಬ ಭೇದಭಾವನೆ ಹುಟ್ಟಿ ಅವರ ಕಸುವು ಕುಗ್ಗಿಹೋಯಿತು! ಕಾನಪುರದಲ್ಲಿ ನಾಲ್ಕಡಿ ಎತ್ತರವಾಗಿ ಹೊಯ್ದ ಮಣ್ಣಿನ ಗೋಡೆಯ ಆಶ್ರಯದಲ್ಲಿದ್ದ ನೂರಾರು ಜನ ಯುರೋಪಿಯನರನ್ನು ವಿಪುಲ ಸಹಾಯ ಸಂಪತ್ತುಳ್ಳ ಸಹಸ್ರಾರು ವೀರಭಟರು ಜಯಿಸುವುದಾಗಲಿಲ್ಲ. ಕೊನೆಗೆ ಅವರು ವಾಮಮಾರ್ಗವನ್ನು ಅವಲಂಬಿಸಿ ಹಗೆಗಳನ್ನು ಮೋಸಗೊಳಿಸಬೇಕಾಯಿತು. ದಿಲ್ಲಿಯಲ್ಲಿ ಭದ್ರವಾದ ದುರ್ಗದ ಆಶ್ರಯದಲ್ಲಿದ್ದ ಲಕ್ಷಾವಧಿ ಬಂಡುಗಾರರನ್ನು ಬ್ರಿಟಿಷ ಸೇನೆಯು ಮೂರೇ ತಿಂಗಳಲ್ಲಿ ಧ್ವಂಸಮಾಡಿಬಿಟ್ಟಿತು ಲಕನೌವಿನಲ್ಲಿ ಸೆರೆಸಿಕ್ಕಿದ್ದ ಅಲ್ಪಸಂಖ್ಯಾಕವಾದ ಬ್ರಿಟಿಷ ಸೇನೆಯು ೧೫೦ ಸಾವಿರ ಬಂಡುಗಾರ ಸೈನ್ಯವನ್ನು ಹತ್ತುತಿಂಗಳಿಗಿಂತ ಹೆಚ್ಚುಕಾಲ ಇದಿರಿಸಿತು.

**ನಾನಾ:**—ಇಂತಹ ವೈಮನಸ್ಯ ಭೇದಭಾವಗಳಿಂದಲೇ ನಮ್ಮವರು ಹಿಂದೆ ಹಾಳಾಗಿಹೋದರು; ಈಗಲೂ ಹಾಳಾಗುತ್ತಿದ್ದಾರೆ; ಮುಂದೆಯೂ ನಮಗೆ ಇದೇ ದೊಡ್ಡ ವಿಘ್ನಕಾರಿಯಾಗಿ ಉಳಿಯುವುದು. ಈ ಮಹಾಸಂಗ್ರಾಮದಿಂದ ದೇಶದ ಸಂಪತ್ತು ಸೂರೆಯಾಗಿ ಹೋಯಿತು. ಒಂದೇ ಚರಖಾರೀ ಸಂಸ್ಥಾನದಲ್ಲಿ ೩ ಕೋಟಿ ರೂಪಾಯಿಗಳಿಗಿಂತ ಹೆಚ್ಚು ದ್ರವ್ಯವನ್ನು ಹಗೆಗಳು ಸುಲಿದುಕೊಂಡರು. ಬ್ರಿಟಿಷ ಸೇನೆಯಲ್ಲಿಯ ಪ್ರತಿಸೈನಿ

ಕನೂ ಹತ್ತುಸಾವಿರ ರೂಪಾಯಿ ಗಳಿಸಿಕೊಂಡಿರಬಹುದೆಂದು ಅಂದಾಜು ಮಾಡಿದ್ದಾರೆ. ರಣರಂಗದಲ್ಲಿ ಮಡಿದವರನ್ನು ಬಿಟ್ಟು ನಾಲ್ವತ್ತು ಐವತ್ತು ಸಾವಿರ ಜನರನ್ನು ಬ್ರಿಟಿಷ ಸೈನ್ಯವು ಕೊಂದು ಬಿಸುಟಿರುವುದಂತೆ. ಇದೇನು ಸಾಮಾನ್ಯ ಹಾನಿಯೇ? ರಾಮ! ರಾಮ! ರಾಮ!

**ಸಾಹೇಬ:**—ಬ್ರಿಟಿಷರು ತಮ್ಮ ಶೌರ್ಯದಿಂದಲೇ ವಿಜಯವನ್ನು ಗಳಿಸಿದರೆಂದು ಹೇಳಲಾರೆನು. ಅಂಗದ, ಅರ್ಜುನ ತಿವಾರಿ ಮುಂತಾದ ಗುಪ್ತ ಚಾರರೂ ನಾನಾ ನಾರಾಯಣರಾಯ, ಮಾನಸಿಂಗ ಮೊದಲಾದ ದ್ರೋಹಿಗಳೂ ಅವರಿಗೆ ನೆರವಾದರು. ಶೀಖರೂ, ಗುರ್ಖಾಸೈನಿಕರೂ ಅವರ ಬೆನ್ನು ಕಟ್ಟಿದರು. ಲಕನೌವಿಸಿಂದ ಹೊರಟ ಇಂಜನಿಯರ್ ಕಾವನಾಗ್ ಸಾಹೇಬನು ದೇಶೀಯ ಗುಪ್ತಚಾರನ ನೆರವಿನಿಂದ ಸುರಕ್ಷಿತವಾಗಿ ಕ್ಯಾಂಬೆಲ್ ಸಾಹೇಬನ ಶಿಬಿರವನ್ನು ಸೇರಿದನು. ಅದೇ ಲಕನೌವಿನಿಂದಲೇ ಬಂದಿದ್ದ ಇಂಜನಿಯರ್ ಮುಹಮ್ಮದಲ್ಲಿಯನ್ನು ದೇಶೀಯರೇ ಗುಪ್ತಚಾರನೆಂದು ಹಿಡಿದುಕೊಟ್ಟರು. ಇಂತಹ ದೇಶದ್ರೋಹಿಗಳಿಂದಲೇ ನಮ್ಮವರು ಹಾಳಾದರು. ಕ್ಯಾಂಬೆಲ್ ಸಾಹೇಬನ ಪರಾಕ್ರಮಕ್ಕಿಂತಲೂ ಮಹಾರಾಣಿಯ ಜಾಹೀರನಾಮೆಯೇ ಹೆಚ್ಚು ಜನರನ್ನು ರಣರಂಗದಿಂದ ಹಿಮ್ಮೆಟ್ಟಿಸಿತು.

**ರಾವಸಾಹೇಬ ಪೇಶವೆ:**—ಸಾಹೇಬ! ನೀವು ಹೇಳುವುದು ಸತ್ಯವೇ ಸರಿ. ಈ ಸಂಗ್ರಾಮದಲ್ಲಿ ಬ್ರಿಟಿಷರ ಧೈರ್ಯ ಶೌರ್ಯ ಶಕ್ತಿ ಸಾಹಸಗಳಿಗಿಂತಲೂ ಅವರ ಯುಕ್ತಿ, ಅತ್ಯಂತ ಕ್ರೂರವಾದ ಮನಸ್ಸು ಇವೇ ಹೆಚ್ಚಾಗಿ ನಮ್ಮ ನಿದರ್ಶನಕ್ಕೆ ಬಂದುವು. ಅಲ್ಲದೆ ನಮಗೆ ಕಾಲವೂ ಅನುಕೂಲವಾಗಲಿಲ್ಲ. ಆದರೂ ಕಂಪನಿಯ ಸರಕಾರವು ಹಾಳಾಗಿ ಹೋಯಿತು; ಇಷ್ಟರಿಂದಲೇ ನಾವು ಇಂದು ಸಮಾಧಾನ ಮಾಡಿಕೊಳ್ಳಬೇಕು.

**ಆನಂದಮಿಶ್ರ:**—ನಮ್ಮಿಂದಲೂ ಅವರು ಒಂದು ಪಾಠವನ್ನು ಕಲಿತುಕೊಳ್ಳುವಂತಾಯಿತು. ಧರ್ಮಪ್ರಾಣವಾಗಿರುವ ಭರತಖಂಡದ ಜೀವವೆಲ್ಲಿದೆಯೆಂಬುದನ್ನು ಅವರು ಕಂಡು ಬುದ್ಧಿಗಲಿತರು. ನಮಗೆ ಬೇಕಾಗಿರುವುದು ಶಾಂತಿ; ಧರ್ಮ; ಸತ್ಯ; ಸಮತೆ. ಮಹಾರಾಣಿಯ ಜಾಹೀರನಾಮೆಯನ್ನು ನೋಡಿ ಇವು ಸದ್ಯಕ್ಕಂತೂ ನಮಗೆ ಲಭಿಸಿದುವೆನ್ನಬೇಕು.

ನಾನಾಸಾಹೇಬನು "ಭಗವಂತನ ಕರುಣೆಯಿಂದ ಮಹಾರಾಣಿಯ ಜಾಹೀರನಾಮೆಯಲ್ಲಿಯ ವಾಕ್ಯಗಳಂತೆಯೇ ಕಾರ್ಯಭಾರವು ನಡೆದು ಸಕಲ ಭಾರತವಾಸಿಗಳೂ ಸಂಪನ್ನರಾಗಲಿ! ಸುಖಿಗಳಾಗಲಿ! ಶಾಂತರಾಗಲಿ! ರಾಮ! ರಾಮ! ರಾಮ!" ಎನ್ನುತ್ತ ಕಣ್ಣು ಮುಚ್ಚಿದನು.

ಆನಂದಮಿಶ್ರನು ತನ್ನ ವರದ ಹಸ್ತವನ್ನು ಆತನ ತಲೆಯಮೇಲಿರಿಸಿದನು. ನಾನಾಸಾಹೇಬನ ಮುಖದಲ್ಲಿ ಮಿಂಚಿದ ದಿವ್ಯ ತೇಜಸ್ಸಿನ ಮಿಂಚು ಆನಂದಮಿಶ್ರನಲ್ಲಿ ಮಿಶ್ರವಾಗಿಹೋಯಿತು. ಜ್ಯೋತಿಯು ದೊಡ್ಡದಾಯಿತು.

ವಿಕ್ಟೋರಿಯಾ ಮಹಾರಾಣಿಯವರ ತುಷ್ಟಿರಸ್ತು! ಪುಷ್ಟಿರಸ್ತು! ಶಾಂತಿರಸ್ತು! ಎನ್ನುವ ಶಾಂತಿಪಾಠದ ಜಾಹೀರನಾಮೆಯ ತೆರೆಯನ್ನು ಇಳಿಯಬಿಟ್ಟು, ಅತ್ಯಂತ ಕ್ರೂರಾಚರಣೆಯ ನೋಟಗಳುಳ್ಳ ಈ ದುಃಖಾಂತ ನಾಟಕದ ಕೊನೆಯ ದೃಶ್ಯವನ್ನು ಮರೆಮಾಡುವ, ಕವಿರವೀಂದ್ರರ ಉಜ್ವಲ ವಾಣಿಯಲ್ಲಿ ಮಂಗಲಗೀತವನ್ನು ಹಾಡುವ.

ಜನ ಗಣ ಮನ ಅಧಿನಾಯಕ ಜಯ ಹೇ! ಭಾರತ ಭಾಗ್ಯವಿಧಾತಾ |
ಪಂಜಾಬ ಸಿಂಧ ಗುಜರಾಥ ಮರಾಠಾ ದ್ರಾವಿಡ ಉತ್ಕಲ ವಂಗ |
ವಿಂಧ್ಯ ಹಿಮಾಚಲ ಯಮುನಾ ಗಂಗಾ ಉಚ್ಛಲ ಜಲಧಿ ತರಂಗ ||

ತವ ಶುಭ ನಾಮೇ ಜಾಗೇ |
ತವ ಶುಭ ಆಶಿಸ ಮಾಗೇ |
ಗಾಹೇ ತವ ಯಶ ಗಾಥಾ |

ಜನಗಣ ಮಂಗಳ ದಾಯಕ ಜಯ ಹೇ! ಭಾರತ ಭಾಗ್ಯವಿಧಾತಾ!
ಜಯಹೇ! ಜಯಹೇ! ಜಯಹೇ! ಜಯ ಜಯ ಜಯಹೇ |



## ೧೪. ಎರಡು ಚಿಕ್ಕ ಕಥೆಗಳು.

ಪರದ್ರವ್ಯವು ಲೋಷ್ಟ ಸಮಾನವು

### ನೀಲಗುಂದದ ಗದಿಗಯ್ಯನವರು.

ಹಲವರು ಸಾಧುಗಳೆಂದು ಬಯಲಿಗೆ ಬಾರದಿದ್ದರೂ ನಿಜವಾಗಿ ಸಾಧುಗಳಾಗಿರುವರು. ನೀಲಗುಂದದ ಗದಿಗಯ್ಯನವರು ಇಂತಹವರೊಳಗೊಬ್ಬರು. ಇವರು ಒಂದುದಿನ ನಸುಕಿನಲ್ಲಿ ಎಂದಿನಂತೆ ಊರ ಹೊರಗಿನ ಬಾವಿಗೆ ಸ್ನಾನಕ್ಕೆ ಹೋಗಿದ್ದರು. ಸ್ವಲ್ಪ ಹೊತ್ತಿಗೆ ಮುಂಚೆ ಪರಸ್ಥಳದ ಒಬ್ಬ ವ್ಯಾಪಾರಿಯು ಅದೇ ಬಾವಿಯಲ್ಲಿ ಸ್ನಾನಮಾಡಿ ದಂಡೆಯಲ್ಲಿ ಹಣತುಂಬಿದ ಹಮ್ಮಿಣಿಯನ್ನು ಮರೆತುಹೋಗಿದ್ದನು. ಸ್ನಾನಮಾಡಿ ತಿರುಗಿ ಹೋಗುವಾಗ ಗದಿಗಯ್ಯನವರು ಆ ಹಮ್ಮಿಣಿಯನ್ನು ಕಂಡು ಅದೇ ಆಗ ಸ್ನಾನ ಮಾಡಿ ಹೋದ ಗೃಹಸ್ಥನೇ ಮರೆತುಹೋಗಿರುವನೆಂದು ತಿಳಿದು, ಅದನ್ನು ಅಲ್ಲಿಯೇ ಬಿಟ್ಟುಹೋದರೆ ಅನ್ಯರು ಕಂಡು ಅಪಹರಿಸುವರೆಂದು ಆ ಹಮ್ಮಿಣಿಯನ್ನು ಕೈಯಿಂದ ಮುಟ್ಟದೆ ತಮ್ಮ ಕೋಲಿನ ತುದಿಗೆ ತಗಲಿಸಿಕೊಂಡು ಮನೆಗೆ ತಂದು ಮನೆಯವರಿಗಾರಿಗೂ ತಿಳಿಯದಂತೆ ಜೋಡುಗಳನ್ನಿಡುವ ಗೂಡಿನಲ್ಲಿ ಹಿಂದೆ ಸರಿಸಿ ಇಟ್ಟರು. ಇತ್ತ ವ್ಯಾಪಾರಿಯು ಮುಂದಿನ ಊರಿಗೆ ಹೋಗಿ ಸಂತೆಯಲ್ಲಿ ತನ್ನ ಹಮ್ಮಿಣಿಯನ್ನು ನೋಡಿಕೊಂಡು ಕಾಣಿಸದಿರಲು ಬಾವಿಯ ದಂಡೆಯಲ್ಲಿ ಇದಿರಿಗೆ ಬಂದಿದ್ದ ಅಯ್ಯನವರ ಮೇಲೆ ಸಂಶಯಗೊಂಡು ಅವರನ್ನು ಹುಡುಕುತ್ತ ಅವರ ಮನೆಗೆ ಬಂದನು. ಗದಿಗಯ್ಯನವರು ಹಣವನ್ನು ಕಳೆದುಕೊಂಡವನು ಅವನೇ ಎಂದು ನಂಬುಗೆಯಾದ ಬಳಿಕ ನಾಲ್ವರನ್ನು ಕರೆಯಿಸಿ ಅವರಿದಿರಿಗೆ ಜೋಡುಗಳ ಗೂಡಿನಲ್ಲಿರಿಸಿದ ಹಮ್ಮಿಣಿಯನ್ನು ಆತನಿಗೆ ತೋರಿಸಿದರು. ಅಯ್ಯನವರ ಮೇಲೆ ಸಂಶಯಗೊಂಡು ಬಂದ ಆ ವ್ಯಾಪಾರಿಯು ಪರದ್ರವ್ಯವನ್ನು ಹೆಂಟೆಗಿಂತ ಕೀಳಾಗಿ ಬಗೆದು ಜೋಡು ಬಿಡುವ ಗೂಡಿನಲ್ಲಿರಿಸಿದ ಅವರ ವಿರಕ್ತಭಾವವನ್ನು ಕಂಡು ಬೆರಗಾದನು. ಆಗ ವ್ಯಾಪಾರಿಯು ಅಯ್ಯನವರ ಮೇಲೆ ಭಕ್ತಿಯುಳ್ಳವನಾಗಿ—ಸ್ವಾಮಿ ಪರರ ಹಣವನ್ನು ಅಪಹರಿಸುವ ಸಾಮಾನ್ಯ ಜನರಲ್ಲಿ ತಮ್ಮನ್ನೆಣಿಸಿ ತಮ್ಮ ಮೇಲೆ ಸಂಶಯದಿಂದ ಬಂದ

ನನ್ನ ತಪ್ಪನ್ನು ಕ್ಷಮಿಸಿರಿ; ಈ ಹಮ್ಮಿಣಿಯಲ್ಲಿರುವ ಹಣವನ್ನೆಲ್ಲ ತಾವು ಸ್ವೀಕರಿಸಿರಿ, ಎಂದು ಬೇಡಿಕೊಂಡನು. ಆಗ ಅಯ್ಯನವರು ಆತನು ಬೇಕಾದಷ್ಟು ಬೇಡಿಕೊಂಡರೂ ಅದನ್ನು ಸ್ವೀಕರಿಸಲಿಲ್ಲವೆಂಬುದಿಷ್ಟೇ ಅಲ್ಲ; ತಮ್ಮ ಕೈಯಿಂದ ಯಾವುದೊಂದು ಜನಹಿತದ ಕೆಲಸಕ್ಕೆ ವೆಚ್ಚ ಮಾಡುವುದಕ್ಕೂ ಒಪ್ಪದೆ ಆ ಗೃಹಸ್ಥನನ್ನು ಕುರಿತು—ಈ ಕೈಪದ ಅಯ್ಯನಿಗೇತಕ್ಕೆ ಹಣವು? ನಾನು ಅದನ್ನು ಮುಟ್ಟಲಾರೆನು ಎಂದು ಹೇಳಿದರು. ಆಗ ವ್ಯಾಪಾರಿಯು ಇನ್ನಿಷ್ಟು ಹಣವನ್ನು ಹಾಕಿ ಆ ಊರಹೊರಗೆ ದಾರಿಗರ ಉಪಯೋಗಕ್ಕಾಗಿ ಗದಿಗಯ್ಯನವರ ಹೆಸರಿನಿಂದ ಒಂದು ಬಾವಿಯನ್ನು ಕಟ್ಟಿಸಿದನು.

---

ತನ್ಮಯತೆ.

## ಮೀನಬಲೆಗಾರ.

ಒಬ್ಬ ಬಲೆಗಾರನು ಒಂದು ಕೆರೆಯ ದಂಡೆಯ ಮೇಲೆ ಮೀನು ಹಿಡಿಯಲು ಕುಳಿತಿದ್ದನು. ಬಿದಿರಿನ ಕೋಲಿಗೆ ಕುರಿಯ ನೆಣದ ದಾರವನ್ನು ಕಟ್ಟಿ ಅದರ ತುದಿಗೆ ಗಾಳವನ್ನು ಕಟ್ಟಿ ಅದರಲ್ಲೊಂದು ಎರೆಹುಳವನ್ನು ಪೋಣಿಸಿ ಕೋಲನ್ನು ನೀರಲ್ಲಿ ಮುಳುಗಿಸಿ ಅದನ್ನೇ ನೋಡುತ್ತ ಕುಳಿತಿದ್ದನು. ಒಂದು ಮೀನು ಬಂದು ಗಾಳವನ್ನಲುಗಿಸುತ್ತಿದ್ದಿತು. ಬಲೆಗಾರನು ಇನ್ನಿಷ್ಟು ಏಕಾಗ್ರತೆ ಹೊಂದಿದನು.

ಈ ಹೊತ್ತಿಗೆ ಒಬ್ಬ ದಾರಿಕಾರನು ಬಂದು-ಅಣ್ಣಾ, ಈ ದಾರಿ ಯಾವೂರಿಗೆ ಹೋಗಿದೆ ಎಂದು ಬಲೆಗಾರನನ್ನು ಕೇಳಿದನು. ಎರಡು ಸಲ ಕೇಳಿದನು; ಮೂರು ಸಲ ಕೇಳಿದನು; ಬಲೆಗಾರನಿಂದ ಉತ್ತರವಿಲ್ಲ. ಬಲೆಗಾರನಿಗೆ ಇತ್ತ ಕಡೆಯ ಅರಿವೇ ಇಲ್ಲ. ದಾರಿಕಾರನು ಮತ್ತೆರಡು ಬಾರಿ ಕೇಳಿದನು ಉತ್ತರವಿಲ್ಲ. ಬಲೆಗಾರನು ಉಸಿರನ್ನು ಕೂಡ ಬಿಗಿಹಿಡಿದು ಎವೆಯಿಕ್ಕದೆ ಗಾಳವನ್ನೇ ನೋಡುತ್ತಿದ್ದನು!

ದಾರಿಕಾರನು ಬೇಸರಗೊಂಡನು. ಇವನೇನು ಮೂಕನೋ, ನನ್ನ ಭಾಷೆ ಇವನಿಗೆ ತಿಳಿಯದೋ, ದಾರಿಯ ಕೇಳಿದರೂ ಹೇಳದಷ್ಟು ಜಂಭಗಾರನೋ ಎಂದು ಆಲೋಚಿಸುತ್ತ ನಿರುಪಾಯನಾಗಿ ಮುಂದೆ ನಡೆದನು.

ಇತ್ತ ಮೀನು ಗಾಳವನ್ನು ನುಂಗಿತು. ಬಲೆಗಾರನು ಕೋಲುಕೊಡವಿ ಮೀನವನ್ನು ಮೇಲೆ ತೆಗೆದು ದೊಪ್ಪನೆ ಬಡಿದು ಚೀಲದಲ್ಲಿ ತುಂಬಿಕೊಂಡನು.

ಬಲೆಗಾರನಿಗೆ ಎಚ್ಚರಾಯಿತು. ದಾರಿಕಾರನು ಇಷ್ಟರಲ್ಲಿ ನೂರಾರು ಮಾರು ದೂರ ಹೋಗಿದ್ದನು. ಬಲೆಗಾರನು ಓಡುತ್ತ ಹೋಗಿ ಅಯ್ಯಾ, ತಾವು ಏನನ್ನೋ ಕೇಳಿದಿರಲ್ಲವೇ ಎಂದನು.

ದಾರಿಕಾರನು ಏನಪ್ಪಾ ಇದು? ಹಾದಿಯನ್ನು ಕೇಳಿ ಹತ್ತೆಂಟು ಸಾರಿ ಕೂಗಿಕೊಂಡರೂ ಹೂ ಹಾ ಎನ್ನದ ನಿನ್ನ ಜಂಭವೆಷ್ಟಪ್ಪಾ ಎಂದು ಬಲೆಗಾರನನ್ನು ಜರೆದು ನುಡಿದನು.

ಬಲೆಗಾರನು ಮರುಗಿ-ಅಣ್ಣಾ, ತಪ್ಪಾಯಿತು, ನಾನು ಜಂಭಗಾರನಲ್ಲ. ಮೀನು ಗಾಳದಲ್ಲಿ ಸಿಲುಕುವ ಹೊತ್ತು; ಅತ್ತಕಡೆಗೇ ಮನಸ್ಸು ಇದ್ದದರಿಂದ ನಿಮ್ಮ ಮಾತು ನನಗೆ ಕೇಳಿಸಲೇ ಇಲ್ಲ ಎಂದು ವಿನಯದಿಂದ ಬಿನ್ನಯಿಸಿದನು.

ಬಲೆಗಾರನ ಏಕಾಗ್ರತೆಗೆ ದಾರಿಕಾರನು ಮೆಚ್ಚಿದನು; ಇಂತಹ ಅನನ್ಯಾಸಕ್ತಭಾವನೆ ಈಶ್ವರನಲ್ಲಿ ನೆಲೆಸಿದರೆ ಜನ್ಮಸಾರ್ಥಕತೆಯಾಗಬಹುದಲ್ಲವೇ ಎಂದು ಭಾವಿಸುತ್ತ ಮುಂದೆ ನಡೆದನು. ಬಲೆಗಾರನು ಮರಳಿ ಬಂದು ಮತ್ತೆ ಗಾಳವನ್ನು ಹಾಕಿ ಕುಳಿತನು.

---

# ೧೫. ಮಹಾತ್ಮಾಜಿಯವರು.


MAHATMA GANDHI

ಜನಾಂಗದ ಅವನತಿಯ ಪರಮಕಾಷ್ಠೆಯ ಕಾಲದಲ್ಲಿ ಅದನ್ನುದ್ಧರಿಸಲು ದೈವಿಕ ಶಕ್ತಿಯ ಒಂದು ಅಸಾಮಾನ್ಯವ್ಯಕ್ತಿಯು ಬೇಕು. ಮಹಾತ್ಮಾಜಿಯು ಇಂತಹ ವ್ಯಕ್ತಿ.

ಮಹಾತ್ಮಾಜಿಯು ಭಾರತಕ್ಕೆ ಇಂದಿನ ರಾಜಕೀಯ ಆಂದೋಲನದ ಮುಂದಾಳು, ಮಂತ್ರದ್ರಷ್ಟಾರನಾದ ಋಷಿ, ನೀತಿಯ ಆದರ್ಶ, ಮನೋಬಲದ ಮೂರ್ತಿ, ಶಾಂತಿಯ ಸದನ. ಅಖಿಲ ಭರತ ವರ್ಷದ ರಾಜಕರಣದ ಭಿನ್ನಭಿನ್ನವಾದ ಬಣಗಳು, ಭಿನ್ನಭಿನ್ನ ಧರ್ಮ ಜಾತಿ ಮತಗಳು— ಶ್ರೀಮಂತರು ದರಿದ್ರರು, ಪಂಡಿತರು ಪಾಮರರು, ಸ್ತ್ರೀಯರು ಪುರುಷರು

ಇವರಿಗೆಲ್ಲ ಐಕಮತ್ಯವಾಗಿ ಸಂಮಾನ್ಯ ವ್ಯಕ್ತಿಯೆಂದರೆ ಇದೊಂದೇ ಸರಿ. ಭರತಖಂಡದಲ್ಲಷ್ಟೇ ಏಕೆ, ಜಗತ್ತಿನೊಳಗಿನ ಎಲ್ಲ ದೇಶಗಳಲ್ಲಿ ಮಹಾತ್ಮನ ಕೀರ್ತಿ ನೆಲೆಸಿದೆಯೆಂಬುದೂ ಮಹಾತ್ಮನು ನಮ್ಮ ದೇಶದವನೆಂಬುದೂ ನಮ್ಮ ಹೆಮ್ಮೆಯ ವಿಷಯಗಳು.

ಕಳೆದ ಅಕ್ಟೋಬರ್ ೨ನೆಯ ತಾರೀಖಿನ ದಿವಸ ಮಹಾತ್ಮನ ೭೦ನೆಯ ವರ್ಧಂತಿಯನ್ನು ಮಾಡಿ ಭಾರತೀಯರು ನಲಿದಾಡಿದರು. ಭಾರತಾಂಬೆಯ ಬಲದೋಳೆನಿಸಿದ ಮುಂಬಯಿ ಪ್ರಾಂತದೊಳಗಿನ 'ಪೋರ್ ಬಂದರ' ವು ಈತನ ತವರೂರು. ವ್ಯಾಪಾರೋದ್ಯೋಗಗಳೇ ಭಾರತದ ಉದ್ಧಾರೋಪಾಯವೆಂಬುದನ್ನು ತೋರಿಸಲೋಸುಗವೋ ಎಂಬಂತೆ ಈತನು ತನ್ನ ಜನ್ಮದಿಂದ ವೈಶ್ಯ ವರ್ಣಕ್ಕೆ ಮೇಲ್ಮೆಯನ್ನು ತಂದನು ಈತನ ತಂದೆ ಕರಮಚಂದನು ತನ್ನ ಮಗನು ಸದ್ಗುಣಗಳಿಂದ ಜಗವನ್ನೇ ಮೋಹಗೊಳಿಸುವನೆಂಬುದನ್ನೂ, ಲೋಕ ಸೇವೆಯೇ ಮಾನವನ ಇತಿಕರ್ತವ್ಯವೆಂಬುದನ್ನು ಈತನು ಆಚರಣೆಯಿಂದ ತೋರಿಸುವನೆಂಬುದನ್ನೂ ಮೊದಲೇ ಕಂಡಿದ್ದನೋ ಎಂಬಂತೆ ಈತನಿಗೆ "ಮೋಹನ-ದಾಸ" ಎಂದು ನಾಮಕರಣ ಮಾಡಿದನು. ೨೩ ವರ್ಷಗಳ ದೀರ್ಘಕಾಲ ಒಂದು ಸಂಸ್ಥಾನದ ಸಂಮಾನ್ಯ ದಿವಾನನಾಗಿದ್ದ ಆ ಮುತ್ಸದ್ದಿಗೆ ಇಂತಹ ಮುನ್ನೋಟವಿರುವುದು ಅರಿದಲ್ಲ.

ಬಾಲಕ ಮೋಹನದಾಸನು ಪೋರ್‌ಬಂದರದಲ್ಲಿ ಪ್ರಾಥಮಿಕ ಶಿಕ್ಷಣವನ್ನೂ ರಾಜಕೋಟ್ ಹಾಯ್‌ಸ್ಕೂಲಿನಲ್ಲಿ ಮಾಧ್ಯಮಿಕ ಶಿಕ್ಷಣವನ್ನೂ ಹೊಂದಿ ವಯಸ್ಸಿನ ಹದಿನೇಳನೆಯ ವರ್ಷವೇ ಮನೆಯ ಮೋಹವನ್ನು ತೊರೆದು ಕಾಯದೆಯ ಅಭ್ಯಾಸಕ್ಕಾಗಿ ಇಂಗ್ಲಂಡಕ್ಕೆ ಹೊರಡಲನುವಾದನು. ತಾಯಿ ಗಾಬರಿಗೊಂಡಳು. ಅವರು ಪರಂಪರಾಭಿಮಾನಿಗಳು. ಅಂತೆಯೇ ಮಗನಿಗೆ ಹನ್ನೆರಡನೆಯ ವರ್ಷಕ್ಕೆ ಮದುವೆ ಮಾಡಿದ್ದರು. ಆದರೆ ಈಗ ಪತಿ ಪರಲೋಕಕ್ಕೆ ತೆರಳಿದ್ದನು. ಇಂಗ್ಲಂಡಕ್ಕೆ ಹೋದವರು "ಕೆಟ್ಟು" ಬರುವರೆಂದು ಆ ಮಾತೆ ಕೇಳಿದ್ದಳು. ಇದರಿಂದ ಅಸಮಾಧಾನಗೊಂಡಳು. ಆದರೂ ಆ ಮುದುಕಮ್ಮನು ಮಗನ ಹುಮ್ಮಸವನ್ನು ನೋಡಿ ಆತನ ಪರದೇಶಗಮನವನ್ನು ಒಪ್ಪಿದಳು. ಆದರೂ ಮನೆಯಿಂದ ಹೊರಡುವ ಮೊದಲು ಮಗನನ್ನು ಧರ್ಮ ಗುರುವಿನ ಬಳಿಗೆ ಕರೆದೊಯ್ದು "ತಾನು ಇಂಗ್ಲಂಡದಿಂದ ಕೆಟ್ಟು,

ಬರುವದಿಲ್ಲ." ಎಂದು ಪ್ರತಿಜ್ಞೆ ಮಾಡಿಸಿಕೊಳ್ಳುವುದನ್ನು ಮರೆಯಲಿಲ್ಲ. ಮೋಹನದಾಸರು ಕಾಯದೆಯ ಅಭ್ಯಾಸವನ್ನು ಮುಗಿಸಿ ಇಂಗ್ಲಂಡದಿಂದ "ಕೆಟ್ಟು" ಬರಲಿಲ್ಲ; ಪರಿಶುದ್ಧರಾಗಿ ಬಂದರು ಕಾಯಿದೆ ನಿಷ್ಣಾತ (ಬಾರ್-ಎಟ್-ಲಾ) ರಾಗಿ ಬಂದರು. ಧರ್ಮಬಾಹಿರರಾಗಲಿಲ್ಲವೆಂಬುದಿಷ್ಟೇ ಅಲ್ಲ, ದೊರೆತ ವೇಳೆಯಲ್ಲಿ ಭಗವದ್ಗೀತೆಯ ಪಠಣ-ಪಾರಾಯಣಗಳನ್ನು ಮಾಡಿ ಧರ್ಮಪರಾಯಣರಾಗಿ ಬಂದರು; ಆಂಗ್ಲಸದ್ಗೃಹಸ್ಥರ ಸದ್ಗುಣಗಳನ್ನು ವಿಶೇಷವಾಗಿ ದೇಶಾಭಿಮಾನವನ್ನು ಪಡೆದು ಸ್ವದೇಶ-ಭಕ್ತರಾಗಿ ಬಂದರು; ಹಿಂದುಳಿದವರನ್ನು ಮುಂದುವರಿಸುವ ಮುಂದಾಳಾಗಿ ಬಂದರು; ಹಲವೇನು, ದೀನೆಯಾದ ಭಾರತಮಾತೆಯ ಉದ್ಧಾರಕರಾಗಿ ಬಂದರು.

ಮಹಾತ್ಮಾಜಿಗೆ ಜಗತ್ತೇ ಸಂಮಾನಿಸುವಷ್ಟುಮಟ್ಟಿಗೆ ಇಷ್ಟೊಂದು ಗೌರವವೇಕೆ ಬಂದಿತು, ಇಂತಹ ಬೇರೆ ವ್ಯಕ್ತಿಗಳು ಜಗತ್ತಿನಲ್ಲಿ ಇಲ್ಲವೇ, ಆತನು ಮಾಡಿದುದೇನು ಎಂಬುದನ್ನು ನಾವು ತಿಳಿಯಬೇಕು. ಈಚೆಗೆ ಅಹಿಂಸಾಮಯ-ಅಸಹಕಾರ, ಸತ್ಯಾಗ್ರಹ, ಶಾಂತಿಸಮರ, ನಿಃಶಸ್ತ್ರಪ್ರತೀಕಾರ, ಮೊದಲಾದ ಶಬ್ದಗಳು ಬಳಕೆಯಲ್ಲಿ ಬರುತ್ತಿವೆ. ಒಂದು ವ್ಯಕ್ತಿಯು ಇನ್ನೊಂದು ವ್ಯಕ್ತಿಯ ಮೇಲೆ, ಒಂದು ಜನಾಂಗವು ಇನ್ನೊಂದು ಜನಾಂಗದ ಮೇಲೆ, ತನ್ನ ಬಲುಮೆಯನ್ನು ತೋರ್ಪಡಿಸಿ ಆ ವ್ಯಕ್ತಿಯನ್ನು ಇಲ್ಲವೆ ಆ ಜನಾಂಗವನ್ನು ಹತ್ತಿಕ್ಕುವ ಸಂದರ್ಭದಲ್ಲಿ ಆ ದುರ್ಬಲವಾದ ವ್ಯಕ್ತಿಯು ಇಲ್ಲವೆ ಜನಾಂಗವು ತನ್ನ ಆಂತರಿಕ ಆತ್ಮಬಲವನ್ನು ಪ್ರಕಟಗೊಳಿಸುವುದು; ಇದೇ ಆ ವ್ಯಕ್ತಿಯ ಇಲ್ಲವೆ ಆ ಜನಾಂಗದ ಉದ್ಧಾರದ ಅಂತಿಮ ಸಾಧನ; ದಿವ್ಯ ಸಾಧನ. ಈ ಆತ್ಮಬಲದ ಮುಂದೆ ಎಂತಹ ಅಪಾರವಾದ ಪಾಶವಬಲವೂ ತಲೆವಾಗಬೇಕಾಗುವುದು; ಇಂತಹ ಆತ್ಮ ಬಲವನ್ನವಲಂಬಿಸಿದವನು ಪ್ರತಿಕಕ್ಷಿಯನ್ನು ಅಸಹಕಾರದಿಂದ ಇದಿರಿಸುವನು. ಅಸಹಕಾರವೆಂದರೆ ಯಾವ ಬಗೆಯಿಂದಲೂ ಕೂಡಿ ನಡೆಯದಿರುವುದು; ನೆರವಾಗದಿರುವುದು. ಈ ಅಸಹಕಾರವು ಅಹಿಂಸಾಮಯವಿರಬೇಕಾದುದು ಆವಶ್ಯಕ; ಇದಿರಾಳಿಯಿಂದ ಬೇಕಾದ ಕಷ್ಟಗಳು ಒದಗಿದರೂ ತಾನು ತಿರುಗಿ ಆತನಿಗೆ ಕಷ್ಟಕೊಡದೆ ಆತನೊಡಗೂಡಿ ನಡೆಯದಿರುವವನೇ ನಿಜವಾಗಿ

ಅಸಹಕಾರಿಯೂ. ಸತ್ಯವು ಸೆರೆಯಾಗುವ ಎಂದರೆ ಸತ್ಯಪಕ್ಷವನ್ನು ಅಸತ್ಯ ಪಕ್ಷವು ಗೆಲ್ಲುವ ಸಂದರ್ಭದಲ್ಲಿ ಸತ್ಯಕ್ಕಾಗಿ—ಸತ್ಯಪಕ್ಷಕ್ಕಾಗಿ ಆಗ್ರಹವನ್ನು ಹಿಡಿಯುವುದು ಸತ್ಯಾಗ್ರಹವು. ಸತ್ಯಪಕ್ಷಕ್ಕೆ ಗೆಲುವು ಸಿಕ್ಕುವವರೆಗೆ ಅಸತ್ಯ ಪಕ್ಷವನ್ನು ಮನ್ನಿಸದಿರುವುದು, ಸತ್ಯಪಕ್ಷಕ್ಕಾಗಿ ತನ್ನ ತನು-ಮನೋ-ಧನ ಗಳನ್ನು ಬಲಿಗೊಡುವುದು ಸತ್ಯಾಗ್ರಹಿಯ ಧರ್ಮವು. ಸತ್ಯಾಗ್ರಹವು ಕೇವಲ ರಾಜಕೀಯ ಆಂದೋಲನವೆಂದು ಹಲವರು ತಿಳಿದಿರುವರು; ಆದರೆ ಧಾರ್ಮಿಕ, ನೈತಿಕ, ಆರ್ಥಿಕ ಆಂದೋಲನಗಳಲ್ಲಿಯೂ ಇದು ಕಾರ್ಯಕಾರಿಯೆಂಬುದು ಬಹುಜನಸಮ್ಮತವಾಗಿದೆ. ಸತ್ಯಾಗ್ರಹಿಯು ಸತ್ಯ-ಜಯಕ್ಕಾಗಿ ಅಸತ್ಯ ಪಕ್ಷದವರೊಡನೆ ಹಿಂಸಾಮಯ ಪ್ರತೀಕಾರವನ್ನು ಅವಲಂಬಿಸುವುದಿಲ್ಲ; ಆವನು ಪ್ರತಿಪಕ್ಷಿಯು ಕೊಟ್ಟ ಬೇಕಾದ ಕಷ್ಟಗಳನ್ನು ಸುಮ್ಮನೆ ತಾಳಿ ಕೊಳ್ಳುವಷ್ಟು ಮನೋಜಯವುಳ್ಳವನಾಗಿರುವನು ಈ ಸತ್ಯಾಗ್ರಹಯೋಗಿಯು ತನ್ನ ಸತ್ಯಪಕ್ಷದ ಗೆಲುವಿಗಾಗಿ ನಡೆಸುವ ಈ ಹೋರಾಟವೇ ಶಾಂತಿ ಸಮರವು ಈ ಸಮರವು ಶಾಂತಿಯಿಂದ ಆರಂಭವಾಗಿ ಶಾಂತಿಯಲ್ಲಿಯೇ ಮುಗಿಯುವುದು. ಈ ಸಮರದಲ್ಲಿ ಪ್ರತಿಪಕ್ಷಿಯು ವೈರಿಯಲ್ಲ; ಬಂಧುವು. ಈ ಸಮರದಲ್ಲಿ ಹಿಂಸಾಕರ ಆಯುಧಗಳ ಸುಳಿವೇ ಇಲ್ಲ; ಈ ಸಮರದಲ್ಲಿ ಭೌತಿಕ ಶಾಸ್ತ್ರಗಳು ಲಕ್ಷಾವಧಿ ಜನರ ಪ್ರಾಣಗಳನ್ನು ಕ್ಷಣದಲ್ಲಿ ಅಪಹರಿಸುವ ಉಪಾಯಗಳನ್ನು ಹುಡುಕುವ ತಮ್ಮ ಕೌಶಲ್ಯವನ್ನು ಸಮರ್ಪಿಸಬೇಕಾಗಿಲ್ಲ; ಸಾಮಾನ್ಯ ಸಮರವು ವೈರಿಯಲ್ಲಿ ಹಗೆತನವನ್ನು ಹೆಚ್ಚಿಸಿದರೆ ಶಾಂತಿಸಮರವು ವೈರಿಯಲ್ಲಿ ಬಂಧುಭಾವವನ್ನು ಬೀರುವುದು. "ಲೀಗ್ ಆಫ್ ನೇಶನ್ಸ್" ಎಂಬ ರಾಷ್ಟ್ರಸಂಘವು ಹೇಳುವುದೇನು? "ಶಾಂತಿಃ ಶಾಂತಿಃ ಶಾಂತಿಃ" ಎಂದಲ್ಲವೇ? ಮಹಾತ್ಮನು ಈ ಶಾಂತಿಸೂಕ್ತದ ಮಂತ್ರದ್ರಷ್ಟಾರನಾದ ಋಷಿ. ಅಂತೆಯೇ ಮಹಾತ್ಮನನ್ನು ಪೂರ್ವದೇಶದ ಕ್ರಿಸ್ತ ಎಂದೂ ಹಲವರು ಹೇಳಿದರು. ಬುದ್ಧನಂತೆ ಆತನು ದ್ವೇಷಭಾವವನ್ನು ನಿರ್ಮೂಲನಗೊಳಿಸು ವಲ್ಲಿ ಯಶಸ್ವಿಯಾದನು. ಈ ಶಾಂತಿಮಂತ್ರದಿಂದಲೇ ಪರಸ್ಪರ ವೈಮನಸ್ಯ ವುಳ್ಳ ಹಲವು ಪಂಗಡಗಳನ್ನು ಒಂದುಗೂಡಿಸುವಲ್ಲಿ ಪಯಗಂಬರರಂತೆ ಜಯವನ್ನು ಪಡೆದನು.

ಮಹಾತ್ಮನು ಈ ದಿವ್ಯಮಂತ್ರವನ್ನು ಎಲ್ಲಿ ಕಂಡನು, ಎಲ್ಲಿ ಪ್ರಯೋಗಿಸಿದನು ಎಂಬುದು ಕುತೂಹಲಜನಕವಾಗಿದೆ. ಮೋಹನದಾಸರು

ಬಾರಿಸ್ಟರರಾಗಿ ಮಾತೃಭೂಮಿಗೆ ಬಂದ ಒಂದು ವರ್ಷದೊಳಗಾಗಿಯೇ ಒಂದು ಸಂದರ್ಭವು ಒದಗಿ ಅದು ಅವರನ್ನು ಆಫ್ರಿಕೆಗೆ ಒಯ್ದುಬಿಟ್ಟಿತು. ಅಲ್ಲಿಯ ಸನ್ನಿವೇಶವು ಹಿಂದಿಗಳಿಗೆ ಬಹು ಭಯಾವಹವಾಗಿದ್ದಿತು. ಅಲ್ಲಿ ನೆಲೆಸಿದ ಯುರೋಪಿಯನರು ಹಿಂದಿಗಳನ್ನು ಹಂದಿಗಳಿಗಿಂತ ಕೀಳಾಗಿ ಬಗೆಯುತ್ತಿದ್ದರು. ನಾಗರಿಕರಿಗೆ ಸಲ್ಲಬೇಕಾದ ಹಕ್ಕುಬಾಧ್ಯತೆಗಳನ್ನು ಕನಸಿನಲ್ಲಿ ಬಯಸುವುದೂ ಸಾಧ್ಯವಿರಲಿಲ್ಲ. ಇದೀಗ ಜೀವನಕಲಹದ ಮಹಿಮೆ. ಎಂಜಲೆಲೆ ನೆಕ್ಕುತ್ತಿದ್ದ ನಾಯಿ ಮತ್ತೊಂದು ನಾಯಿ ಬಂದೊಡನೆ ಗುರುಗುಟ್ಟುವುದು ಸ್ವಭಾವ. ಇದ್ದ ಹಿಂದಿಗಳನ್ನು ಹಿಂದಕ್ಕಟ್ಟುವುದೂ, ಹೊಸ ಹಿಂದಿಗಳು ಬಾರದಂತೆ ಮಾಡುವುದೂ ಈ ಮಾನವ ತಿರಸ್ಕಾರದ ಗುಟ್ಟು. ಮೋಹನದಾಸರು ತಮ್ಮ ದೇಶಬಾಂಧವರಿಗೊದಗಿದ ಈ ವಿಪತ್ತನ್ನು ಕಂಡು ಮರಮರ ಮರುಗಿದರು; ಅವರ ಉದ್ಧಾರಕ್ಕೆ ಬದ್ಧಕಂಕಣರಾದರು. ಪ್ರಬಲವಾದ ಆಫ್ರಿಕಾ ಸರಕಾರವನ್ನು ದುರ್ಬಲರಾದ ಹಿಂದಿಗಳು ಲೌಕಿಕಬಲದಿಂದ ದಾರಿಗೆ ತರುವುದು ಸಾಧ್ಯವಿರಲಿಲ್ಲ ಈ ಸಂದರ್ಭದಲ್ಲಿಯೇ, ವಿಚಾರಮಗ್ನರಾದ ಮೋಹನದಾಸರು ಧ್ಯಾನಮಗ್ನನಾದ ಗೌತಮಬುದ್ಧನು ಬೋಧಿದ್ರುಮತಲದಲ್ಲಿ ಮಾನವ ಜಾತಿಯ ಉದ್ಧಾರಮಾರ್ಗವನ್ನು ಕಂಡಂತೆ ಆಫ್ರಿಕೆಯ ಹಿಂದಿಗಳ, ಜಗದೊಳಗಿನ ಎಲ್ಲ ದುರ್ಬಲರ-ಅಲೌಕಿಕ ಉದ್ಧಾರಮಾರ್ಗವನ್ನು ಕಂಡರು. ಇದೇ ಸತ್ಯಾಗ್ರಹಮಂತ್ರವು! ನಿಃಶಸ್ತ್ರಶಾಂತಿಸಮರಸೂಕ್ತವು! ಮೋಹನದಾಸರು ಅದ್ಭುತವಾದ ಈ ಆಂತರಿಕ ಆತ್ಮಬಲವನ್ನು ಮೊದಲು ಹೊರಗೆ ಪ್ರಕಟಿಸಿದುದು ಆಫ್ರಿಕೆಯಲ್ಲಿ. ಇವರೇ ಅಲ್ಲಿ ನಡೆದ ಶಾಂತಿಸಮರದ ಸೇನಾನಾಯಕರು. ತಾವೂ, ತಮ್ಮ ಅನುಯಾಯಿಗಳೂ ಸತ್ಯಾಗ್ರಹವ್ರತವನ್ನು ಕೈಕೊಳ್ಳುವೆವೆಂದು ಒಂದು ಸಾರಗರ್ಭಿತವಾದ ಪತ್ರವನ್ನು ಆಫ್ರಿಕಾ ಸರಕಾರಕ್ಕೆ ಬರೆದು ಮಬ್ಬುಗವಿದ ಅದರ ಕಣ್ಣನ್ನು ನಿಚ್ಚಳವಾಗಿ ತೆರೆದರು. ಈ ಕಾಲದಲ್ಲಿ ಅವರು ಹಲವುಬಾರಿ ಕಾರಾಗೃಹವಾಸಕಷ್ಟಕ್ಕೀಡಾಗಬೇಕಾಯಿತು. ಒಂದೆರಡು ಬಾರಿ ಜೀವಕ್ಕೆರವಾಗುವ ಯೋಗವೂ ಒದಗಿದ್ದಿತು. ಆದರೂ ಈ ಸಮರದಲ್ಲಿ ಮಹಾತ್ಮರು ಕೆಲಮಟ್ಟಿಗಾದರೂ ಗೆಲುವನ್ನು ಪಡೆದರು; ತಮ್ಮ ದೇಶಬಾಂಧವರ ಕಷ್ಟಗಳನ್ನು ಸ್ವಲ್ಪವಾದರೂ ಹೋಗಲಾಡಿಸಿದರು. ಆಗಿನಿಂದ ಮೋಹನದಾಸರು ಮಹಾತ್ಮರೆನಿಸಿದರು.

ಆಫ್ರಿಕೆಯಿಂದ ಮರಳಿಬಂದ ಮಹಾತ್ಮರು ಮಾತೃಭೂಮಿಯ ಉದ್ಧಾರಕ್ಕಾಗಿ ಟೊಂಕಕಟ್ಟಿದರು ಜನತೆಯೇ ಜನಾರ್ದನನೆಂದು ಭಾವಿಸಿದರು; ದೇಶಸೇವೆಯೇ ಈಶಸೇವೆಯೆಂದು ಮನಗಂಡರು. ದೇಶಹಿತ ಚಿಂತನವೇ ಅವರ ಜೀವನವ್ರತವಾಯಿತು. ಆ ಕಾಲದಲ್ಲಿ ಹಲವರು ಮುಂದಾಳುಗಳು ದೇಶದ ಉನ್ನತಿಗಾಗಿ ಹಲವು ಮಾರ್ಗಗಳನ್ನು ಹಿಡಿದಿದ್ದರು. ಮಹಾತ್ಮರು ತಾವು ಕಂಡು ಹಿಡಿದ ಮಂತ್ರವೇ ಕಾರ್ಯಕಾರಿ ಎಂಬುದನ್ನು ಅವರಿಗೆ ಕಾಣಿಸಿಕೊಟ್ಟರು. ಕ್ರಮದಿಂದ ಮಹಾತ್ಮರೇ ಹಿಂದಿ ರಾಷ್ಟ್ರಸಭೆಯ ಮುಖ್ಯರಲ್ಲೊಬ್ಬರಾದರು. ದೇಶದ ಮುಂದಾಳುಗಳನ್ನು ತಮ್ಮ ಮಾರ್ಗಕ್ಕೆ ಒಲಿಸಿಕೊಂಡ ತರುವಾಯ ಮಹಾತ್ಮರು ಲೋಕಜಾಗೃತಿಗಾಗಿ ಹಲವು ಪ್ರಯತ್ನಗಳನ್ನು ಕಯ್ಕೊಂಡರು. ಇಡೀ ದೇಶವನ್ನು ಹಲವುಬಾರಿ ತಿರುಗಾಡಿ ಅಲ್ಲಲ್ಲಿ ಉಪನ್ಯಾಸಗಳನ್ನು ಕೊಟ್ಟರು; ವೃತ್ತಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದರು. ಮುಸಲ್ಮಾನ ಮುಂದಾಳುಗಳ ಸಹಕಾರವನ್ನು ಸಂಪಾದಿಸಿ ಹಿಂದು ಮುಸಲ್ಮಾನರಲ್ಲಿ ಬಂಧುಭಾವವನ್ನುಂಟುಮಾಡಲು ಯತ್ನಿಸಿದರು ಅಸಹಕಾರ, ಸತ್ಯಾಗ್ರಹ ಮುಂತಾದುವುಗಳ ಪ್ರಯೋಗವನ್ನು ಮಾಡಿ ನೋಡಿದರು; ಸೆರೆಮನೆಯ ಸೋಬತಿಯಾದರು. ಭಾರತೀಯರಲ್ಲಿ ಹೊಸಚೈತನ್ಯವನ್ನು ತುಂಬಿದರು; ದೇಶಕ್ಕಾಗಿ ಏನು ಮಾಡಬೇಕೆಂಬುದನ್ನು ಅವರಿಗೆ ಮನದಟ್ಟು ಮಾಡಿಕೊಟ್ಟರು. ದೇಶಕಾರ್ಯಕ್ಕಾಗಿ ಹಲವು ಬಾರಿ ಇಂಗ್ಲಂಡಕ್ಕೂ ಹೋಗಿ ಬಂದರು. ಹೀಗೆ ಅಹೋರಾತ್ರ ದೇಶಹಿತಚಿಂತನದಲ್ಲಿಯೇ ತನ್ಮಯರಾದ ಗಾಂಧೀಜಿಯವರ ಹೆಸರು ಹಿಂದುಸ್ಥಾನದ ಸಂದಿ ಮೂಲೆಗಳಲ್ಲಿ ಪ್ರತಿಧ್ವನಿತವಾಗತೊಡಗಿತು. ಹೋದ ಹೋದಲ್ಲಿ ಬಾಲಕರು, ತರುಣರು, ವೃದ್ಧರು, ಸ್ತ್ರೀಯರು ತನು-ಮನೋ ಧನಗಳಿಂದ ಅವರ ಕಾರ್ಯಕ್ಕೆ ಸಹಾನುಭೂತಿಯನ್ನು ತೋರ್ಪಡಿಸಿದರು. ಹಲವರು ಅವರನ್ನು ಪೂರ್ಣವಾಗಿ ಬೆಂಬಳಿಸಿದರು.

ಯಾವ ದೇಶವಾದರೂ ತನ್ನನ್ನು ತಾನೇ ಆಳಬೇಕೆಂದು ಹೇಳುವವರಲ್ಲಿ ಮಹಾತ್ಮರು ಒಬ್ಬರು. ದೇಶಕ್ಕೆ ಬಡತನವು ಶರೀರಕ್ಕೆ ರೋಗವಿದ್ದಂತೆ ಎಂದು ಇವರು ಹೇಳುವರು. ಇದಕ್ಕಾಗಿ ಪ್ರತಿವ್ಯಕ್ತಿಯೂ ಉದ್ಯೋಗವನ್ನು ಮಾಡಿಯೇ ತೀರಬೇಕೆಂಬುದು ಇವರ ಕಟ್ಟಪ್ಪಣೆ. ಚರಕವನ್ನು ತಿರುಗಿಸಿ ನೂಲುವುದು

ಇವರ ಪ್ರೀತಿಯ ಹೋರೆ. ಈ ಹೋರೆಯು ಇವರ ದಿನಚರ್ಯೆಯಲ್ಲಿ ಸೇರಿದೆ. ಮಕ್ಕಳೇ, ಚರಕದಿಂದ ನೂಲುತ್ತಿರುವ ಗಾಂಧಿಚಿತ್ರವನ್ನು ಮನೆಮನೆಯಲ್ಲಿ ನೀವು ಕಾಣಬಹುದು. ಪರದೇಶದ ಕೈಗಾರಿಕೆಯ ಒಡವೆಗಳನ್ನು ಕೊಂಡು ದೇಶದ ಉದ್ಯೋಗಜೀವಿಗಳ ದುರ್ದಸೆಯನ್ನುಂಟುಮಾಡುವುದು ಪಾಪವೆಂದು ಇವರು ಬಗೆಯುವರು. ವಿಲಾಸರಹಿತವಾದ 'ಸಾದಾ' ಜೀವನದಲ್ಲಿ ಮಹಾತ್ಮರು ಲೋಕಕ್ಕೆ ಆದರ್ಶಪ್ರಾಯರಾಗಿರುವರು. ಮಹಾತ್ಮಾ ಗಾಂಧೀಜಿಯವರು ಇಂಗ್ಲಂಡಕ್ಕೆ ಹೋದಾಗ, ಗತಿಸಿದ ಘನತೆಹೊಂದಿನ ಪಂಚಮ ಜಾರ್ಜ ಬಾದಶಹರು ಇವರನ್ನು ಕಾಣಲು ಕರೆಸಿಕೊಂಡಾಗ ಇವರು ಒಂದು ಖಾದಿಯ ಪಂಜೆಯನ್ನುಟ್ಟುಕೊಂಡು ಒಂದು ಖಾದಿಯ ಪಂಜೆಯನ್ನು ಮೈಮೇಲೆ ಹೊದೆದುಕೊಂಡು ಅವರ ದರ್ಶನವನ್ನು ತೆಗೆದುಕೊಂಡರಂತೆ. ಮಕ್ಕಳಿರಾ, ಆ ಚಿತ್ರವನ್ನು ನೀವು ಎಂದೂ ಮರೆಯಲಾರಿರಿ. ಮನುಷ್ಯರೆಲ್ಲರೂ ಸಮಾನರೆಂದೂ, ಜನ್ಮದಿಂದ ಅವರಲ್ಲಿ ಉಚ್ಚ-ನೀಚ ಭಾವವು ಸಲ್ಲದೆಂದೂ ಅವರು ದೃಢವಾಗಿ ನಂಬಿರುವರು. ಆದುದರಿಂದ ಅವರ ಶಬ್ದಕೋಶದಲ್ಲಿ ಅಸ್ಪೃಶ್ಯ, ಅಂತ್ಯಜ ಮೊದಲಾದ ಶಬ್ದಗಳೇ ಇಲ್ಲ. ಸಮಾಜಸಂಸ್ಕರಣದಲ್ಲಿ ಇವರು ಶ್ರೀಬಸವೇಶ್ವರರ ಮಾರ್ಗವನ್ನು ಅನುಸರಿಸಿದರು. ಮದ್ಯಪಾನವು ಅನೀತಿಗೂ, ದೇಶದ ಅವನತಿಗೂ ಕಾರಣವಾಗುವುದರಿಂದ ಯಾವನೂ ಮದ್ಯಪಾಯಿಯಾಗಬಾರದೆಂಬುದು ಇವರ ಖಂಡಿತವಾದ ಅಭಿಪ್ರಾಯವು. ಅಲ್ಲದೆ ಈಗಿನ ಶಿಕ್ಷಣಕ್ರಮದಿಂದ ಸುಶಿಕ್ಷಿತನೆನಿಸಿಕೊಂಡವನೂ ಕೂಡ ತನ್ನ ಕಾಲಮೇಲೆ ನಿಂತು ಜೀವಿಸಲು ಸಮರ್ಥನಾಗುವನೆಂಬ ನಿರ್ಧಾರವಿಲ್ಲದಿರುವುದರಿಂದ ನಮ್ಮ ಶಿಕ್ಷಣದ ದಿಶೆಯನ್ನು ಬದಲಿಸಿ ಸುಶಿಕ್ಷಿತರೆಲ್ಲರೂ ಸ್ವಾವಲಂಬಿಗಳಾಗಿ ಜೀವಿಸಬಹುದಾದಂಥ ಹೊಸ ಶಿಕ್ಷಣ ಯೋಜನೆಯು ಆವಶ್ಯಕವೆಂದು ಅವರು ಪ್ರತಿಪಾದಿಸುವರು. ಮೊನ್ನೆ ಮೊನ್ನೆ ಹೊರಟ "ವರ್ಧಾ ಶಿಕ್ಷಣಯೋಜನೆ" ಯು ಈ ಸಮಸ್ಯೆಯನ್ನು ಬಿಡಿಸಲು ಹೊರಟ ಪ್ರಥಮ ಪ್ರಯೋಗವಾಗಿದೆ

ರಾಜಕರಣಪ್ರಾವೀಣ್ಯ, ನೈತಿಕದಾರ್ಢ್ಯ, ಉದಾತ್ತವಿಚಾರ, ವಿಲಾಸರಹಿತ ಜೀವನ, ನುಡಿಯಂತೆ ನಡೆ, ದೇಶಭಕ್ತಿ ಮುಂತಾದ ಗುಣಗಳಿಂದ ಮಹಾತ್ಮಾಜಿಯವರು ಹಿಂದುಸ್ತಾನದಲ್ಲಷ್ಟೇ ಅಲ್ಲ, ಜಗತ್ತಿನಲ್ಲೆಲ್ಲ ಹೆಸರಾಗಿರುವರು.

ಮಹಾತ್ಮರು ನವಯುಗದ ಭಾರತರಾಷ್ಟ್ರದ ಆಶಾಕಾಂಕ್ಷೆಗಳಾವುವೆಂಬುದನ್ನು ತಪ್ಪುತಡೆಗಳಿಲ್ಲದೆ ತಿಳಿದುಕೊಂಡ, ಇಡಿ ರಾಷ್ಟ್ರದ ವಿಶ್ವಾಸಕ್ಕೆ ಪಾತ್ರವಾದ, ಮಾರ್ಗದರ್ಶಕವ್ಯಕ್ತಿಯೆಂಬುದನ್ನು ೧೯೩೧ನೆಯ ಇಸವಿಯಲ್ಲಿ ಕರಾಚಿಯಲ್ಲಿ ನೆರೆದ ನಮ್ಮ ರಾಷ್ಟ್ರೀಯ ಮಹಾಸಭೆಯು ನಿರ್ಣಯಿಸಿ ಇವರನ್ನು ಭಾರತ ರಾಷ್ಟ್ರದ ಪರವಾಗಿ ರಾಜಕೀಯ ಸಲಹೆಗಾರರೆಂದು ಇಂಗ್ಲಂಡಕ್ಕೆ ಕಳುಹಿತು. ಇವರು ೧೯೨೪ನೆಯ ಇಸ್ವಿಯಲ್ಲಿ ಬೆಳಗಾವಿಯಲ್ಲಿ ನೆರೆದ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರಾದುದನ್ನು ಕನ್ನಡಿಗರು ಎಂದೂ ಮರೆಯಲಾರರು. ನಮ್ಮ ಸಾರ್ವಭೌಮರಿಂದಲೂ, ಸಾರ್ವಭೌಮ ಸರಕಾರದಿಂದಲೂ ಮಹಾತ್ಮರು ತುಂಬ ಮನ್ನಣೆಯನ್ನು ಪಡೆದಿರುವರು. ಬ್ರಿಟಿಷಸಾಮ್ರಾಜ್ಯದ ನಿವೃತ್ತ ಪ್ರಧಾನರಾದ ರೈ ಆರ್. ಡೆವ್ಹಿಡ್ ಲೈಡ್ ಜಾರ್ಜರವರು ಮಹಾತ್ಮರು ಪ್ರಪಂಚದೊಳಗಿನ ಸುಪ್ರಸಿದ್ಧ ಮಹಾಪುರುಷರೆಂದು ಹೇಳಿರುವರು.

ಸಮಗ್ರ ಜಗತ್ತಿನ ಶಾಂತತಾಭಂಗಕ್ಕೆ ಕಾರಣವಾಗುವ ಭಾವಿ ಮಹಾಯುದ್ಧದ ಪ್ರವರ್ತಕರೆಂದು ಪ್ರಪಂಚದ ದೃಷ್ಟಿಯನ್ನು ಸೆಳೆದುಕೊಂಡ ಮುಸಿಲೋನಿ, ಹಿಟ್ಲರರಂತಹ ಪ್ರಚಂಡ ವ್ಯಕ್ತಿಗಳ ಅತ್ಯುಗ್ರ ಪಾಶವಶಕ್ತಿಯನ್ನು ಕೂಡ ಧೀರಗಂಭೀರಭಾವದಿಂದ ಇದಿರಿಸಬಲ್ಲೆನೆಂದೂ, ಜಗತ್ತಿನ ಶಾಂತಿಸ್ಥಾಪನೆಗೆ ಅಹಿಂಸಾಮಯ ಶಾಂತಿಸಮರವೇ ಮಹಾಮಂತ್ರವೆಂದೂ ಮಹಾತ್ಮರು ಇದೇ ಅಕ್ಟೋಬರ ೧೫ನೆಯ ತಾರೀಖಿನ ಹರಿಜನಪತ್ರಿಕೆಯಲ್ಲಿ ಸಾರಿದ್ದಾರೆ. ಇಷ್ಟುಮಟ್ಟಿಗೆ ಶಾಂತಿಸಮರದಲ್ಲಿ ಅವರ ನಂಬುಗೆ.

ಹಲವರು ತರುಣರಾಗಿದ್ದರೂ ವೃದ್ಧರು; ಗಾಂಧೀಜಿಯವರು ವೃದ್ಧರಾಗಿದ್ದರೂ ತರುಣರು. ಹಲವರಿಗೆ ತಮ್ಮ ಮತಗಳ ಮೇಲೆ ತಮಗೇ ನಂಬುಗೆಯಿಲ್ಲ; ಮಹಾತ್ಮಾಜಿಯವರು ತಮ್ಮ ಮತಗಳನ್ನು ತಾವು ಹೃತ್ಪೂರ್ವಕವಾಗಿ ನಂಬಿರುವರಲ್ಲದೆ ಪರರಿಗೆ ಪೂರ್ಣವಾಗಿ ಮನಗಾಣಿಸಿಕೊಡಬಲ್ಲರು. ಹಲವರ ವಿಚಾರಗಳು ಪರಕ್ಷಣದಲ್ಲಿಯೇ ತಪ್ಪೆಂದು ಸಿದ್ಧವಾಗುವುವು; ಗಾಂಧೀಮಹಾತ್ಮರ ವಿಚಾರಗಳು ತ್ರಿಕಾಲಾಬಾಧಿತಗಳು; ಅಂತೆಯೆ ಅಮರಗಳು. ಇಂತಹ ಮತ, ವಿಚಾರ ಇವುಗಳಿಂದ ಮಹಾತ್ಮಾ ಗಾಂಧಿಯವರೂ ಅಮರರು; ಚಿರಂಜೀವಿಗಳು.

# ಅನುಬಂಧ.

## ೧. ನಮ್ಮ ಹಿರಿಯ ಕನ್ನಡನಾಡು; ನುಡಿ. ಪುಟ ೧–೬.

**ಅ. ಗ್ರಂಥಪರಿಚಯ:—**

ಕನ್ನಡ ನಾಡುನುಡಿಗಳ ಪರಿಚಯವನ್ನೂ ಕರ್ನಾಟಕದ ಏಕೀಕರಣ ವಿಚಾರವನ್ನೂ ಒಳಗೊಂಡ ಸ್ವತಂತ್ರ ಲೇಖನವು.

**ಬ. ಶಬ್ದಕೋಶ:—**

ಕನ್ನಡಿಗ—ಕನ್ನಡ+ಇಗ (ತದ್ಧಿತನಾಮ.) ಕನ್ನಡವನ್ನು ಆಡುವವ; ಅರಿತವ. ನೆಲೆವೀಡು—ನೆಲೆ+ಬೀಡು. (ಬೀಡು-ಬಿಡು ಧಾತುವಿನ ಕೃದ್ಭಾವ ನಾಮ) ವಾಸವಾಗಿರುವ ಪ್ರದೇಶ. ಆಧಿಪತ್ಯ—(ಅಧಿಪತಿ+ಯ) ಒಡೆಯತನ. ಗಡಿಗಲ್ಲು—ಗಡಿ+ಕಲ್ಲು—ಮೇರೆಗಲ್ಲು, ಷ. ತ. ನ್ಯಾಯ್ಯ-ನ್ಯಾಯ+ಯ—ಯೋಗ್ಯವನ್ನು ಅನುಸರಿಸಿದ್ದು. ವಿಶ್ವವಿದ್ಯಾಲಯ—ವಿಶ್ವ+ವಿದ್ಯಾ+ಆಲಯ—ಉಚ್ಚಶಿಕ್ಷಣ ಕೊಡುವ ವ್ಯವಸ್ಥೆಮಾಡುವ ಸಂಸ್ಥೆ, ಸಮಿತಿ. ಜಲಪ್ರಪಾತ—ಜಲ+ಪ್ರ+ಪತ್+ಅ+—ಜಲವು (ಪ್ರವಾಹವು) ಎತ್ತರದಿಂದ ಕೆಳಗೆ ಬೀಳುವದು—ತಡಸಲು ಅಣೆಕಟ್ಟು—ಪ್ರವಾಹವನ್ನು ತಡೆದು ಹಿಡಿಯುವದಕ್ಕಾಗಿ ಅದಕ್ಕೆ ಅಡ್ಡವಾಗಿ ಹಾಕುವ ತಡೆ ಕರು+ನಾಡು—ತಪ್ಪಲು ನಾಡು. ಸಂಸ್ಕೃತಿ—ಪರಂಪರೆಯಿಂದ ಬಂದ ನಾಗರಿಕತೆ; ಪರಂಪರೆಯಿಂದ ಬಂದ ಅಭಿರುಚಿ, ಭಾವನೆ ಮುಂ. ಸಮ್ಮಿಲನ—ಸಮ್+ಮಿಲನ (ಮಿಲ್ ಧಾ. ಕೂಡು) ಚೆನ್ನಾಗಿ ಕೂಡುವಿಕೆ. ಕಲಾಜೀವನ-ಕಲೆಗಳನ್ನು ಪ್ರೀತಿಸುವ ಬಾಳು. ಕಲೆಗಳು ಯಾವವು? ಬಾಂಧವ್ಯ—ಬಂಧು+ಯ—ಬಂಧುತನ. ಏಕೀಕರಣ—ಏಕ+ಈ+ಕರಣ—ಏಕವಾಗದೆ ಇರುವದನ್ನು ಏಕವಾಗಿ ಮಾಡುವುದು.

**ಕ. ಟಿಪ್ಪಣಿಗಳು:—**

ಸಾಹಿತ್ಯ—ಗದ್ಯಪದ್ಯ ಮುಂತಾದ ಎಲ್ಲ ವಾಙ್ಮಯ, ವ್ಯಾಕರಣ, ಅಲಂಕಾರ, ರಸ ಮುಂತಾದ ಅದರ ಎಲ್ಲ ಅಂಗಗಳು ಕೂಡಿದ್ದು.

ಕಾವ್ಯಧರ್ಮವಿವೇಚನಾತ್ಮಕ— ಲಕ್ಷಣ, ರಸ, ಗುಣ, ದೋಷ, ಅಲಂಕಾರ ಮುಂತಾದುವು ಕಾವ್ಯಧರ್ಮಗಳು. ಅವುಗಳನ್ನು ವಿವರಿಸುವಂಥದು,

**ಡ. ಪ್ರಶ್ನೆಗಳು:—**

೧. ಹಿರಿಯ ಕನ್ನಡನಾಡು ಎಂದರೆ ಯಾವುದು? ಅದರ ಅಂಗಗಳು ಯಾವುವು?

೨. "ಕರ್ನಾಟಕವು ಸಂಕ್ಷಿಪ್ತ ಭರತಖಂಡ" ಎಂದರೇನು? ಅದನ್ನು ವರ್ಣಿಸಿರಿ.

೩. ಕರ್ನಾಟಕ ಏಕೀಕರಣವೆಂದರೇನು? ಅದರ ಲಾಭಗಳನ್ನು ಹೇಳಿರಿ.

೪. ಜಲಪ್ರಪಾತ, ಅಣೆಕಟ್ಟು, ಸಾಹಿತ್ಯ, ಕಲೆ, ಕನ್ನಡನಾಡಿನ ಬುನಾದಿಯ ಅರಸುಮನೆತನ ಇವುಗಳ ಒಂದೊಂದು ಉದಾಹರಣ ಕೊಡಿರಿ.

---

## ೨. ಸತಿ. ಪುಟ ೬–೨೨.

**ಅ. ಗ್ರಂಥಪರಿಚಯ:—**

ಇದೊಂದು ಸ್ವತಂತ್ರ ಗ್ರಂಥವು. ದಕ್ಷಪುತ್ರಿ ಸತಿಯ ಚರಿತ್ರೆ. ಈ ಮೊದಲು ವಾಗ್ಭೂಷಣದಲ್ಲಿ ಪ್ರಕಟಿತವಾದುದು.

**ಬ. ಶಬ್ದಕೋಶ:—**

ರಾಜರ್ಷಿ—(ರಾಜ+ಋಷಿ)—ರಾಜನಾಗಿ ಋಷಿಯಂತೆ ಇರುವವ. ರಾಜನ್ವತಿ—(ರಾಜನ್+ವತಿ) ಒಳ್ಳೆಯ ಅರಸನುಳ್ಳದ್ದು. ಸಾಮಾನ್ಯ ರಾಜನುಳ್ಳದ್ದು—ರಾಜವತಿ. ಸ್ತ್ರೀ. ಲಿಂ. ಅಮರಾವತಿ—ದೇವೇಂದ್ರನ ರಾಜಧಾನಿ. ಆರಾಟ-ಸೀರಾಟ;. ಮಳಲ+ಒಟ್ಟಿಲು—ಉಸುಕಿನ ದಿನ್ನೆ. ಬೆಳೆ—ಸಸ್ಯಗಳಲ್ಲದವುಗಳ ಬೆಳಗ; (=ಬೆಳೆ) ಕನ್ನೈದಿಲು (ಕರಿದು+ನೈದಿಲು)—ಕರಿಯ ಕಮಲ. ಗೃಹಿಣಿ (ಗೃಹ+ಇನಿ)—ಮನೆಯನ್ನು ನೋಡಿಕೊಳ್ಳುವಾಕೆ; ಗರತಿ. ಆಕ್ಷೇಪಿಸು—ಅಸಮ್ಮತಿಯನ್ನು ತೋರಿಸು, ದೋಷವೆತ್ತು. ಗಂಧರ್ವವೇದ-ಗಾಯನಶಾಸ್ತ್ರ. ಲಾಜಹೋಮ-ಮದುವೆಯ ಕೊನೆಯಲ್ಲಿ ಮಾಡುವ ಬತ್ತದರಳುಗಳ ಹೋಮ. ಲಾಜಾಹೋಮ ಎಂಬ ರೂಪವು ಅಶುದ್ಧ. ಸರ್ವಮಂಗಳಾಶ್ರಯ–ಸರ್ವ+ಮಂಗಳ+ಆಶ್ರಯ; ಸರ್ವಮಂಗಳಾ (=ಪಾರ್ವತಿ)+ ಆಶ್ರಯ. ದಾಕ್ಷಾಯಣಿ—ದಕ್ಷನ ಮಗಳು. ಅಜಿನ—ತೊಗಲು. ನಚ್ಚು—

ನಂಬು. ಹವಣ್ಸು—ಉದ್ಯೋಗವನ್ನಾರಂಭಿಸು. ಕರೆ-ಕೃದ್ಭಾವ. ಕರೆಯುವಿಕೆ. ಶ್ರೋತ್ರಿಯ—ಅಗ್ನಿಹೋತ್ರವಿಟ್ಟ ಬ್ರಾಹ್ಮಣ. ಅಗ್ನಿಹೋತ್ರ—ದಿನಾಲು ಎರಡುವೇಳೆ ಮಾಡುವ ಹೋಮ. ಉನ್ಮತ್ತ (ಉತ್ + ಮದ್ + ತ)—ಎಚ್ಚರುಗೆಟ್ಟವ. ಅದೃಷ್ಟವಾದಿನಿ—ದೈವದಿಂದ ಎಲ್ಲವೂ ಒದಗುವುದೆಂದು ಹೇಳುವಾಕೆ. ಶೈವಾಲ—ಹಾವಸೆ.

**ಕ. ಟಿಪ್ಪಣಿಗಳು:—**

ದಕ್ಷ—ಬ್ರಹ್ಮನು ಸೃಷ್ಟಿಯ ಆದಿಯಲ್ಲಿ ಮರೀಚಿ ದಕ್ಷ ಮೊದಲಾದ ೯ ಜನ ಪ್ರಜಾಪತಿ (ಸಂತತಿಯನ್ನು ಬೆಳೆಸುವ ಮೂಲಪುರುಷರು) ಗಳನ್ನೂ ನಾರದನನ್ನೂ ಸೃಷ್ಟಿಸಿದನು. ನಾರದನು ದಕ್ಷನಿಗಿಂತ ಕಿರಿಯನು. ದಕ್ಷನಿಗೆ ಬಹುಜನ ಕನ್ಯೆಯರು. ದೇವತೆಗಳಲ್ಲಿ ಹಲವರ ಹೆಂಡಿರು ದಕ್ಷಪುತ್ರಿಯರು. ಜ್ಯೇಷ್ಠಾಲಕ್ಷ್ಮಿ—ದಾರಿದ್ರ್ಯ ದೇವತೆ.

**ಡ. ಪ್ರಶ್ನಗಳು:—**

೧. ವರನಲ್ಲಿ ಯಾರು ಯಾರು ಯಾವ ಯಾವ ಗುಣಗಳನ್ನಪೇಕ್ಷಿಸುವರು ?
೨. ನಾರದ, ದಕ್ಷ, ದಕ್ಷಪತ್ನಿ ಇವರ ಸಂಭಾಷಣದ ಸಾರಾಂಶವನ್ನು ಬರೆಯಿರಿ.
೩. ನಾರದನು ಶಿವ ( ವರ ) ನ ದೋಷಗಳನ್ನು ಗುಣಗಳನ್ನಾಗಿ ತೋರಿಸಿದುದನ್ನು ವಿವರಿಸಿರಿ.
೪. ಸತಿ, ಆಕೆಯ ಅಕ್ಕಂದಿರು ಇವರ ಸ್ವಭಾವ ತುಲನೆ ಮಾಡಿರಿ.
೫. "ಅವನು ( ಶಿವನು ) ಪ್ರಭುವಾಗಿಯೂ ಭಿಕ್ಷುಕನು, ಗೃಹಸ್ಥನಾಗಿಯೂ ಸಂನ್ಯಾಸಿ" ಈ ಮಾತನ್ನು ಸ್ಪಷ್ಟೀಕರಿಸಿರಿ.
೬ ವರ್ಷರ್ತು, ಕನ್ಯೈದಿಲು, ಲಾಜಹೋಮ ಇವುಗಳ ವಿಗ್ರಹವನ್ನೂ, ಬೆಳುಪು, ಅಂಜುಗುಳಿ, ಕರೆ ಈ ಶಬ್ದಗಳ ವ್ಯುತ್ಪತ್ತಿಯನ್ನೂ ಹೇಳಿರಿ.

---

## ೩. ಜಗತ್ತಿನೊಳಗಿನ ಎಲ್ಲಕ್ಕೂ ಹೆಚ್ಚಿನ ಆಶ್ಚರ್ಯವು.

**ಅ. ಗ್ರಂಥಪರಿಚಯ—** ಪುಟ ೨೩—೩೧.

ಇದೊಂದು ಆರೋಗ್ಯಶಾಸ್ತ್ರಕ್ಕೆ ಸಂಬಂಧಿಸಿದ ಸ್ವತಂತ್ರ ಲೇಖನವು. ಶರೀರರಕ್ಷಣೆಯು ಬಹಳ ಮಹತ್ವದ್ದು ಎಂಬುದೇ ಇದರ ಮುಖ್ಯ ವಿಷಯ.

ಬ. ಶಬ್ದಕೋಶ—

ಯಂತ್ರಗಾರಿಕೆ (ಯಂತ್ರ + ಗಾರ + ಇಕೆ.) ತದ್ಧಿತಭಾವನಾಮ. ಯಂತ್ರಗಳನ್ನು ರಚಿಸುವಿಕೆ. ವಿನ್ಯಾಸ—(ವಿ + ನಿ + ಅಸ್ + ಅ) ಹೊಂದಿಕೆ, ಇಡುವಿಕೆ. ಸನ್ನಿವೇಶ—ಸಮ್ + ನಿ + ವಿಶ್ + ಅ = ಹೊಂದಿಕೆ. ನಲಿಕೆ—ಕೊಳವೆ; ಸಿರ—(ತ್ಸ-ಸಿರಾ) ನರ, ನಾಡಿ. ವ್ಯಷ್ಟಿ—ಒಂದು ವ್ಯಕ್ತಿ. ಹಲವು ವ್ಯಕ್ತಿಗಳ ಸಮುದಾಯವು ಸಮಷ್ಟಿಯೆನಿಸುವುದು. ಸೃಷ್ಟಿಯು ಸಮಷ್ಟಿಯಾದರೆ ಅದರೊಳಗಿನ ಒಂದು ವ್ಯಕ್ತಿಯಾದ ಭೂಮಿಯು ವ್ಯಷ್ಟಿ. ಆನುವಂಶಿಕ—(ಅನು + ವಂಶ + ಇಕ) ವಂಶವನ್ನನುಸರಿಸಿ ಬಂದ; ಪಾರಿತೋಷಿಕ-ಪರಿ + ತೋಷ + ಇಕ—ಸಂತೋಷಕ್ಕಾಗಿ ಕೊಟ್ಟ ವಸ್ತು. ಕರಾಳ—ಉಗ್ರ. ಅಂಗ ಚೇಷ್ಟೆ—ಅವಯವದ ಚಲನವಲನ.

ಕ. ಟಿಪ್ಪಣಿಗಳು—

ಆನುವಂಶಿಕವ್ಯಾಧಿ—ತಂದೆ, ಅಜ್ಜ ಮೊದಲಾದವರಿಗಿದ್ದ ಬೇನೆಯು ಮಗ, ಮೊಮ್ಮಗ ಇವರಿಗೆ ಬರುವದುಂಟು. ಹೀಗೆ ಬಂದ ಬೇನೆಯು ಆನುವಂಶಿಕವು. ಯಾವದೊಂದು ನಿಮಿತ್ತದಿಂದ ಬಂದದ್ದು ನೈಮಿತ್ತಿಕವು. ಅಶ್ವಶಕ್ತಿ—ಕುದುರೆಯಶಕ್ತಿ. ಕೆಲವೊಂದು ಪರಿಮಾಣದ ಶಕ್ತಿಯನ್ನು ಅಶ್ವಶಕ್ತಿ ಎಂದು ಹೇಳುವರು; ಶಕ್ತಿಯ ಅಳತೆಯನ್ನು ಈ ಎಕ್ಕಮಿನಿಂದ ಮಾಡುವರು. ಉದಾ: ಈ ಎಂಜಿನು ಹತ್ತು ಅಶ್ವಶಕ್ತಿಯದು. ಪ್ರಕಾಶವನ್ನು ಮೇಣಬತ್ತಿಯ ಪ್ರಕಾಶದ ಪರಿಮಾಣದಿಂದ ಅಳೆದಂತೆ. (ಹಾರ್ಸ್ ಪಾವರ್, ಕ್ಯಾಂಡಲ್ ಪಾವರ್.) ಅರೇಬಿಯನ್ ನಾಯಿಟ್ಸ್—ಅರಬಿ ಭಾಷೆಯಲ್ಲಿದ್ದ ಅದ್ಭುತ ರಸದ ಕಥೆಗಳ ಗ್ರಂಥ. ಹಲವು ಭಾಷೆಗಳಲ್ಲಿ ಭಾಷಾಂತರಿಸಲ್ಪಟ್ಟದೆ. "ಮಾನವಾ ನಿನ್ನನ್ನೇ ನೀನು ತಿಳಿದುಕೊಳ್ಳು" ಎಂಬ ಮಾತು ಆತ್ಮವಿಚಾರವನ್ನು ಮಾಡು ಎಂಬ ಅರ್ಥದಲ್ಲಿದ್ದರೂ, ಆತ್ಮನ ಸ್ಥಾನವಾದ ಶರೀರದ ವಿಚಾರವನ್ನೂ ಮಾಡು ಎಂಬ ವಿಚಾರವನ್ನೊಳಗೊಂಡಿದೆ.

ಡ. ಪ್ರಶ್ನಗಳು—

೧. ಜಗತ್ತಿನೊಳಗಿನ ಬೇರೆ ಆಶ್ಚರ್ಯ, ಸೌಂದರ್ಯಗಳಿಗಿಂತ ಶರೀರವು ಹೆಚ್ಚಿನ ಆಶ್ಚರ್ಯ, ಹೆಚ್ಚಿನ ಸೌಂದರ್ಯ ಎಂಬುದನ್ನು ವ್ಯಕ್ತಪಡಿಸಿರಿ.

೨. ಮಾನವಶರೀರವನ್ನು ಯಂತ್ರಕ್ಕೆ ಹೋಲಿಸಿರಿ. ಎಂಜಿನಿಗೂ ಶರೀರ ಯಂತ್ರಕ್ಕೂ ಇರುವ ಸಾಮ್ಯ ವೈಷಮ್ಯಗಳನ್ನು ಹೇಳಿರಿ.

೩. ಶರೀರದೊಳಗಿನ ಮುಖ್ಯ ಮೂರು ಸೌಂದರ್ಯಗಳು ಯಾವುವು?

೪. ಮಾನವಶರೀರವು ಈಶ್ವರನ ನಿವಾಸವೆಂದು ಯಾರು ಯಾರು ಹೇಗೆ ಹೇಗೆ ಹೇಳಿರುವರು ?

೫. ಮಾನವೀಕೃತಿ, ಶರೀರನಿರ್ಮಾಣಕ, ನೈಮಿತ್ತಿಕ, ಪಾರಿತೋಷಕ; ಅಕರಾಳ ಈ ಶಬ್ದಗಳ ಶುದ್ಧ ರೂಪಗಳನ್ನು ಹೇಳಿರಿ.

---

## ೪. ಒಂದೇಗತಿ. ಪುಟ-೩೧-೩೫.

### ಅ. ಗ್ರಂಥಪರಿಚಯ—

ಇದು ಮಹಾಭಾರತದೊಳಗಿನ "ಹಂಸಕಾಕೀಯೋಪಾಖ್ಯಾನ" ಎಂಬ ಕಥೆಯನ್ನು ವಿಸ್ತರಿಸಿ ಬರೆದುದು. ಹಂಸ, ಕಾಕ, ಸೆಟ್ಟಿಯ ಮಕ್ಕಳು ಈ ಪಾತ್ರಗಳಿಂದ ಬೇರೆ ಬೇರೆ ಮಾನವ ಸ್ವಭಾವಗಳು ಇದರಲ್ಲಿ ಚಿತ್ರವಾಗಿವೆ.

### ಬ. ಶಬ್ದಕೋಶ—

ಸುಖವಸ್ತು—ದುಡಿತವಿಲ್ಲದೆ (ಸುಖದಿಂದ) ವಸತಿ ಮಾಡಿದವ. ಮತ್ತ—ಮದ್ (ಧಾ)+ ತ–ಸೊಕ್ಕಿನವ, ಉಡ್ಡೀನ–ಉತ್ + ಡೀ (=ಹಾರು) ಮೇಲೆ ಹಾರುವುದು. ಅವ, ಪ್ರ, ಪರಿ, ಸಮ್ ಎಂಬ ಉಪಸರ್ಗಗಳು ಸೇರಿ ಅವಡೀನ ಮು. ಆಗಿವೆ. ಇವು ಪಕ್ಷಿಗಳ ಹಾರಿಕೆಯ ಬಗೆಗಳು. ಉಡ್ಡೀನ= ಉಡ್ಡಯನ. ಖತಿ—ಕೋಪ; ಬೆಂಬಳಿಸು—ಬೆನ್ನುಹಿಡಿ.

### ಕ. ಟಿಪ್ಪಣಿಗಳು—

ತ್ರಿವಿಷ್ಟಪ—ದ್ಬ—(ತೀಬೇಟ ಎಂದು ಹೇಳುವರು.) ಸ್ವರ್ಗ. ತಿಬೇಟವನ್ನೇ ಸ್ವರ್ಗವೆಂದು ಪ್ರಾಚೀನರು ಹೇಳುತ್ತಿದ್ದರೆಂದು ಕೆಲವರ ಮತ. ಮಿಲ್ಕ್ ಮೀಟರ್—ಹಾಲಿನಲ್ಲಿ ಬೆರೆಸಿದ ನೀರಿನ ಪ್ರಮಾಣವನ್ನು ಗೊತ್ತುಪಡಿಸುವ ಥರ್ಮಾಮೀಟರಿನಂತಹ ಒಂದು ಯಂತ್ರ. ಕಾಲ್ಕೆದರು-ಜಗಳವನ್ನಾರಂಭಿಸುವ ಮೊದಲು ಪಶುಗಳು ಕಾಲನ್ನು ಕೆದರುವುವು. ಜಗಳವನ್ನಾರಂಭಿಸು ಈ ಅರ್ಥದಲ್ಲಿ ಇತರರಿಗೂ ಈ ಶಬ್ದವು ಬಳಕೆಯಲ್ಲಿ ಬಂದಿದೆ. ಕಾಗೆಯ ಒಕ್ಕಣ್ಣನೋಟ—

ಕಾಗೆ ಒಂದೇ ಕಣ್ಣಿನಿಂದ ನೋಡುವುದು. ಇದರಿಂದ ಕಾಗೆಗೆ ಒಂದೇ ಕಣ್ಣು ಇರುವುದೆಂದೂ ಅದು ಎರಡೂ ಕಡೆಗೆ ಓಡಾಡುವುದೆಂದೂ ಮೊದಲಿನವರು ತಿಳಿದಿದ್ದರು. ಇದರಿಂದಲೇ “ ಕಾಕಾಕ್ಷಿಗೋಲಕನ್ಯಾಯ ” ಎಂಬ ರೂಢಿಯ ಮಾತು ಬಳಕೆಯಲ್ಲಿ ಬಂದಿದ್ದಿತು. ಸಮುದ್ರಾಸ್ತೃಪ್ಯಂತು--(=ಸಮುದ್ರಗಳು ತೃಪ್ತವಾಗಲಿ) ಬ್ರಾಹ್ಮಣರ ತರ್ಪಣ ಎಂಬ ಕರ್ಮದಲ್ಲಿ ಈ ವಾಕ್ಯವು ಬರುವುದು. ಸಮುದ್ರದ ಅಪಾರ ಜಲರಾಶಿಗೆ ಬ್ರಾಹ್ಮಣರ ತರ್ಪಣದ ಹತ್ತುಹನಿ ನೀರು ಎಲ್ಲಿಯೋ ಏನೋ? ಹಾಗೆ ದೊಡ್ಡದರಲ್ಲಿ ಬಹಳ ಸಣ್ಣದು ಅಡಗಿ ಹೋಗುವುದು ಈ ಅರ್ಥದಲ್ಲಿ ಈ ಮಾತು ಬಳಕೆಯಲ್ಲಿದೆ. ಕಾವ್-ಕಾವ್— ಕಾಗೆಯ ಸ್ವಾಭಾವಿಕವಾದ ಕೂಗು. ಕ್ರಾ ಕ್ರಾ—ಸಂತೋಷದಲ್ಲಿ; ಕ್ರೌ ಕ್ರೌ—ಸಂಕಟದಲ್ಲಿ.

ಡ. ಪ್ರಶ್ನೆಗಳು:—

೧. ಈ ಕಥೆ ಯಾವ ವಿಚಾರವನ್ನು ಹೇಳುವುದಕ್ಕೆ ಹೊರಟಿದೆ? ಕಾಗೆ ಹಂಸಗಳು ಯಾವ ವ್ಯಕ್ತಿಗಳನ್ನು ತೋರಿಸುತ್ತಿವೆ? ಆ ವ್ಯಕ್ತಿಗಳ ಸ್ವಭಾವವನ್ನು ತೋರಿಸಿರಿ.

೨. ಕಾಗೆಗಳ ಒಕ್ಕಣ್ಣು ನೋಟಕ್ಕೆ ಇಲ್ಲಿ ಯಾವ ಪ್ರಸಂಗವು ಹೇಳಿದೆ?

೩. ಕಾಗೆ ಹಂಸಗಳ ಪಂದ್ಯಾಟವನ್ನು ಸಂಕ್ಷೇಪವಾಗಿ ಹೇಳಿರಿ.

೪. ಮೈಮರೆಯಿತು, ಹಂಸನನ್ನು, ಬೆಂಬಳಿಸಿ, ಬಾಯ್ಬಡಕ ಈ ಶಬ್ದಗಳಿಗೆ ವ್ಯಾಕರಣ ಟಿಪ್ಪಣಿಯನ್ನು ಬರೆಯಿರಿ.

---

## ೫. ಪದ್ಮಿನಿ. ಪುಟ—೩೬-೫೩.

ಅ. ಗ್ರಂಥಪರಿಚಯ:—

ಇದು ಪದ್ಮಿನಿ ಎಂಬ ಐತಿಹಾಸಿಕ ಕಾದಂಬರಿಯ ಆರಂಭದ ಮತ್ತು ಕೊನೆಯ ಪರಿಚ್ಛೇದಗಳ ಸಂಗ್ರಹವು. ಅಲ್ಲಾವುದ್ದೀನನು ಚಿತ್ತೂರನ್ನು ಎರಡು ಬಾರಿ ಮುತ್ತಿ ಹಾಳುಮಾಡಿದ ಕಥೆ ಮತ್ತು ಶೋಕಮಯವಾದ ಪದ್ಮಿನಿಯ ಜೋಹಾರವರ್ಣನೆ ಇವು ಈ ಭಾಗದಲ್ಲಿವೆ.

ಬ. ಶಬ್ದಕೋಶ:—ವಿಧ್ವಸ್ತ (ವಿ + ಧ್ವಂಸ್ + ತ)—ನಾಶ ಮಾಡಲ್ಪಟ್ಟ; ಪ್ರಹರಿ—ಪ್ರಹರ+ಇ. ಪ್ರಹರದ ವರೆಗಿನ ಕಾವಲುಗಾರ; ವಿಕೃತ—ಪಹರೆ. ಭಂಗುರ—(ಭಂಗ)-ನಾಶಶೀಲ. ಮಡಿಲು-(ಉಡಿಲು)—ಸೆರಗು. ಆಲಂಬಿತ ಕುಂತಲೆ- ಜೋಲು ಬಿದ್ದ ಕೂದಲುಳ್ಳವಳು. ಬ. ವ್ರೀ. ಸ್ಮಶಾನ-(ಶ್ಮಶಾನ)-ಭ್ವ-ಮಸಣ. ಸತ್ವ—ನೈತಿಕ ಮನೋಬಲ.

ಕ. ಟಿಪ್ಪಣಿಗಳು—ಉಚ್ಚ, ಉಚ್ಚತರ, ಉಚ್ಚತಮ (ಸ್ವಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನ)–ತರ, ತಮ ಪ್ರತ್ಯಯಗಳು. ಎರಡರಲ್ಲಿ ಹೆಚ್ಚಿನದನ್ನು ತೋರಿಸುವಾಗ ತರ ಪ್ರತ್ಯಯವೂ ಅನೇಕಗಳಲ್ಲಿ ಹೆಚ್ಚಿನದನ್ನು ತೋರಿಸಲು ತಮ ಪ್ರತ್ಯಯವೂ ವಿಶೇಷಣಗಳ ಮೇಲೆ ಬರುವವು. ಉದಾ: ಲಘು, ಲಘುತರ, ಲಘುತಮ ಮು. ಪ್ರಾಣವನ್ನು ತೃಣಕ್ಕೆ ಬಗೆದು—ತಿರಸ್ಕಾರದ ಹೋಲಿಕೆಯನ್ನು ಹೇಳುವಾಗ ಬಗೆ ಧಾತುವಿನ ಕರ್ಮಕ್ಕೆ ಚತುರ್ಥಿ ಬರುವುದು. ತೃಣಕ್ಕೆ ಚತುರ್ಥಿ. ಪಠಾಣನ ಸಿಂಹಾಸನಾರ್ಧಕ್ಕೆ ಪ್ರತಿಯಾಗಿ—ಅಲ್ಲಾವುದ್ದೀನನು ಪದ್ಮಿನಿಯನ್ನು ರಾಣಿಯನ್ನು ಮಾಡಿಕೊಳ್ಳ ಬಹುದಾಗಿತ್ತು; ಆಗ ಆಕೆಗೆ ಆತನ ಸಿಂಹಾಸನಾರ್ಧವು ದೊರೆಯಬಹುದಾಗಿತ್ತು. ಜೋಹಾರ—ರಜಪೂತ ಹೆಂಗುಸರು ಮಾಡುವುದು; ಗಂಡುಸರು ಮಾಡುವುದು 'ಕೇಸರಿಯಾ'. ಪುಟ-೪೬, ೪೯ ನೋಡಿರಿ.

ಡ. ಪ್ರಶ್ನೆಗಳು—

೧. ಚಿತ್ತೂರನ್ನು ನೋಡಿದಾಗ ನಮ್ಮ ಮನದಲ್ಲಿ ಬರುವ ಭಾವನೆಗಳಾವುವು?

೨. ಕರಣರಾಯನ ಪತ್ರದ ಸಾರಾಂಶವನ್ನು ಬರೆಯಿರಿ, ಅದರಲ್ಲಿರುವ ಆತನ ಕಳವಳವನ್ನು ಹೇಳಿರಿ.

೩. ಜೋಹಾರದ ಪೂರ್ವದ ಮತ್ತು ತರುವಾಯದ ಚಿತ್ತೂರಿನ ಸ್ಥಿತಿಯ ತುಲನೆ ಮಾಡಿರಿ.

೪. ಪದ್ಮಿನಿಯಿಂದ ಆರ್ಯನಾರಿಯರಿಗೆ ದೊರೆತ ಉಪದೇಶವಾವುದು?

೫. ಕರಣರಾಯನು ಬರೆದಂತೆ ಮನಸ್ಸನ್ನು ರೇಗಿಸುವಂಥ ಒಂದು ಪತ್ರವನ್ನು ಬರೆಯಿರಿ.

೬. ಮಹಾರಾಣಾ, ಕೇಳಿದೆನು. ಈ ವಾಕ್ಯಕ್ಕೆ ಕರ್ತೃ ಕರ್ಮಗಳನ್ನು ಸೇರಿಸಿರಿ.



---

**೬. ಮದಿನೆಯಲ್ಲಿ ಮುಹಮ್ಮದ ಪೈಗಂಬರರು.** ಪುಟ ೫೪-೫೮.

**ಅ. ಗ್ರಂಥಪರಿಚಯ**—ಇದು ಹಜರತ ಮುಹಮ್ಮದ ಪೈಗಂಬರರು ಎಂಬ ಚರಿತ್ರಾತ್ಮಕ ಗ್ರಂಥದ ಒಂದು ಭಾಗವು.

**ಬ. ಶಬ್ದಕೋಶ**—ಶುಭಾಗಮನ— ಶುಭ + ಆಗಮನ—ಮಂಗಳಕರವಾದ ಬರುವಿಕೆ. ಸ್ಥಿತ್ಯಂತರ-ಸ್ಥಿತಿ+ಅಂತರ-ಬೇರೆ ಸ್ಥಿತಿ; ಸ್ಥಲಾಂತರ, ದೇಶಾಂತರ ಮುಂ. ಪರಮೇಶ್ವರನ ಉಪಾಸನೆ–ಮುಸಲ್ಮಾನರಲ್ಲಿ 'ನಮಾಜ್.' ಏಕೇಶ್ವರ ಮತ–ಒಬ್ಬನೇ ದೇವರು ಎಂದು ಹೇಳುವ ಧರ್ಮ. ತಳಹದಿ—ಅಸ್ತಿವಾರ—(ಪಾಯಾ.)

**ಕ. ಟಿಪ್ಪಣಿಗಳು:**—ಪೈಗಂಬರ–ದೇವರ ದೂತ, ದೇವರಿಂದ ಕಳುಹಲ್ಪಟ್ಟವ, ಪ್ರೇಷಿತ, (ಕಳುಹಲ್ಪಟ್ಟವ.) ದೇವರು ಸತ್ಯಧರ್ಮವನ್ನು ನಿರೂಪಿಸಲು ಮುಹಮ್ಮದರನ್ನು ಕಳುಹಿದನೆಂದು ಮುಸಲ್ಮಾನರು ಹೇಳುವರು ಅಬುಬಕರ–ಮೊದಲು ಮೂರ್ತಿಪೂಜಕ ಧರ್ಮದವ; ಮುಹಮ್ಮದರ ವೈರಿ. ಕುರಾಣವನ್ನು ಕೇಳಿ, ಪೈಗಂಬರರ ಉದಾತ್ತತೆಗೆ ಮನಸೋತು ಮುಸಲ್ಮಾನನಾದನು; ಅವರ ಶಿಷ್ಯನಾದನು. ಕುರೇಶ-ಅರಬರಲ್ಲಿಯ ಒಂದು ಪಂಗಡದವರು, ಮೂರ್ತಿಪೂಜಕರು; ಮೂರ್ತಿಪೂಜೆಯ ವಿರುದ್ಧವಾಗಿ ಉಪದೇಶ ಮಾಡಿದ ಮುಹಮ್ಮದರಿಗೆ ವಿರೋಧಿಗಳಾದರು.

**ಡ. ಪ್ರಶ್ನಗಳು**—

೧. ಹಿಜರಿಶಕವೆಂದರೇನು ? ಆ ಶಕಕ್ಕೆ ಆ ಹೆಸರು ಹೇಗೆ ಬಂದಿತು ?

೨. ಈಶ್ವರನು ಎಲ್ಲೆಡೆಗಳಲ್ಲಿಯೂ ಇರುವನು ಎಂಬುದನ್ನು ಪೈಗಂಬರರು ದೃಢವಾಗಿ ತಿಳಿದಿದ್ದರು ಎಂಬುದಕ್ಕೆ ಉದಾಹರಣವನ್ನು ಹೇಳಿರಿ.

೩. ಅಬುಬಕರನ ಗುರುಭಕ್ತಿ, ಪೈಗಂಬರರ ಧರ್ಮಮಂಡಲ, ಮಸಜಿದ್ ಉಲ್‌ನಬಿ ಇವುಗಳ ವಿಷಯವಾಗಿ ನಿಮಗೆ ಗೊತ್ತಿರುವುದನ್ನು ಹೇಳಿರಿ.

೪. ಪೈಗಂಬರರ ಜೀವನದ ಉದ್ದೇಶಗಳು ಯಾವುವು? ಅವರಲ್ಲಿದ್ದ ಉದಾತ್ತ ಗುಣಗಳು ಯಾವುವು ? ಎಲ್ಲೆಲ್ಲಿ ಒಡಮೂಡಿವೆ ?

---

**೭. ವೇಣೀಸಂಹಾರ-ಕರ್ಣಾಶ್ವತ್ಥಾಮರ ಕಲಹ.** ಪು. ೫೯-೬೯.

**ಅ. ಗ್ರಂಥಪರಿಚಯ:**—ಭಟ್ಟನಾರಾಯಣ ಎಂಬ ಕವಿಯಿಂದ ರಚಿತವಾದ ಸಂಸ್ಕೃತ ವೇಣೀಸಂಹಾರನಾಟಕದೊಳಗಿನ ಒಂದು ಭಾಗದ

ಭಾಷಾಂತರವಿದು. ವೇಣೀಸಂಹಾರ–ವೇಣಿಯ–ಹೆಳಲಿನ ಸಂಹಾರ-ರಚನೆ. ಭೀಮಸೇನನು ಕೌರವವಧಾನಂತರದಲ್ಲಿ ದ್ರೌಪದಿಯ ಹೆಳಲನ್ನು ಹಾಕಿದ ಕಥೆ ಇದರಲ್ಲಿ ಬರುವುದರಿಂದ ಈ ನಾಟಕಕ್ಕೆ ವೇಣೀಸಂಹಾರ ಎಂಬ ಹೆಸರು.

**ಬ. ಶಬ್ದಕೋಶ:**—ಆಚಾರ್ಯ–ಯಾವುದೊಂದು ಶಾಸ್ತ್ರದಲ್ಲಿ ಅತ್ಯಂತ ನಿಷ್ಣಾತನಾದ ಗುರು. ಸೂತ್ರಗಳಿಗೆ ಭಾಷ್ಯ ಬರೆಯುವವನೂ ಆಚಾರ್ಯನು; ಉದಾ: ಶಂಕರಾಚಾರ್ಯ, ರಾಮಾನುಜಾಚಾರ್ಯ ಮುಂ. ಪ್ರಾಯೋಪವೇಶ-ಪ್ರಾಯ (=ಊಟಮಾಡದೆ ಸಾಯುವದು) + ಉಪವೇಶ (=ಕುಳ್ಳಿರುವುದು.) ಊಟ ಮಾಡದೆ ಸಾಯುವೆನೆಂದು ಒಂದೆಡೆಗೆ ಕುಳ್ಳಿರುವುದು. ಇಲ್ಲವೆ ಮಲಗುವುದು. ಅಜಾತ+ಶತ್ರು–ಶತ್ರುಗಳುಂಟಾಗದೆ ಇರುವವ. ಬ. ವ್ರೀ. ಮೇದಸ್–ನೆಣ. ಉಪೇಕ್ಷೆ—ಔದಾಸೀನ್ಯ. ಶೋಕ + ಅನಲ–-ಶೋಕವೇ ಅನಲ. ಕ. ಧಾ. ಪರಿಭವ-ಅಪಮಾನ. ವಾಚಾಲ ಗಳಹುವವ. ಅಳವಡಿಸು–ಸಿದ್ಧಪಡಿಸು. ಭೂರಿಭೋಜನ—ಬಹುಜನರ ಊಟ.

**ಕ. ಟಿಪ್ಪಣಿಗಳು:**—ಧರ್ಮರಾಜನು ಕಾಳಗದಲ್ಲಿ "ಅಶ್ವತ್ಥಾಮಾ ಹತಃ" ಎಂದು ಗಟ್ಟಿಯಾಗಿ ನುಡಿದು ಕೊನೆಯಲ್ಲಿ ಮೆಲ್ಲನೆ 'ಗಜಃ' ಎಂದು ನುಡಿದನು. ಆ ಮಾತಿಗೆ ಅಶ್ವತ್ಥಾಮ ಎಂಬ ಆನೆ ಕೊಲ್ಲಲ್ಪಟ್ಟಿತು ಎಂಬ ಅರ್ಥ. ಧರ್ಮರಾಜನ ಈ ಮಾತಿನಿಂದ ದ್ರೋಣನು ಶಸ್ತ್ರತ್ಯಾಗಮಾಡಿ ಹತನಾದನು. ಇದರಿಂದ ಅಶ್ವತ್ಥಾಮನಿಗೆ ಪಾಂಡವರ ಮೇಲೆ ಕೋಪ.

ತಿಂಡಿ—ಮೈಸೂರ ಕಡೆಗೆ ತಿಂಡಿ ಎಂದರೆ ತಿನ್ನುವ ಜೀನಸು; ಮೈಯ ತಿಂಡಿಗೆ ತಿನಿಸು ಎಂದೆನ್ನುವರು. ಧಾರವಾಡದ ಕಡೆಗೆ ತಿಂಡಿ ಎಂದರೆ ಮೈಯ ಕಡಿತ; ತಿನಿಸು ಎಂದರೆ ತಿನ್ನುವ ಪದಾರ್ಥ. ಸುತವತ್ಸಲ–ಮಗನಲ್ಲಿ ಬಹಳ ಪ್ರೀತಿಯುಳ್ಳವ. ವತ್ಸ–ಕರು; ಮರಿ. ವತ್ಸಲ–ಕರುವನ್ನು ಪ್ರೀತಿಸಿದಂತೆ ಪ್ರೀತಿಸುವವ. ವಾತ್ಸಲ್ಯ—ಕಂದನಲ್ಲಿರುವಂತಹ ಪ್ರೀತಿ. ಪ್ರತೀಕಾರಜಲ—ಅಪಮಾನವು ಬೆಂಕಿಯೆಂದೂ ಪ್ರತೀಕಾರವು ಜಲವೆಂದೂ ಇಲ್ಲಿ ರೂಪಣವಿದೆ. ಅಪಮಾನದಿಂದಾದ ತಾಪವು ಪ್ರತೀಕಾರದಿಂದ ಆರುವುದೆಂದು ಅರ್ಥ. ಆಯುಧಗಳೆಂಬ ತೆಪ್ಪಗಳು—ದುಃಖವು ಪೂರ (–ಪ್ರವಾಹ) ವೆಂದು ಹೇಳಿ ಆ ಪ್ರವಾಹವನ್ನು ದಾಟಲು ಎಂದರೆ ದುಃಖವನ್ನು ಕಳೆದುಕೊಳ್ಳಲು ವೀರರು ಮುಯ್ಯ ತೀರಿಸಿಕೊಳ್ಳುವರು; ಅದಕ್ಕೆ ಆಯುಧಗಳು ಸಹಾಯಕ

ಗಳು. ಆದದರಿಂದ ಅವು ತೆಪ್ಪದಂತೆ ಎಂದೂ ರೂಪಕ ಮಾಡಿದೆ. ಅತಿರಥ—ಅರ್ಧರಥ, ಮಹಾರಥ, ಅತಿರಥ ಎಂಬ ಶಬ್ದಗಳು ಕ್ರಮವಾಗಿ ಹೆಚ್ಚಿನ ವೀರಾಧಿವೀರರೆಂಬ ಅರ್ಥದಲ್ಲಿವೆ. ಮಹಾರಥ—ದಶಸಹಸ್ರ ವೀರರೊಡನೆ ಒಬ್ಬನೇ ಕಾದಾಡಬಲ್ಲ ಶಸ್ತ್ರವಿಶಾರದನು. ರಾಧಾಗರ್ಭಭಾರಭೂತ-ರಾಧೆಯು ಕರ್ಣನ ಸಾಕುತಾಯಿ. ಅತಿರಥ ಎಂಬ ಅಂಬಿಗನ ಹೆಂಡತಿ. ಕರ್ಣನು ರಾಧೆಯ ಔರಸಪುತ್ರನೆಂದೇ ಜನರ ತಿಳಿವಳಿಕೆ ಇತ್ತು. ಅಶ್ವತ್ಥಾಮನು, ಕರ್ಣನು ರಾಧೆಯ ಗರ್ಭಕ್ಕೆ ಭಾರವೇ ಹೊರತು ಕೆಲಸಕ್ಕೆ ಬಾರದವನು ಎಂದು ಹೀಯಾಳಿಸುವಲ್ಲಿ ಈ ಮಾತನ್ನಾಡಿದನು. ಕರ್ಣನು ಸೂತ (ಅಂಬಿಗ) ಕುಲದವನು. ಆ ಕುಲಕ್ಕೆ ರಥಕಾರ ಎಂದೂ ಹೆಸರು. ಭೂದೇವಿ ತಿಳಿದಿರುತ್ತಾಳೆ. ದ್ರೋಣನು ಅಸಂಖ್ಯ ಜನರನ್ನು ಸಂಹರಿಸಿದ್ದರಿಂದ ಅವರ ಭಾರವು ಕಡಿಮೆಯಾಗಿ ಭೂಮಿಗೆ ಹಗುರಾಯಿತು. ಆದದರಿಂದ ದ್ರೋಣನು ಮಾಡಿದ ಕೆಲಸವನ್ನು ಭೂದೇವಿ ಬಲ್ಲಳು. ಯುಧಿಷ್ಠಿರನು ತಿಳಿದಿದ್ದಾನೆ—ಯುಧಿಷ್ಠಿರನ ಮಾತಿನಲ್ಲಿ ನಂಬುಗೆಯಿಟ್ಟೇ ದ್ರೋಣನು ಶಸ್ತ್ರತ್ಯಾಗ ಮಾಡಿದನು. ಯುಧಿಷ್ಠಿರನೇ ದ್ರೋಣನಿಂದ ಶಸ್ತ್ರತ್ಯಾಗ ಮಾಡಿಸಿದಂತಾಯಿತು; ಆದದರಿಂದ ಆತನೇ ಬಲ್ಲನು. ಗುರುಶಾಪದಿಂದ ನಿರ್ವೀರ್ಯವಾಗಿರುವವೇ—ಕರ್ಣನು ಬ್ರಾಹ್ಮಣ ವೇಷದಿಂದ ಪರಶುರಾಮನಲ್ಲಿ ಶಸ್ತ್ರವಿದ್ಯಾಭ್ಯಾಸ ಮಾಡಿದ, ಮತ್ತು ಮೋಸಕ್ಕಾಗಿ ದ್ರೋಣನು ನಿನ್ನ ಶಸ್ತ್ರಗಳು ಕೆಲಸಕ್ಕೆ ಬಾರದೆ ಹೋಗಲಿ ಎಂದು ಶಾಪಕೊಟ್ಟ ಭಾರತಕಥೆಯನ್ನು ತಿಳಿದುಕೊಳ್ಳಿರಿ. ಸೋಮಕ—ದ್ರುಪದನ ಪೂರ್ವಜ. ಆತನ ವಂಶದವರು ಸೋಮಕರು. ಅರ್ಜುನನ ಪ್ರತಿಜ್ಞೆ—ಕರ್ಣನನ್ನು ಸಾಯಂಕಾಲದೊಳಗಾಗಿ ಕೊಲ್ಲುವೆನೆಂದು ಪ್ರತಿಜ್ಞೆಮಾಡಿದ್ದನು. ಈಗ, ತಾನೇ ಕೊಂದುಬಿಟ್ಟರೆ ಅರ್ಜುನನ ಪ್ರತಿಜ್ಞೆ ಸುಳ್ಳಾಗುವುದು.

**೮. ಪ್ರಶ್ನೆಗಳು:—**

೧. ಕರ್ಣನು ದ್ರೋಣನ ವಿಷಯವಾಗಿ ದುರ್ಯೋಧನನಲ್ಲಿ ಹೇಗೆ ದುರಭಿಪ್ರಾಯವನ್ನುಂಟುಮಾಡಿದನು?

೨. ನೀವು ಆ ಪಾತ್ರಗಳಾಗಿ ಕರ್ಣಾಶ್ವತ್ಥಾಮರ ಸಂಭಾಷಣವನ್ನು ಮಾಡಿರಿ.

೩. ೬೨ನೆಯ ಪುಟದಲ್ಲಿರುವ ಅಶ್ವತ್ಥಾಮನ ೨ನೆಯ ಭಾಷಣವನ್ನೋದಿ ಕೆಳಗಿನ ಪ್ರಶ್ನೆಗಳ ಉತ್ತರಗಳನ್ನು ಹೇಳಿರಿ.

ಅ. ದ್ರೋಣನಿಗೆ ಉಂಟಾದ ಅಪಮಾನವು ಯಾವದು ?

ಬ. ಧೃಷ್ಟದ್ಯುಮ್ನನು ಅಲ್ಪ ಕೀಳ ಎಂದು ಅಶ್ವತ್ಥಾಮನು ಯಾವ ಮಾತಿನಿಂದ ತೋರುವಂತೆ ಮಾಡಿರುವನು.

ಕ. ದ್ರೋಣನ ತಲೆಕೊಯ್ಯುವಲ್ಲಿ ಧೃಷ್ಟದ್ಯುಮ್ನನಿಗೆ ಅಂಜಿಕೆ ಏಕೆ ಬರಲಿಲ್ಲ ?

ಡ. ಪ್ರಳಯಮಾರುತ, ಅರಳೆ ಈ ಉಪಮಾನಗಳನ್ನು ಹೇಳಿ ಯಾವ ಮಾತನ್ನು ಸಿದ್ಧಮಾಡಿದನು ?

ಇ. ಧರ್ಮರಾಜನಿಗೆ ಉಪಯೋಗಿಸಿದ ವಿಶೇಷಣಗಳ ಸಾರ್ಥಕತೆ ಏನು?

ಫ. "ನನ್ನ ತಂದೆಯು...." ಎಂದು ಅಶ್ವತ್ಥಾಮನು ಹೇಳುವನು. ಈತನ ತಂದೆಯಾದರೆ ಕೊಲ್ಲಬಾರದೇಕೆ ?

೪. ಅಶ್ವತ್ಥಾಮನು ಪರಶುರಾಮನಿಗೂ ತನಗೂ ಯಾವ ಯಾವ ಮಾತುಗಳಲ್ಲಿ ಹೋಲಿಕೆಯಿರುವುದೆಂದು ಹೇಳಿರುವನು?

೫. ೬೭ನೆಯ ಪುಟದಲ್ಲಿರುವ ಅಶ್ವತ್ಥಾಮನ ೨ನೆಯ ಮಾತನ್ನು ಓದಿರಿ. ಆದರ ಅರ್ಥವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ ಹೇಳಿರಿ.

೬. ಅಶ್ವತ್ಥಾಮ ಕರ್ಣ ಇವರಲ್ಲಿ ದಾರಿಯ ಬಿಟ್ಟು ಮಾತಾಡಿದವರು ಯಾರು? ಅವರ ಪರಸ್ಪರ ಕಲಹಕ್ಕೆ ಅವರೊಳಗಿನ ಯಾರ ಮಾತು ಕಾರಣವಾದುವು ? ಹೇಗೆ ?

---

## ೮. ಪಂಪಾಯಾತ್ರೆ. ಪುಟ. ೭೦-೭೭.

**ಅ. ಗ್ರಂಥಪರಿಚಯ**— ಹಂಪೆಯ ಪ್ರವಾಸವನ್ನು ಕುರಿತ ಸ್ವತಂತ್ರ ಲೇಖನವಿದು.

**ಬ. ಶಬ್ದಕೋಶ**–ನ+ಪ್ರತಿಮ-ಸಮಾನವಾದದ್ದು ಇಲ್ಲದ, ಅಸದೃಶ. ಬ. ವ್ರೀ. ಪ್ರಾಕೃತಿಕ-ಪ್ರಕೃತಿ+ಇಕ–ಸೃಷ್ಟಿಯೊಳಗಿನ, ಸ್ವಾಭಾವಿಕ. ಶೌರ್ಯ+ಅಭಿನಯ-ಶೌರ್ಯವನ್ನು ಪ್ರಕಟಿಸುವುದು, ಅಭಿನಯಿಸುವುದು. ಕೋಡುಗಲ್ಲು–

ಕೋಡಿನಂತಿರುವ ಕಲ್ಲು-ಶಿಖರ. ಮುನ್ನೋಟ-ಮುನ್ + ನೋಟ-ಮುಂದಿನ ದೃಷ್ಟಿ, ಮುಂದಾಗುವದನ್ನು ಕಾಣುವದು. ವ್ಯಂಗ್ಯೋಕ್ತಿ—ವ್ಯಂಗ್ಯ + ಉಕ್ತಿ ಮನಸ್ಸಿನಲ್ಲಿ ಒಂದನ್ನಿಟ್ಟುಕೊಂಡು ಬೇರೆ ಬಗೆಯಿಂದ ಆಡುವ ಮಾತು; ವಕ್ರೋಕ್ತಿ ಈ ಶಬ್ದವನ್ನೂ ಪ್ರಯೋಗಿಸುವರು. ವಾಸ್ತು—ಗೃಹ ನಿರ್ಮಾಣ ಶಾಸ್ತ್ರ. ಆಗರ—ತ್ಸ—ಆಕರ—ಖನಿ. ನಿಸರ್ಗ—ಸೃಷ್ಟಿ. ಮುಗ್ಧ—ಮುಹ್+ತ—ಮರುಳುಗೊಂಡ. ಕೈಗಲ್ಲು—ಕೈಯಿಂದ ಎಸೆಯಬಹುದಾದ ಕಲ್ಲು; ಗಲಿತ—ಗಲ್ + ತ—ಉದುರಿದ. ಪೆಂಪು—ಪಿರಿದು + ಪು—ದೊಡ್ಡತನ. ಉದ್ಬೋಧಕ-ಉತ್+ಬುಧ್ + ಅಕ=ಸ್ಫೂರ್ತಿಗೊಳಿಸುವ, ಹುರುಪು ತರುವ.

**ಕ. ಟಿಪ್ಪಣಿಗಳು—**ಫೇರಿಸ್ತ—ಅಕಬರ ಬಾದಶಹನ ಕಾಲದ ಮುಸಲ್ಮಾನ ಪ್ರವಾಸಿ; ನಿಕೋಲೋ ಕೌಂತಿ-೧೪೨೦ ರಲ್ಲಿ ವಿಜಯನಗರಕ್ಕೆ ಬಂದಿದ್ದ ಇಟಲಿಯ ಪ್ರವಾಸಿ. ಪೈಸ್-೧೫೨೨ರಲ್ಲಿ ವಿಜಯನಗರಕ್ಕೆ ಬಂದಿದ್ದ ಪೋರ್ತುಗೀಜ್ ಪ್ರವಾಸಿ. ಕ್ಷೇತ್ರವಿಧಿ-ಕ್ಷೇತ್ರದಲ್ಲಿ ಮಾಡುವ ಪಿತೃಕಾರ್ಯ, ದೇವತಾರಾಧನೆ ಮುಂ. ವಿರಾಟ್-ಸ್ವರೂಪ—ಜಗತ್ತನ್ನೆಲ್ಲ ವ್ಯಾಪಿಸುವಷ್ಟು ದೊಡ್ಡರೂಪ; ಶ್ರೀಕೃಷ್ಣನು ಅರ್ಜುನನಿಗೆ ವಿರಾಟ್‌ಸ್ವರೂಪವನ್ನು ತೋರಿಸಿದನು. ಮರೆತು ಹೋದ ಸಾಮ್ರಾಜ್ಯ, ಎಂದೂ ಮರೆಯದ ಸಾಮ್ರಾಜ್ಯ ಎಂಬ ವಿಜಯನಗರದ ಇತಿಹಾಸವನ್ನು ಹೇಳುವ ೨ ಗ್ರಂಥಗಳು ಇಂಗ್ಲಿಷ್ ಭಾಷೆಯಲ್ಲಿವೆ.

**ಡ.** ಪ್ರಶ್ನಗಳು—

೧. ಕನ್ನಡಿಗರಿಗೆ ಪಂಪಾಯಾತ್ರೆಯು ಮಹತ್ವವು ಏನು? ಪಂಪಾಯಾತ್ರೆಯು ಕಾಲದಲ್ಲಿ ನಮ್ಮಲ್ಲುಂಟಾಗುವ ಭಾವನೆಗಳು ಯಾವುವು? ಪ್ರಪಂಚವು ಮಾಯಾಮಯ ಎಂದು ಏಕೆ ಎನಿಸುವದು?

೨. ಸಾಸಿವೆಯ ಗಣಪ, ಕಡಲೆಯ ಗಣಪ ಈ ಹೆಸರುಗಳು ಏಕೆ ಬಂದುವು?

೩. ನಗಾರಖಾನೆ ಎಂಬ ಕಟ್ಟಡವು ಕಾಣಬರುವುದು; ಅದು ಎತ್ತರವಾದ ಸ್ಥಳದಲ್ಲಿ ಕಟ್ಟಿದೆ. ಈ ವಾಕ್ಯಗಳ ಕರ್ತೃ ಮೊದಲಾದವನ್ನು ಹೇಳಿ ಪ್ರಯೋಗವನ್ನು ಹೇಳಿರಿ.

## ೯. ಮಹಾರಾಣಿ ಲಕ್ಷ್ಮೀಬಾಯಿ. ಪುಟ ೭೮--೯೦.

**ಅ. ಗ್ರಂಥಪರಿಚಯ:**–ಇದು ಝಾಂಸಿಯ 'ಮಹಾರಾಣಿ ಲಕ್ಷ್ಮೀಬಾಯಿ' ಎಂಬ ವೀರರಸದ ಕಾದಂಬರಿಯಿಂದ ಎತ್ತಿ ಬರೆದುದು. ಆ ಕಾದಂಬರಿಯೊಳಗಿನ ಎಲ್ಲ ಸಂಗತಿಗಳನ್ನು ಸಂಕ್ಷೇಪವಾಗಿ ವರ್ಣಿಸುವ ಮೊದಲನೆಯ ಪರಿಚ್ಛೇದವೂ, ಆ ರಾಣಿಯ ಶೌರ್ಯ, ರಣಕೌಶಲ್ಯಗಳನ್ನು ವರ್ಣಿಸುವ ಒಂದು ಸಂದರ್ಭವೂ ಈ ಭಾಗದಲ್ಲಿ ಬಂದಿವೆ.

**ಬ. ಶಬ್ದಕೋಶ:**—ರಾಷ್ಟ್ರೀಯಪರ್ವಕಾಲ—ಪರ್ವ—ಪೌರ್ಣಿಮೆ ಅಮಾವಾಸ್ಯೆ ಮುಂ. ಹಬ್ಬ; ಧಾರ್ಮಿಕ, ಸಾಮಾಜಿಕ, ರಾಷ್ಟ್ರೀಯ ಎಂದು ಪರ್ವವು ೩ ವಿಧ. ಶಿಶುವಿಗೆ ಅನ್ನಪ್ರಾಶನ—ಅನ್ನಮುಹೂರ್ತ. ವಿಜಯಾ + ದಶಮಿ—'ವಿಜಯಾ' ಎಂಬ ದೇವಿಯನ್ನು ಆರಾಧಿಸುವ ( ಆಶ್ವಿನ ಶು. ) ದಶಮಿ. ಸೀಮನ್ + ಉಲ್ಲಂಘನ—ಗಡಿಯನ್ನು ದಾಟುವದು; ತಮ್ಮ ರಾಜ್ಯದ ಗಡಿಯನ್ನು ದಾಟಿ ಪರರಾಜ್ಯದಲ್ಲಿ ಪಾಳಯ ಹಾಕುವದು. ಪರಾ + ಜಿತ—ಸೋತ; ವಿ + ಧವೆ—( ಧವ—ಪತಿ. ) ಗಂಡನಿಲ್ಲದವಳು. ಪುರುಷಕಾರ—ಪೌರುಷ, ಪರಾಕ್ರಮ. ಪರಂ + ಧಾಮ—ಎಲ್ಲಕ್ಕೂ ಹೆಚ್ಚಿನ ಸ್ಥಾನ. ಕೀರ್ತಿ + ಶರೀರ—ಕೀರ್ತಿಯೆಂಬ ಶರೀರ. ಕ. ಧಾ.

**ಕ. ಟಿಪ್ಪಣಿಗಳು:**— ನಾನಾಸಾಹೇಬ ರಾವಸಾಹೇಬರು ೨ನೆಯ ಬಾಜಿರಾಯನ ಇಬ್ಬರು ದತ್ತಕ ಪುತ್ರರು. ಪರಶುರಾಮನು ಧನುವನ್ನು ನೋಡಿ—ಶೈಶವದಲ್ಲಿ ಇದ್ದ ಒಲವೇ ಮುಂದೆ ಬೆಳೆಯುವದು. ವಿದ್ಯಾರಂಭಣದ ಕಾಲದಲ್ಲಿ ಹಲವು ವಸ್ತುಗಳನ್ನು ಬಾಲಕನ ಇದಿರಿಗಿಟ್ಟು ಆತನ ಒಲವನ್ನು ಪರೀಕ್ಷಿಸುವ ವಾಡಿಕೆಯಿತ್ತು. ಪರಶುರಾಮನು ಶೈಶವದಲ್ಲಿಯೇ ಬಿಲ್ಲಿನ ಕಡೆಗೆ ನೋಡಿ ಅದನ್ನು ಹಿಡಿದನು. ಕರ್ಣನ ರಥವು—ಭೂಮಿಯಲ್ಲಿ ಹೂತ ಕಥೆಯನ್ನು ಭಾರತದಲ್ಲಿ ಓದಿರಿ. ಸೂರ್ಯಮಂಡಲವನ್ನು ಭೇದಿಸಿ—ಬ್ರಹ್ಮಜ್ಞಾನಿ, ಮತ್ತು ರಣದಲ್ಲಿ ಇದಿರಿಸಿದಾಗ ಕೊಲ್ಲಲ್ಪಟ್ಟವ ಇವರಿಬ್ಬರು ಸೂರ್ಯಮಂಡಲವನ್ನು ಭೇದಿಸಿ ವೀರಸ್ವರ್ಗವನ್ನೈದುವರೆಂದು ನಮ್ಮ ಶಾಸ್ತ್ರವು ಹೇಳುವುದು.

**ಡ. ಪ್ರಶ್ನೆಗಳು:**—

೧. ನೀವು ಓದಿದ ಭಾಗದಿಂದ ತಿಳಿಯುವ ಲಕ್ಷ್ಮೀಬಾಯಿಯ ಜೀವನಚರಿತ್ರವನ್ನು ಬರೆಯಿರಿ.

೨. "ಭವಿಷ್ಯದ ಸೂಚನೆ" ಎಂಬ ಹೆಸರು ಈ ಪ್ರಕರಣಕ್ಕೆ ಹೇಗೆ ಹೊಂದು ವದು ?

೩. ಅಂದಿನ ರಾತ್ರಿಯು ಪರ್ವಕಾಲವೇ ಇಂದಿನ ನಾಡಹಬ್ಬವಾಗಬಹುದೇ ?

೪. ಈ ಕಾದಂಬರಿಯ ಪ್ರಕರಣಗಳನ್ನೋದಿದ ನಿಮ್ಮ ಮನಸ್ಸಿನ ಮೇಲೆ ಯಾವ ಪರಿಣಾಮವಾಯಿತು ?

---

## ೧೦. ಶುಕಶಿಶುವಿನ ಆತ್ಮವೃತ್ತ. ಪುಟ ೯೧--೧೦೧.

**ಅ. ಗ್ರಂಥಪರಿಚಯ:**—ಇದು ಸುಪ್ರಸಿದ್ಧ ಸಂಸ್ಕೃತ ಬಾಣಕಾದಂಬರಿಯ ಒಂದು ಭಾಗ. ಸಂಕ್ಷೇಪವಾಗಿ ಭಾಷಾಂತರಿಸಿ ಕೊಟ್ಟಿದೆ. ಇದರಲ್ಲಿ ಬಾಣ ಕವಿಯ ವರ್ಣನ ಕೌಶಲವನ್ನು ಕಾಣಬಹುದು. ಕಠಿಣ ಶೈಲಿಯ ಗದ್ಯಭಾಗ.

**ಬ. ಶಬ್ದಕೋಶ:**—ಜಲವಿಹಂಗಮ—ಜಲಾಶಯದ ಹಕ್ಕಿ. ಕಂಗೊಳಿಸು-ಕಣ್+ಕೊಳ್+ಇಸು; ದೃಷ್ಟಿಯನ್ನು ಎಳೆದುಕೊಳ್ಳು; ಪ್ರಸವ-(ಪ್ರ+ಸೂ+ಅ) ಹಡೆಯುವದು; ಕೂರಂಬು-ಕೂರಿತು+ಅಂಬು-ತೀಕ್ಷ್ಣ ಬಾಣ. ಕಸ+ಪರಕೆ-ಕಸವನ್ನು ಗುಡಿಸುವ ಸಾಧನ. ಅನಾಹೂತ—ನ+ಆಹೂತ (ಆ+ಹ್ವೇ+ತ) ಕರೆಯದೆ ಬಂದ, ಆಕಸ್ಮಿಕ. ಆಪ್ಯಾಯನ—ಸೊಗಸು. ತರಗು—ಒಣಎಲೆ. ಸಂಯಮ—(ಸಮ್+ಯಮ್+ಅ)—ಮನವನ್ನು ಬಿಗಿಹಿಡಿಯುವುದು. ತ್ರಿಕಾಲ+ದರ್ಶಿ—ಮೂರುಕಾಲಗಳನ್ನು ನೋಡುವವ; ಅಂಗೈ+ನೆಲ್ಲಿ—ಅಂಗೈಯಲ್ಲಿದ್ದ ನೆಲ್ಲಿಕಾಯಿ, ಕರತಲಾಮಲಕ. ಅಗ್ನಿಕಾರ್ಯ—ಬ್ರಹ್ಮಚಾರಿಗಳು ಮಾಡಬೇಕಾದ ನಿತ್ಯದ ಹೋಮ. ಮುಪ್ಪು—ಮುದು(ಧಾ)+ಪು-ಮುದುಪು ಮುಪ್ಪು.

**ಕ. ಟಿಪ್ಪಣಿಗಳು:**—ಸಪ್ತತಾಳವೃಕ್ಷ—ಸುಗ್ರೀವನ ಗೆಳೆತನ ಮಾಡುವಾಗ ವಾಲಿಯನ್ನು ಕೊಲ್ಲಬಹುದಾದ ತನ್ನ ಸಾಮರ್ಥ್ಯವನ್ನು ತೋರ್ಪಡಿಸಲೋಸುಗ ರಾಮನು ಸಾಲಾಗಿ ಬೆಳೆದ ೭ ತಾಳೆಮರಗಳನ್ನು ಒಂದೇ ಬಾಣದಿಂದ ಉರುಳಿಸಿದನು. ಜೇನುಬಣ್ಣದ—ಮುದಿಹಂಸದ ರೆಕ್ಕೆಗಳಿಗೆ ಜೇನುತುಪ್ಪದ ಛಾಯೆ ಬರುವುದು. ಸಪ್ತರ್ಷಿಮಂಡಲವು ಸಂಧ್ಯೋಪಾಸನೆಗಾಗಿ—೭ ನಕ್ಷತ್ರಗಳ ಪುಂಜವೊಂದು ಬೆಳಗಿನಲ್ಲಿ ಉತ್ತರಕ್ಕಿಳಿವುದನ್ನು ಕೆಲಕಾಲ ಕಾಣಬ

ಹುದು. ಋಷಿಗಳಾದುದರಿಂದ ಸಂಧ್ಯಾವಂದನೆಗೆ ಇಳಿಯುವರೆಂದು ವರ್ಣಿಸಿದೆ. ಗರ್ಜಿಸುವ ಸಿಂಹಗಳು–ಬೇರೆ ಬೇರೆ ಪ್ರಾಣಿಗಳ ಕೂಗುವಿಕೆಯನ್ನು ತೋರಿಸಲು ರೂಢವಾಗಿರುವ ಬೇರೆ ಬೇರೆ ಶಬ್ದಗಳು ಇಲ್ಲಿ ಬಂದಿವೆ. ಉದಾ–ಕುದುರೆ–ಹೇಷಿಸು.

**ಡ. ಪ್ರಶ್ನೆಗಳು:—**

೧. ಶುಕಶಿಶು ವರ್ಣಿಸಿದ ತೆರದಲ್ಲಿ ಬೂರಲಮರವನ್ನು ವರ್ಣಿಸಿರಿ.

೨. ಶುಕಶಿಶು ಬೇಡರ ಜೀವನದ ವಿಷಯವಾಗಿ ಆಡಿದ ಮಾತುಗಳನ್ನು ಹೇಳಿರಿ.

೩. ಆಶ್ರಮದ ಹೊಗೆ, ಸೂರ್ಯಾಸ್ತಮಯದ ನೋಟ, ಹಾರೀತಕುಮಾರ, ಜಾಬಾಲಿಮುನಿ, ಹಕ್ಕಿಯ ಮರಿಗಳ ತಲೆ ನಡುಗುವುದು ಇವನ್ನು ಕವಿಯು ಹೇಗೆ ವರ್ಣಿಸಿರುವನು?

೪. ಬಾಣಕವಿ ಶೈವಬ್ರಾಹ್ಮಣ ಎಂದು ಓದಿದ ಭಾಗದಿಂದ ತೋರಿಸಿರಿ.

೫. ಬಾಣಕವಿಗೆ ಸೃಷ್ಟಿನಿರೀಕ್ಷಣದಲ್ಲಿದ್ದ ತೀಕ್ಷ್ಣದೃಷ್ಟಿಯನ್ನು ತೋರಿಸಿರಿ.

೬. ಬಳ್ಳಿವನೆ, ಸಾಕ್ಷಾಚ್ಛಂಕರ, ಇಂಚರ, ಹೆಬ್ಬಾವು, ಇವುಗಳಲ್ಲಾದ ಸಂಧಿಯನ್ನು ಬಿಡಿಸಿರಿ. ಆಗಸ, ಸಂಪಿಗೆ, ಪಾದರಿ, ನಿದ್ದೆ, ಸಂಜೆ, ಬಳ್ಳಿ ಇವುಗಳ ತತ್ಸಮಗಳನ್ನು ಹೇಳಿರಿ.

೭. ಈ ವಾಕ್ಯಗಳಲ್ಲಿ ದಪ್ಪ ಅಕ್ಷರಗಳ ಪದಗಳ ಸಾರ್ಥಕತೆಯನ್ನು ಹೇಳಿರಿ.

(ಅ) ಆ ಅಡವಿಯೊಳಗೆ ಅಗಸ್ತ್ಯ ಮಹಾಮುನಿಯ **ಪಾವನವಾದ** ಆಶ್ರಮವುಂಟು.

(ಬ) ಬೇಟೆಯ **ಅಬ್ಬರವು** ಅಡಗಿ ಅಡವಿಯು ಶಾಂತವಾಯಿತು.

(ಕ) ಬಿಸಿಲಲ್ಲಿ ಬೈಕಾಯ್ದ ನನಗೆ ಆತನ **ತಂಗೈಯಲ್ಲಿ** ಆಪ್ಯಾಯನವೆನಿಸಿತು.

(ಡ) ಬೇಡನು ಕೃಷ್ಣಸರ್ಪದಂತಿರುವ ತನ್ನ ಕರಿಗೈಯನ್ನು ಗೂಡಿನಲ್ಲಿ ಚಾಚಿದನು.

೮. ಈ ವಾಕ್ಯವನ್ನು ಯೋಗ್ಯ ಶಬ್ದಗಳಿಂದ ಪೂರ್ಣ ಮಾಡಿರಿ:—

ಸಿಂಹಗಳ ಗರ್ಜನೆ, ಕುದುರೆಗಳ...., ಆನೆಗಳ...., ಕಾಡುಕತ್ತೆಗಳ...., ನಾಯಿಗಳ...., ಪಕ್ಷಿಗಳ...., ಬೇಡರ.... ಇವುಗಳಿಂದ ಕಾನನವೆಲ್ಲ ದುಮುದುಮಿಸಿತು.

೯. ...ಅದರ ಟೊಂಗೆಗಳನ್ನು ನೋಡಿದರೆ ಈ ಮರವು.... ಆಗಸವನ್ನು.... ಎಂದು ತೋರುವುದು. ಈ ವಾಕ್ಯದಲ್ಲಿ ತೆರವಿದ್ದ ಸ್ಥಳಗಳಲ್ಲಿ ತಕ್ಕ ಶಬ್ದಗಳನ್ನು ಸೇರಿಸಿರಿ.

೧೦. ನವಿಲುಗಳು, ಬಿಸಿಲಿನಿಂದ, ಸರ್ಪಗಳಿಗೆ, ನೆಳಲನ್ನು ಈ ಪದಗಳನ್ನೂ ತಕ್ಕ ಬೇರೆ ಪದಗಳನ್ನೂ ಸೇರಿಸಿ ಒಂದು ವಾಕ್ಯವನ್ನು ರಚಿಸಿರಿ.

೧೧. "ತಪೋವನ ತರುಗಳು ತಪಸ್ಸಿಗೆ ಕುಳಿತಿವೆಯೋ ಎಂಬಂತೆ ತೋರುವುದು" ಎಂದು ವರ್ಣಿಸಿದೆ; ಅದು ಹೇಗೆ ತೋರಿಸಿರಿ.

೧೨. ನೀವೂ ಊಟಮಾಡಿ...ಕುಳಿತುಕೊಂಡು ವಿಸ್ತಾರವಾದ ಇದರ ಕಥೆಯನ್ನು ಕೇಳುವಿರಂತೆ. ಈ ವಾಕ್ಯದಲ್ಲಿ ತೆರವಿದ್ದ ಸ್ಥಳದಲ್ಲಿ ಬಳಲಿಕೆಯಿಲ್ಲದೆ ನಿರ್ಭಯವಾಗಿ, ನಿಶ್ಚಿಂತವಾಗಿ, ಸುಖವಾಗಿ ಈ ಪದಗಳಲ್ಲಿ ಯಾವುದು ಹೆಚ್ಚಿಗೆ ಯೋಗ್ಯವು? ಏಕೆ?

---

## ೧೧. ಶಿಕ್ಷೆ (ಕಥೆ) ಪುಟ ೧೧೨-೧೧೪.

**ಅ. ಗ್ರಂಥಪರಿಚಯ**—ಇದೊಂದು ವಿನೋದಾತ್ಮಕ ಕಲ್ಪಿತ ಕಥೆ. ಇದರಲ್ಲಿ ಬಂದದ್ದು ಕಲ್ಪಿತ ಶಾಲೆಯ ಸನ್ನಿವೇಶ; ಇಂಥ ಸ್ಥಿತಿ ಈಗೇನೂ ಉಳಿದಿಲ್ಲ. ಒಗ್ಗಾಲಿ ತಿಪ್ಪ, ಸಿದ್ದಬಡಕ ಮಾಸ್ತರ, ಯಂಕ ಈ ಪಾತ್ರಗಳಿಂದ ಹಾಸ್ಯರಸವು ರೂಪುಗೊಂಡಿದೆ. ಈ ಪಾಠದಲ್ಲಿ ಅನುಭೋಗಿಸಬೇಕಾದುದು ಕೇವಲ ಹಾಸ್ಯರಸದ ಆನಂದ, ಗ್ರಹಿಸಬೇಕಾದ ವಿಷಯಗಳು-ಶಿಕ್ಷಕರ ಕರ್ತವ್ಯ, ಬಾಲಕರು ಏಕೆ ಮೊಂಡರಾಗುವರು, ಶಾರೀರಿಕ ಶಿಕ್ಷೆ ಅಪ್ರಯೋಜಕ, ಬಾಲಕರ ಮೇಲೆ ಶಿಕ್ಷಕನ ಪ್ರೀತಿಯ ಆವಶ್ಯಕತೆ, ಅದರಿಂದ ಶಿಕ್ಷಕನಿಗೆ ದೊರೆಯುವ ನಿರಪೇಕ್ಷ ಆನಂದ ರೂಪ ಪ್ರತಿಫಲ ಮುಂತಾದುವು.

**ಬ. ಶಬ್ದಕೋಶ**—ಬೋಧ+ಅಮೃತ—ಜ್ಞಾನರೂಪವಾದ ಅಮೃತ; ಪ್ರಾ. ಸ್ಕೂ. ಸ. ಲೀ.-ಪ್ರಾಯ್ಮರಿ ಸ್ಕೂಲ್ ಲೀವ್ಹಿಂಗ್ ಸರ್ಟಿಫಿಕೇಟ್ ಪರೀಕ್ಷೆ, ಇದಕ್ಕೆ ಈ ಮೊದಲು ವ್ಹರ್ನ್ಯಾ. ಫಾ. ಪರೀಕ್ಷೆ ಎಂಬ ಹೆಸರಿತ್ತು. ಭಾವಿರಾಷ್ಟ್ರ-ಬಾಲಕರೇ ಮುಂದಿನ ರಾಷ್ಟ್ರ. ಪ್ರಹಾರೇಣ ಧನಂಜಯ-ಅರ್ಜುನನೇಹೊಡೆತದಿಂದ (ಗೆಲ್ಲು). ಸೇನ ಬೋವ-ಶಾನಭೋಗ.

**ಡ. ಪ್ರಶ್ನಗಳು**—

೧. ಈ ಪದಗಳನ್ನು ಉಪಯೋಗಿಸಿ ಒಂದೊಂದು ವಾಕ್ಯರಚನೆ ಮಾಡಿರಿ:—
ವಕ್ರದೃಷ್ಟಿ, ಬೋಧಾವೃತ, ಅಡಕವಾದ, ಸುಲಲಿತವಾಗಿ, ನಿರ್ವಹಿಸು, ಹುದ್ದರಿ, ವ್ಯಾಸಂಗ, ಅಧಿಕ ಪ್ರಸಂಗ, ಉರಿದಾಟ, ರೇಗಿಸು.

೨. ಈ ಪದಗಳಿಗಿರುವ ಅನೇಕಾರ್ಥಗಳನ್ನು ಹೇಳಿರಿ:—
ವರ, ಕೆರೆ, ಏರು, ಚೇಷ್ಟೆ.

೩. ನಿದ್ರಾಭಂಗ, ಹೃದಯಭಂಗ; ಇಂಥ ಇನ್ನೂ ಕೆಲವು ಶಬ್ದಗಳನ್ನು ಹೇಳಿರಿ.
ಬಾಷ್ಪಪೂರ್ಣ, ದುಃಖಪೂರ್ಣ; ,, ,, ,,
ಉಪಾಧ್ಯಾಯವೃತ್ತಿ, ಭಿಕ್ಷಾವೃತ್ತಿ; ,, ,, ,,

೪. ಒಗ್ಗಾಲಿತಿಪ್ಪ, ಮುರುವಿನ ತಿರಕ ಈ ಹೆಸರುಗಳು ಅವರಿಗೆ ಹೇಗೆ ಬಂದುವು?

೫. ನಿದ್ದೆಬಡಕ ಮಾಸ್ತರ, ಫ್ಯಾಶನಿನ ಹೊಸಟ್ರೇಂಡ ಇವರ ಸಂದರ್ಭಗಳಲ್ಲಿ ಬಂದ ಹಾಸ್ಯವೇನು ?

೬. ಈ ಕಥೆಯಿಂದ ವಿದ್ಯಾರ್ಥಿಗಳು ಗ್ರಹಿಸಬೇಕಾದ ಮಾತುಗಳು ಯಾವವು?

---

## ೧೨. ಗದಾಯುದ್ಧವೂ ಭೀಮಸೇನನ ನೀತಿಯೂ. ೧೧೫-೧೨೩.

**ಅ. ಗ್ರಂಥಪರಿಚಯ**—ಇದೊಂದು ಭಾರತಕಥೆಯನ್ನವಲಂಬಿಸಿ ಬರೆದ ಪ್ರತಿಪಾದನಪರ ಸ್ವತಂತ್ರ ಪ್ರಬಂಧವು.

**ಬ. ಶಬ್ದಕೋಶ**—ಸಾಮ್ರಾಜ್ಯ-ಸಮ್ರಾಜ್+ಯ+ಸೂಚಕ. ಸಮ್ರಾಜ್-ಚಕ್ರವರ್ತಿ; ಸಾಮ್ರಾಜ್ಯ-ಚಕ್ರವರ್ತಿಯ ಆರಸೊತ್ತಿಗೆ. ನಿಷಿದ್ಧ-ಮಾಡಬಾರದೆಂದು ಹೇಳಿದ; ಮೇಲುದು-ಹೆಂಗುಸರು ಹೊದೆದುಕೊಳ್ಳುವ ಮೇಲುವಸ್ತ್ರ; ಶಾಲು ಮುಂ. ರಜಸ್ವಲೆ—ಮುಟ್ಟಾದವಳು.

**ಕ. ಟಿಪ್ಪಣೆಗಳು**—ತುಷ್ಯತು ದುರ್ಜನಃ—ದುಷ್ಟನು ಸಂತೋಷಬಡಲಿ: ದುಷ್ಟನು ತೊಂದರೆ ಕೊಡುತ್ತಿದ್ದಾಗ ಅವನ ಮಾತಿಗೇ ಗೆಲುವನ್ನು ಕೊಟ್ಟು ಸಾಗುವದು ಎಂಬ ಅರ್ಥದಲ್ಲಿ ಈ ರೂಢಿಯ ಮಾತು ಸಂಸ್ಕೃತದಲ್ಲಿದೆ. ಎಳೆ ಹರಿದುಹೋಗು-ಸ್ವಲ್ಪ ಅಂಟಿಕೊಂಡದ್ದು ಅದೂ ಬಿಚ್ಚಿಹೋಗು ಎಂಬರ್ಥದಲ್ಲಿ. ಮುಕುಟವಲ್ಲ ಕೆಂಡದರಾಶಿ- ಪತಿವ್ರತೆಗೆ ಕೇಡುಬಗೆದವನು ತನ್ನನ್ನು ನಾಶಗೊಳಿಸುವ ಬೆಂಕೆಯನ್ನು ಕಟಿಕೊಂಡ ಹಾಗೆಯೇ ಸರಿ. ಮುಕುಟವು ಚಿನ್ನ

ಮಾಣಿಕ್ಯಗಳಿಂದ ಕೆಂಪಗೆ ಹೊಳೆಯುವಂಥದು. ಅದನ್ನು ಕೆಂಡದ ರಾಶಿ ಎಂದು ಇಲ್ಲಿ ರೂಪಿಸಿದೆ.

ಡ. ಪ್ರಶ್ನೆಗಳು—

೧. ಯುಗಯುಗಕ್ಕೆ ನೀತಿಯು ತಕ್ಕಡಿಯ ಪರಡಿಗೆಗಳು ಮೇಲೆ ಕೆಳಗೆ ಆಗುತ್ತಿರುತ್ತವೆ. ಈ ಮಾತಿನ ಅರ್ಥವನ್ನು ವಿವರಿಸಿರಿ.

೨. ಭೀಮಸೇನನ ಪಕ್ಷವನ್ನು ವಹಿಸಿ ಮತ್ತು ವಿರೋಧಿಸಿ ಚರ್ಚೆಯನ್ನು ಮಾಡಿರಿ.

೩. ಭೀಮಸೇನನ ನೀತಿ ಯಾವುದು ? ಅದಕ್ಕೆ ಬೇರೆಬೇರೆ ಹೆಸರು ಯಾವವು?

## ೧೩. ನಮ್ಮ ಸ್ವಾತಂತ್ರ್ಯಯುದ್ಧದ ಎರಡು ಪ್ರಕರಣಗಳು.

ಪುಟ ೧೨೪-೧೪೪.

ಅ. ಗ್ರಂಥಪರಿಚಯ—೧೮೫೭ನೆಯ ಇಸವಿಯ ಬಂಡಾಯದ ಇತಿಹಾಸವನ್ನು ಮುಖ್ಯವಾಗಿ ವಿವರಿಸುವ ಶ್ರೀಮಂತ ನಾನಾಸಾಹೇಬ ಪೇಶವೆ ಎಂಬ ಗ್ರಂಥದೊಳಗಿನ ಆರಂಭದ ಮತ್ತು ಕೊನೆಯ ಪ್ರಕರಣಗಳು.

ಬ. ಶಬ್ದಕೋಶ--ಹತವೀರ್ಯ-( ಹನ್+ತ )-ಹತ+ವೀರ್ಯ-ನಷ್ಟವಾದ ಬಲವುಳ್ಳವ. ಪರದಾಸ್ಯ + ಪಂಕ-ದಾಸ ( -ಜೀತದಾಳು, ಗುಲಾಮ ) + ಯ+ಪಂಕ-ದಾಸ್ಯ ( 'ಗುಲಾಮಗಿರಿ' ) ವೆಂಬ ಕೆಸರು. ಫಲಜ್ಯೋತಿಷ್ಯ-ಇಂತಹಗ್ರಹವು ಈ ಸ್ಥಾನದಲ್ಲಿರುವಾಗ ಇಂತಹ ಫಲ, ಮುಂತಾದ ಶುಭಾಶುಭ ಫಲಗಳನ್ನು ಹೇಳುವ ಜ್ಯೋತಿಃಶಾಸ್ತ್ರದ ಭಾಗ; ರಾಜ + ಧರ್ಮ-ಅರಸರ ಕರ್ತವ್ಯ.

ಕ. ಟಿಪ್ಪಣಿಗಳು:—ಯತೋ ಧರ್ಮಸ್ತತೋ ಜಯ:—( ಸಂಸ್ಕೃತ ) ಯಾವ ಕಡೆಗೆ ಧರ್ಮವೋ ಆ ಕಡೆಗೆ ಗೆಲುವು, ಧರ್ಮಬಲವಿದ್ದಕಡೆಗೆ ಜಯವು ಎಂಬ ಅರ್ಥ. ಗೋರಿಲ್ಲಾ ವಾರ್‌ಫೆಅರ್-ಶತ್ರುಗಳ ಮೇಲೆ ಆಕಸ್ಮಿಕವಾಗಿ ಬೀಳುವದು, ಅವರು ಎಚ್ಚರುಗೊಂಡು ಏರಿ ಬರುವಂತೆ ಕಂಡರೆ ಒಮ್ಮೆಲೆ ಮಾಯವಾಗಿ ಬಿಡುವುದು; ಅಡಗಿಕೊಂಡು ಕುಳಿತು ಶತ್ರುಗಳನ್ನು ಕಾಡುವುದು ಮುಂತಾದ ಕಪಟಯುದ್ಧದ ಬಗೆ.

## ಡ. ಪ್ರಶ್ನೆಗಳು—

೧. ಸಿಪಾಯಿಗಳ ಬಂಡಾಯದ ಮೊದಲು ಅದರ ಯೋಜಕರು ಗೊತ್ತು ಪಡಿಸಿಕೊಂಡ ಕಾರ್ಯಕ್ರಮವು ಯಾವುದು ? ಅವರಿಗೆ ಯಾವ ಅನುಕೂಲತೆಗಳಿದ್ದುವು? ಅವರು ಯಾವ ಮಾತನ್ನು ಮುಖ್ಯವಾಗಿ ಅವಲಂಬಿಸಿದ್ದರು?

೨. ಸಿಪಾಯಿ ಬಂಡಾಯದಲ್ಲಿ ಅವರಿಗೆ ಜಯವು ಬಾರದಿರುವುದಕ್ಕೆ ಕಾರಣಗಳು ಯಾವುವೆಂದು ಹೇಳಿದೆ ?

೩. ರಶಿಯದ ಗುಪ್ತಚಾರನು ಮಾಡಿದ ಕಾರ್ಯಗಳು ಯಾವುವು ?

---

## ೧೫. ಮಹಾತ್ಮಾಜಿಯವರು. ಪುಟ ೧೪೭–೧೫೪.

**ಅ. ಗ್ರಂಥಪರಿಚಯ:**—ಮಹಾತ್ಮರ ತತ್ತ್ವಗಳ ವಿವರಣೆಯನ್ನೊಳಗೊಂಡ ಸಂಕ್ಷಿಪ್ತ ಚರಿತ್ರೆ.

**ಬ. ಶಬ್ದಕೋಶ:**–ಧರ್ಮಬಾಹಿರ—ಧರ್ಮದಿಂದ ಹೊರಗೆ ಆದವ. ಧರ್ಮಪರಾಯಣ—ಧರ್ಮ+ಪರ+ಅಯನ-ಧರ್ಮವೇ ಮುಖ್ಯಗತಿಯಾಗಿ ಉಳ್ಳವ. **ಬೋಧಿ** ದ್ರುಮ—ಬುದ್ಧನು ಪರಮಶಾಂತಿಯನ್ನು ಪಡೆದ ವೃಕ್ಷ. ಕಾಷ್ಠೆ—ದಿಕ್ಕು, ಅಂಚು, ಕೊನೆ; ಆಂದೋಲನ–ಚಲನವಲನ (ಚಳವಳಿ). ತವರೂರು–**ಹುಟ್ಟಿ**ದೂರು ಮುನ್ನೋಟ—ಮುನ್+ನೋಟ. ಮೊದಲೇ ಕಾಣುವುದು. **ಹುಮ್ಮ**ಸ—ಹುರುಪು; ಉತ್ಸಾಹ ( ಸ್ಪಿರಿಟ್). ಪಾಶವ ( ಪಶು ) ಬಲ—ಪಶುಗಳ ಬಲ. ವಿವೇಕವಿಲ್ಲದೆ ಉಪಯೋಗಿಸುವ ಶಕ್ತಿ. ಆದರ್ಶ—ಮಾದರಿ. ಮದ್ಯಪಾಯಿ ( ಪಾ. ಧಾ. ) ಸೆರೆಗುಡಿಕ; ವಿಲಾಸ—ಸೊಗಸು ( ಚೈನಿ ) ರಾಜ+ಕರಣ (-ತಂತ್ರ)—ರಾಜತಂತ್ರ.

**ಕ. ಟಿಪ್ಪಣಿಗಳು:**—ಮಂತ್ರದ್ರಷ್ಟಾರ—ವೇದಮಂತ್ರವನ್ನು ಕಂಡವ; **ವೇದ**ಗಳನ್ನು ಮನುಷ್ಯರು ಮಾಡಲಿಲ್ಲವೆಂದೂ ಮೊದಲು ಇದ್ದುವನ್ನೇ ಋಷಿಗಳು ಕಂಡುಹಿಡಿದರೆಂದೂ ಹಿಂದುಗಳು ನಂಬುವರು.

ಮಹಾತ್ಮಾಜಿ—( ಮಹತ್ + ಆತ್ಮ + ಜಿ (-ಹಿಂದಿ ಭಾಷೆಯ ಗೌರವಾರ್ಥಕದ್ದು )—ಗಾಂಧಿಯವರನ್ನು ಹೆಸರಿನಿಂದ ಕರೆಯದೆ ಗೌರವಕ್ಕಾಗಿ ಈ ಶಬ್ದದಿಂದ ಕರೆಯುವರು.

ಹಿಂದುಸ್ತಾನ, ಹಿಂದಿ—ಅಫಗಾಣಿಸ್ತಾನದ ವರೆಗೆ ಬಂದ ಮಹಮ್ಮದೀಯರು ಸಿಂಧು ನದಿಯ ಆಚೆಯವರು ಈ ಅರ್ಥದಲ್ಲಿ ಸಿಂಧ-ಹಿಂದು-ಎಂದು ನಮ್ಮನ್ನು ಕರೆದರು; ಹಿಂದುಗಳ ದೇಶ ಎಂಬ ಅರ್ಥದಲ್ಲಿ ಹಿಂದುಸ್ತಾನ ಎಂಬ ಶಬ್ದವನ್ನೂ (ತುರ್ಕಸ್ತಾನ, ಅರಬಸ್ತಾನ ಎಂಬಂತೆ) ಅವರೇ ಉಂಟು ಮಾಡಿದರು. ಆದರೆ ಈಗ ಮುಸಲ್ಮಾನರು ಕ್ರಿಸ್ತಿಯನ್ನರು, ಪಾರ್ಶಿಗಳು ಮುಂತಾದ ಎಲ್ಲ ಧರ್ಮದವರನ್ನು 'ಹಿಂದು' ಶಬ್ದವು ಒಳಗೊಳ್ಳುವುದಿಲ್ಲ; ಇದಕ್ಕಾಗಿ ಯುರೋಪಿಯನರು ಇಂಡಿಯನ್ ಎಂಬ ಶಬ್ದವನ್ನು ಪ್ರಯೋಗಿಸುವರು. 'ಹಿಂದಿ' ಶಬ್ದವು ಭಾರತವಾಸಿ ಎಂಬ ಅರ್ಥದಲ್ಲಿ ಇಲ್ಲಿ ಪ್ರಯೋಗಿಸಲ್ಪಟ್ಟಿದೆ. ಇಂತಹ ಶಬ್ದವು ಈಗ ಆವಶ್ಯಕ.

ಬದ್ಧಕಂಕಣ—ಮದುವೆ ಮೊದಲಾದ ಸಮಾರಂಭದಲ್ಲಿ ಮುಖ್ಯ ವ್ಯಕ್ತಿಯು ಕೈಗೆ ಅರಿಸಿನಬೇರು ಕಟ್ಟಿಕೊಳ್ಳುವ ವಾಡಿಕೆಯಿದೆ; ಅದು ಕಂಕಣವು. ಕಂಕಣ ಕಟ್ಟಿಕೊಂಡವನು ಆ ಕಾರ್ಯಕ್ಕೆ ತೊಡಗಿದವನು. ಟೊಂಕ ಕಟ್ಟು ಎಂಬುದೂ ಇದೇ ಅರ್ಥದಲ್ಲಿದೆ. ಮುಸಲೋನಿ=ಇಟಲಿಯ ಈಗಿನ ಮುಂದಾಳು. ಹಿಟ್ಲರ್—ಜರ್ಮನಿಯ ಈಗಿನ ಮುಂದಾಳು.

**ಡ. ಪ್ರಶ್ನೆಗಳು:—**

೧. ಸಾಮಾನ್ಯ ಸಮರ ಶಾಂತಿಸಮರ ಇವುಗಳ ತುಲನೆ ಮಾಡಿರಿ.

೨. ಸತ್ಯಾಗ್ರಹವೆಂದರೇನು? ವಿವರಿಸಿ ಹೇಳಿರಿ. ಯಾವ ಯಾವ ಸಂದರ್ಭಗಳಲ್ಲಿ ಅದರ ಉಪಯೋಗವಾಗುವುದು?

೩. ಮಹಾತ್ಮರ ತತ್ವಗಳು ಯಾವವು? ಕೆಲವನ್ನು ಹೇಳಿರಿ.

—ಃ ಸಂಪೂರ್ಣ. ಃ—

ಕನ್ನಡ

# ಕವಿತಾ ಪಾಠ ಮಾಲೆ.

# ಪರಿವಿಡಿ.


| | | |
|---|---|---|
| ೧. | ಗಿರಿಜಾಕಲ್ಯಾಣ (ಕನ್ನಡ ಭಾಗವತದಿಂದ) | ೧ |
| ೨. | ದಮಯಂತಿಯು ನಳನ ಮನೆಗೆ ಹೋದುದು ( ನಳ ಚರಿತ್ರೆಯಿಂದ) | ೪ |
| ೩. | ಕೋಳೂರ ಕೊಡಗೂಸು ( ಬಸವ ಪುರಾಣದಿಂದ ) | ೫ |
| ೪. | ದ್ರೌಪದೀ ಸ್ವಯಂವರ ( ಭಾರತದಿಂದ ) | ೮ |
| ೫. | ಚೆನ್ನಬಸವಣ್ಣನ ಬಾಲ್ಯ ( ಚೆನ್ನಬಸವ ಪುರಾಣದಿಂದ ) | ೧೦ |
| ೬. | ಉತ್ತರ ಕುಮಾರ-ಅಂತಃಪುರದಲ್ಲಿ ( ಭಾರತದಿಂದ ) | ೧೩ |
| ೭. | ಉತ್ತರ ಕುಮಾರ-ಸಮರಾಂಗಣದಲ್ಲಿ ( ಭಾರತದಿಂದ ) | ೧೫ |
| ೮. | ಅಂಗದನ ರಾಯಭಾರ ( ತೊರವೆ ರಾಮಾಯಣದಿಂದ ) | ೧೭ |
| ೯. | ಕರ್ಣನ ಸ್ವಾಮಿನಿಷ್ಠೆ ( ಭಾರತದಿಂದ ) | ೨೦ |
| ೧೦. | ಮಾಯಾಂಗನೆಯರ ಕಾಟ ( ಹರಿಶ್ಚಂದ್ರ ಕಾವ್ಯದಿಂದ ) | ೨೨ |
| ೧೧, ೧೨. | ರಾಮನ ರಾಜ್ಯವಿಯೋಗ ( ತೊರವೆ ರಾಮಾಯಣದಿಂದ ) | ೨೫ |
| ೧೩. | ಚಂದ್ರಹಾಸನ ಬಾಲ್ಯ ( ಜೈಮಿನಿ ಭಾರತದಿಂದ ) | ೨೮ |
| ೧೪. | ಸೀತಾಪರಿತ್ಯಾಗ ( ಜೈಮಿನಿ ಭಾರತದಿಂದ ) | ೩೦ |
| ೧೫. | ಸೂರ್ಯಾಸ್ತ, ಅಂಧಕಾರ, ಚಂದ್ರೋದಯ ( ಚೆ. ಬ. ಪು. ) | ೩೪ |
| ೧-೯ | ಆಧುನಿಕ ಕವಿಗಳ ಕೃತಿಗಳು. | ೩೬-೪೪ |

# ಕವಿತಾ ಪಾಠ ಮಾಲೆ

## ೧. ಗಿರಿಜಾ ಕಲ್ಯಾಣ

( ಸತಿಯು ಹಿಮವಂತನ ಮಗಳು ಪಾರ್ವತಿಯಾಗಿ ಅವತರಿಸಿದಳು. ಶಿವನನ್ನೇ ಮದುವೆಯಾಗುವೆನೆಂದು ಆಕೆ ಆತನನ್ನು ಒಲಿಸಲೋಸುಗ ತಪಸ್ಸಿಗೆ ಕುಳಿತಳು. ಆಕೆಯ ನಿಷ್ಠೆಯನ್ನು ಲೋಕಕ್ಕೆ ತೋರ್ಪಡಿಸುವುದಕ್ಕಾಗಿ ಶಿವನು ಬ್ರಾಹ್ಮಣವೇಷದಿಂದ ಪಾರ್ವತಿಯ ಪರ್ಣಶಾಲೆಗೆ ಬರುವನು. )

ಮೆರೆವ ಕೃಷ್ಣಾಜಿನದ ದರ್ಭೆಯ । ಬೆರಳ ದಂಡ ಕಮಂಡಲೊಪ್ಪುವ ।
ಶಿರದ ಜಡೆಯ ಭಾಳದ ತ್ರಿಪುಂಡ್ರದ ಮೋಹನಾಕೃತಿಯ ॥
ಎರಗಿ ಹೆಜ್ಜೆಯನಿಡುವ ಸ್ವಸ್ತಿಕ । ಸುರುವ ತೇಜದ ಕಂದು ವಟುವನು ।
ಬರೆದಳರ್ಘ್ಯಾದಿಕವನೆಲ್ಲವ ಬೇಗ ಮಾಡುತ ॥ ೧ ॥
ಬರಲು ಬಾಲಮೃಗಾಕ್ಷಿ ವಿಪ್ರನ । ಚರಣದಲಿ ತಲೆವಾಗಿ ನಮಿಸಿ ॥
ಸ್ಮರವನಿತ್ತುಪಚರಿಸುತಿರಲಾ ಲೋಲನೇತ್ರೆಯನು ॥
ಹರಸಿದನು ಹಲಕಾಲ ಬದುಕುವ । ವರನ ವಧುವಾಗೆನುತ ಕುಶಲೋ ।
ತ್ತರದ ಸುಸ್ಮಿತಸಾರಸೂಕ್ತಿಗಳಿಂದ ಮನ್ನಿಸಿದ ॥ ೨ ॥
ನುಡಿಸಿದನು ನೀನೇಕೆ ತಪವೇ । ಕೊಡಲ ದಂಡಿಸಲೇಕೆ ವಾಯದೆ ।
ಕೆಡಿಸುವರೆ ಸಾಧನವಲಾ ಧರ್ಮಾರ್ಥ ಸಂಸ್ಥಿತಿಗೆ ॥
ಬಡವನೇ ಹೆತ್ತವನು ಪರ್ವತ । ದೊಡೆಯನಲ್ಲಾ ತಾಯಿ ಮೋಹದ ॥
ಮಡುವಲಾ ಗುಣವನಧಿ ನಿನಗೇ ತಪವದೇಕೆಂದ ॥ ೩ ॥
ಸಿದ್ಧಿಯೇನದರಿಂದೆ ನುಡಿ; ತನು । ಮಧ್ಯೆ ತಪದ ನಿಶ್ಚಯವು ನಿಜ ॥
ಬುದ್ಧಿಪೂರ್ವಕವೋ ವಿನೋದವೊ ಹೇಳು ತನಗದನು ॥
ಶ್ರದ್ಧೆ ನಿನಗಿಂತೀ ಹರೆಯದಲಿ । ವೃದ್ಧೆಯರವೊಲು ಕಂಡು ಕರುಣಾ ॥
ಬದ್ಧನಾದೆನು ನಿಜಮನೋರಥವೇನು ಹೇಳೆಂದ ॥ ೪ ॥
ಎಂದಡಬಲೆ ಕಟಾಕ್ಷದಲಿ ಸಖಿ । ಗೆಂದಡೆಂದಳು ಹಂಬರಾರೇ ।
ನೆಂದಡೊಲ್ಲಳು ಬಿಡಳು ತಪವನು ತನ್ನ ಮತಿ ಬೇರೆ ।

ಇಂದುಮೌಳಿಯನೊಲಿಸುವರ್ಥಿಗೆ । ನಂದು ತಪದಲಿ ತರಳಲೋಚನೆ ।
ನಿಂದಳೆಂದಡೆ ನಗುತ ನಯನತ್ರಿತಯನಿಂತೆಂದ ॥ ೫ ॥

ಆಯಿತಿನ್ನೇನುಂಡೆ ತಣಿಯಮ । ಬಾಯಬಸಿರುಗಳಕಟ ತಿರಿಪನ ।
ತಾಯಿತಂದೆಯದಾರು ? ಮನೆ ತಾನೆಲ್ಲಿ ಮಸಣವಲ ! ॥
ಜೀಯಮೂರೊಳಗುಂಟೆ ? ಬರಿದೇ ! ಕಾಯವಿದು ಸಂಕ್ಲೇಶ ಭಾಜನ ।
ವಾಯಿತೆಲ್ಲರ ಮನಕೆ ಹರುಷವನಿತ್ತೆನೀನೆಂದ ॥ ೬ ॥

ಚಿತ್ತವಬಲೆಯರಿಂಗೆ ನೆರೆವುದು । ಪಾತ್ರದಲಿ; ಹುಸಿಯಾಯ್ತು; ಯೋಗ್ಯನೆ ।
ಕೃತ್ತಿವಾಸನು ನಿನಗೆ ? ರೂಪವಿದೇಕೆ ? ಗುಣವೇಕೆ ? ॥
ಹೆತ್ತವರು ಹರಹರ ಮುನಿವರ್ಗಳ । ಚಿತ್ತರೈ ತಾ ನಹಿತ ತನ್ನೆಡೆ ।
ಹೊತ್ತುಕಿಡೆ ಹೇರಾಳತಾಪದಲಬಲೆ ಕೇಳೆಂದ ॥ ೭ ॥

ಹಾವು ಕೈಯಲಿ ಮೈಯನೆಲ್ಲವ । ನಾವರಿಸಿಕೊಂಡಿಹವು ಹೊದ್ದುವ ।
ತಾವ ಕಾಣೆನು ಮೊದಲ ಪಾಣಿಗ್ರಹಣ ತಾ ಒಯಲು ॥
ಜೀವನನಡಹು ಗಾರುಡಿತಿ ಫ । ಸ್ತ್ರಾವಲೇಪನ ಚಂದನಂಗಳಿ ।
ಗಾವ ನೇರುವೆ ಸಾಕು ನಮಸಂಬಂಧವಲ್ಲೆಂದ ॥ ೮ ॥

ಬಸಿವ ನೆತ್ತರ ತೊಗಲ ಧೋತ್ರದ । ವಸನದೊಡನೈತಹ ಪಿಶಾಚ ।
ಪ್ರಸರಗಣ ಪರಿವಾರ ಮನೆ ಮೊದಲಾಗಿ ತಾನಿಲ್ಲ ॥
ನೊಸಲಲುರಿವೃತ್ತಿಹುದು ಕಣ್ಣೊಂ । ದಸಮನೇತ್ರನ ಪದವ ನೀನ ।
ರ್ಥಿಸಿದೆ ತಪ್ಪೇನಹುದು ಕರ್ಮಾಧೀನ ಮತಿಯೆಂದ ॥ ೯ ॥

ನೀರೆ ನೀನುತ್ಸವದಲಾನಯ । ನೇರಿ ಬರೆ ಹಳಿಯೆತ್ತಸಿದರಾ ।
ಗೇರಿ ಹರನೈತಹುದನೀಕ್ಷಿಸುವರ್ಥಿ ನಿನಗಾಯ್ತೇ ? ॥
ಮೂರು ಲೋಕದ ನಗೆಗೆ ಮೂಗಿನ । ಮೋರೆ ಮುರುವನು ಪೆತ್ತುಬದುಕವ ॥
ಸೂರೆವಾರಿದನಾರು ಸಾಧಿಸಬಹುದು ಹೇಳೆಂದ ॥ ೧೦ ॥

ಭವನ ವಧುವಹೆನೆಂಬ ಹಂಗುನ । ಭುವನದಲಿ ನಾ ಕಾಣೆನಿದಿರೊಳು ।
ನವೆದು ಪೀಳುವ ನಿನ್ನನೊಬ್ಬಳ ಕಂಡೆನಂಗನೆಯ ॥
ಅವಯವದ ಸೌಂದರ್ಯಲಕ್ಷ್ಮಿಗೆ । ಸವತಿಯಿಲ್ಲ ಲತಾಂಗಿ ಜನನ್ವೈ ।
ಭವದ ಸಿದ್ಧಿಯು ಬುದ್ಧಿಯೊಂದೇ ಕೊರತೆ ನಿನಗೆಂದ ॥ ೧೧ ॥

ಓಲಗಿಸಿಕೊಳಲೊಲುವರಿಂದೇ । ಹೇಳುವೆನು ಸುರಪತಿಗೆ ನಿಶ್ಚಯ ॥
ಕಾಲಿಗೆರಗಿಸಿಕೊಡುವೆನಾದಿಗುಪಾಲ ಮೌಳಿಗಳ ॥
ಹೇಳು ನೀನೇ ಸಖಿಯ ಕೈಯಲಿ । ಹೇಳಿಸುವುದೇಕಕಟ ಮೌನವ ।
ಪೇಳುಕೊಡು ನಿಜಕಾರ್ಯಸಾಧಕ ನಾನು ಕೇಳೆಂದ ॥ ೧೨ ॥

ನುಡಿಯ ಕೇಳುತ ನಿಯಮವನು ಕೆಲ । ಕಡೆಯಲಿರಿಸಿದಳಬಲೆ ಕಂಗಳ ।
ಕಡೆಸೆರಗು ಕೆಂಪಾಯ್ತು ಗಂಟಿಕ್ಕಿದುವು ಹುಬ್ಬುಗಳು ॥
ನಡುಗುವಧರದ ಬೆವರುನನಯವ । ದಿವಿದ ರೋಷದಲನ್ನು ಮೂಜಗ ।
ದೊಡೆತಿ ನುಡಿದಳು ಕಪಟ ವಿಪ್ರಾಕೃತಿಯ ಹರನೊಡನೆ ॥ ೧೩ ॥

ಸಾಕು ನಡೆ ನಡೆ ವಿಪ್ರ ವಚನವ । ನೋಕರಿಸುತಿಹೆ ಶಿವಗಳೀಶನ ।
ನೇಕೆ ನಿಂದಿಸಿ ನುಡಿವೆ ಪಾತಕಿ? ಪಾರಲೌಕಿಕದ ॥
ಜೋಕೆ ಕೆಡದೇ ಬಹಳ ದೈನ್ಯವ । ದೇಕೆ ನೀನೇಕಮಳ ಶ್ರೈವಸಿ ।
ದೇಕೆ ನಿನಗೆತ್ತಣದು ಹೋಗೆಂದಳು ಸರೋಜಮುಖಿ ॥ ೧೪ ॥

ಏಕೆ ಬಂದನೊ ವಿಪ್ರನೇಕೆ ಪಿ । ನಾಕಿಯನು ನಿಂದಿಸಿದ ನಾನದ ।
ನೇಕೆ ಕೇಳಿದೆನೇಕೆ ನೋಡಿದೆನೇಕೆ ನುಡಿಸಿದೆನು ॥
ಏಕೆ ವಿಧಿ ತನ್ನನು ವಿಕರ್ಮವಿ । ಪಾಕದಲಿ ನೆಮ್ಮಿಸಿದನೆನುತನು ।
ಶೋಕ ಮೂರ್ಛಿತೆ ಮರುಗುತಿರ್ದಳು ಮನದಿ ಮರುಕೊಳಿಸಿ ॥ ೧೫ ॥

ಕಪಟವಿಪ್ರನು ನಸಿಯಕ್ಕೆ ಬಪ್ಪಲು—

ಮುಟ್ಟದಿರು ದೂರದಲಿ ನಿಂದಿರು । ಕೆಟ್ಟ ಹಾರುವಯೆನುತ ಕಂಗಳ ।
ಬಿಟ್ಟು ನೋಡಿದಳಬಲೆ ಕಂಡಳು ಮುಂದೆ ಹೊಳೆಹೊಳೆವ ॥
ದೃಷ್ಟಿಗಳು ಕೋರವಿಸಲೆಡಬಲ । ದಿಟ್ಟಿಡೆಯ ಕಮಲಜಸುರೇಂದ್ರರ ।
ಬಟ್ಟಬೀದಿಯ ಬಹಳ ತೇಜದ ತೆರಳಿಕೆಯ ಶಿವನ ॥ ೧೬ ॥

ಪದದಲೆರಗಿದಳಬಲೆ ಜಯಜಯ । ಮದನಹರ ಶರಣೆನುತ ವಿಕಸಿತ ।
ವದನೆ ನಿಂದಳು ಬಾಗಿ ಶಿರವನು ಬೆವರುವಂಗದಲಿ ॥
ಸುದತಿ ಭಯಲಜ್ಜಾ ಪ್ರಣಯ ಭಾ । ರದಲಿ ಮನ್ನಿಸುತಿರಲು ಕೈವಿಡಿ ।
ದುದೇ ಮುಹೂರ್ತವೆನುತ್ತು ಘೋಯೆಂದುದು ಸುರಸ್ತೋಮ ॥ ೧೭ ॥

# ೨. ದಮಯಂತಿಯು ನಳನ ಮನೆಗೆ ಹೋದುದು.

( ನಳರಾಜನು ತನ್ನ ದುಃಸ್ಥಿತಿಯಲ್ಲಿ ಮಡದಿಯಾದ ದಮಯಂತಿಯನ್ನು ಕಾಡಿನಲ್ಲಿ ಬಿಟ್ಟು ಹೊರಟು ಹೋದ ತರುವಾಯ ಆಕೆ ತವರ್ಮನೆಗೆ ಬರುವಳು. ಮುಂದೆ ನಳನು ಸುಸ್ಥಿತಿಯನ್ನೈದಿ ದಮಯಂತಿಯನ್ನು ಕರೆಕಳುಹುವನು. )

ಕೇಳಿ ಹರುಷಿತೆಯಾದಳವರಿಗೆ । ಪಾಲಿಸಿದಳಾಭರಣವಸ್ತ್ರವ ।
ಲೋಲಲೋಚನೆ ಒಂದು ತಂದೆಗೆ ನಮಿಸಿ ವಿನಯದಲಿ ॥
ನಾಳೆ ಪಯಣವ ನೋಡಿ ನಿಷಧನೃ । ಪಾಲನಲ್ಲಿಗೆ ತನ್ನ ಕಳುಹೆನೆ ।
ಬಾಲಕಿಯ ನುಡಿಗೇಳಿ ತೆಗೆದಪ್ಪಿದನು ಭೀಮನೃಪ ॥ ೧ ॥

ತೆಗೆಸಿದನು ಭಂಡಾರದಲಿ ಒಗೆ । ಒಗೆಯ ವಸ್ತ್ರವ ಸುಭಟರಿಗೆ ಝಗ ।
ಝಗಿಪ ಹೊನ್ನಾಯುಧವ ನವರತ್ನಗಳ ತೊಡಿಗೆಗಳ ॥
ಸುಗುಣೆಯರು ಮೊದಲಾದ ಪರಿವಾ । ರಗಳಿಗಿತ್ತನು ಪಯಣದಲಿ ತೇ ।
ರುಗಳ ಶೃಂಗರಿಸಿದನು ಬಿರುದಿನ ಸಿಂಧಗಳ ನೆಗಹಿ ॥ ೨ ॥

ಜಗುಹನೇರಿಸಿ ಹಯಗಳನು ರೆಂ । ಚೆಗಳ ಹಮ್ಮುದರಾನೆಯಲಿ ಸ ॥
ತ್ತಿಗೆಗಳನು ಪಲ್ಲೈಸಿದರು ಮೇಲೆಸೆವ ಕಳಶದಲಿ ।
ಸೊಗಸುದೋರುವ ಭಟರ ನೆರೆ ಕೈ । ದುಗಳ ಹೊಳಹಿನ ನೃಪರ ಬಳಿಯಲಿ ॥
ನೆಗಹಿ ಬೀಸುವ ಚೌರಿಗಳ ಸಂಭ್ರಮದೊಳೊದಗಿದರು ॥ ೩ ॥

ಮಣಿರಥಂಗಳ ನಡುವೆ ಸುಳಿಪಂ । ದಣಿಪ ರಾಯರ ಮಧ್ಯದಲಿ ಯುರ ॥
ವಣಿಪ ಮತ್ತಗಜಂಗಳಲಿ ಮಾವುತರ ಕಳಕಳದ ।
ಕುಣಿವ ತೇಜಿಯ ರಾವುತರ ಸಂ । ದಣಿಗಳಲಿ ಚತುರಂಗ ಬಲ ವಿ ।
ಟ್ಟಣಿಸಿ ನಡೆದುದು ಸಾಲುಸತ್ತಿಗೆಗಳ ವಿಡಾಯದಲಿ ॥ ೪ ॥

ನಾರಿಯರ ಸಂದಣಿಯು ನೆರೆದುದು । ತೇರಿನಲಿ ಕೆಲರಂದಣದಿ ಕೆಲ ।
ರೇರಿದರು ವಾಜಿಗಳ ಗಜಕಂಧರದ ಗದ್ದುಗೆಯ ॥
ಸೇರಿ ನಡೆದರು ಮುಂದೆ ಘನಗಂ । ಭೀರ ಭೇರೀಪಣವ ವಾದ್ಯವು ।
ಭೋರಿಡಲು ಹೊರವಂಟಳಂಗನೆ ಸಕಲ ವಿಭವದಲಿ ॥ ೫ ॥

ಬಂದಳಾ ದಮಯಂತಿ ದೇವ ಮು । ಕುಂದ ರಕ್ಷಿಸು ಎನುತ ತನ್ನಯ ।
ನಂದನರ ಸಹಿತೇರಿದಳು ಮಣಿಮಯವರೂಥವನು ॥
ಹಿಂದೆ ಮುಂದಿಕ್ಕೆಲದ ನಾರೀ । ವೃಂದ ನಡೆಯಲು ಮನದ ಹರ್ಷಾ ।
ನಂದದಲಿ ನಡೆತಂದು ಹೊಕ್ಕಳು ನಿಷಧಪಟ್ಟಣವ ॥ ೬ ॥

ನೋಡುತಿರ್ದರು ಪುರಜನರು ನೆಲೆ । ಮಾಡದುಪ್ಪರಿಗೆಯಲಿ ಏಂಗೆ ಕರು ।
ಮಾಡದೆಡೆಯಲಿ ಸೌಧಗಳ ಜಾಲಾದ್ರ ಶಿಖರದಲಿ ॥
ನೋಡುವರ ತಾನೋಡಿ ನಸುನಗು । ತಾಡುವರ ನೃತ್ಯದಲಿ ಗಾನವ ।
ಪಾಡುವರ ಕಂಡಲ್ಲಿ ನಲಿಯುತ ಬಂದಳರಮನೆಗೆ ॥ ೭ ॥

ಬಾಗಿಲಲಿ ರಥವಿಳಿಯೆ ಸತಿಗೆ ಸ । ರಾಗದಿಂ ಕುಲಜಾಂಗನೆಯರು ।
ದ್ಯೋಗಿಸಿದರಾರತಿಯನೆತ್ತಿದರತುಳ ವಿಭವದಲಿ ॥
ಭೋಗಿಶಯನನ ಕರುಣ ನಿಮಗುಂ । ಟಾಗಿ ಸುಖಿಯಾಗೆಂದು ಹರಸಿದ ॥
ರಾಗ ಮುಸಿಸಿಕುರುಂಬವಕ್ಷತೆದಳಿದುದಂಗನೆಗೆ ॥ ೮ ॥

ಹರಕೆಗಳ ಕೈಗೊಳುತ ಸತಿ ಬಂ । ದರಮನೆಯ ಹೊಕ್ಕಳು ನೃಪಾಲನ ।
ಚರಣಕಮಲಕೆ ನಮಿಸಿ ಪಡೆದಳು ಪತಿಯ ಚಿತ್ತವನು ॥
ಅರಸಕೇಳ್ಕೈ ನಿಷಧಪತಿ ನಿಜ । ತರುಣಿ ಸುತರೊಡಗೂಡಿ ಮಂಗಳ ।
ಕರದೊಳೊಪ್ಪಿದ ಸಕಲ ದೇವಾಸುರರು ನಲಿದಾಡೆ ॥ ೯ ॥

---

# ೩. ಕೋಳೂರ ಕೊಡಗೂಸು.

( ಕೊಡಗೂಸು — ಕನ್ನೆ, ಹುಡಿಗೆ. ಕೋಳೂರ ಶಿವಭಕ್ತನು ಊರಿಗೆ ಹೋಗುವಾಗ ದಿನಾಲು ಕಲ್ಲಿನಾಥೇಶ್ವರನಿಗೆ ಹಾಲನ್ನು ಎಡೆತೋರಿಸಿ ಬಾ ಎಂದು ತನ್ನ ಮಗಳಿಗೆ ಹೇಳಿದ್ದನು. ಆ ಮೇರೆಗೆ ಹುಡಿಗೆ ಕಲ್ಲಿನಾಥನ ಮುಂದೆ ಹಾಲಿಡಲು ಆತನು ಕುಡಿಯಲಿಲ್ಲ. ಇನ್ನೂ ಮುಗ್ಧಬಾಲಿಕೆ; ತಂದೆ ಎಡೆಯಿಟ್ಟಾಗ ಕುಡಿಯುತ್ತಿದ್ದ ದೇವನು ತಾನಿಟ್ಟರೆ ಏಕೆ ಕುಡಿಯಲೊಲ್ಲನೆಂದು ಚಿಂತೆಗೀಡಾಗಿ ಕಲ್ಲಿನಾಥನನ್ನು ರಮಿಯಿಸುವಳು. )

ಹಾಲು ಕಾಯವೊ ಪರಿಮಳಿಸವೋ । ಹಾಲು ಕಡು ಬಿಸಿಯಾದವೋ ಚಿಲು
ಪಾಲವಲ್ಲವೊ ಒಡೆದವೋ ಆರೋಗಿಸುವಡಿನ್ನು ॥

ವೇಳೆಯಾಗದೊ ನಿನ್ನ ಮೊಸಲು । ಹಾಲು ಬೇಸರವಾಯಿತೋ ನಾಂ ॥
ಬಾಲೆಯೆಂದೊಲ್ಲೆಯೊ ತರಲ್ಕಾರಕ್ಕೆ ನೋಡಿದರೋ ॥ ೧ ॥

ಒಟ್ಟಲಂ ಬೆಳಗೆನೊ ಮನಸವನಾ । ಸಿಟ್ಟನೋ ಪಾಲಿಂಗೆ ಪಾಲ್ಕೆಸೆ ।
ಗಟ್ಟವೋ ನೀರ್ವೆರಸಿದುವೊ ಆರೋಗಿಸುವ ಬುದ್ಧಿ ॥
ಹುಟ್ಟಿದೋ ಸೀಯಿತ್ತೊ ತುಪ್ಪವ । ಸಟ್ಟಿಸೆಂದೋ ಕುಡಿಯಲರಿಯೋ ।
ಹೊಟ್ಟೆಗೈದವೊ ಮಧುರವಿಲ್ಲವೊ ಹೊತ್ತುಹೋಯಿತ್ತೋ ॥ ೨ ॥

ಬೇಕು ಬೇಡೆಂದುಸುರಲೊಲ್ಲೆಯು । ದೇಕೆ ಪಾಲಂ ಕುಡಿಯೆ ಕರೆಪುಲು ।
ಮೂಕನೇ ಮಾರ್ನುಡಿವುದೇಂ ದಿಟವಾಗಿ ಹಸಿಯುದಡೆ ॥
ಓಕರಿಸುತೊರ್ಕುಡಿತೆಗೊಂಡಡೆ । ಸಾಕು ಬಿಕ್ಕಿಸ ಪಾಲಸಿರಿಸು ಪಿ ।
ನಾಕಿ ತಹೆನಾಂ ಉಂಬೊಡಟ್ಟೋಗರವ ನೊಂದಿಸಿತು ॥ ೩ ॥

ಮನೆಯ ಬೋನದ ಭಾಜನದೊಳಿಸಿ । ದೆನಿಪ ಹೂರಿಗೆ ಗಾರಿಗೆಗಳಂ ।
ನಿನಗೆ ಮೆಲುವಡೆ ತಂದು ಕೊಡುವೆನು ಕಳುಹು ನೀನೆನ್ನ ॥
ಮನಕೆ ಬಂದಡೆ ತುಪ್ಪವಡೆ ನೆಲು । ಹಿಸ ಗಡಿಗೆಯಲಿ ಮಡಗಿ ಬೇಕಾ ।
ದಸಿತನಾದಡೆ ತಂದಪೆಂ ನಿನ್ನಿಷ್ಟವೇಂ ಪೇಳು ॥ ೪ ॥

ಎನ್ನ ಶಿವ ಸೋದರಿಯ ಮಠದಲಿ । ಚೆನ್ನ ಪಾಯಸವುಂಟು ಬೇಕೆಂ ।
ದೆನ್ನು ನಿನಗಾನೈದಿ ತಂದಪೆನೆಲೆ ಮಹಾದೇವ ॥
ಮುನ್ನ ನೀನೀ ಪಾಲನೀಂಟೈ । ನಿನ್ನ ಮೆಚ್ಚಿನ ಹೆಸರ ಹುಗ್ಗಿಯ ।
ದನ್ನಿರೂಪಿಸು ಮಹಮನೆಯೊಳದೆ ಕೊಡುವೆನೈತಂದು ॥ ೫ ॥

ವೀರಭದ್ರನ ಹಲಗೆ ಮೆರೆವುದು । ವೀರಭಕ್ತರ ತಿಂಥಿಣಿಯೊಳತಿ ।
ವೀರವುಂ ತೋರಿದಪೆನೇಳಾರೋಗಿಸೈ ಪಾಲ ।
ಕ್ಷೀರದೊಳಯಿಂಕವಲನಾದಡೆ । ತಾರೆನೇ ಬೇಕೆಂದಡಂ ಶಿಶು ।
ಹಾರಿಯುವಳೆಂದೆನ್ನದಿರು ನೀನುಸುರುವೊಂದಾಗಿ ॥ ೬ ॥

ಚಿಗುಳಿ ಚಕ್ಕುಳಿ ಹಾಲವುಗ ಮಂ । ಡಿಗೆ ತರಗುವಿಡ್ಡಲಿಗೆಯುಂ ಲ ।
ಡ್ಡುಗೆ ಕಳವೆಯುವಲಾದಿಯಾಗೆ ಪಲವು ಫಲಂಗಳನು ॥
ನಿಗಳವುಂಗುರ ಗೆಜ್ಜೆ ಪೊನ್ನಂ । ದುಗೆ ಪವಳಮುಂ ಮುತ್ತು ಪೊಚ್ಚಕಿ ।
ರಿಗೆ ರವಿಕೆಯುಂ ಬೊಂಬೆದೊಟ್ಟಿಲು ಮೊದಲಿವೆಲ್ಲವನು ॥ ೭ ॥

ತಂದುಕೊಡುವರು ನಾಳೆಯೆಮ್ಮಯ್ಯ | ತಂದೆತಾಯಿಗಳೆನಗಿವೆಲ್ಲವ |
ತಂದುಕೊಡುವೆನು ನಾನಿನಗೆ ಹುಸಿಯಲ್ಲ ನಿನ್ನಾಣೆ ॥
ಮುಂದೆ ಬಟ್ಟಲೊಳಿರ್ದ ಪಾಲಂ | ಚೆಂದವಳಿಯದ ಮುನ್ನ ಕುಡಿಯೈ |
ಇಂದುಧರಯೆನ್ನೊಡನೆ ನುಡಿಯದೆ ಕಾಡಲೇಕೆನುತ ॥ ೮ ॥

ಹಸುಳೆ ಹೊಡಮಡುತಡಿಗಡಿಗೆ ಕೋ | ಪಿಸುಗು ಸಂತಾಪಿಸುಗಳುಗು ಗುಂ |
ಪಿಸುಗು ಮೃಡನೊಡನೆರಡು ಕೈಯುಂ ಜಡಿಜಡಿದು ಬಿದಿಗು ॥
ಹಸಿದು ಬಳುಕುತ ತಟತಟನೆ ತಾ | ಟಿಸುಗಡಿಗಳಂ ಪೊಡವಿಯೊಳು ಹೊಸೆ |
ಹೊಸೆದುಕೊಳುಗಂತಸಿಯು ಬಸುರಂ ಒಸವಳಿಗು ಸುಯ್ಗು ॥ ೯ ॥

ಬಟ್ಟಲಂ ನೋಡುಗುಮುಭವನಂ | ದಿಟ್ಟಿಸುಗು ನೆನೆ ನಂಬಿಸುಗು ಮರ |
ವಟ್ಟು ನಿರ್ಜೀವಿಯ ತೆರದೊಳಿರ್ದಂತಿರುತ್ತಳುಗು ॥
ದಟ್ಟಿಸುಗು ದೊಪ್ಪನೆ ಕೆಡೆಗು ಧನಿ | ಗೊಟ್ಟು ಕರೆದು ಕರಂ ಮುಗಿದು ಪೊಡ |
ಮಟ್ಟು ಗಿಣ್ಣಲನಂತು ನೂಕುಗು ಮತ್ತೆ ಮುಂದಿಡುಗು ॥ ೧೦ ॥

ಮೃಡನಡಿಗೆ ಪೊಡಮಡುಗು ಪಾಲಂ | ಕುಡಿಯದಿರ್ದಡೆ ನೋಡಿ ಕಡುಸಿಡಿ |
ಮಿಡಿಗೊಳುತ್ತೋರಂತೆ ಚಿಂತಿಸುತಿರ್ಕು ಕೊಡಗೂಸು ॥
ಬಡಮಗುವು ನಾನೆಂದು ಕಾಡುವೆ | ಯೊಡೆಯ ನಿಮ್ಮವನೇನನೆಂಬೆನು |
ಕಡೆಗೆಯಾರೋಗಿಸಿದಡಲ್ಲದೆ ಬಿಡೆನು ನಿಮ್ಮಾಣೆ ॥ ೧೧ ॥

ಎಂದು ಶಿವನೊಳು ತನ್ನ ತಲೆಯಂ | ನಿಂದು ತಾಟಿಸಿಕೊಳುವನಿತರಲಿ |
ನಂದನೆಯನಾಗಳೆ ಹಿಡಿದು ದರಹಸಿತ ಮುಖನಾಗಿ ॥
ಇಂದುಮೌಳಿ ದಯಾಳು ಭಕ್ತಾ | ನಂದಕರನಘವೈರಿ ಬಾಲಕಿ |
ತಂದ ಬಟ್ಟಲ ಹಾಲನೀಂಟಲು ತತ್ತರುಣಿ ನಗುತ ॥ ೧೨ ॥

ಕಿರಿಯಳಿವಳೆಂದೆನ್ನುವಂ ನೀಂ | ಬರಿದೆ ಕಾಡಿದಿರೆನ್ನ ಬೊಪ್ಪಂ |
ಗರುಹಿಯೆಲ್ಲಾ ನಿನಗೆಯೆನಗಂ ಮತ್ತೆ ಸಂವಾದ ॥
ಮರೆಯದಿರು ಕರೆಕಂಠಯೆನುತಿಂ | ತೊರಲಿ ಬಟ್ಟಲನೀಸಿಕೊಂಡೆ |
ಚ್ಚರಿಸಿ ನಿಚ್ಚಂ ಹಾಲನೀಯಲು ಶಿವನವಧರಿಸಲು ॥ ೧೩ ॥

# ೪. ದ್ರೌಪದೀ ಸ್ವಯಂವರ

(ಅರಗಿನ ಮನೆಯಿಂದ ಪಾರಾಗಿ ಏಕಚಕ್ರ ನಗರಕ್ಕೆ ಹೋಗಿ ಬ್ರಾಹ್ಮಣವೇಷದಿಂದ ಇದ್ದ ಪಾಂಡವರು ದ್ರೌಪದಿಯ ಸ್ವಯಂವರ ವಾರ್ತೆಯನ್ನು ಕೇಳಿ ಪಾಂಚಾಲನಗರಿಗೆ ಬರುವರು. ಸ್ವಯಂವರ ಮಂಟಪದಲ್ಲಿ ರಾಜರು ಪಣವನ್ನು ಗೆಲ್ಲದಿರಲು—)

ಕೇಳು ಜನಮೇಜಯ ಧರಿತ್ರೀ । ಪಾಲ ಪಾಂಚಾಲಿಯ ಮನೋರಥ ।
ಶಾಲೆಯಲಿ ಸಾರಿದರೆಲ್ಲೈ ಸಭೆಯಲಿ ಮಹೀಸುರರ ॥
ಏಳಿ ಭುಜಬಲವುಳ್ಳವರು ವಿ । ಪ್ರಾಳಿಯಲಿ ಬಿಲುವಿಡಿದು ಯಂತ್ರಕೆ ।
ಕೋಲುಗಳ ಕೇವಣಿಪುದೆಂದರು ಹೊಯ್ದು ಡಂಗುರವ ॥ ೧ ॥

ಎಂದು ಸಾರಿದ ದನಿಯನಾದ್ವಿಜ । ವೃಂದವಾಲಿಸಿ ನಮಗಿದೇಕರ ।
ವಿಂದವದನೆಯ ತೊಡಕು ತೆಗೆ ನಾವಾರು ಧನುವಾರು ॥
ಬಂದ ದಕ್ಷಿಣೆ ಮೃಷ್ಟ ಭೋಜನ । ದಿಂದ ತುಷ್ಟರು ನಾವು ನಮಗಿದ ।
ರಿಂದ ಬಹ ದುಷ್ಕೀರ್ತಿ ಒರಲೆಂದುದು ಬುಧವ್ರಾತ ॥ ೨ ॥

ವಚನಶೂರರು ನಾವು ಪಾರ್ಥಿವ । ನಿಚಯವೇ ಭುಜಶೂರರನಿಬರ ।
ನಚಲ ಧನು ಭಂಗಿಸಿತು ನಮಗೇ ವಿದ್ಯೆ ವೈದಿಕವೇ ॥
ಉಚಿತವಲ್ಲದು ನಮ್ಮ ಸಾಹಸ । ರಚನೆಯನು ನೋಡುವಡೆ ಪಂಡಿತ ।
ನಿಚಯವಿದಿರಲಿ ನಿಲಲಿ ತೋರುವೆವಲ್ಲಿ ವಿಸ್ಮಯವ ॥ ೩ ॥

ಭರತದಲಿ ವೈದ್ಯದಲಿ ಕಾವ್ಯ ಸು । ವಿರಚಿತಾಲಂಕಾರದಲಿ ಗಜ ।
ತುರಗ ಲಕ್ಷಣದಲಿ ಸಮಾಹಿತ ಮಂತ್ರತಂತ್ರದಲಿ ॥
ಸರಸ ಕವಿತಾ ರಚನೆಯಲಿ ವಿ । ಸ್ತರದುಪನ್ಯಾಸದಲಿ ಭೂಪತಿ ।
ಕರೆಸಿ ನೋಡಲಿ ನಮ್ಮನೆಂದರು ದ್ವಿಜರು ತಮತಮಗೆ ॥ ೪ ॥

ಅಲ್ಲದಿರ್ದರೆ ಸೋದಿಸಿದ ತನಿ । ಬೆಲ್ಲವಿಕ್ಕಿದ ಹೂರಿಗೆಯ ಸೆಂಡೆ ।
ಯಲ್ಲಿ ಪರಡಿಯ ಸೇವಿಗೆಯ ಪರಿಪರಿಯ ಪಾಯಸದ ॥
ಮಲ್ಲಿಗೆಯ ತತ್ಸವಿಯ ಮಂಡಿಗೆ । ಯಲ್ಲಿ ನವಘೃತಸೂಪಸಂಶಕ ।
ದಲ್ಲಿ ನೋಡಲಿ ನಮ್ಮನೆಂದುದು ಧೂರ್ತ ಪಟುನಿಕರ ॥ ೫ ॥

ಆಗ ಧರ್ಮರಾಜನು—

ನೋಡಿದನು ತಮ್ಮನನು ಸನ್ನೆಯು । ಮಾಡಿದೊಡೆ ಕೈಕೊಂಡನವನಿಪ ।
ಗೂಡಿ ಕುಂತಿಗೆ ಭೀಮಸೇನಂಗೆರಗಿ ಮನದೊಳಗೆ ॥
ಕೂಡೆ ಕುಳ್ಳಿರ್ದಖಿಳ ವಿಪ್ರರ । ನೋಡಿ ಮೆಲ್ಲನೆ ದೋತ್ರ ದರ್ಭೆಯ ।
ಗೂಢ ಸಂವರಿಸುತ್ತ ಸಭೆಯಿಂದೆದ್ದನಾ ಪಾರ್ಥ ॥ ೬ ॥

ಆಗ ಬ್ರಾಹ್ಮಣರು—

ಏನು ಸಿದ್ಧಿಯುಪಾಧ್ಯರೆದ್ದರಿ । ದೇನು ಧನುವಿಂಗಲ್ಲಲೀ ತಾ ।
ನೇನು ಮನದಂಘವಣೆ ಬಯಸಿದರೇನು ನೃಪಸುತೆಯ ॥
ವೈನತೇಯನ ವಿಗಡಿಸಿದ ವಿಷ । ವೇನು ನಡರವೊ ಹಾವಡಿಗರಿಗೆ ।
ದೇನು ನಿಮ್ಮುತ್ತಾಹವೆಂದುದು ಧೂರ್ತವಟುನಿಕರ ॥ ೭ ॥
ಮದುವೆ ಬೇಕೇ ಶ್ರೋತ್ರಿಯ ನ್ತೋ । ಮದಲಿ ಕನ್ಯಾರ್ಥಿಗಳು ನಾವೆಂ ।
ಬುದು ನಿಜಾನ್ವಯ ವಿದ್ಯೆಯಲಿ ಕೊಡುವುದು ಪರೀಕ್ಷೆಗಳ ॥
ಮದುವೆಯಹುದಿದು ಸೌಖ್ಯಪೂರ್ಣಾ । ಸ್ಪದವು ಭೂದೇವರಿಗೆ ನೀ ನೆನೆ ।
ದುದು ಭಗೀರಥ ಯತ್ನವೆಂದುದು ಭೂಸುರವ್ರಾತ ॥ ೮ ॥
ಕೆಲರು ಹೋಗದಿರೆಂದು ಜರೆದರು । ಕೆಲರು ತಾನೇ ಬಲ್ಲನೆಂದರು ।
ಕೆಲರು ನುಡಿದರು ವಿಪ್ರಸಭೆಗಪಹಾಸ್ಯವಹುದೆಂದು ॥
ಕೆಲರು ತಪ್ಪೇನೆಂದು ಕಳೆದರು । ಕೆಲರು ಭದ್ರಾಕಾರನೀತಂ ।
ಗಳುಕುವುದು ಧನು ಭಾಗ್ಯಮುಖನೆಂದುದು ಬುಧಸ್ತೋಮ ॥ ೯ ॥

ಆಗ ಕ್ಷತ್ರಿಯರು—

ಧನು ತನಗೆ ನೆಗಹಲ್ಕೆ ಕೃಷ್ಣಾ । ಜಿನವೊ ಸಾಲಗ್ರಾಮ ದೇವರೊ ।
ವಿನುತ ತುಲಸಿಯೊ ಕುಶವೊ ದರ್ಭೆಯೊ ಸಮಿಧೆಗಳ ಹೊರೆಯೋ ।
ನೆನೆದ ತಿಲವೋ ಮೋಣಿದಾವಾ । ನನದ ಕೊಳಪೆಯೊ ಒಣಗುವಿಪ್ರನ ।
ನೆನಹ ನೋಡಿರೆ ಘನವಲಾ ದ್ರೌಪದಿಯ ಸೌಭಾಗ್ಯ ॥ ೧೦ ॥
ಅವನಿಪತಿ ಕೇಳಿತ್ತಲೀ ಪಾ । ರ್ಥಿವರ ಪರಿಹಾಸವನು ಕಾಂತಾ ।
ನಿವಹದಲಿ ನಿಬ್ಬರದ ನುಡಿಗಳನಾ ಮಹೀಸುರರ ।
ವಿವಿಧ ಕಟು ಮಧುರೋಕ್ತಿ ವಿನ್ಯಾ । ಸವನು ಕೇಳುತ ಮುಗುಳುನಗೆಯಲಿ ।
ನವಮದದ್ವಿಪಗತಿಯ ಗರುವಾಯಿಯಲಿ ನಡೆತಂದ ॥ ೧೧ ॥

ತೂಗಿ ಕಿವಿವರೆಗುಗಿದು ಯಂತ್ರವ । ತಾಗಿಸಿದನಂಬಿನಲಿ ಪಾರ್ಥನ ।
ಲಾಗುವೇಗವನಾರು ಬಲ್ಲರು ಯಂತ್ರಭೇದದಲಿ ॥
ಜಾಗು ಧಣು ಧಣು ಪೂತು ಕಾರ್ಮುಕ । ಯೋಗಸಿದ್ಧನೆ ಮಝುರೆ ಕೋದಂ ।
ಡಾಗಮ ತ್ರಿಪುರಾರಿಯೆಂದುದು ವಂದಿಸಂದೋಹ ॥ ೧೨ ॥

ಆಯೆಸುತ ಬೊಬ್ಬಿರಿದು ವಿಪ್ರನಿ । ಕಾಯ ಕುಣಿದುದು ಕಮಲಮುಖಿ ನಿ ।
ರ್ದಾಯದಲಿ ಸೇರಿದಳು ಹಾರುವಗೆಸುತ ಹರುಷದಲಿ ॥
ಆಯುವತಿಜನ ಜಲಧಿ ಮಸಗಿತು । ಚಾಯುಮಕೌಸದ ಬೆರಳ ಮೂಗಿನ ।
ರಾಯರಿದ್ದರು ಬಿಗಿದ ಬೆರಗಿನ ಹೊತ್ತುದುಗುಡದಲಿ ॥ ೧೩ ॥

ನಳಿನಮುಖಿ ದಂಡಿಗೆಯೊಳೈತಂ । ದಿಳಿದಳೀತನ ಹೊರೆಯೊಳಾಗಳೆ ।
ಕಳಕಳದೊಳೊಳತೋಟಿ ಮಸಗಿತು ಹರುಷಲಜ್ಜೆಯಲಿ ॥
ಲಲಿತ ಮಧುರಾಪಾಂಗದಲಿ ಮು । ಕ್ಕುಳಿಸಿ ತಣಿಯವು ಕಂಗಳುಬ್ಬಿದ ।
ಪುಳಕ ಜಳದಲಿ ಮುಳುಗಿ ಮೂಡಿತು ಮೈ ಸುಕೋಮಲೆಯ ॥ ೧೪ ॥

ತರುಣಿ ನಿಜತನುಪರಿಮಳದೊಳುರೆ । ಹೊರೆದ ಹೂವಿನ ದಂಡೆಯನು ನಿಜ ।
ವರನ ಕೊರಳಲಿ ಹಾಕಿದಳು ಜಯವೆನೆ ಸುರಸ್ತೋಮ ॥ ೧೫ ॥

---

# ೫. ಚೆನ್ನಬಸವಣ್ಣನ ಬಾಲ್ಯ

ಚೆನ್ನಬಸವಣ್ಣನು ಹುಟ್ಟಿದಾಗ ಶಿವಪಾರ್ವತಿಯರು ಬಂದು—

ಗಂಗಾನದೀ ತಟದೊಳೆಸೆವ ಶುದ್ಧಸ್ಫಟಿಕ ।
ಲಿಂಗದಂತಮೃತವಾರ್ಧಿಯ ಪೊರೆಯೊಳಿರ್ಪ ನೆರೆ ।
ದಿಂಗಳಂತನುಲ ಕಮಲಾಕರದ ಕೆಲದೊಳೊಪ್ಪುವ ರಾಜಹಂಸನಂತೆ ॥
ಮಂಗಳಾಕರೆ ನಾಗಲಾಂಬಿಕೆಯ ಮಗ್ಗುಲಂ ।
ಸಿಂಗರಿಸಿ ತೋರ್ಪ ಶಿಶುವಂ ಕಂಡು ಹರುಷಾಶ್ರು ।
ಪಿಂಗದೊಡನುದುರೆ ಮಗನಂ ಗಿರಿಜೆ ತೆಗೆದೆತ್ತಿಕೊಂಡಳತ್ಯುತ್ಸವದೊಳು ॥ ೧ ॥

ಉನ್ನತ ಸುತೇಜಂಗಳೊಳು ರೂಪಿನೊಳು ಸುಪ್ರ ।
ಸನ್ನತೆಯೊಳುಂ ಶೈವಕಳೆಯೊಳುಂ ತತ್ಪ್ರಸಂ ।
ಪನ್ನತೆಯೊಳುಂ ಪವಾಡಂಗಳೊಳು ಬಸವಣ್ಣನಿಂದಮೀ ಸುಕುಮಾರನು ॥
ಚೆನ್ನಾಗಿ ತೋರ್ಪನೆಲೆ ಗಿರಿಜೆ ನೋಡೆಂದೀಶ್ವ ।
ರನ್ನಿಧಾನಿಸಿ ಮನೋಹರುಷದಿಂದೀತಂಗೆ ।
ಚೆನ್ನಬಸವಣ್ಣನೆಂಬೀ ನಾಮಮೇ ಸಾಮ್ಯವೆಂದು ಗಣಕುಲಕೊರೆದನು ॥ ೨ ॥

ಜೋಜೋ ಮಹೇಶ ಷಣ್ಮುಖಜನಿತ ಸನ್ಮೂರ್ತಿ ।
ಜೋಜೋ ಮಹಾವೀರಶೈವೋದ್ಧರಣ ಕೀರ್ತಿ ।
ಜೋಜೋ ಮಹಾದೇವಿಯಾನಂದವಾರ್ಧಿವರ್ಧನಕಳಾಪೂರ್ಣಚಂದ್ರ ॥
ಜೋಜೋ ಸಕಲ ಭಕ್ತಹೃದಯಪಂಕಜಮಿತ್ರ ।
ಜೋಜೋ ಮಹಾಶರಣಗಣ ಭವಾಂಬುಧಿಚೈತ್ರ ।
ಜೋಜೋ ಪರಬ್ರಹ್ಮರೂಪ ಜೋಜೋಯೆಂದು ಪಾಡಿ ತೂಗುತ್ತಿರ್ದರು ॥ ೩ ॥

ನೋಡುವರ್ ನಲಿವರೊಲಿವರ್ ತಲೆಯನಲುಗಿ ಮುಂ ।
ಡಾಡುವರ್ ನಗುವರೊಗುವರ್ ಮಿಗುವ ಸುಖದೊಳೋ ।
ಲಾಡುವರ್ ಚುಂಬಿಪರ್ ನಂಬಿಪರ್ ತಂಬಿಸುವರಕ್ತಿಯಿಂ ಮುದ್ದುಗಳನು ॥
ಬೇಡುವರ್ ಕೈಗಳೊಳ್ ಮೈಗಳೊಳ್ ಬಾಯ್ಗಳೊಳ ।
ಗಾಡಿಸುವರಾಯೆಂದು ದಾಯೆಂದು ಬಾಯೆಂದು ।
ಪಾಡುವರ್ ನೀಡುವರ್ ಬೇಡುವರ್ ಕುವರನಂ ಶಿವಶಿವೆಯರಕ್ಕರಿಂದೆ ॥ ೪ ॥

ಸಲೆ ನೆವನ ಪೊರ್ದದ ಮುಗುಳ್ನಗೆಯಿನಕ್ಕರಂ ।
ಗಳೊಳೆಸೆಯುದಿಪ ಮುದ್ದು ನುಡಿಗಳಿಂ ಬರಿದೆ ತ ।
ನ್ನೊಳಗೆ ತಾನಾನಂದಿಪಾಟದಿನಕಾರಣಂ ಪರಿಪತ್ತ ಪರಿದು ನೋಳ್ಪ ॥
ತೊಳಪ ಕಂಗಳ ನೋಟದಿಂ ಬೆರಲ ಚುಂಬಿಸು ।
ತ್ತಳುತೆ ಜೋಗುಳವಾಡೆ ನಲಿವುತುಂ ಪೊಂದೊಟ್ಟಿ ।
ಲೊಳಗೆ ಶಿಶು ಲೀಲೆಯಿಂ ಕೆಲದಿನಂ ತಾಯ್ಗೆ ಹರುಷಂದೋರಿದಂ
ಕುವರನು ॥ ೫ ॥

ರಕ್ಕೆವಣಿ ಪುಲಿಯುಗುರ್ ಗೆಜ್ಜೆ ಮಾಗಾಯ್ ಮುತ್ತು।
ನಕ್ಕಸರಮುಡಿದಾರ ಕಾಲಕಡಗಂ ಪಣೆಯೊ।
ಳಿಕ್ಕಿದ ಸುಭಸಿತನುರಳೆಲೆಯೆಸೆವ ಪರಿಪರಿಯ ಬಾಲದೊಡಿಗೆಗಳನಾಂತು ॥
ಉಕ್ಕುತಿಹ ತಾಯ ಮೊಲೆವಾಲುಣುತೆ ಸೋಗಿಲೊಳ್।
ನಕ್ಕಾಡುತತಿ ಮುದ್ದುಗರೆವುತುಂ ಲೀಲೆಯಿಂ।
ಮಕ್ಕಳಾಟಿಗೆಯೊಳೆಸೆವಂ ಜಗವನಾಡಿಸುವ ಸೂತ್ರಧಾರಂ ಕ್ರಮದೊಳು ॥೬॥

ನೊಸಲಗಣ್ಣವನ ಸುತನೆಂಬುದಂ ಧರೆಗೆ ಸೂ।
ಚಿಸುವೊಲುಜ್ವಲಿಸುವರಳೆಲೆಯೊಪ್ಪೆ ಪೆಡೆವಣಿಗ।
ಳೆಸೆವ ಫಣಿಕುಂಡಲನ ಕುವರನೆಂದರಿಪವೊಲ್ ಕಿವಿಗಳೊಳ್ ಪೊಂಜರಿಗೆಯು ॥
ಮಿಸುಪ ತುದಿಯೊಳು ರನ್ನಮಾಗಾಯ್ಗಳೊಲೆದಾಡೆ।
ಪಸಿದಲೆಯಮಣುಗನೆಂಬುದ ತೋರುವಂತೆ ರಾ।
ಜಿಸಲುರದೊಳೆಳವೆರೆಯ ಮಾಳ್ಕೆಯಿಂ ಪುಲಿಯುಗುರ್ ಬಾಲಕಂ ಕಣ್ಗೆಸೆದನು॥

ತೊಳಗುವ ಕಳಂಕಮಂ ತಳೆದ ಪೂರ್ಣೇಂದು ಮಂ।
ಡಳದಂತೆ ಕಜ್ಜಳಂಬೊರೆದು ಕಂಗೊಳಿಪ ಮಂ।
ಗಳಮುಖಂಗಾಣುತಿದು ಸಸಿಯೆಂದು ಸಕಲತಾರಾಂಗನೆಯರೊಲಿದು ಬಂದು॥
ನೆಲಸಿದರೊ ತತ್ಸಮೀಪದೊಳೆಂದೆನಲ್ಕೆ ಥಳ।
ಥಳಿಪ ಮುತ್ತಿನ ಕಂಠಮಾಲೆ ಕಣ್ಗೆಸೆಯೆ ಕ।
ಣ್ಗಳ ಪುಣ್ಯಮೇ ಬಳೆವ ತೆರದೊಳಾ ಚೆನ್ನಬಸವಂ ವರ್ಧಿಸುತ್ತಿರ್ದನು ॥೮॥

ಮೇಲೆ ಪರವಾದಿಗಳ ಬಾಯ್ಗಳಂ ಪೊಯ್ವಂತೆ।
ತೋಳಾಟವಾಡುವಂ ಕೈಸನ್ನೆಯಿಂ ಮುಕ್ತಿ।
ಬಾಲೆಯುಂ ಕೆಳೆತನಕೆ ಕರೆವಂತೆ ಹೊನ್ನತಾ ಗುಬ್ಬಿಯಾಟಂಗಳಾಡಿ ॥
ಲೀಲೆಯಿಂ ನೆಲಕಿಳಿಪೆ ಖಳರೆದೆಗಳಿಂತು ಮೊಳ।
ಕಾಲೊಳೊದೆದಪೆನೆಂಬವೋಲಂಬೆಗಾಲಿಟ್ಟು।
ಲೀಲೆಯಿಂ ಶೈವಮಂ ನೆಲೆಗೆ ನಿಲಿಪಂತೆ ಸಿಂದಾಡುತಿರ್ದಂ ಕುವರನು ॥೯॥

ಮೆಲ್ಲಮೆಲ್ಲನೆ ದಟ್ಟಡಿಯನಿಡಲ್ ಗೆಜ್ಜೆಗಳ್ ।
ಘಲ್ಲಘಲ್ಲೆನೆ ಸಕಲಪರಮಾದಿ ಹೃದಯಮುಮಂ ।
ಝುಲ್ಲಝುಲ್ಲೆನೆ ಪಳಿಕಿನಿಂ ಸಮೆದ ನೆಲಗಟ್ಟು ಜಾರ್ವುದೆಲಿ ಚೆನ್ನಬಸವ ॥
ನಿಲ್ಲು ನಿಲ್ಲೆಂಬ ದಾದಿಯರ ಮಾತಂ ಮೀರು ।
ತಲ್ಲಗಲ್ಲಿಗೆ ನಿಂದು ನಿಂದು ನೋಡುತ್ತ ಮೊಳೆ ।
ವಲ್ಲು ಜೊಲ್ಲುಂ ಪೊಳೆಯೆ ನಸುನಗುತ್ತುಂ ಬಾಲಲೀಲೆಯಂ ತೋರಿಸಿದನು

ನಿಮಿಷ ನಿಮಿಷಕೆ ಜಾವಜಾವಕ್ಕೆ ದಿನದಿನಕೆ ।
ಕ್ರಮದೊಳಂ ಒಳೆದು ತನ್ನೊಡನಾಡಿಗಳ್ವೆರಸು ।
ವಿಮಲತಾರಾಗಣದ ನಡುವೆ ಕಂದಂ ಕುಂದನುಳಿದಿಂದುವೊಪ್ಪುವಂತೆ ॥
ರಮಣೀಯಮೆನಿಪ ಮುತ್ತಿನ ಕಂಠಮಾಲೆಯೊಳ ।
ಗಮರ್ವ ನಾಯಕರತ್ನದಂತೆ ಬಿಸುಗದಿರಳಿದ ।
ಹಿಮಕಿರಣನಂತೆ ನೋಳ್ಪರ ಕಣ್ಗೆ ಚೆನ್ನಬಸವಂ ಚೆನ್ನಮಂ ತಳೆದನು ॥೧೧॥

---

# ೬. ಉತ್ತರಕುಮಾರ;—ಅಂತಃಪುರದಲ್ಲಿ

(ಪಾಂಡವರು ಅಜ್ಞಾತವಾಸದಲ್ಲಿ ವಿರಾಟರಾಜನ ಆಶ್ರಯದಲ್ಲಿದ್ದರು. ಕೌರವರು ವಿರಾಟನ ರಾಜ್ಯಕ್ಕೆ ದಾಳಿಯಿಟ್ಟು ಆತನ ಗೋಧನವನ್ನಪಹರಿಸಿದರು. ಆಗ ವಿರಾಟರಾಜನು ದಕ್ಷಿಣದ ಕಡೆಗೆ ಯುದ್ಧಕ್ಕೆ ಹೋಗಿದ್ದನು. ಉತ್ತರದ ಕೌರವರನ್ನಿದಿರಿಸಲು ವಿರಾಟಪುತ್ರ ಉತ್ತರನು ತಾನು ಹೋಗುವೆನೆಂಬ ಹುಮ್ಮಸದಿಂದ ನುಡಿಯುವನು— )

ಆಹುದಹುದು ತಪ್ಪೇನು ಜೂಜಿನ । ಕುಹಕದಲಿ ಪಾಂಡವರ ಸೋಲಿಸಿ ।
ಮಹಿಯ ಕೊಂಡಂತೆನ್ನ ಕೆಣಕಿದನೇ ಸುಯೋಧನನು ॥
ಸಹಸದಿಂದವೆ ತುರುವ ಮರಳಿಚಿ । ತಹೆನು ಬಳಿಕಾ ಕೌರವನ ನಿ ।
ರ್ವಹಿಸಲೀವೆನೆ ಸೂರೆಗೊಂಬೆನು ಹಸ್ತಿನಾಪುರವ ॥೧॥

ಹಿಡಿದು ರಾಜ್ಯವ ಕೊಂಡು ಹೆಂಗುಸ। ಒಡಿದು ಪಾಂಡವರಾಯುರನು ಹೊರ।
ಪಡಿಸಿ ಕೊಬ್ಬಿದ ಭುಜಬಲವನೆನ್ನೊಡನೆ ತೋರಿದನೆ? ॥
ಒಡ ಯುಧಿಷ್ಠಿರನೆಂದು ಬಗೆದನೆ?। ಕಡುಗಿದರೆ ಕೌರವನ ಕೀರ್ತಿಯು।
ತೊಡೆವೆನರಿಯೆನಲಾಯೆನುತ ಸುಕುಮಾರ ಖತಿಗೊಂಡ ॥ ೨ ॥

ತನಗೆ ಬಡಪಾಂಡವರ ತರುಬಿದ। ಮನದ ಗರ್ವದ ಕೊಬ್ಬು ಕಾಲನ।
ಮನೆಯನಾಳ್ವಿಪುದಲ್ಲದಿದ್ದರೆ ತನ್ನ ವೈರವನು ॥
ನೆನೆವನೇ ದುರ್ಯೋಧನಗೆ ಮೇ। ದಿನಿಯ ರುಣ ತೀರಿದುದು ಮಝಭಾ।
ಪೆನುತ ಸತಿಯರ ಮುಂದೆ ಭಾಷೆಯ ನುಡಿದ ಸುಕುಮಾರ ॥ ೩ ॥

ಜವನ ಮೀಸೆಯ ಮುರಿದನೋ? ಭ್ಯೆ। ರವನ ದಾಡೆಯ ನಲುಗಿದನೊ? ವ್ಯಾ।
ತ್ತ್ಯವಿಸ ಮೇಲುದ ಸೆಳೆದನೋ? ಕೇಸರಿಯ ಕೆಣಕಿದನೋ?
ಬವರವನು ತೊಡಗಿದನಲಾ ಕೌ। ರವನಕಟ ಮರುಳಾದನೆಂದಾ।
ಯುವತಿಯರ ಮೊಗ ನೋಡುತುತ್ತರ ಬರಿದೆ ಕೆದರಿದನು ॥ ೪ ॥

ಆರೊಡನೆ ಕಾದುವೆನು? ಕೆಲಬರು। ಹಾರುವರು, ಕೆಲರಂತಸಕ ನರೆ।
ಯೂರವರು, ಕೆಲರಧಮಕುಲದಲಿ ಜನಿಸಿ ಬಂದವರು ॥
ವೀರರೆಂಬವರಿವರು ಮೇಲಿ। ನ್ನಾರ ಹೆಸರುಂಟವರೊಳೆಂದು ಕು।
ಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳಿದಿರಿನಲಿ ॥ ೫ ॥

ಅರಿಯೆನೇ ಗಾಂಗೇಯನನು ತಾ। ಸರಿಯುದವನೇ ದ್ರೋಣ ಕುಲದಲಿ।
ಕೊರತೆಯಾಗಿಹ ಕರ್ಣನೆಂಬವನೆನಗೆ ಸರಿಯುಹನೇ ॥
ಒರಿಯ ಬಯಲಾಡಂಬರದಿ ತುರು। ಸೆರೆಯ ಹಿಡಿದರೆ ತಮ್ಮ ಹೆಂಡಿರ।
ಸೆರೆಯ ತಾರದೆ ಮಾಣೆನೆಂದುತ್ತರನು ಗರ್ಜಿಸಿದ ॥ ೬ ॥

ಬಲವ ಮುರಿವೆನು ಹಸ್ತಿನಾಪುರ। ದೊಳಗೆ ರಾಣಾಂತರವನಿಕ್ಕುವೆ।
ತೊಲಗಿಸುವೆ ಕೌರವನ ಸೇನೆಯ ಧೂಳಿಪಟಮಾಡಿ ॥
ಗೆಲವ ತಹೆನೆಂದುತ್ತರನು ಕೋ। ಪುಲೆಯರಿದಿರಲಿ ಬಾಯ್ಗೆ ಬಂದುದ।
ಗಳಹುತಿರ್ದನು ಭೇಕು ಬೇಡೆಂಬವರ ನಾ ಕಾಣೆ ॥ ೭ ॥

ನುಡಿದು ಫಲವೇನಿನ್ನು ಸಾರಥಿ। ಮಡಿದ ನಿನ್ನಿನ ಬವರದಲಿ ನಾ।
ನುಡುಹನಾದೆನು ಶಿವ ಶಿವಾಯಿಂದೆನ್ನ ಕೈಮನಕೆ।

ಗಡಣಿಸುವ ಸಾರಥಿಯನೊಬ್ಬನ। ಪಡೆದೆನಾದರೆ ಕೌರವೇಂದ್ರನ।
ಪಡೆಗೆ ಹಬ್ಬವ ಮಾಡುವೆನು ತೋರುವೆನು ಕೈಗುಣವ ॥ ೮ ॥

ಎಲೆ ಬೃಹನ್ನಳೆ ತೆತ್ತುದೆನಗೆ। ಗ್ಗಳಿಯರೊಳು ವಿಗ್ರಹವು ಸಾರಥಿ।
ಯುಳಿದನೆನ್ನವ ನೀನು ಸಾರಥಿಯಾಗಿ ಸಮರದಲಿ।
ಉಳುಹಬೇಹುದು ನೀ ಸಮರ್ಥನು। ಫಲುಗುಣನ ಸಾರಥಿಯೆಲ್ಲೈ ನೀ।
ಸೊಲಿದು ಮೆಚ್ಚಲು ಕಾದಿ ತೋರುವೆನಹಿತ ಸೇನೆಯಲಿ ॥ ೯ ॥

ಅನಿರಲು ಭೀಷ್ಮಾದಿಗಳು ನಿನ। ಗೇನ ಮಾಡಲುಬಲ್ಲರಳುಕದೆ।
ನೀನು ಸಾರಥಿಯಾಗು ನಿಮಿಷಕೆ ಗೆಲುವೆನವರುಗಳ।
ನಾನದಾರೆಂದರಿಯಲಾ ಗುರು। ಸೂನು ಕರ್ಣದ್ರೋಣರೆಂಬವ।
ರಾನರಿಯದವರಲ್ಲ ಸಾರಥಿಯಾಗು ಸಾಕೆಂದ ॥ ೧೦ ॥

ಅಂಜದಿರು ಸಾರಥಿಯೆ ತನ್ನದು। ರಂಜಕದ ನುಡಿಯಲ್ಲ ಕಾವಳ।
ವಂಜಿಸುವುದೇ ಇನನ ತನ್ನ ಪರಾಕ್ರಮವನರಿಯೆ॥
ಭಂಜಿಸುವೆನಹಿತರನು ನಾಕದ। ಕಂಜವದನೆಯರಪ್ಪುವೊಲು ನಿನ।
ಗಂಜಿಕೆಯದೇಕೆನಲು ನಗುತಿಂತೆಂದನಾ ಪಾರ್ಥ ॥ ೧೧ ॥

---

## ೭. ಉತ್ತರಕುಮಾರ;—ಸಮರಾಂಗಣದಲ್ಲಿ.

(ಹಿಂದಿನ ಪಾಠದಲ್ಲಿ ಉತ್ತರಕುಮಾರನ ಪೌರುಷ ಹೇಳಿದೆ. ಸಾರಥಿಯಾದ ಬೃಹನ್ನಳೆಯೊಡನೆ ಸಮರಾಂಗಣಕ್ಕೆ ಹೋದ ಆತನ ದುರ್ದಸೆಯನ್ನು ಈ ಪಾಠದಲ್ಲಿ ಕಾಣುವಿರಿ.)

ರಣಾಂಗಣವನ್ನು ಕಂಡು ಅಂಜಿದ ಉತ್ತರನು—

ಹಸಿದ ಮಾರಿಯು ಕಟಕದಲಿ ಕುರಿ। ಸುಸುಳಿ ಬದುಕುವುದೇ ಬೃಹನ್ನಳೆ?
ಯೆಸಗದಿರು ತೇಜಿಗಳ ತಡೆ ಚಮ್ಮಟಿಗೆಯನು ಬಿಸುಡು।
ವಿಸುಕಬಹುದೇ ಪ್ರಳಯಕಾಲನ ಮುಸುಕನುಗಿವರಾರು ಕೌರವ।
ನಸಮಬಲನೈ ರಥವ ಮರಳಿಚು ಪುರಕೆ ಬೇಗೆಂದ ॥ ೧ ॥

ಸಾರೆ ಬರಬರಲವನ ತನು ಮಿಗೆ । ಜಾರಿಸಿತು ಪೌರುಷವುರಿದು ರೋಮವು ।
ಕಾರದಲಿ ಕಾಪೇರಿತವಯವನ ನಡುಗಿತಡಿಗಡಿಗೆ ॥
ಭೂರಿ ಭಯತಾಪದಲಿ ತಾಳಿಗೆ । ನೀರುದೆಗೆದುದು ತುಟಿಯೊಣಗೆ ನುಕು ।
ಪಾರ ಕಣ್ಣೀವೆ ನೀಯೆ ಕರದಲಿ ಮುಚ್ಚಿದನು ಮುಖವ ॥ ೨ ॥

ಏಕೆ ಸಾರಥಿ ರಥವ ಮುಂದಕೆ । ನೂಕಿ ಗಂಟಲಕೊಯ್ವೆ? ಸುಡುಸುಡು ।
ಕಾಕಲಾ ಕಣ್ಗೊಡೆಯುತಿದೆ ಕಾಣಾ ಮಹಾಬಲವ ॥
ನಾಕನಿಳಯರಿಗರಿದು ನಿನಗೆ ಪಿ । ನೇಕನೆಳ್ಳಸಿತಿಲ್ಲಲಾ ತೆಗೆ ।
ನಾಕು ವಾಘೆಯ ಮರಳಿ ನೆಳೆ ತೇಜಿಗಳ ತಿರುಹೆಂದ ॥ ೩ ॥

ಹಲುಗಿರಿದು ಬಾಯೊಳಗೆ ಬೆರಲ್ಗಳ । ನಿಳುಹಿ ತಲೆವಾಗಿದನು ಸಾರಥಿ ।
ಕಳುಹಿ ಕಳೆಯ್ಯೆ ನಿನ್ನ ಒಸಿರಲಿ ಮರಳಿ ಬಂದವನು ॥
ಕೊಳುಗುಳದೊಳೀಯೊಡ್ಡ ಮುರಿವ । ಗ್ಗಳಿಕೆಯುಂಟೇ ಲೋಗರಿಂದವೆ ।
ಕೊಲಿಸದಿರು ನೀಂ ಕುತ್ತಿ ಕೆಡಹು ಕರಾರಿಯುದೆಯೆಂದ ॥ ೪ ॥

ಆಗ ಬೃಹನ್ನಳೆ:—

ಹೇವ ಬೇಡಾ ವೀರರೀಪರಿ । ಜೀವಗಳ್ಳರ ಪಥವ ಹಿಡಿವರೆ ?
ಸಾವಿಗಂಜುವವೇ ನಪುಂಸಕರೆಮ್ಮ ನೋಡೆನಲು ॥

ಬೃಹನ್ನಳೆಯುನ್ನು ಕುರಿತು:—

ನೀವು ವೀರರು ನೆರೆ ನಪುಂಸಕ । ರಾವು ಸಾವವರಲ್ಲ ಲೋಕದ ।
ಜೀವಗಳ್ಳರಿಗಾವು ಗುರುಗಳು ಬಿಟ್ಟು ಕಳುಹೆಂದ ॥ ೫ ॥

ಧುರದೊಳೋಡಿದ ಪಾತಕವ ಭೂ । ಸುರರು ಕಳೆದಪರಶ್ವಮೇಧವ ।
ಧರಣಿಯಲಿ ಪ್ರತ್ಯಕ್ಷವಾಗಿಯೆ ಮಾಡಲಹುದೆನಲು ॥
ಸುರರ ಸತಿಯರನೊಲ್ಲೆವೆಮಗೆ । ಮ್ಮರಮನೆಯ ನಾರಿಯರೆ ಸಾಕೆ ।
ಮ್ಮರಸುತನವೆಮಗಿಂದ್ರಪದ ನೀ ಬಿಟ್ಟು ಕಳುಹೆಂದ ॥ ೬ ॥

# ೮. ಅಂಗದನ ರಾಯಭಾರ.

(ಶ್ರೀರಾಮನು ರಾವಣನೊಡನೆ ಯುದ್ಧಮಾಡಲು ಹೊರಟು ಲಂಕೆಯ ಬಳಿಗೆ ಬಂದಿರುವನು. ಕೊನೆಯ ಮಾತೆಂದು ಮತ್ತೊಮ್ಮೆ ರಾವಣನ ಬಳಿಗೆ ಅಂಗದನನ್ನು ಸಂಧಾನಕ್ಕಾಗಿ ಕಳುಹುವನು.)

ಅಂಗದನು ರಾಮನ ದೂತನಾಗಿ ಲಂಕೆಗೆ ಹೊರಟುದು—

ಹರಿಯು ಶಿರಿಚರಣವನು ನೆನೆದು। ಸ್ಫುರಿಸಿದನು ಗಗನಕ್ಕೆ ಗರುಡನ।
ಗರುವಿಕೆಯು ಗಾಡಿಕೆಯು ಗಮನದ ಗಮಕದುಬ್ಬಿನಲಿ ॥ ೧ ॥

ಕೂಡೆ ವಾನರ–ಕಟಕ ಬೊಬ್ಬೆಯು। ಗಾಡಿಕೆಯು ಉಬ್ಬೇಳುತಿರ್ದುದು।
ನೋಡಿ ನಿರ್ಜರನಿಕರ ನಲವಿನೊಳಿರ್ದುದಭ್ರದಲಿ॥
ಕೂಡೆ ಕಳಕಳ ಮಸಗಿ ದಿವಿಜವಿ। ಭಾಡಪುರ ಭಯರಸದಲಿರ್ದುದು।
ಮೋಡದಿಂದಿಳಿತಪ್ಪ ಸಿಡಿಲವೊಲಿಳಿದನಾಪುರಿಗೆ ॥ ೨ ॥

ಬೆಗಡುಗೊಂಡೇ ಹನುಮನೆಂದೇ। ಬಗೆದು ಮನದಲಿ ನೊಂದಭಟರರೆ।
ದೆಗೆದು ನಿಂದರು ಕೆಲರು ಕೆಲರೊಳಸರಿದರಲ್ಲಲ್ಲಿ॥
ಬಿಗುಹಿನಂಕದ ಬಿರುದಿನತಿಮನ। ದಗಡು ರಕ್ಕಸರುರ್ಕಿಸಿದ ಧೇ।
ನುಗಳಲಂಕರಿಸಿದರು ಸರಿಸದಲಿಂದ್ರಸುತಸುತನ ॥ ೩ ॥

ಹೋ ಹೊ! ಕಳಕಳವೇಕೆ ಕದನೋ। ತ್ಸಾಹಿಗಳು ನಾವಲ್ಲ ರಿಪುರವಿ।
ರಾಹುವಿನ ನೈಶಾಟಕುಲ ಕಾನನ ಹುತಾಶನನ॥
ಬೇಹುಚರರೀ ಜಗದ ದೈವ। ದ್ರೋಹಿ ರಕ್ಕಸನೆಡೆಗೆ ನಮ್ಮವ।
ರೂಹಿಸಿದುದನು ಹೇಳಿ ಹೋಗಲು ಬಂದೆವಾವೆಂದ ॥ ೪ ॥

ರಾವಣನ ಓಲಗದಲ್ಲಿ ಅಂಗದ—

ಮುಖಚತುಷ್ಟಯದಾತನಾರೀ। ಮುಖಗಳೆರಡರ ಮಹಿಮನಾರೀ।
ಮುಖದೆರಡು ಮೂರಾರು ನೋಡಲು ಹತ್ತು ಪರಿಯಂತ॥
ಮುಖಗಳಿವೆ ತಾನಿದರೊಳಗೆ ಶಶಿ। ಮುಖಿಯ ಮಾಯೆಯ ಒಳಸಿ ರಜನೀ।
ಮುಖದೊಳಗೆ ತಂದಧಮರಕ್ಕಸನಿವರೊಳಾರೆಂದ ॥ ೫ ॥

ನಗರದಹಸದ ಕಪಿಯು ಮೋಡಿಯು । ಎಂಗಿಸುತಿದೆ ಮಾತಿನಲಿ ಮೋರೆಯು ।
ಹೊಗರು ಹೊಸಪರಿಯಾಗಿ ತೋರುತಿದೇ ವಿವೇಕಿಸಲು ॥
ವಿಗಡನಿವನಸಹುದೆಂದು ಮನದಲಿ । ಬಗೆಯುರಿದು ಬಳಿಕಾ ಪ್ರಹಸ್ತನು ।
ಮುಗುಳು ನಗೆಯಲಿ ನುಡಿದನಾ ಕಪಿ ರಾಜಪುತ್ರಂಗೆ ॥ ೬ ॥

ಆರು ನೀನಾರವನು ನಿನ್ನನ । ದಾರು ಕಳುಹಿದರಿತ್ತ ಬರವೇ ।
ನಾರೊಡೆಯರಾರುಂಟು ನಿನಗೀ ನಮ್ಮ ನಗರದಲಿ ॥
ಆರ ಮಗ ಹೆಸರೇನು ಬರವಿಗೆ । ಕಾರಣವದೇನೆಮ್ಮ ರಾಜ ।
ದ್ವಾರವನು ನೀ ಹೊಕ್ಕ ಹದನೇನೆಂದು ಬೆಸಗೊಂಡ ॥ ೭ ॥

ಲೇಸು ಕೇಳೆಕ್ಕಣೆಯುದಧಿವಿ । ನ್ಯಾಸವೊಳ್ಳಿತು ಕೇಳು ಲಂಕಾ ।
ಧೀಶನೆಂಬ ನಿಶಾಚರೇಂದ್ರನ ನಿಜಸಹೋದರಿಯ ॥
ನಾಸಿಕವ ಕೊಯ್ದವನ ರಣದಲಿ । ದೂಷಣಾದ್ಯರ ಶಿರವನಿಳುಹಿದ ।
ದಾಶರಥಿಯನು ಕೇಳಿ ಬಲ್ಲೈ ಹಿಂದೆ ನೀನೆಂದ ॥ ೮ ॥

ಕೇಳಿಬಲ್ಲೈ ಹಿಂದೆ ಲಂಕಾ । ಪಾಲಕನ ಮಾತುಳನ ಕೊರಳಲಿ ।
ಕೋಲ ಕುಣಿಸಿದ ಕದನಕರ್ಕಶರಾಯರಾಘವನ ॥
ಮೇಲೆ ನಿನ್ನಾಳಿದನ ತಮ್ಮನ । ಪಾಲಿಸಿದ ಪರಮಪ್ರತಾಪನ ।
ಬೋಳೆಯರ ಬಲ್ಲಹನನಾತನ ದೂತ ತಾನೆಂದ ॥ ೯ ॥

ಅಲ್ಲನೀಕಾನನವನೊಪ್ಪಿಸಿ । ಬಲ್ಲೆನವ ನಿನ್ನಿಂದ ಬಾಯಲಿ ।
ಬಲ್ಲಿದನು ಬಾಯ್ಬಡಿಕತನದಲಿ ಬಗುಳಿ ಬಾಲವನು ॥
ಕೊಳ್ಳಿಗಿಡಿಯಲಿ ಸುಡಿಸಿಕೊಂಡವ । ನಿಲ್ಲದೋಡಿದನಂದಿನವನೀ ।
ನಲ್ಲ ಹೊಸಬನು ನೀನು ನಿನ್ನಯ ಹೆಸರದೇನೆಂದ ॥ ೧೦ ॥

ಹೇಳಲೇನದನವನ ವಿಧಿಯನು । ಕೇಳಿತಿಲ್ಲವಲಾ ಕಪೀಂದ್ರನ ।
ಪಾಳಯವ ಹೊಗಗೊಡದೆ ಕಪಿಪೋತಂಗಳುಬ್ಬರಿದು ॥
ಬಾಲನುಡಕನ ತಿರುಪಲಾ ಕಪಿ । ಯೂಳಿಗವು ತನಗಾಯ್ತು ನವಿಮ್ಮ ।
ಬಾಲವನು ನೀವ್ ಕೆಣಕಿ ನೋಡಿದಡರಿಯಬಹುದೆಂದ ॥ ೧೧ ॥

ಹೊಸಬನೇ ನೀ ಕಂಗಳಿಗೆ ಹರ । ವಸವೆ ಬಲ್ಲಿದನಹನು ಕುಡು ಕ ।
ರ್ಕಶತೆಯಲಿ ಕಂಡರಿಯ ಬಾರದೆ ಹೋಗಲದಕೇನು ॥

ಹೆಸರದೇನಂಗದನು ಪಿತನಾ। ನಸುರ ಕೇಳಾದರೆ ನಿಶಾಚರ।
ನಸುವ ಸಲಹಿದ ವಾಲಿಯಾತನ ತನುಜ ತಾನೆಂದ ॥ ೧೨ ॥
ತಂದೆ ಪರಸತಿಗೋದ ಕಾರಣ। ಸಂದನಸ್ತ್ರಮಯಕ್ಕೆ ಕೊರಳಿಗೆ।
ಒಂದಿದೆದೆಯಲಾ ನಿಮ್ಮವಗೆ ತಮ್ಮಯ್ಯನೋಪಾದಿ ॥
ಒಂದೆರಡು ದಿನದಂತರವು ನಾ। ವೆಂದ ನುಡಿ ಕೇಳಿಲವೊ ಸೀತೆಯ।
ತಂದವನ ತೋರಿದರೆ ತನಗದು ರಾಜ್ಯಪದವೆಂದ ॥ ೧೩ ॥
ಘನಪರಾಕ್ರಮಿ ಕಾರ್ತವೀರ್ಯಾ। ರ್ಜುನನೊಡನೆ ಮತ್ಸರಿಸಿ ಸಲೆ ಸೆರೆ।
ಮನೆಯೊಳಗೆ ಸಿಕ್ಕಿರ್ದ ರಕ್ಕಸನೀತನಲ್ಲವಲೇ? ॥
ವನಿತೆ ವೇದಾವತಿಯ ಶಾಪಕೆ। ತನುವ ತೆತ್ತವನೀತನಲ್ಲಲೆ।
ಮನದ ಭಯ ನಿಮಗೇಕೆ ತಪ್ಪದೆ ಹೇಳಿ ನೀವೆಂದ ॥ ೧೪ ॥
ತೋಳದರ್ಪದಲುಬ್ಬಿ ವಾಲಿಯ। ಬಾಲಕನ ಒಚ್ಚಣೆಯ ತೊಟ್ಟಿಲ।
ಕಾಲದೆಸೆಯಲಿ ಕಟ್ಟುವಡೆದವನೀತನಲ್ಲವಲ ॥
ಶೂಲಿಯಲಿ ಗರ್ವಿಸಿ ಮಹೀಧರ। ಮೂಲದಲಿ ಕೈಸಿಕ್ಕಿ ನಾಯವೊ।
ಲೂಳಿದವ ತಾನೀತನಲ್ಲಲೆ ಹೇಳಿ ತನಗೆಂದ ॥ ೧೫ ॥
ಜನಕಜೆಯ ಮದುವೆಯಲಿ ಶೂಲಿಯ। ಧನುವಿನಲಿ ನರಿ ಸಿಕ್ಕ ಸಿಕ್ಕಿದ।
ಶುನಕತಾನಿವನಲ್ಲಲೇ ಸಿರ ಹತ್ತು ಮೈಮರೆಸಿ ॥
ಜನಪನಿಲ್ಲದ ಹಿಂದೆ ಜನಕನ ತನುಜೆಯನು ಕದ್ದೊಯ್ದ ಕಾಮುಕಿ।
ಅನುಚರರ ಗೆಣೆವಂಟನಲ್ಲಲೆ ಹೇಳಿ ನಮಗೆಂದ ॥ ೧೬ ॥
ಆಡಡೆಲೆ ಖಳ ಕೇಳು ನಾಸಾ। ಚ್ಛೇದವಾದವಳಿಂದ ನೀ ಮರು।
ಳಾದೆ ಕಾಮುಕತನದಿ ಕಂಗಾಣದೆ ವಿಭೀಷಣನ ॥
ವೇದಮಾರ್ಗದ ಮಧುರ ವಚನವ। ನಾದರಿಸದುರೆ ಕೆಟ್ಟೆ ನೀನಿ-।
ನ್ನಾದರೆಯು ರಘುಪತಿಯ ಸಾರಿದು ಬದುಕಬಾರೆಂದ ॥ ೧೭ ॥
ಎನೆ ಘನಕ್ರೋಧಾನುಮುಖದಲಿ। ಮಿಸುಗಿದವು ಮೀಸೆಗಳು ಕುಣಿದವು।
ಕನಲಿದವು ಕಂಗಳು ಕಳೇವರ ಕಂಪಿಸಿತು ಖಳನ ॥
ಒನೆದು ಖಡುಗವನೆಲವೊ ನಿನ್ನಯ। ಜನಪರಾಘವ ರವಿಸುತಾದ್ಯರ।
ತನುಜರನು ಹೆಸರಿಟ್ಟಡೆಯು ಬಿಡೆ ಜಾನಕಿಯನೆಂದ ॥ ೧೮ ॥

# ೯. ಕರ್ಣನ ಸ್ವಾಮಿನಿಷ್ಠೆ.

( ಕೌರವರಿಗೂ ಪಾಂಡವರಿಗೂ ಯುದ್ಧವು ಆರಂಭವಾಗಿದೆ; ಕರ್ಣನನ್ನು ತಮ್ಮ ಕಡೆಗೆ ಮಾಡಿಕೊಳ್ಳಬೇಕೆಂದು ಶ್ರೀಕೃಷ್ಣನು ಪಾಂಡವಪಕ್ಷದಿಂದ ಆತನ ಕಡೆಗೆ ಹೋಗಿ ಭೇದೋಪಾಯವನ್ನು ಹೂಡುವನು. )

ಇನತನೂಜನ ಕೂಡೆ ಮೈದುನ । ತನದ ಸರಸವನೆಸಗಿ ರಥದೊಳು ।
ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದೊಳು ॥
ಎನಗೆ ನಿಮ್ಮಡಿಗಳೊಳು ಸರಿಸೇ । ವನೆಯೆ? ದೇವ ಮುರಾರಿಯಂಜುವೆ ।
ನೆಸಲು ತೊಡೆಸೋಂಕಿನೊಳು ಸಾರಿದು ಶೌರಿಯಿಂತೆಂದ ॥ ೧ ॥

ಭೇದಿಸಲ್ಲೆಲೆ ಕರ್ಣ ನಿಮ್ಮೊಳು । ಯಾದವರು ಕೌರವರೊಳಗೆ ಸಂ ।
ವಾದಿಸುವಡನ್ವಯಕೆ ಮೊದಲೆರಡಿಲ್ಲ ನಿನ್ನಾಣೆ ॥
ಮೇದಿನೀಪತಿ ನೀನು ಚಿತ್ತದೊ । ಳಾದುದಿಲ್ಲರಿವೆನುತ ದಾನವ ।
ಸೂದನನು ರವಿಸುತನ ಕಿವಿಯೊಳು ಬಿತ್ತಿದನು ಭವವ ॥ ೨ ॥

ದಾನವಾಂತಕ ಬೆಸಸು ವಂಶವಿ । ಹೀನನನು ನಿಮ್ಮಡಿಗಳೊಡನೆ ಸ ।
ಮಾನಿಸುವರೇ ಸಾಕೆನುತ ತಲೆವಾಗಿ ಕೈಮುಗಿಯೆ ॥
ಮಾನನಿಧಿ ಎನ್ನಾಣೆ ಬಾರೈ । ನೀನು ನಮ್ಮೆಲ್ಲರ ಹವಣೆ ವರ ।
ಭಾನುವಂಶಲಲಾಮ ನೀಂ ರಾಮಂಗೆ ಸರಿಯೆಂದ ॥ ೩ ॥

ಕಳೆದುಕೊಂಡನು ವೀಳೆಯವನಂ । ಜುಳಿಯೊಳಾತಂಗಿತ್ತು ಕರ್ಣನ ।
ಕೆಲಕೆ ಬರಸೆಳೆದವನ ಕರದೊಳು ಕರತಳವನಿಕ್ಕಿ ॥
ಎಲೆ ದಿವಾಕರ ತನಯ ನಿನ್ನಯ । ಕುಲವನರಿಯೆಯಲಾ ಸುಯೋಧನ ।
ನೊಳು ವೃಥಾ ಸೇವಕತನದೊಳಿಹುದುಚಿತವಲ್ಲೆಂದ ॥ ೪ ॥

ಅದರಿಸೀ ಪಾಂಡವರೊಳೈವರ । ಮೊದಲಿಗನು ನೀನಿರಲು ಧರಣಿಯು ।
ಕದನವಿತ್ತಂಡಕ್ಕೆ ಕಾಮಿತವಲ್ಲ ಭಾವಿಸಲು ॥
ಇದು ನಿದಾನವು ಕರ್ಣ ನಿನ್ನ । ಭ್ಯುದಯವನೆ ಬಯಸುವೆನು ನಿನ್ನಯ ।
ಪದಕೆ ಕೆಡಹುವೆನೈವರನು ಬಹುದೆನ್ನ ಸಂಗಾತ ॥ ೫ ॥

ನಿನಗೆ ಹಸ್ತಿನಪುರದ ರಾಜ್ಯದ । ಘನತೆಯನು ಮಾಡುವೆನು ಕೌರವ ।
ಜನಪ ಪಾಂಡವ ಜನಪರೋಲೈಸುವರು ಗದ್ದುಗೆಯ ॥
ನಿನಗೆ ಕಿಂಕರವೆರಡು ಸಂತತಿ । ಯೆನಿಸಲೊಲ್ಲದೆ ನೀನು ದುರ್ಯೋ ।
ಧನನ ಬಾಯ್ದಂಬುಲಕೆ ಕೈಯಾನುವುದೆ ಹೇಳೆಂದ ॥ ೬ ॥

ಶೌರಿಯದೊಳಿದಿರಿಲ್ಲ ಕುಲದೊಳು । ಸೂರಿಯನ ಸುತನೊಡನೆ ಹುಟ್ಟಿದ ।
ವೀರರಗ್ಗದ ಪಾಂಡುತನಯರು ನಿನ್ನ ವೈಭವಕೆ ॥
ಆರು ಸರಿಯೈ ಕರ್ಣ ನಡೆ ನಡೆ । ಧಾರಿಣೀಪತಿಯಾಗಿ ನೀನಿರೆ ।
ವೈರವಿತ್ತಂಡಕ್ಕೆ ಬಳಿಕಿಲ್ಲೆಂದನಸುರಾರಿ ॥ ೭ ॥

ಕೊರಳ ಸೆರೆ ಹಿಗ್ಗಿದುವು ದೃಗುಜಲ । ಪುರವಣಿಸೆ ಕಡು ನೊಂದನಕಟಾ ।
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ ॥
ಹರಿಯು ಹಗೆ ಹೊಗೆದೋರದುರುಹದೆ । ಬರಿದೆಹೋಹುದೆ ತನ್ನ ಜನನವ ।
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ ॥ ೮ ॥

ಕಾದಿಕೊಲುವೊಡೆ ಪಾಂಡುಸುತರು ಸ । ಹೋದರರು ಕೊಲಲಿಲ್ಲ ಕೊಲ್ಲದೆ ।
ಕಾದೆನಾದೊಡೆ ಕೌರವಂಗವನಿಯಲಿ ಹೊಗಲಿಲ್ಲ ॥
ಭೇದದೊಳು ಹೊಕ್ಕಿರಿದನೋ ಮಧು । ಸೂದನನು ತಾನಕಟೆನುತ ಚಿಂ ।
ತೋದಧಿಯೊಳದ್ದಂತೆ ಮೌನದೊಳಿರ್ದನಾಕರ್ಣ ॥ ೯ ॥

ಏನು ಹೇಳೈ ಕರ್ಣ ಚಿತ್ತ । ಗ್ಲಾನಿಯಾವುದು ನಿನಗೆ ಕುಂತೀ ।
ಸೂನುಗಳ ಬೆಸಗೈಸಿಕೊಳ್ವುದು ನೇರದೇ ಮನಕೆ ॥
ಹಾನಿಯಿಲ್ಲೆನ್ನಾಣೆ ನುಡಿ ದು-। ಮ್ಮಾನವೇತಕೆ ಮರುಳತನ ಬೇ ।
ಡಾನು ನಿನ್ನಪದೆಸೆಯ ಬಯಸುವನಲ್ಲ ಹೇಳೆಂದ ॥ ೧೦ ॥

ಮರುಳು ಮಾಧವ ಸಕಲ ರಾಜ್ಯದ । ಸಿರಿಗೆ ಸೋಲುವನಲ್ಲ ಕೌಂತೇ ।
ಯರು ಸುಯೋಧನನೆನಗೆ ಬೆಸಗೈವಲ್ಲಿ ಮನವಿಲ್ಲ ॥
ಹೊರೆದ ದಾತಾರಂಗೆ ರಿಪುಗಳ । ಸಿರವನರಿದೊಪ್ಪಿಸುವೆನೆಂಜೀ ।
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ ॥ ೧೧ ॥

ಹಲವು ಮಾತೇನಖಿಳಜನವೆ । ನ್ನುಳಿವ ಸೊಗಸದು ಕೌರವೇಶ್ವರ ।
ನೊಲವು ತಪ್ಪಿದ ಬಳಿಕ ಜಗದೊಳಗಾಪ್ತಜನವಿಲ್ಲ ॥

ಸಲಹಿದನು ಮನ್ನಣೆಯೊಳೆನಗ। ಗ್ಗಳಿಕೆಯಲ್ಲದೆ ಹೀನವೃತ್ತಿಯ।
ಬಳಸಿ ನಡೆಸನು ಕೌರವೇಂದ್ರನನೆಂತು ಮರೆದಿಹೆನು ॥ ೧೨ ॥
ನೋಡಿ ತಣಿಯನು ನಿಚ್ಚ ಲುಚಿತವ। ಮಾಡಿ ತಣಿಯನು ಬಿರುದ ಹೊಗಳಿಸಿ।
ಹಾಡಿ ತಣಿಯನು ಮಾನಸಿಧಿಯನದೆಂತು ಮರೆದಪೆನು ॥
ಕಾಡಲಾಗದು ಕೃಷ್ಣ ಖ್ಯಾತಿಯ। ಮಾಡಲಾಗದು ಬಂದೆನಾದೊಡೆ।
ರೂಢಿ ಮೆಚ್ಚದು ಕೌರವನ ಹಗೆ ಹರಿಬವೆನಗೆಂದ ॥ ೧೩ ॥
ವೀರಕೌರವರಾಯನೇ ದಾ। ತಾರನಾತನ ಹಗೆಯೆ ಹಗೆ ಕೈ।
ವಾರವೇ ಕೈವಾರವಾದಂತಹೆನು ಕುರುನೃಪತಿ ॥
ಶೌರಿ ಕೇಳೈ ನಾಳೆ ಸಮರದ। ಭಾರದೊಳು ತೋರುವೆನು ನಿಜಭುಜ।
ಶೌರಿಯದ ಸಂಪನ್ನತೆಯನಾ ಪಾಂಡುತನಯರೊಳು ॥ ೧೪ ॥
ಮಾರಿಗೌತಣವಾಯ್ತು ನಾಳಿನ। ಭಾರತವು ಬಹುಜೀವಹರಸೇ।
ಕೌರವನ ಋಣ ಹಿಂಗೆ ರಣದೊಳು ಸುಭಟ ಕೋಟಿಯನು ॥
ತೀರಿಸಿಯೆ ಪತಿಯವಸರಕ್ಕೆ ಶ। ರೀರವನು ನೂಕುವೆನು ನಿನ್ನಯ।
ಧೀರರೈವರ ನೋಯಿಸೆನು ರಾಜೀವಸಖನಾಣೆ ॥ ೧೫ ॥

---

# ೧೦. ಮಾಯಾಂಗನೆಯರ ಕಾಟ

( ಪ್ರಜಾಪೀಡೆಯನ್ನು ಪರಿಹರಿಸುವುದಕ್ಕೆಂದು ಮೃಗಬೇಟೆಗೆ ಹೊರಟ ಹರಿಶ್ಚಂದ್ರ ಮಹಾರಾಜನು ವಿಶ್ವಾಮಿತ್ರನ ಆಶ್ರಮದ ಬಳಿಗೆ ಬಂದಿರಲು ಆತನಿಂದ ಪ್ರೇರಿತೆಯರಾದ ಮಾಯಾಂಗನೆಯರು ರಾಯನಲ್ಲಿಗೆ ಬಂದು — )

ಇಳೆಯೊಳಗೆ ಹೆಸರುಳ್ಳ ದಾಸಿಯೆಂಬುದನು ಕೇ।
ಳ್ದಿಳಸಿ ಕಟ್ಟಾಸೆವಟ್ಟೆಯ್ತಂದು ಬೇಡಿ ನಿ।
ಷ್ಫಲವಾಗದಂತೆ ನಾಪತಿಮರುಗದಂತಳಲದಂತೆ ಬಿಸುಸುಯ್ಯದಂತೆ ॥
ತಿಳಿದ ನೀನೆಮಗೆ ವಲ್ಲಭನಾಗಿ ಚಿತ್ತದು।
ಮ್ಮಳಿಕೆಯಂ ಕಳೆ ಹರಿಶ್ಚಂದ್ರ ಭೂನಾಥಯೆಂ।
ದಳವಳಿದು ಕೈಮುಗಿದು ಬಾಯ್ಬಿಟ್ಟು ನುಡಿದರಳುಪಿಂದನಾಮಿಕಸತಿಯರು॥

ಲಲಿತವಸುಮತಿ ಹುಟ್ಟಿದಂದು ಹುಟ್ಟಿದ ಸೂರ್ಯ।
ಕುಲದ ರಾಯರ್ಗೆ ವಂಶದೊಳು ಕೀರ್ತಿಯೊಳು ಭುಜ।
ಒಲದೊಳೊರೆದೊರೆಯೆನಿಸಿ ಕನ್ನಿಕೆಯುರಂ ಕುಡುವ ಭೂಪರಿಲ್ಲಿನ್ನು ತನಕ ॥
ಹೊಲತಿಯುರು ನೀವೆನಗೆ ಸತಿಯರಾಗಿಪ್ಪೆವೆಂ।
ಬುಲಿಹವೆಂದೆಂಬುದಿದು ಕಾಲಗುಣವೋ ಸಿಂಡ।
ನೆಲದ ಗುಣವೋ ನೋಡುನೋಡೆಂದು ಕಡುಮುಳಿದು ಕೋಪಿಸಿದ
ನವನೀಶನು ॥ ೨ ॥

ಪಾವನಕ್ಷೀರವುಂ ಕೊಡುವ ಕೆಚ್ಚಲ ಮಾಂಸ।
ವಾಪ ಲೇಸಿನಿದುಳ್ಳ ಮಧುವನೊಸೆದೀವನೊಳ।
ವಾವ ಲೇಸಧಿಕ ಕಸ್ತೂರಿಯುಂ ಕುಡುವ ಮೃಗನಾಭಿ ತಾನಾವಲೇಸು ॥
ದೇವರಿಗೆ ಸಲ್ಲವೇ ಉತ್ತಮ ಗುಣಂಗಳಿ।
ರ್ದಾವಕುಂದಂ ಕಳೆಯುಲಾರಪವನೀಶ ಕೇಳ್।
ಭಾವಿಸುವೊಡಿಂದೆಮ್ಮ ರೂಪಯೌವನವಿರಲು ಕುಲದ ಮಾತೇಕೆಂದರು ॥ ೩ ॥

ಅಕ್ಕಕ್ಕು ಒಚ್ಚಲುಕದಂ ತಿಳಿದೊಡಾರ ವಿೂ।
ಹಕ್ಕೆ ಯೋಗ್ಯಂ ನಾಯ್ಗೆ ಹಾಲುಳ್ಳೊಡಾರವೂ।
ಟಕ್ಕೆ ಯೋಗ್ಯಂ ಪ್ರೇತವನದೊಳಗೆ ಬೆಳೆದ ಹೂವಾರ ಮುಡಿಹಕ್ಕೆ ಯೋಗ್ಯಂ॥
ವಿುಕ್ಕ ಹೊಲತಿಯುರು ನೀವೆನೆ ನಿಮ್ಮ ಜವ್ವನದ।
ನೊಕ್ಕು ರೂಪಿನ ಗಾಡಿ ಜಾಣತನದೊಪ್ಪವೇ–।
ತಕ್ಕೆ ಯೋಗ್ಯಂ ರವಿುಸಿದವರುಂಟೆ ಶಿವಶಿವಾ ಪಾತು ತಾ ಹೊಲೆಯೆಂದನು ॥

ಹಾಡ ನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ–।
ತಾಡಿ ನುಡಿಸಿದ ಬಾಯ್ಗೆ ಹೊಲೆಯಿಲ್ಲ ರೂಪ ನೆರೆ।
ನೋಡಿದ ವಿಲೋಚನಕೆ ಹೊಲೆಯಿಲ್ಲ ಮೆಯ್ಯುಮ್ಮಡಿಗಳಿಂ ಸುಳಿವ
ತಂಗಾಳಿಯಿಂ ॥

ತೀಡುವ ಸುಗಂಧವುಂ ವಾಸಿಸಿದ ನಾಸಿಕಕೆ।
ನಾಡೆ ಹೊಲೆಯಿಲ್ಲ ನೋಂಕಿಂಗೆ ಹೊಲೆಯಿರ್ದಪುದೆ।
ಕೂಡಿರ್ದ ಪಂಚೇಂದ್ರಿಯಂಗಳೊಳು ನಾಲ್ಕಧಿಕವೊಂದಧಮವೇನೆಂದರು ॥

ಕಂಡರಿವುವ್ಯೆಸಲೇ ನಯನೇಂದ್ರಿಯಂ ಘ್ರಾಣ।
ಕೊಂಡರಿವುವ್ಯೆಸಲೇ ವಾಸನೆಗಳಂ ಕರ್ಣ।
ಖಂಡರಿವುವ್ಯೆಸಲೇ ಶಬ್ದವಂ ದೂರದಿಂದಲ್ಲದವು ಮುಟ್ಟಲಿಲ್ಲ ॥
ಭಂಡತನದೀಮಾತದೇಕೆಯುಪಹಾಸವೇ।
ಕೆಂಡವನು ಮುಟ್ಟಿದೊಡೆ ಬೇವಂತೆ ಕೇಳ್ದೊಡಂ।
ಕಂಡು ವಾಸಿಸಿದೊಡಂ ಸುಡುವುದೇ ಕಾಳುಗೆಡೆಯದೆ ನೀವು ಹೋಗೆಂದನು ॥
ಶಾಪದಿಂದೆಮಗಾದ ದುಷ್ಕುಲಂ ಸತ್ಕುಲಜ।
ಭೂಪ ನಿನ್ನಯ ಸಂಗದಿಂ ಶುದ್ಧಪಪ್ಪುದೆಂ।
ಬಾಪೇಕ್ಷೆಯಿಂ ಬಂದೆವೆನಲೊಡನೆ ನಿಮಗೋಸುಗೆನ್ನ ಕುಲವಂ ಕೆಡಿಪೆನೆ॥
ಪಾಪಿಗಳ ಪಾಪವಂ ತೊಳೆವ ಗಂಗೆಗೆ ಪಾಪ।
ಲೇಪವುಂಟಾಯಿತೇ ಹೇಳರಸ ಕುಲಧರ್ಮ।
ವಾ ಪಂಥವಲ್ಲ ಕೊಡವಾಲ ಕೆಡಿಸೊವ್ಪೊಡಾಪ್ಪುವೆನಿತಾಗಬೇಕೆಂದನು ॥ ೭ ॥
ಏಗೆಯ್ದೊಡಂ ಕುಲಜರಧಮ ಸತಿಯರ ನೋಡ।
ಲಾಗದರಿಯದೆ ಪಾಪದಿಂ ನೋಡಿದೊಡೆ ನುಡಿಸ।
ಲಾಗದೆಂತಕ್ಕೆ ನುಡಿಸಿದೊಡೆ ಮನ್ನಿಸಲಾಗದನುಗೆಟ್ಟು ಮನ್ನಿಸಿದೊಡೆ॥
ಮೇಗೇಸುಮಂ ಕರೆದು ಕುಡಲಾಗದಿತ್ತೊಡಪ।
ರೇಗೈದೊಡೊಪ್ಪದಿಂದೆನಗೆ ನೀವಂಗನೆಯ–।
ರಾಗಿಪ್ಪೆವೆಂದಿರ್ಪ್ಪ ಸಲ್ಲದೊಡತಿಯರಪ್ಪೆವೆನಲು ತೀರದೆಯೆಂದನು ॥ ೮ ॥
ಮಾತಿಂಗೆ ಮಾತುಗುಡಲರಿದು......ನಿನ್ನಂ ಬೆನ್ನ ಬಿಡೆವೆಂದರು–
ಒಳಿವಿಡಿದು ಬಂದು ಮಾಡುವುದೆನ್ನನೇನು ಬೆಂ।
ಒಳಿಯೊಳೆನಿಬರು ಹೊಲೆಯರಿಲ್ಲೆಂದೊಡಹಗೆ ಜಿಡೆ।
ವೆಳಸಿ ಮೆಚ್ಚಿಸಿ ಮರುಳ್ಮಾಡಿ ಮತ್ತೊಲ್ಲನವನಿಪನೆಂದು ಮೊರೆಯಿಡುತ್ತ॥
ಇಳಿಗೆಯ್ದು ಸಾರುತ್ತ ದೂರುತ್ತ ಬಪ್ಪೆವೆನೆ।
ಮುಳಿದು ಘುಡು ಘುಡಿಸಿ ಕೋಪಾಟೋಪದಿಂ ಹಲ್ಲ।
ಕಳೆ ಬಾಯ ಹರಿ ಬೆಂಗೆ ಹೊಯ್ ಹೊಡೆಯೆನುತ್ತೆದ್ದನುರವಣಿಸಿ
ಭೂನಾಥನು ॥ ೯ ॥

# ೧೧. ರಾಮನ ರಾಜ್ಯವಿಯೋಗ-೧.

( ಕಥಾಸಂದರ್ಭವು ಪರಿಚಿತವಾದುದಾದ್ದರಿಂದ ಇಲ್ಲಿ ಕೊಟ್ಟಿಲ್ಲ. )

ಕ್ಷಿತಿಯ ವಿಭುದರ ವಿಮಲ ಮಂತ್ರಾ । ಕ್ಷತೆಯ ಕೈಕೊಳುತಪರಿಪಸು ನಿಜ ।
ಸತಿಸಹಿತ ಹೊಂಗದ್ದುಗೆಯ ಹೊಂಬೆಸದ ರೆಂಚಯದ ॥
ರತುನ ಲಹರಿಯ ಲಳಿಯ ಭದ್ರಾ । ಯತಮತಂಗಜ ಕಂಧರದಿ ಮುಸಿ ।
ಪತಿಯನುಜ್ಞೆಯಲಖಿಳ ತೂರ್ಯತ್ರಯದ ರಭಸದಲಿ ॥ ೧ ॥
ತಳಿತ ಪಲ್ಲವ ಪಲ್ಲವವಸು । ಜ್ವಳಿಪ ಹರ್ಮ್ಯಾಳಿಗಳು ಚಿತ್ರಾ ।
ಚಲವನಾರಾಮಾವಳಿಯ ಶಿಖಿಶುಕಪಿಕವ್ರಜದ ॥
ಉಲುಹು ವಿಪಿನ ವಿಹಂಗಮದ ಕ । ಟ್ಟುಲುಹ ಸೂಚಿಸುತಿರ್ದುದೈ ವಸ ।
ವಿಳಸದಭಿನವ ರಾಜಪದವಿಯಸವನಿಜಾಪತಿಗೆ ॥ ೨ ॥
ಕದಡಿದಂತಃಕರಣಗಳ ಗದ । ಗದಿತ ಕಂಠದ ಕಂಬನಿಯಲಿ ।
ದ್ದುದು ಸಮಸ್ತ ಚಮೂಪ ಸಚಿವನಿಯೋಗಿ ಬಂಧುಜನ ॥
ಇದಿರುವಂದು ಸುಮಂತ್ರನಿಳೆಗಿಳು । ಹಿದನು ಮದಕರಿಯಿಂದ ಮುರಿಪಿಸ ।
ಮುದದ ಹೊಳೆವಶ್ರುಗಳ ಸಂತಾಪದಲಿ ರಘುಪತಿಯ ॥ ೩ ॥
ತೆವರಿದೊದ್ದೆಯ ಹೊಗಿಸಬೇಡುಳಿ । ದವರನೆಂದೊಳಹೊಗುತ ನೇಮಪ ।
ನವಸರದ ಸೇವಕರಿಗಿತ್ತು ವಸಿಷ್ಠಮುನಿ ಸಹಿತ ॥
ಅವನಿತನುಜಾಪತಿಗೆ ಕೈಗೊ । ಟ್ಟವನಿಪನ ಬಳಿಗಾಗಿ ಕೈಕೆಯ ।
ಭವನದತ್ತಲು ತಿರುಗಿದನು ಮಂತ್ರೀಶ ದುಗುಡದಲಿ ॥ ೪ ॥
ಯುವತಿಯರ ಗುಜುಗುಜಿನ ಶೂನ್ಯೋ । ತ್ಸವದ ನೃಪಮಂದಿರವ ಜಾಡ್ಯದ ।
ಜವನಿಕೆಯ ಜಂಜಡವ ಕಾಣುತ ನುಡಿದನಿಂತೆಂದು ॥
ಅವನಿ ನಮಗೆಯಸಾಧ್ಯವೆಂಬೀ । ವ್ಯವಹರಣೆ ಗೋಚರಿಸುತಿದೆ ಸಂ ।
ಭವಿಸಲುತ್ತರವೆಂದನಾ ರಘುಪತಿ ಸುಮಂತ್ರಂಗೆ ॥ ೫ ॥
ಹೃದಯ ಕಳವಳಿಸಿದುದು ಕಂಗಳ । ಹೊದಿಸಿದುವು ನಯನಾಂಬು ಮರುಮಾ ।
ತುದಿಸದೊಯ್ಯನೆ ಬಾಗಿದನು ಮಂತ್ರೀಶ ಮಸ್ತಕವ ॥
ಬೆದರಿದನು ರಘುಪತಿ ಸುಮಂತ್ರನ । ವದನಚೇಷ್ಟೆಯ ಕಂಡು ತಂದೆಯ ।
ಹದನದೇನೆಂದರಸನಿದ್ದೆಡೆಗಾಗಿ ನಡೆತಂದ ॥ ೬ ॥

# ೧೨. ರಾಮನ ರಾಜ್ಯವಿಯೋಗ—೨.

ಕಂಡಕೇಳಿನ್ನಣುಗ ಕೇಳಾ। ನೊಂದ ನೆನೆದರೆ ದೈವತಾ ಬೇ।
ರೊಂದ ನೆನೆದುದು ದೈವಗತಿಗೀ ಕೈಕೆಯನುಸಾರಿ॥
ಎಂದು ಮೇಲುತ್ತರಕೆ ನಾಲಗೆ। ಬಂದು ಬಂದೊಳಸರಿದು ಮೆಲ್ಲನೆ।
ನಿಂದು ಬಳಿಕೀ ಮಾತನೆಂದನು ಕಲಿಸುಮಂತ್ರಂಗೆ ॥ ೭ ॥

ಈಸುದಿನ ಪರಿಯಂತ ವಿಭವದ। ವಾಸ ಸೊಬಗಿನ ಸಜ್ಜೆ ಸುಖದ ಸು।
ದೇಶ ಸುಮ್ಮಾನದ ಸುಧಾಂಬುಧಿ ಸಿರಿಯ ನೆಲೆವೀಡು॥
ಲೇಸಿಗಾಗರ ಶುಭದ ಬಹಳಿತ। ಕೋಶ ಸಂತಸದಿಕ್ಕೆ ಸೊಂಪಿನ।
ವಾಸವಾಗಿರ್ದುದು ನಿವಾಸವಿದೆಂದನಾ ಭೂಪ ॥ ೮ ॥

ಅಶುಭದಾಡುಂಬೊಲನು ಕುಹಕದ। ಪಸರ ಚಿಂತೆಯ ಸಂತೆ ದುಃಖದ।
ವಸತಿ ದುಗುಡದ ಬೀಡು ದುಮ್ಮಾನದ ಜನಸ್ಥಾನ॥
ಅಸುಖದಾರವೆ ಭೇದ ಪುದಿದಾ। ಯಸದ ಜಾಳಿಗೆ ಜವನಮನೆ ರ।
ಕ್ಕಸಿಯ ಮಠವಾಯ್ತಿಂದು ಭವನವಿದೆಂದನಾ ಭೂಪ ॥ ೯ ॥

ಹೇಳಿ ಫಲವೇನೆಲೆ ಸುಮಂತ್ರಕ। ಮೇಲನರಿಯದೆ ಕೊಟ್ಟೆನೀ ಗ।
ಯ್ಯಾಳಿಗಸುರಾಮರರ ಸಂಗ್ರಾಮದಲಿ ವರವೆರಡ॥
ಬಾಳ ಚಾಚಿದಳಿವಳೆನಗೆ ಗೋ। ನಾಳಿಗೊಡ್ಡಿದ ಬಂದು ತಂದೀ।
ನಾಲಗೆಗೆ ಸರಸುಕ್ಕನಿಕ್ಕಿದಳಿವಳು ತನಗೆಂದ ॥ ೧೦ ॥

ಒಟ್ಟಿಗುತ್ತರವಿದ್ಯವರಿಯದೆ। ಕೊಟ್ಟರುಂಟೆಲಿ ಮಂತ್ರಿ ಕೇಳ್ ಮನ।
ಮುಟ್ಟಿ ನುಡಿಯಲಿ ಭಾವಿಸದೆ ಸದ್ಧರ್ಮ ಮಾರ್ಗದಲಿ॥
ಕೊಟ್ಟ ವರವೆರಡುಂಟು ಬೇಡದೆ। ಕೊಟ್ಟರವರಿಂದೀಗ ಹೊದಕುಳಿ।
ಗುಟ್ಟುತಿಹರಿದನರಿಯೆ ನೀ ಕೇಳೆಂದಳಾ ಕೈಕೆ ॥ ೧೧ ॥

ಬಂದುದೆನಗಪಕೀರ್ತಿ ರಾಜ್ಯವ। ನೊಂದುವರದಲಿ ಬೇಡಿದೆನು ನಿಜ।
ನಂದನಂಗೊಂದರಲಿ ರಾಮಂಗಡವಿಯೊಡೆತನವ ॥

ಇಂದು ಮುಖಿಯರ ಸಾಕ್ಷಿಯಲಿ ಮೊದ। ಲೊಂದಿಸಿದರೆಸಗೀವರವ ನೀಂ।
ಬಂದಬಳಿಕಸುಮಾನವಾಗಿದೆ ನಿಮ್ಮ ರಾಯರಿಗೆ ॥ ೧೨ ॥

ಮನುಕುಲದ ರಾಯರಲಿ ಹುಸಿ ಸಂ। ಜನಿಸದೆಂದೊಳಗರಿಯದೆನ್ನಯ।
ತನುಜಗಧಿರಾಜತ್ವವನು ಬೇಡಿದೆನು ನಿಮ್ಮವರ ॥
ಇನಿತು ಸತ್ಯಕೆ ಮರಳದಲೆಯಿರ। ಲಿನಿತು ದೊಡ್ಡಿತೆ ಸಾಕು ರಘುಸಂ।
ದನಗೆ ಪಟ್ಟವ ಕಟ್ಟಿ ನೀಂ ನೆರಹೆಂದಳಾ ಕೈಕೆ ॥ ೧೩ ॥

ಈತನೇನು ದಧೀಚಿ ಶಿಬಿ ಜೀ। ಮೂತವಾಹನ ಬಲಿ ಕಪೋತಾ।
ಖ್ಯಾತರೊಳಗಗ್ಗಳನೆ ಬೇಡಿದ ವರವನೀಯಲ್ಕೆ ॥
ಮಾತದೇಕೆಲೆ ಮಂತ್ರಿ ಸಾಕಿ। ನ್ನೇತಕವನಿಯ ಬಯಕೆ ರಘುಸಂ।
ಜಾತಗಭಿಷೇಕವನು ಮಾಡಲಿಕೆಬ್ಬಿಸವನಿಪಸ ॥ ೧೪ ॥

ಸುತವಿಯೋಗದಲಳಿಯದಿರನೀ। ಕ್ಷಿತಿಪ ನೀವೆಂದುಗ್ರಪಾತಿ।
ವ್ರತೆಯರೊಳಗಗ್ಗಳರು ನಿಮ್ಮನು ನೆಮ್ಮಿಗಪಕೀರ್ತಿ ॥
ಕ್ಷಿತಿಯ ಕುಜನರ ಜಿಹ್ವೆ ಕಡು ಕೂ। ರತು ಕದರ್ಥದಿಸವನಿಪಾಲ।
ಚ್ಯುತಿಗೆ ಮನವನು ಮಾಡುವುದು ನಿಮಗುಚಿತವಲ್ಲೆಂದ ॥ ೧೫ ॥

ಇರಲಿ ನಿಮ್ಮ ಕುಮಾರನೀಧರೆ। ಯರಸುತನದಲಿ ರಾಘವೇಶ್ವರ।
ನಿರಲಿ ಭೂಸುರನಾಗಿ ರಾಜಋಷಿತ್ವದಲಿ ಬಳಿಕ ॥
ಇರಲಿ ರಘುಪತಿ ನಿಮಗೆ ನೆರೆವುದು। ಧರೆಯ ಸಿರಿ ಮನ್ನಾದಿರಾಯರ।
ತರುಣಿಯರು ನಗದಂತೆ ಮಾಡುವುದುಚಿತ ನಿಮಗೆಂದ ॥ ೧೬ ॥

ಬೇಡಿದೀವರದಿಂದ ನೃಪತಿಯ। ಕೂಡಿಕೊಂಡು ವನಪ್ರವಾಸವ।
ಮಾಡುವೆನು ಮರೆಯೇನು ಮನದನುತಾಪವಿನ್ನೇಕೆ ॥
ಖೋಡಿ ನಿಮಗಾಗದವೊಲೀನೃಪ। ನಾಡಿ ಹುಸಿ ಹೊಗದಂತೆ ಕೀರ್ತಿಯ।
ಜೋಡಿಸುವಡಿದು ಸಮಯವೆಂದು ಸುಮಂತ್ರ ಕೈಮುಗಿದ ॥ ೧೭ ॥

ಬಿಡು ಸುಮಂತ್ರ ಕುಮಂತ್ರ ಕೃತ್ಯವ। ನಡೆಸಬೇಡೆವೆಮ್ಮೊಡನೆ ರಘುಗಳ।
ಮಡದಿಯರು ನಗಲೆಮ್ಮ ನೆಮ್ಮಲಿಯಾದ ದುಷ್ಕೀರ್ತಿ ॥
ಒಡರಿಸಲಿ ಪುನರುಕ್ತಿ ನಮ್ಮಯ। ನುಡಿಗೆ ಹೊಗದಾಂ ಬಲ್ಲೆಪೀ ಜಂ।
ಜಡೆಯತನವನು ಕೆಲಕೆ ಸಾರೆಂದಳು ಸುಮಂತ್ರಕನ ॥ ೧೮ ॥

ಐಸಲೇ ನೀಂ ಬೇಡಿದುದು ತಾ। ನೇಸು ದೊಡ್ಡಿತು ತಂದೆಯಾಡಿದ।
ಭಾಷೆಗಿದ ಕೋ ಭಾಷೆಯೆನುತಾ ಜನಪಿಗಾರಾವು ॥
ಲೇಸು ಮಾಡಿದಿರಸ್ಮೃತವೆಮ್ಮವ। ನೀಶಸಲಿ ಹೊಗದಂತೆ ಘಟದಲಿ।
ಕಾಸಿದಿರಿ ಕಲ್ಮಷವನುಗಿದಸ್ವಯದ ಭೂಷಣವ ॥ ೧೦ ॥
ಭರತನಾಳಲಿ ರಾಜ್ಯವನು ನೀಂ। ನರಪತಿಯು ಚರಣಾರವಿಂದದ।
ಪರಮಸೇವಾನಿರತರಾಗಿರಿ ನಿಮ್ಮಸುಜ್ಞೆಯಲಿ ॥
ಚರಿಸುವೆನು ವನವಾಸವನು ಗೋ। ಚರಿಸುವೆನು ನೀಂ ನುಡಿದ ವರುಷದ।
ಪರಿಗಣನ ಪರಿಯಂತವೆಂದನು ಕೈಕೆಗಾರಾವು ॥ ೨೦ ॥

---

## ೧೩. ಚಂದ್ರಹಾಸನ ಬಾಲ್ಯ.

ಇನ್ನೊರೆವೆನಾಲಿಸಾದೊಡೆ ಪಾರ್ಥ ಧಾರ್ಮಿಕಂ।
ಮುನ್ನೊರ್ವನುಂಟು ಕೇರಳದೇಶದವನಿಪಂ।
ಸನ್ನುತಗುಣೋದಯಂ ಮೇಧಾವಿಯೆಂಬವಂ ಬಲಯುತಂ ಬಳಿಕವಂಗೆ ॥
ತನ್ನ ಪಟ್ಟದ ರಾಣಿಯೊಳ್ಬಹಳ ಭಾಗ್ಯಸಂ।
ಪನ್ನೆಡದಂಘ್ರಿಗರುವೆರಳಾಗಿ ದಿವದೊಳು।
ತ್ಪನ್ನನಾದಂ ಮೂಲನಕ್ಷತ್ರದಿಂದರಿಷ್ಟಾಂಶದೊಳ್ಸುಕುಮಾರನು ॥ ೧ ॥
ಪುತ್ರೋತ್ಸವಂ ಮಾಡಿ ಕೆಲವು ದಿನಪುರೆ ನೃಪಂ।
ಶತ್ರುಗಳ್ಬಂದು ನಿಜನಗರಮಂ ಮುತ್ತಿದೊಡೆ।
ಕ್ಷತ್ರಧರ್ಮದೊಳವರೊಡನೆ ಯುದ್ಧರಂಗದೊಳ್ಪೊಯ್ದಾಡಿ ಮಡಿಯೆ ಕೇಳ್ದು
ಚಿತ್ರಭಾನುಪ್ರವೇಶಂಗೈದಳಂದು ಶತ।
ಪತ್ರಲೋಚನೆ ಪತಿವ್ರತೆಯಾಗಿ ಬಳಿಕೆಲೆ ಧ।
ರಿತ್ರೀಶ್ವರನ ರಾಜ್ಯಮಂ ತೆಗೆದುಕೊಂಡಹಿತರಾಳ್ದರದನೇವೇಳ್ವೆನು ॥ ೨ ॥
ಬಳಿಕೊರ್ವಧಾತ್ರಿ ಶಿಶುವಂ ಕೊಂಡು ಪೊರಮಟ್ಟು।
ತೊಳಲಿ ಬಳಲುತ ಮೆಲ್ಲಮೆಲ್ಲನೈತಂದು ಕುಂ।
ತಳನಗರಮಂ ಪೊಕ್ಕಳಲ್ಲಿ ಸಾಕಿದರ್ಳಭಕನನತಿಸ್ನೇಹದಿಂದ ॥

ಎಳೆಯಂಗೆ ಬೇಕಾದುದಿಲ್ಲದಿರೆ ಮರುಗುವಳ್ ।
ಪೊಳಲೊಳಗೆ ತಿರಿದು ಹೊರೆದಳಲುವಳ್ಮದ್ದಿಸಿ ಪ ।
ಸುಳೆಯ ಬಿಸದಂಗಳ್ಗೆ ಹಿಗ್ಗಿ ಬಿಸುಸುಯ್ವಳವಳನುದಿನದೊಳಾರ್ತೆಯಾಗಿ ॥೩॥

ಇಡೆ ತೊಟ್ಟಿಲಿಲ್ಲಾಡಿಸುವರಿಲ್ಲ ನಿನಗೆ ಪೊಂ ।
ದೊಡಿಗೆಯಿಲ್ಲಿರೆ ನಿಳಯವಿಲ್ಲ ಬಿಡದೆರೆವ ನೀ ।
ರ್ಗುಡಿವಾಲ್ಗಳೆಣ್ಣೆ ಬೆಣ್ಣೆಗಳಿಲ್ಲ ಲಾಲಿಸಿ ಸಲಿವ ತಂದೆ ತಾಯ್ಗಳಿಲ್ಲ ॥
ಪೊಡವಿಪತಿ ಕೇರಳಾಧೀಶ್ವರಂ ತನಯನಂ ।
ಪಡೆದನಿದಕೀಗ ನಿನ್ನಂ ನೋಡುವೆನ್ನ ಕ ।
ಣ್ಗೊಡೆಯದಿರದಕಟೆಂದು ಬಿಸುಸುಯ್ದಳಲ್ದು ಮರುಗುವಳಾಕೆ ದಿನದಿನದೊಳು ॥ ೪ ॥

ಮೊಳೆವಲ್ಲೊಗುವ ಜೊಲ್ಲು ದಟ್ಟಡಿ ತೊದಲ್ನುಡಿಯು ।
ತೊಳತೊಳಗುತಿಹ ಸೊಬಗು ಮೆರೆವ ನಗೆ ಮೊಗದ ಬಗೆ ।
ಪೊಳೆವ ಕಣ್ಮಿಸುಪಸುಣ್ಗದಪಿನೆಣೆ ಚೆಲ್ವಪಣೆ ಕುರುಳು ಜೋಲ್ವಂಬೆಗಾಲು ॥
ಸುಳಿನಾಭಿ ಎಂಗೆ ಶೋಭಿಪಧರದೆಡೆ ಬಟ್ಟದೊಡೆ ।
ನಳಿ ತೋಳಿಡಿದ ಧೂಳಿ ಸೊಗಯಿಸುವ ವರಶಿಶುವ ।
ನಲಿದಾಡಿಸುವರೂಢಿಯಿಲ್ಲೆಂದು ನೆರೆನೊಂದು ಮರುಗುವಳಜಸ್ರಮವಳು ॥

ಬಾಲಕನ ಲೀಕೆಯುಂ ಕಂಡು ಹಿಗ್ಗುವಳೊಮ್ಮೆ ।
ಲಾಲನೆಗಳಿಲ್ಲೆಂದಳಲ್ದು ಮರುಗುವಳೊಮ್ಮೆ ।
ಪಾಲಿಸಿದಳಿಂತು ನಡೆನುಡಿಗಳಂ ಕಲಿವಲ್ಲಿ ಪರಿಯಂತಮಾಶಿಶುವನು ॥
ಮೇಲೆ ರುಜೆ ಬಂಡಡಸೆ ವಿಧಿವಶದೊಳಾಧಾತ್ರಿ ।
ಕಾಲನರಮನೆಗೈದಿದಳ್ಬಳಿಕ ಪಸುಳೆಗೆ ನಿ ।
ರಾಲಂಬಮಾಗಲಾ ಪಟ್ಟಣದೊಳೆಲ್ಲರ್ಗೆ ಕಾರುಣ್ಯಕೀಡಾದನು ॥ ೬ ॥

ಚೆಲ್ವಶಿಶು ಬೀದಿಯೊಳ್ಬಂದು ದೇಸಿಗನಾಗಿ ।
ನಿಲ್ವಿನಂ ಕಂಡಕಂಡಬಲೆಯರ್ಕರೆಕರೆದು ।
ಮೆಲ್ವ ತನಿವಣ್ಣ ಕಜ್ಜಾಯಮಂ ಸಕ್ಕರೆಗಳಂ ಕುಡುವರೆತ್ತಿಕೊಂಡು ॥

ಸೊಲ್ಪವಾತುಗಳನಾಲಿಸಿ ಮುದ್ದಿಸುವರವ ।
ರೊಲ್ವುದಕ ಮಜ್ಜನಂಗೈಸಿ ಮಡಿಯಂ ಪೊದಿಸಿ ।
ಮೆಲ್ಲಾಸಿಸೊಳ್ಮಲಗಿಸುವರಳ್ತಿಯಿಂದೊಸೆದು ತಂತಮ್ಮ ಮಕ್ಕಳುಗಳೊಡನೆ॥
ಪರಪುಟ್ಟನಾಗಿ ಪಟ್ಟಣದ ಬೀದಿಗಳೊಳಗೆ ।
ತಿರುಗುತಿಹ ಬಾಲಕನ ರೂಪಮಂ ಕಂಡು ಕರೆ ।
ಕರೆದು ಭವನಂಗಳ್ಗೆ ಕೊಂಡೊಯ್ದು ವನಿತೆಯರ್ತಮತಮಗೆ ಮೋಹದಿಂದ ॥
ಸರಸ ಪರಿಮಳಸುಗಂಧಂಗಳಂ ತೀಡಿ ಕ ।
ಸ್ತುರಿಯ ತಿಲಕವನಿಟ್ಟು ಕಮ್ಮಲಮರ್ದಿಸಿ ಕ ।
ರ್ಪ್ಪುರವೀಳೆಯಂಗೊಟ್ಟು ಮಡಿತೊಡಿಗೆಗಳಿನ್ನೈದೆ ಸಿಂಗರಿಸಿ ಕಳುಹುತಿಹರು ॥
ಆಡುವೆಳಮಕ್ಕಳೊಡನಾಡುವಂ ಲೀಲೆಯಿಂಗೆ ।
ನೋಡುವಚ್ಚರಿಗಳಂ ನೋಡುವಂ ಬಾಲಕರ ।
ಕೂಡೆ ಮನೆಮನೆಗಳೊಳಗಾಡುತಿಹನೆಲ್ಲರ್ಗೆ ಮುದ್ದು ಮೋಹಿಸುತಿರ್ಪನು ॥
ಪಾಡುವರ ನೋಡುವರ ನಾಡೆ ಸಾಧನಗಳಿಂ ।
ಮಾಡುವರನಳ್ತಿಯಿಂ ಬೇಡುವರ ನೆರವಿಯೊಳ್ ।
ಕ್ರೀಡಿಸುವನಾಪುರದ ರೂಢಿಸಿದ ಬೀದಿಯೊಳ್ ಪಸುಳೆ ಪರಪುಟ್ಟನಾಗಿ ॥೯॥

---

## ೧೪. ಸೀತಾ ಪರಿತ್ಯಾಗ.

( ಆಬಳಿಕ ‹‹ ಅಗಲಿರ್ದ ಮಡದಿಯಂ ಮತ್ತೆ ರಘುನಾಥನಂತೆ ಕೊಂಡಾಳುವವನಲ್ಲ ” ಎಂಬ ರಜಕನ ದುರ್ವಾಕ್ಯಕ್ಕೆ ಮನನೊಂದ ರಘುರಾಮನು ‹ ತಮ್ಮ ಬಾ, ಜಾನಕಿಯನು ಮ್ಮಳಿಸದೊಯ್ದು ಗಂಗೆಯ ತಡಿಯರಣ್ಯದೊಳ್ ಸುಮ್ಮನೆ ಕಳುಹಿಬರ್ಪುದು; ಅವ ಳೊಮ್ಮೆ ಕಾನನಕೈದಬೇಕೆಂದೆನ್ನೊಳಾಡಿರ್ಪಳದೆ ನೆವಂ ನಿನಗೆಂದು ಆಜ್ಞಾಪಿಸಲು— )

ಆತನು ಸೀತೆಯ ಬಳಿಗೆ ಬಂದು—
ತಾಯೆ ನೀನೇತಕೆಳಸಿದೆ ನಿನ್ನನೀಗ ರಘು ।
ರಾಯಂ ತಪೋವನಕೆ ಕಳುಹಿ ಬರಹೇಳಿದಂ ।
ಪ್ರಿಯಮುಳ್ಳೊಡೆ ರಥಂ ಪಣ್ಣಿ ಬಂದಿದೆಕೊ ಬಿಜಯಂಗೈವುದೆಂದು ಮರುಗಿ

ಛಾಯೆಗಾಣಿಸಿ ಸುಮಿತ್ರಾತ್ಮಜಂ ನುಡಿದಭಿ-।
ಪ್ರಾಯಮಂ ತಿಳಿಯದಲೆ ಸಂಭ್ರಮಾನ್ವಿತೆಯಾದ ।
ಳಾಯತಾಂಬಕಿ ತನ್ನಭೀಷ್ಟಮಂ ಸಲಿಸುವಂ ಕಾಂತನೆಂಬುತ್ಸವದೊಳು॥ ೧ ॥

ಅಂಬುಜಾನನೆ ಬಳಿಕ ಪಯಣಮಂ ನಿಶ್ಚೈಸಿ ।
ನಂಬಿದರಭೀಷ್ಟಮಂ ಸಲಿಸುವ ಕೃಪಾಳು ತಾ ।
ನೆಂಬುದಂ ಕಾಣಿಸಿದನಿಂದೆನ್ನ ಕಾಂತನೆನಗೆಂದು ಕೌಸಲೆಗೆ ಪೇಳ್ದು ॥
ಮುಂಬರಿದೊಡಂಬಂಡಿಸಿ, ಬಲವಂದು, ಕಾಲ್ಗೆರಗಿ, ।
ತುಂಬಿದ ಪರಕೆವೆತ್ತು, ಕೈಕಯೀ ದೇವಿಗೆ ಶಿ-।
ರಂಬಾಗಿ, ವರಸುಮಿತ್ರೆಗೆ ನಮಿಸಿ, ಸಖಿಯರಂ ಸಂತೈಸಿ, ಬೀಳ್ಕೊಂಡಳು॥೨॥

ಎಲ್ಲಿ ಮುನಿಪೋತ್ತಮರ ಪಾವನದ ವನದೆಡೆಗ ।
ಳೆಲ್ಲಿ ಸಿದ್ಧಾಶ್ರಮಂಗಳ ಮಂಗಳ ಸ್ಥಳಗ ।
ಳೆಲ್ಲಿ ಸುಹವಿಗಳ ಕಂಪೊಗೆದ ಪೊಗೆದಳೆದಗ್ನಿಹೋತ್ರದ ಕುಟೀರಂಗಳು ॥
ಎಲ್ಲಿ ಪರಿಚಿತವಾದ ವಾದವೇದಧ್ವನಿಗ ।
ಳಲ್ಲಿ ಗುಯ್ಯದೆ ದಾರುಣದ ಕಟ್ಟಡವಿ ।
ಗಿಲ್ಲಿಗೇಕೈತಂದೆ ತಂದೆ ಸೌಮಿತ್ರಿ ಹೇಳೆಂದು ಜಾನಕಿ ಸುಯ್ದಳು ॥ ೩ ॥

ದೇವಿ ನಿನಗಿನ್ನೆಗಂ ಪೇಳ್ದುದಿಲ್ಲಪವಾದ ।
ಮಾವರಿಸೆ ನಿನ್ನನೊಲ್ಲದೆ ರಘುಕುಲೋದ್ವಹಂ ।
ಸೀವರಿಸಿ ಬಿಟ್ಟು ಕಾಂತಾರಕ್ಕೆ ಕಳುಹಿ ಬಾಯೆಂದೆನಗೆ ನೇಮಿಸಿದೊಡೆ ॥
ಆ ವಿಭುವಿನಾಜ್ಞೆಯಂ ಮೀರಲರಿಯದೆ ನಿಮ್ಮ ।
ನೀವಿಪಿನಕೊಡಗೊಂಡು ಬಂದೆನಿನ್ನೊಯ್ಯೊಯ್ಯ ।
ನಾವಲ್ಲಿಗಾದೊಡಂ ಪೋಗೆಂದು ಲಕ್ಷ್ಮಣಂ ಬಾಷ್ಪಲೋಚನನಾದನು ॥ ೪ ॥

ಬಿಟ್ಟನೆ ರಘುಶ್ರೇಷ್ಠನೆನ್ನನಕಟಕಟ ತಾ ।
ಮುಟ್ಟನೆ ನೆಗಳ್ದ ಬಾಳ್ಕೆಗೆ ಸಂಚಕಾರಮಂ ।
ಕೊಟ್ಟನೆ ಸುಮಿತ್ರಾತನುಜ ಕಟ್ಟರಣ್ಯದೊಳ್ಕಳುಹಿ ಬಾಯೆಂದು ನಿನಗೆ ॥

ಕೊಟ್ಟನೆ ನಿರೂಪಮಂ ತಾನೆನ್ನ ಕಣ್ಬಟ್ಟೆ।
ಗೆಟ್ಟನೆ ಮನೋವಲ್ಲಭನನಗಲ್ದಡವಿಯೊ।
ಳ್ಬಿಟ್ಟನೆ ಪಿಶಾಚಡವೊಲೆಂತಿಹೆನೊ ಕೆಟ್ಟೆನಲ್ಲಾಯೆಂದೊರಲ್ದಳಬಲೆ ॥ ೫ ॥

ರಾಮನಂ ಭುವನಾಭಿರಾಮನಂ ಗುಣರತ್ನ।
ಧಾಮನಂ ರಘುಕುಲೋದ್ದಾಮನಂ ರೂಪಜಿತ।
ಕಾಮನಂ ಸತ್ಕೀರ್ತಿಕಾಮನಂ ಶರಣಜನ ವಾರ್ಧಿಯಂ ಎಂಗೆ ಪೆರ್ಚಿಪ॥
ಸೋಮನಂ ಸೌಭಾಗ್ಯ ಸೋಮನಂ ಕುವಲಯ।
ಶ್ಯಾಮನಂ ನಿಜತನುಶ್ಯಾಮನಂ ಘನಪುಣ್ಯ।
ನಾಮನಂ ಸಂತತಂ ನಾಂ ಮನಂದಣಿಯೆ ರಮಿಸದೆ ಬಾಳ್ವೆನೆಂತೆಂದಳು ॥ ೬ ॥

ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಪಿಸನೆ।
ಕಾಕುತ್‌ಸ್ಥನಿಲ್ಲಿ ತಳುವಿದೊಡೆ ನೆರವುಂಟು ತನ।
ಗೀಕಾಡೊಳುಗ್ರ ಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು॥
ಲೋಕದರಸೇಗೈವೊಡಂ ತನ್ನ ಕಿಂಕರ।
ಬೇಕು ಬೇಡೆಂದು ಪೇಳರೆ ಭರತ ಶತ್ರುಘ್ನ।
ರೀಕೆಲಸಕೊಪ್ಪಿದರೆ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ ॥ ೭ ॥

ಎಲೆ ವನಸ್ಥಳಗಳಿರ ವೃಕ್ಷಂಗಳಿರ ಮೃಗಂ।
ಗಳಿರ ಕ್ರಿಮಿ ಕೀಟಂಗಳಿರ ಪಕ್ಷಿಗಳಿರ ಲತೆ।
ಗಳಿರ ತೃಣಗುಲ್ಮಂಗಳಿರ ಪಂಚಭೂತಂಗಳಿರ ದೆಸೆಗಳಿರ ಕಾವುದು॥
ಎಲೆ ಧರ್ಮದೇವತೆ ಜಗಜ್ಜನನಿ ಜಾಹ್ನವಿಯೆ।
ಸಲಹಿಕೊಳ್ವುದು ತನ್ನ ಮಾತೆಯಂ ಜಾನಕಿಯ।
ನೆಲೆ ತಾಯೆ ಭೂದೇವಿ ನಿನ್ನ ಮಗಳಿಹಳೆಂದು ಸೌಮಿತ್ರಿ ಕೈಮುಗಿದನು ॥೮॥

ಅರಸ ಕೇಳಲ್ಲಿರ್ದ ಪಕ್ಷಿ ಮೃಗ ಜಂತುಗ।
ಳ್ಧರಣಿಸುತೆಯಂ ಬಳಸಿ ನಿಂದು ಮೆಯ್ಯುಡುಗಿ ಜೋ।
ಲ್ದಿರದೆ ಕಂಬನಿಗರೆದು ನಿಜವೈರಮಂ ಮರೆದು ಪುಲ್ಮೇವುಗಳನೆ ತೊರೆದು॥

ಕೊರಗುತಿರ್ದುವು ಕೂಡೆ ವೃಕ್ಷಲತೆಗಳ್ಬಾಡಿ ।
ಸೊರಗುತಿರ್ದುವು ಶೋಕಭಾರದಿಂ ಕಲ್ಗಳುಂ ।
ಕರಗುತಿರ್ದುವು ಜಗದೊಳುತ್ತಮರ ಹಾನಿಯುಂ ಕಂಡು ಸೈರಿಸುವರುಂಟೇ ॥

ಅನ್ನೆಗಂ ಮುಖಕೆ ಯೂಪವನಸರಸುತಾಬನಕೆ ।
ಸನ್ನುತ ತಪೋಧನಂ ವಾಲ್ಮೀಕಿ ಮುನಿವರಂ ।
ತನ್ನ ಶಿಷ್ಯರ್ವೆರಸಿ ನಡೆತಂದು ಕಾಡೊಳೊರ್ವಳೆ ಪುಗಲ್ವೆಸೆಗಾಣದೆ ॥
ಬನ್ನದಿಂ ಬಗೆಗೆಟ್ಟು ಪಾಡಳಿದು ಗ್ರಿಷ್ಮರುತು ।
ವಿನ್ನವೆದ ಕಾಂತಾರದಧಿದೇವಿ ತಾನೆನೆ- ।
ಲ್ಸನ್ನ ಗದ್ಗದಕಂಠಿಯಾಗಿ ರೋದಿಸುತಿರ್ದ ವೈದೇಹಿಯುಂ ಕಂಡನು ॥ ೧೦ ॥

ದೇವಿ ಬಿಡು ಶೋಕಮಂ ಪುತ್ರಯುಗಮಂ ಪಡೆವೆ ।
ಭಾವಿಸದಿರಿನ್ನು ಸಂದೇಹಮಂ ಜನಕಂಗೆ ।
ನಾವನ್ಯರಲ್ಲ ನಮ್ಮಾಶ್ರಮಕೆ ಬಂದು ನೀಂ ಸುಖದೊಳಿರ್ದೊಡೆ ನಿನ್ನನು ॥
ಆವಾವ ಬಯಕೆಯುಂಟೆಲ್ಲಮಂ ಸಲಿಸಿ ತಾ ।
ನೋವಿ ಕೊಂಡಿರ್ಪೆನಂಜದಿರೆಂದು ಸಂತೈಸಿ ।
ರಾವಣಾರಿಯ ರಾಣಿಯುಂ ನಿಜ ತಪೋವನಕೆ ವಾಲ್ಮೀಕಿ ಕರೆತಂದನು ॥ ೧೧ ॥

ಚಿತ್ರಮಯಮಾಗಿ ಕಟ್ಟಿತು ಪರ್ಣಶಾಲೆ ಶತ- ।
ಪತ್ರಲೋಚನೆಗೆ ಬಳಿಕಲ್ಲಿ ಋಷಿಪತ್ನಿಯರ ।
ವಿತ್ರತ್ವಮಂ ತಳೆದು ವಾಲ್ಮೀಕಿ ಮುನಿಪನಾರೈಕೆಯಿಂ ಸೀತೆ ತನ್ನ ॥
ಪುತ್ರೋದಯದ ಕಾಲಮಂ ನೋಡುತಿರ್ದಳ್ಧ- ।
ರಿತ್ರಿಯೊಳ್ ದೃಢ ಪತಿವ್ರತೆಯರ್ಗೆ ನಿರ್ಮಲ ಚ ।
ರಿತ್ರಮೆಂತಾದೊಡಂ ವಿಪರೀತಮಾದಪುದೆ ಭೂಪಾಲ ಕೇಳೆಂದನು ॥ ೧೨ ॥

# ೧೫. ಸೂರ್ಯಾಸ್ತ, ಅಂಧಕಾರ, ಚಂದ್ರೋದಯ

ಅನ್ನೆಗಂ ಪಶ್ಚಿಮಾಂಗನೆ ಲೀಲೆಯಿಂ ಪಿಡಿದ ।
ರನ್ನದಿಮ್ಮೃತ್ತ ಗನ್ನಡಿಯೊ ವಾರುಣಿಯ ಮಸ್ತ ।
ಕೋನ್ನತ ನವೀನ ಮಾಣಿಕ್ಯವೋ ವಡವಾಗ್ನಿಯಿಂ ಸಿಡಿದ ಪೆರ್ಗಿಡಿಯಿದೋ ?॥

ಮುನ್ನೀರ ಸತಿ ಪತಿಗೆಯಾರತಿಯನೆತ್ತಿ ಜವ ।
ದಿನ್ನೆಗಪಿ ಚೆಲ್ಲಲಾಕೆಯ ಕೈಯೊಳಿರ್ಪ ಪೊಸ ।
ಪೊನ್ನ ಪರಿಯಾಣಮೆಸಲಸ್ತಗಿರಿಮಸ್ತಕದೊಳಿನಬಿಂಬಮೆಸೆದಿರ್ದುದು ॥ ೧ ॥

ಧರೆಯೊಳಗೆ ಕರಿದು ಕೃಷ್ಣಂ ಕೃಷ್ಣನಿಂ ಕಾಳಿ ।
ಕರಿದು ತತ್ಕೃಷ್ಣನಿಂ ಕಾಳಿಯಿಂ ನೀಲಗಿರಿ ।
ಕರಿದು ತತ್ಕೃಷ್ಣನಿಂ ಕಾಳಿಯಿಂ ನೀಲಗಿರಿಯಿಂ ಕರಿದು ಕಾಳಮೇಘಂ ॥

ಪರಿಕಿಸಲ್ ಕೃಷ್ಣನಿಂ ಕಾಳಿಯಿಂದಂ ನೀಲ ।
ಗಿರಿಯಿನಾ ಕಾಳಮೇಘದಿನಂಧಕಾರಮೆ ।
ಕರಿದೆನಿಸಿ ಪಿರಿದೆನಿಸಿ ಪಸರಿಸಿದುದೆಲ್ಲಿಯುಂ ತಿಮಿರಮತಿನಿಬಿಡಮಾಗಿ ॥ ೨ ॥

ತರಣಿಯಂ ಬೆನ್ನಟ್ಟಲೋಡೆ ಪಿಡಿಯಾಳದರ ।
ಕಿರಣಂಗಳಂ ಸೆರೆಯಿನಲ್ಲಿಟ್ಟುದೋ ತಮಂ ।
ನಿರುತಮಿದಿರಾಗದೀ ತಮವಿದಂ ಮರೆಯೊಳಡಗೆರಕದಿಂ ಪಿಡಿಯಲೆಂದು ॥

ಸರಸಿರುಹರಿಪು ತನ್ನ ಬಲವನಲ್ಲಲ್ಲಿ ಮೈ ।
ಗರೆದುಮಿರಲೆಂದು ನೇಮಿಸಿದನೋ ಪೇಳೆನಲು ।
ಕರಮೊಪ್ಪಿದುವು ದೀಪಮವು ತಮಸ್ತಾಪಮವು ಮನೆಮನೆಗಳೊಳ್ ತಪ್ಪದೆ ॥

ಸುರಪ ಮುಖ್ಯಾಖಿಳ ದಿಶಾಧಿಪರ ಖೇಚರರ ।
ಪೊರೆಯೊಳೊಪ್ಪಿರ್ಪ ಕೈದೀವಿಗೆಗಳೋ ಮೇಣು ।
ಸ್ಫುರಿಸುವಂಬರದ ರತ್ನಂ ಪೋಗಲಾಗಸಮುದಾದ್ಯಂತ ಭೂಮಿಯೊಳಗೆ ॥

ಪರಿಕಿಪೊಡೆ ಲೆಕ್ಕವಿಲ್ಲದೆ ಲೋಚಸಂಗಳಂ ।
ಧರಿಸಿದುದೊ [ಜಲಧಿಜಂ] ತನ್ನ ಜಸವುಂ ನಭೋ ।
ಧರೆಯೊಳಗೆ ಪೊಯ್ದನೋ ಪೇಳೆನಲ್ ತಾರಾಳಿ ಗಗನದೊಳ್ ಕಣ್ಗೆಸೆದುದು ॥೪॥

ಕಾಲನೆಂದೆಂಬ ಶೌಳಿಗನೊಸೆದು ದೇವೇಂದ್ರ ।
ನೋಲಗದೊಳಾಡುತಲ್ಲಿಟ್ಟ ರನ್ನದ ಚೆಂಡು ।
ಮೇಲೆ ಪೊಂಜೆಂಡು ಮೌಕ್ತಿಕದ ಚೆಂಡಾದಂತನುಕ್ರಮದೊಳಿಂದುಬಿಂಬಂ ॥
ಸಾಲಾಗಿಯರುಣಂ ಪಿಶಂಗಮಾಸಿತರುಚಿಗ ।
ಳೋಲೈಸಿ ಪೂರ್ವಾದ್ರಿಯೆಂಬ ದೇವಗೃಹದ ।
ಮೇಲಿಟ್ಟ ಮಣಿಗಳಸ ಪೊಂಗಳಸ ರಜತ ಕಳಶಂಗಳೆನೆ ಚೆಲುವಾದುದು ॥೫॥

ನಗನಿಕಾಯಂ ರಜತಗಿರಿಯಂತೆ ಕಂಗೊಳಿಸೆ ।
ಖಗಸಂಕುಲಂ ವಿಮಲಹಂಸಾಕೃತಿಯಿನೊಪ್ಪೆ ।
ಬಗೆಬಗೆಯ ಪುಷ್ಪರಾಜಿಗಳಮಳ ವಿಚಿಕಿಲ ಪ್ರಸೂನಂಗಳೆಂಬಂತಿರೆ ॥
ಜಗತೀದ್ವಿಪೌಘಮೈರಾವತಪ್ರಭೆಯೊಳಿರೆ ।
ನಗಜಾತೆ ವಾಣಿಯಂತಿರೆ ಯಮುನೆ ದೇವನಿ ।
ಮ್ನಗೆಯಂತೆ ರಂಜಿಸಲ್ ಪೊಗಳ್ವ ಕವಿಯಾವನಾ ಜ್ಯೋತ್ಸ್ನಾ
ಸುಪ್ರಭಾವವನು ॥೬॥

[**ಸೂಚನೆ:** ಇಲ್ಲಿಂದ ಮುಂದಿನ ೯ ಕವಿತಾಪಾಠಗಳು ಆಧುನಿಕ ಕವಿಗಳ ಕೃತಿಗಳಿಂದ ಆಯ್ದುಕೊಂಡುವು. ಭಾಷೆ, ಭಾವ, ಬಂಧ, ವರ್ಣನೆಯ ಕ್ರಮ ಮೊದಲಾದ ಸಂಗತಿಗಳಲ್ಲಿ ಇವನ್ನು ಹಿಂದಿನ ಕವಿತೆಗಳೊಡನೆ ಹೋಲಿಸಿ ನೋಡಿರಿ. ಮತ್ತು ಇವುಗಳಲ್ಲಿರುವ ನೂತನ ಸ್ವಾರಸ್ಯವನ್ನು ಕಂಡುಹಿಡಿಯಿರಿ.]

# ೧. ಮಾತೃಭೂಮಿ.

( ಕವಿತಾ ಕುಸುಮ ಮಂಜರಿಯಿಂದ. )

ಮಾನದೊಳವಮಾನದೊಳು ಪತನೋ-। ತ್ಥಾನ ಸುಖದುಃಖಂಗಳೊಳುಮಿಂಗೆ।
ಮಾನುಷತ್ವವ ಕಾದುಕೊಳ್ಳಲು ಬಲವನನುಗೊಳಿಸಿ ॥
ನೀನೆ ಕಾವುದು ಪುತ್ರವತ್ಸಲೆ। ಮನ್ನಿಪರ ಸ್ನೇಹಾರ್ದ್ರಭಾವದೆ।
ಮಾನವತಿ ಕರ್ಣಾಟಮಾತೆಯೆ ನಿನ್ನ ಬಾಲಕರ ॥ ೧ ॥
ಮನದ ಮೋಹದೆ ಮುದ್ದುಗುವರರ। ಮನೆಯೊಳಿಟ್ಟಾಡಿಸುತ ಸಲಿಯದೆ।
ತನತನಗೆ ತಕ್ಕಂತೆ ಮಾನ್ಯತೆವಡೆಯೆ ಜಗದೊಳಗೆ ॥
ಅನುವನೀಯೌ ನಿನ್ನ ಸಂತತಿ। ಯನುದಿನವು ಬಾಲ್ಯದಲಿ ಬಾಳದೆ।
ಜನತೆಯೊಳು ನಿಜಬಾಳ್ಕೆಗುಚಿತಸ್ಥಲವನಾರಿಸಲಿ ॥ ೨ ॥
ಅಡಿಗಡಿಗೆ ಬಹ ತಟ್ಟು ತಡೆಗಳ। ತಡೆದು ನಿಲ್ಲಿಸಿ ನಿನ್ನ ಬಾಲರು।
ಪೊಡವಿಯಲಿ ಮುಂದಿಡಲಿ ಕಾಲನು ಕಷ್ಟಗಳ ಸಹಿಸಿ ॥
ನಡೆದು ಹೃದಯದ ಕೀಳು ಮೋಹವ ಬಿಡುತಲಿಷ್ಟಾನಿಷ್ಟ ಕಾರ್ಯಗ।
ಳೊಳಗೆ ಧೈರ್ಯದಿ ಕಾದಿ ಜೀವನಕಲಹದೊಳು ಗೆಲಲಿ ॥ ೩ ॥
ಕೋಟಿ ಜನತೆಯ ಜನನಿ ಮಾನವ। ಕೋಟಿಯಲಿ ನಿನ್ನಣುಗರನು ಹುಲು।
ಕೀಟಗಳವೊಲು ಜನನ-ಜೀವನ-ಮರಣಯಾತ್ರೆಗಳ ॥
ನಾಟಕವ ಕುಣಿಸಾಡಿ ಬಿಸುಟಡೆ। ಕೋಟಿ ವೀರರ ಜನನಿಯೆನಿಸೌ।
ಕೋಟಿ ಕನ್ನಡಿಗರಿಗೆ ಕರುಣಿಸು! ವೀರಭಾವವನು ॥ ೪ ॥

---

# ೨. ಮರಣ

ಜನಿಸಿದಾಗಳೆ ಮರಣ ಭೀತಿಯು। ಜನಿಸುವುದು ಜಗದೊಳಗೆ ಜೀವಿಗೆ।
ಜನನಮರಣದ್ವಂದ್ವ ತಪ್ಪದು ಜೀವಿ ಸಂಕುಲಕೆ ॥
ಜನನವೇ ಮರಣಕ್ಕೆ ಕಾರಣ। ಜನನಕಾಮೃತಿ ಹೇತುವೆನಿಪುದು।
ಜನನ ನಗಿಪುದು ಮರಣವಳಿಸುವುದೇಕೆ ಜೀವಿಗಳ? ॥ ೧ ॥

ಮನುಜಕೃತಸೀಚೋಚ್ಚ ಕಾರ್ಯಕೆ। ಯಸುಗುಣದ ನಿಚೋಚ್ಚ ಜನುಮವ।
ನನುಗೊಳಿಸುವುದು ವಿಧಿಯು ಮರಣಾನಂತರದೊಳವಗೆ ॥
ತನಗೆ ದೊರೆತಾಯುಷ್ಯವಾನದೆ। ಜನಹಿತಕೆ ತನುಮನವ ಸವೆಸಿದ।
ಜನಹಿತೇಚ್ಛುಗಳೇಕೆ ಮರಣಕೆ ಬೆದರಿ ಬೆಚ್ಚುವರು? ॥ ೨ ॥

ಹೊಸದು ಬಟ್ಟೆಯ ತಂದು ಧರಿಸುತ। ಬಿಸುಡುವಂದದೆ ಹಳೆಯ ಬಟ್ಟೆಯ।
ಹೊಸ ಶರೀರವ ನೋಡಿಯಾತ್ಮನು ಬಿಡುವ ಹಳೆಯುದನು ॥
ಹೊಸ ಶರೀರವ ಧರಿಸಿದೊಡನೆಯೆ। ಹೊಸದನಿತ್ತಿಹ ಹಳೆಯ ಜನುಮದೊ।
ಳೆಸಗಿದೆಲ್ಲವ ಮರೆವನಿದೆ ವೈಚಿತ್ರ್ಯವಿದರೊಳಗೆ ॥ ೩ ॥

ಮರಣ ಬೇಡೆಂಬವಗೆ ತಪ್ಪದು। ಮರಣ ಬೇಕೆಂಬವಗೆ ಬಾರದು।
ಮರಣ ಜನನಗಳಾರ ವಶವರ್ತಿಗಳು ಜಗದೊಳಗೆ? ॥
ಮರಣಕಂಜುವ ಹೇಡಿಗಿಂತಲು। ಮರಣವನು ಬಯಸುವನೆ ಹೇಡಿಯು।
ಮರಣ ಜನನವ ಗಣಿಸದಿರುವುದೆ ಧೈರ್ಯಲಕ್ಷಣವು ॥ ೪ ॥

ಹೆತ್ತ ತಾಯಿಂ ಮೊದಲೆ ಕೂಸನು। ಮೃತ್ಯುದೇವತೆಯಪ್ಪಿಕೊಂಬಳು।
ಮೃತ್ಯುವಿಂಗೇತಕ್ಕೆ ಬೆದರುವುದೇಕೆ ಚಿಂತಿಪುದು? ॥
ಮೃತ್ಯುಲೋಕವೆ ನಾಟ್ಯಶಾಲೆಯು। ಮರ್ತ್ಯರೇ ನಟ ನೋಟಕರು ಮೇಣ್।
ಮೃತ್ಯುವನು ನೆರೆ ಮರೆತ ನರನೇ ಶ್ರೇಷ್ಠನಟನಹನು ॥ ೫ ॥

ಮನುಜನಾಯುಷ್ಯವನು ವರುಷದೆ। ಗಣಿಸಲಾಗದು ಆತನೆಸಗಿದ।
ಜನಹಿತಾರ್ಥದ ಕಾರ್ಯಗೌರವದಿಂದಲೆಣಿಸುವುದು ॥
ವನದೆ ಬಗೆಬಗೆ ಗಿಡುಮರಂಗಳು। ಜನಿಸಿ ಮಣ್ಣೊಳು ಬೆರೆಯುವಂದದೆ।
ಮನುಜನಾದೊಡೆ ಬದುಕಿ ಸಾವಿರಗಾಲ ಫಲವೇನು? ॥ ೬ ॥

ಜನಿಸಿದಾತಗೆ ಮರಣ ತಪ್ಪದು। ಮನುಜ ನೀನೇತಕ್ಕೆಯಳುಕುವೆ।
ತನುವ ಜನಹಿತ ದೇಶಹಿತಕೆಂದೀಯೆ ಮುಡುಪಾಗಿ ॥
ಕಣವನೀಯುತ ಮಣಿಯ ಪಡೆಯಲು। ನಿನಗೆ ಯೋಚನೆಯೇಕೆ ನಶ್ವರ-।
ತನುವನಿತ್ತೊಡೆ ಪಡೆವೆ ಭಾಸುರಕೀರ್ತಿದೇಹವನು ॥ ೭ ॥

———

# ೩. ಕರು.

( ಕವಿತಾ ಕುಸುಮ ಮಂಜರಿಯಿಂದ. )

ಪುಟ್ಟಿದೆನು ಭೂಮಿಯೊಳು ಪೂರ್ವದಿ। ನೆಟ್ಟಿರುವ ದುಷ್ಕರ್ಮವೃಕ್ಷದ।
ಕೆಟ್ಟ ಪಣ್ಗಳ ತಿನ್ನಲೋಸುಗ ಕ್ಷುದ್ರಪಶುವಾಗಿ॥
ಪುಟ್ಟಿಬಂದಾದಿನವೆ ಸನ್ನನು। ಕಟ್ಟಿದರು ನೇಣಿಂದೆ ಕಂಬಕೆ।
ಕಟ್ಟಿದರು ಮೊಲೆಯುಂಬ ಬಾಯನು ಹೊರಗೆ ಬಿಡುವಾಗ ॥೧॥
ದೂರದಲಿ ಕಂಬಕ್ಕೆ ಬಿಗಿಯುತ। ಬೀರಿದನು ಒಣಹುಲ್ಲ ಮುಂಗಡೆ।
ಸಾರಿದನು ನಿಷ್ಕರುಣನಾಗಿಯೆ ಖೋಡಿ ಮಾನವನು॥
ಆರಿಗರುಹಲಿ ಎನ್ನ ಕಷ್ಟವ। ಹೀರಿದುವು ರಕ್ತವನು ನೊಳಗಳು।
ನೂರು ಜಾತಿಯ ಹುಳುಗಳುಣ್ಣೆಗಳೆಲ್ಲ ಮೈಯಡರಿ ॥೨॥
ಕಷ್ಟದಲಿ ಹೆತ್ತಮ್ಮ ಕರೆಯಲು। ಇಷ್ಟದಲಿ ಕೂಗಿದೆನು "ಅಂಬಾ"।
ದುಷ್ಟಬಾಲರು ಕೇಳಿಯನುಕರಿಸಿದರು ಬಿಸದದಲಿ॥
ಅಷ್ಟರೊಳು ಮನೆಯಾಕೆ ಬಂದಳು। ಭ್ರಷ್ಟೆ ಬಿಚ್ಚಿದಳೆನ್ನ ಕಣ್ಣಿಯ।
ನಿಷ್ಠುರವನೇನೆಂದು ಪೇಳಲಿ ದುಷ್ಟ ಮಾನವರ ॥೩॥
ಕರೆವ ತಾಯಿಯ ಬಳಿಗೆಯೋಡಲು। ಭರದೆ ನೆಕ್ಕಿದಳೆನ್ನ ಮೈಯನು।
ತ್ವರದೆ ಮೊಲೆಯುಣ್ಣಲ್ಕೆ ತೊಡಗಿದೆನಮಿತ ಮುದದಿಂದ॥
ಅರೆನಿಮಿಷ ನೋಡುತ್ತ ನಿಂತಾ। ತರುಣಿ ರಕ್ಕಸಿ ಹಿಡಿದಳೆನ್ನಯ।
ಕೊರಳ ಹಗ್ಗವನೆಳೆದು ಕಟ್ಟಿದಳಮ್ಮನಿದಿರಿನಲಿ ॥೪॥
ಕರುಣೆಯಿಲ್ಲದೆ ಹಿಂಡಿಯೆಳೆಯುವ। ತರುಣಿಯು ಕರಾಘಾತದಿಂದಲಿ।
ನೊರಗಿಸುತ ಕೆಚ್ಚಲವ ಬಾಲವ ಬೀಸಿದಳು ಮಾತೆ॥
ತರುಣಿ ಬಾಲವು ಮುಖಕೆ ಬಡಿಯಲು। ಮುರಿಯೆ ಬಡಿಗೆಯು ಕೋಪದಿಂದಲಿ।
ಅರರೆ ಬಡಿದಳು! ದುಷ್ಟೆ ಬೆನ್ನಿನ ಹುರಿಯು ಹರಿವಂತೆ ॥೫॥
ಸೃಷ್ಟಿಕರ್ತನು ತಾಯ ಮೊಲೆಯಲಿ। ಸೃಷ್ಟಿಸಿರುವಾಹಾರವನು ಕಡು।
ದುಷ್ಟಮಾನವನಪಹರಿಸುತಿರಲುಕ್ಕಿ ಬರುತಿರುವ॥
ಕಷ್ಟವನು ಮೌನದಲಿ ನುಂಗುತ। ಸೃಷ್ಟಿಗೊಡೆಯನ ಬೇಡಿಕೊಂಬೆನು।
'ನಿಷ್ಠೆಯನು ಮನುಜರಿಗೆ ನೀಡೈ ಮೂಕ ಜೀವಿಗಳಾ'

———

# ೪. ನಿಶಾಗಮನ.

( ಕವಿತಾ ಕುಸುಮ ಮಂಜರಿಯಿಂದ. )

ಇಳೆಯು ಪೆರ್ಗಾವಿಸಿಂ ಬಿಸಿಲಿನಿಂ ಸಲೆ ಬತ್ತಿ ।
ಗುಳುಗುಳು ನಿನಾದದಿಂ ಪರಿಯುತಿಹ ಪೆರ್ದೊರೆಯು ।
ತಿಳಿಜಳವನೀಂಟಿ ಮುಖಮಂ ತೊಳೆದು ಸಲೆ ತಣಿದ ಪಥಿಕರಾನಂದದಿಂದ ॥
ತಳಿತೆಸೆವ ತರುಗಳ ಸುಶೀತಲಚ್ಛಾಯೆಯೊಳ್ ।
ಕುಳಿತು ನಾನಾ ತೆರದ ಲೀಲೆಯಿಂ ಸೊಬಗಿನಿಂ ।
ಕಳೆಯುತಿರೆ ಕಾಲಮಂ ರವಿ ಸಾರಿದಂ ಪಡುವಣಾಗಸದ ಮೇರೆಯೆಡೆಗೆ ॥ ೧ ॥
ಇಳಿದಿಳಿದು ಪಶ್ಚಿಮ ಕ್ಷಿತಿಜಮಂ ಸಾರಿ ರವಿ ।
ಬೆಳೆಬೆಳೆದು ಕೆಂಪಾಗಿ ಪೊಂದಳಿಗೆಯಂದಮಂ ।
ತಳೆದು ಶೋಭಿಸುವನೀ ಜಗವೆಲ್ಲ ನಗುವಂತೆ ತೋರೆ ಹೊಂಬಿಸಿಲಿಸಿಂದ ॥
ಸುಳಿವ ನಸುಗಾಳಿಯಿಂದೇಳುತಿಹ ಬೀಳುತಿಹ ।
ಜಳನಿಧಿಯ ಘನನೀಲ ಜಲತರಂಗಗಳಲ್ಲಿ ।
ಥಳಥಳಿಸಿ ಮಿನುಗಿದುವು ರವಿಕಿರಣ ನಡುನಡುವೆ ಮೀನುಗಳ್ ಸಿಡಿದುಬೀಳೆ ॥
ಇರಲು ರವಿಬಿಂಬವರೆಮರೆಯಾಯ್ತು; ಮರೆಯಾಯ್ತು ।
ಕರಿದು ನಸುಗರಿದು ಮೊದಲಾದ ವರ್ಣಂಗಳಿಂ ।
ಮೆರೆವ ಕಿರುಮೋಡವತಿದೂರದಿಂ ಪರ್ವತಾವಳಿಯಂತೆ ಕಾಣಿಸಿದುದು ॥
ಅರಿಯಾದ ರವಿ ಪೋಗೆ ಮೆಲ್ಲನೆ ನಿಶಾದೇವಿ ।
ಗಿರಿಗಹ್ವರದಿ ಪೊರಟು ಕಾರಡವಿಯಂ ದಾಂಟಿ ।
ಬರುವಳೋ ಬಯಲಿಗೆನೆ ಜಗವನೀಕ್ರಮದಿಂದ ಘೋರತಮವಾವರಿಸಿತು ॥೩॥
ದೂರದಿಂ ಕತ್ತಲೆಯ ವಲಯಗಳ್ ಕ್ರಮದಿಂದ ।
ಸಾರಿ ಬರೆ ಹತ್ತಿರಕೆ ದಟ್ಟಾಗಿ ಕಪ್ಪಾಗಿ ।
ತೋರಿದುವು ಗಿರಿ ತರು ಮಹಾರಣ್ಯನದಿಗಳೊಂದಾಗಿಯಸ್ಪಷ್ಟವಾಗಿ ॥
ತೋರಲಾಗಸ ಕರಿಯ ಕೊಪ್ಪರಿಗೆಯಂದದಿಂ ।
ಮಾರಿನಾಚೆಯ ವಸ್ತು ಕಾಣದಿರೆ ಮೋಡದೊಳ್ ।
ತಾರಕೆಗಳಡಗಿರಲು ನಿಶೆಯು ಭೀಕರಮಾಯ್ತು ಗಾಢಾಂಧಕಾರದಿಂದ ॥ ೪ ॥

## ೫. "ಮಾಸ್ತಿ" (ಮಾಸತಿ)

ಕವಿ:— ಶ್ರೀ. ಗ. ರಾ. ಯಾಜಿ

ಮಾಸ್ತಿ, ನೀನಾವ ಕುಲದಲ್ಲಿ ಜನ್ಮಿಸಿದೆ?
ಯಾವ ವೀರನ ಮಡದಿಯಾಗಿ ಶೋಭಿಸಿದೆ?
ನಿನ್ನ ಮಾಸತಿಯೆಂದು ಪೂಜಿಸುವರೆಲ್ಲ.
ನಿನ್ನ ಹೆಸರನು ಮಾತ್ರ ಹೇಳುವವರಿಲ್ಲ.
ನೀನಾವ ವೀರರನು ಮಂಗಲಾಕ್ಷತೆಯಿಡಿಸಿ
ಹೂ ಮಾಲೆಯನು ತೊಡಿಸಿ ಆರತಿಯ ಬೆಳಗಿ
ಎಂದು ಕಳುಹಿದೆ ರಣಕೆ? ಯಾವ ಅರಿಗಳ ಮುಂದೆ?
ಯಾರ ರಕ್ಷಣೆಗೆಂದು? ಯಾರನುದ್ಧರಿಸಿದೆ?
ವೀರ ಸ್ವರ್ಗವನೇರುವಾಗ ಅವನಂದು
ನಿನ್ನ ಕರೆದನೆ—'ಬಾರೆ ಪ್ರಿಯರಮಣಿ' ಎಂದು?
ಏನು ಹೇಳಿದನವನು? ಎತಕೋಸುಗ ನೀನು
ವೀರ ಪತಿಯೊಡನೆ ಚಿತೆಯೇರಲನುವಾದೆ?
ಹಸುಗೂಸುಗಳು ಒಂದು—ಅಮ್ಮ, ಅಮ್ಮಾ-ಎಂದು
ಕರೆಯಲಿಲ್ಲವೆ—ಅಮ್ಮ ಹಾಲನುಣಿಸೆಂದು?
ಎಲ್ಲಿಗೈದುವೆಯಮ್ಮ? ಏಕೆ ಹೋಗುವೆಯಮ್ಮ?
ಅಪ್ಪಬರುವನು ಇಂದು ಹೋಗಬೇಡಮ್ಮ?
ಎಂದು ಅಳಲಿಲ್ಲವೇ? ಯಾರು ತಡೆದಿಲ್ಲವೆ?
ಅಂದಾರು ನಿನ್ನ ಮಾತಾಡಿಸಲೆ ಇಲ್ಲವೆ?
ನೀನು ನೀನೇಯಾಗಿ ರಣಭೂಮಿಯನುಸೇರಿ
ಪತಿಯನನುಸರಿಸಿದೆಯೊ ದೇಹವನು ತೂರಿ?
ವೈಧವ್ಯ ಜೀವನಕೆ ಬೆದರಿದೆಯೊ ನೀನು?
ವೈರಿಗಳ ಕಾಟಕ್ಕೆ ಭಯಪಟ್ಟೆಯೇನು?
ಪತಿಪುತ್ರರಿರದ ಜಗದಲಿ ಮಾಡಲೇನು
ಎನುತ ಚಿತೆಯೇರಿ ಶಾಂತಿಯ ಪಡೆದೆಯೇನು?

———

# ೬. ಕೊಡಗು.

ಕವಿ ಶ್ರೀ. ಸಾಲಿ ರಾಮಚಂದ್ರರಾಯರು.

ಕೊಡಗು ಬೆಡಗಿನ ಬೀಡು! ಸೌಂದರ್ಯದಮೃತಮಂ
ಕುಡಿಯಿಮೆಲೆ ಕಣ್ಗಳಿರ! ಇದೊ ಮಂಜು ಬಿತ್ತರಿಸಿ
ಕಡಲವೊಲ್ ತೋರ್ದಪುದು ಮೇಲೆಳ್ದ ಗಿರಿಸಾನುಗಳ್ ದ್ವೀಪನಿವಹಮಾಗೆ॥
ಅಡಿಯಿಂದೆ ಮುಡಿವರಂ ಬೆಟ್ಟುಗಳ್ ನೀಳ್ದಿಸೆವ
ಗಿಡುಗಳಿಂ ಪಸುರೇರಿ ಸೌಂದರ್ಯದಧಿದೇವಿ
ಯೆಡೆಯಾಡುವೊಳ್ಪುವೆತ್ತೆಡೆಗಳಾಗಿತ್ತಲಿದೊ ಸೊಗಯಿಪುವು ಸೊಂಪುವೆತ್ತು॥
ಚೆಲುವಿನೀ ಕಡಲೊಳಗೆ ಸಾಲ್ವಿಡಿದು ಸೊಂಪೆಸೆವ
ಮಲೆಗಳಿವು ಸವಿಕಂಪ ತರುರಾಜಿಗಳಿಸದೇ
ಸಲೆವಲೆವ ತೆರೆಗಳಂತೆಸೆಗಪುವೊ! ನವವೃಷ್ಟಿಯಿಂ ಸೃಷ್ಟಿಗೇಂ ಕಾಂತಿಯೋ
ನೆಲಮಾಗಸಂ ದಿಕ್ಕುಗಳ್ ರಾಮಣೀಯಕದ
ನಿಲಯಂಗಳಿವನೆನಿತು ನೋಡಿದೊಡಮಕ್ಷಿಗಳ್
ತೊಲಗಲೊಲ್ಲವು ಮನಂ ತಣಿಯದೋಲಾಡಿಯೀ ಸೌಂದರ್ಯಜಲಧಿಯಲ್ಲಿ॥
ಬಿಸಿಲೆಲೆಗಳೊಳಗಿರದೆ ಸೋಸಿ ಬರ್ಪುದು ಮತ್ತೆ
ಪಸುರ ಮೇಲ್ ನೀರಮೇಲಲೆವೆಲರ್ ಸುಳಿದಪುದು
ಬಿಸುಪಳಿಯೆ ಬಿರ್ದಪುದೆ? ಕೊಡಗು ತಣ್ಣೆಳಲ ತವರೂರೆಲೇ ತಣ್ಪಿನಿಂಬು॥
ಪೊಸತೆರದ ಬಗೆವಗೆಯ ವಿಹಗಂಗಳೆತ್ತಲುಂ
ಮಿಸುಪ ಮೆಯ್‌ಬಣ್ಣದಿಂ ಮನವೊಲಿಪ ಮಾಟದಿಂ
ದೆಸೆದು ಸುಣ್ದನಿಗುಡುತೆ ನಲಿದಪುವು ಮನಸಿಲ್ಲಿ ನಲ್ವಗೆಗಳೆಡೆಯಾದುದು॥೩॥
ದರಿಗಳಿರ, ಗಿರಿಗಳಿರ, ಝರಿಗಳಿರ, ಮೃಗಪಕ್ಷಿ
ತರುಗಳಿರ, ಪೂಗಳಿರ, ತಂಬೆಲರೆ, ಬೆಳ್ಮಂಜೆ,
ನರುಗಂಪೆ, ಇಂಚರವೆ, ಬೀಳ್ಕೊಳ್ಳಿನೆನ್ನ! ಸನೋ! ನಿಮ್ಮ ಸೌಹಾರ್ದಮೆನಿತೋ
ಇರಿಸಿದಿರ್ ಸೌಂದರ್ಯಸಾರಸರ್ವಸ್ವಮಂ
ತೆರೆದೆನ್ನ ಮುಂದೆ ನೀವ್! ಪೊರಗಣ್ಗೆ ನೀಮಿನ್ನು
ಮರೆಯಾದೊಡಂ ಹೃದಯಭಿತ್ತಿಯೊಳ್ ಚಿತ್ರಿತರ್! ನಿಮ್ಮನಾಂ
ಮರೆವುದೆಂತು? ॥೪॥

# ನಾಡ ಕಾಳೆ,

( ಕವಿ ಶ್ರೀ. ಗಾಂವಕಾರರ ಮುಂಗಿಲಿನಿಂದ. )

ನನ್ನ ನಾಡ ಚೆನ್ನ ನಾಡ! ಬನ್ನಬಡುತ ಪೊರೆಯುವ
ನನ್ನಿಯಿಂದ ತಾಯಿನಾಡ। ಹೊನ್ನ ಸಿರಿಯು ಬೆಳಗುವ
ನಾಡ ಬವರ ಬವಣೆಯಲ್ಲಿ। ಜೀವವನ್ನು ನೀಡುವ
ಹೇಡಿತನವ ಹೊಡೆದು ಹಾಕಿ। ರೂಢಿಯಲ್ಲಿ ಮೆರೆಯುವ
ನಾಡ ನುಡಿಯು ನಾಡನಡೆಯು। ನಾಡಿನಲ್ಲಿ ನಡೆಸುವ
ಕಾಡುತಿರುವ ಕಾಡುಜನರ। ಕೋಡ ತಾನೆ ಉಡಿಯುವ
ನಾಡಮೇಲ್ಮೆ ನೋಡಿಯೊಡಲು। ಪೊಡವಿಯೊಡೆಯನಡಿಯಲಿ
ಬೇಡಿಕೊಂಡು ಪೊಡವಿಗಿಳಿದು। ಒಡವರಿಂಗೆ ಬಡಿಸಲಿ
ಚತುರತನದೆ ಜಾತಿಮತವ। ರೀತಿ ನೀತಿಗಿಳಿಸುವ
ಜಾತಿ ಮತಕೆ ಸೋತುಬಿದ್ದ। ಮಾತೆಯನ್ನು ಎತ್ತುವ
ಜಾತಿ ಬೆಳಿಸಿ ಆತುಕೊಂಡು। ಘಾತಿಸಿರ್ಪ ಜನರನು
ಭೀತಿಬಿಡಿಸಿ ಹೂತುಬಿಟ್ಟು। ಸಾತಿಶಯದೆ ಮೆರೆಯುವ
ನನ್ನ ಮಾತು ನಿನ್ನ ಮಾತು। ಹೊನ್ನ ಮಾತದೆನ್ನದೆ
ಉನ್ನತಾಗ್ರಸಭೆಯು ಮಾತು। ಮನ್ನಿಸೆಲ್ಲ ನಡೆಯುವ
ಕಾವನನ್ನು ಕಾಂಬ ಬಗೆಯು ಕಾಣೆ ಬೇರೆ ತೆರದಲಿ
ನಾಡಸೇವೆಗಾಗಿ ತನುವ। ನೀಡೆ ದೇವ ಕಾಂಬನು
ದೇವರಿಂದ ಬಂದ ನಾವು। ದೇವರಾಗಿ ಮೆರೆಯುವ
ಜೀವಕಂಜಿ ಹೆದರಿ ಹೆದರಿ। ಸಾವ ಜನರ ಕರೆಯುವ
ನಾಡಧರ್ಮ ರೂಢಿಯಲ್ಲಿ। ನಾಡೆ ತಾನೆ ನಡಿಸುವ
ನಾಡದೇವಿ ಬೀಡಿನಲ್ಲಿ। ಕೂಡಿಯಾಡಿ ಮೆರೆಯುವ

---

## ೮. ವಿಜಯ ವಿದ್ಯಾರಣ್ಯ.

(ಕವಿ ಶ್ರೀ. ಬೇಂದ್ರೆಯವರ ಏರಿಳಿತಗಳಿಂದ.)

ವಿಜಯ ವಿದ್ಯಾರಣ್ಯ ನೀನೆಧನ್ಯ ॥
ಮೈಯೆಲ್ಲ ಕಣ್ಣುಳ್ಳ ಮುಂದಾಳು ಬೇಕು ।
ಕುರುಡು ಬಳ್ಳಿಯ ಮೆಳ್ಳನಾಯಕರು ಸಾಕು ॥
ಈಸಗುಂಬಳ ಜೊತೆಯು ಬೇಕು, ಈಸುವರೆ, ।
ಪಾತಾಳಕೊಯ್ಯುವಾ ಕಲ್ಲಸರಸುವರೇ ? ॥
ಯೋಗಿ, ನಿನ್ನೊಲು ನೀನು ! ದೊರೆಯು ನನ್ನ । ವಿಜಯ ವಿದ್ಯಾರಣ್ಯ ನೀನೆ ಧನ್ಯ ॥
ಬೀಜಬಿತ್ತುವರುಂಟು; ಬೆಳೆಸಿಕೊಂಡವರು ।
ಉಂಟು; ಜನರೇನು ಫಲವ ನುಂಡವರು ? ॥
ರಾಷ್ಟ್ರಪ್ರಪಂಚವನು ಗೈದ ಸಂಸಾರಿ। ನಮೋನಮೋ ನಿನಗೆಂಬೆನೂರುಬಾರಿ॥

---

## ೯. ದಶಾವತಾರ.

(ಶ್ರೀ. ಬೇಂದ್ರೆಯವರ ಕರುಳಿನ ವಚನಗಳಿಂದ.)

ನೆಲದ ಮೇಲೆ ಈಸುವುದು, ನೋಡಿದಿರಾ ಮೀನಾವತಾರ!
ಮನುಕುಲೋದ್ಧಾರಕ ನನ್ನ ಕುವರ!
ಬಯಲನ್ನೆಲ್ಲ ಬೆನ್ನಲಿ ಹೊತ್ತಿರುವುದು, ನೋಡಿದಿರಾ ಕೂರ್ಮಾವತಾರ!
ವಂಶಾಧಾರಸ್ತಂಭ ನನ್ನ ಕುವರ!
ಮುಗಿಲನ್ನೆ ಮೊಗದಿಂದೆತ್ತಲು ಹವಣಿಸುವುದು, ನೋಡಿದಿರಾ ವರಾಹಸ್ವಾಮಿ
ಹೂಂಕರಿಸುವ ನನ್ನ ಕುವರ!
ತನ್ನ ತಾಯ ಬಸಿರನ್ನೆ ಬಗಿದು ಅವಳ ಕರುಳ ಮಾಲೆಯನ್ನು! ಧರಿಸುವ
ವಿಚಿತ್ರನರಸಿಂಹಸ್ವಾಮಿ!
ನೋಡಿದಿರಾ ಬಾಲ ಪ್ರಹ್ಲಾದ ಕುವರ!
ತಾಯಿಯ ಮೇಲೆ ಕೈಯೆತ್ತಲು ಬಂದ। ದಿಟ್ಟ ಪರಶುರಾಮನ ಕಂಡಿರಾ!
ಶಾಪಚಾಪ ಸವ್ಯಸಾಚಿ ನನ್ನ ಕುವರ!

ವೈರಾಗಿಗಳಲ್ಲಿ ರಾಗ ಹುಟ್ಟಿಸುವ! ಭೋಗಿಗಳಿಗೆ ತ್ಯಾಗ ಬೋಧಿಸುವ!
ಕಂಡಿರಾ ಸರ್ವೋಸವ ಸುಂದರ ನನ್ನ ಕುವರ!
ತಾಯಿ-ತಂದೆಗಳ ಸೆರೆ ಬಿಡಿಸಿ ಗೀತೆಯ ಹಾಡುವ! ಶ್ರೀಕೃಷ್ಣನ ಕಂಡಿರಾ!
ಲೀಲಾವತಾರಿ ನನ್ನ ಕುವರ!
ಕಂಡಿರಾ ದಿಗಂಬರ ಮೂರ್ತಿ! ಬಾಲ ಬುದ್ಧದೇವ!
ಕೋಲ ಕುದುರೆಯನೇರುವ ಕಲ್ಕಿ! ಮ್ಲೇಂಛ ಮೋಹವಕೊಂದು
ಪ್ರೇಮಧರ್ಮವ ಪ್ರತಿಷ್ಠಾಪಿಸುವ ನನ್ನ ಕುವರ!

# ಅನುಬಂಧ ೨.

## ೧. ಗಿರಿಜಾಕಲ್ಯಾಣ

**ಅ. ಗ್ರಂಥಪರಿಚಯ**:— ಈ ಪದ್ಯಗಳು ಕನ್ನಡ ಭಾಗವತದೊಳಗಿನವು. ಕನ್ನಡ ಭಾಗವತವನ್ನು ರಚಿಸಿದ ಕವಿ, 'ಚಾಟು ವಿಠಲನಾಥ'. ಆತನಿಗೆ ನಿತ್ಯಾತ್ಮಶುಕಯೋಗಿ ಎಂಬ ಬಿರುದು ಇತ್ತು. ೧೫೫೦ರಲ್ಲಿ ಈ ಕಾವ್ಯವು ರಚಿತವಾಯಿತು.

**ಬ. ಶಬ್ದಕೋಶ**:— ೧. ಕೃಷ್ಣ + ಅಜಿನ = (ಕೃಷ್ಣ—ಗಂಡು ಚಿಗರೆಯ) ಚರ್ಮ. ಭಾಳ—ತ್ಸ—ಭಾಲ—ಹಣೆ. ತ್ರಿಪುಂಡ್ರ—ಮೂರು (ಭಸ್ಮದ) ಪಟ್ಟಿ. ನೈಷ್ಠಿಕ—(ನಿಷ್ಠಾ + ಇಕ)—ಬಹಳ ನಿಷ್ಠೆಯುಳ್ಳವ (ಬ್ರಹ್ಮಚಾರಿ) ೨. ಮೃಗ—ಚಿಗರೆ; ವಿಷ್ಟರ—ಪವಿತ್ರವಾದ ಆಸನ. ೩. ವಾಯು—ವ್ಯರ್ಥ. ಧರ್ಮಾರ್ಥಸಂಸ್ಥಿತಿ—ಧರ್ಮ, ಅರ್ಥ ಮೊದಲಾದವುಗಳನ್ನು ಕಾದುಕೊಳ್ಳುವುದು. ಮಡು—ಮಡುವು; ವನಧಿ—ಜಲಧಿ, ಸಮುದ್ರ. ೪. ತನು—ಸೂಕ್ಷ್ಮ + ಮಧ್ಯೆ—ಸೊಂಟವುಳ್ಳವಳು; ಕರುಣಾ + ಬದ್ಧ—

ದಯೆಯಿಂದ ಕಟ್ಟಿದವ. ೫. ಅರ್ಥಿ–ಬಯಕೆ; ತರಳ–ಚಂಚಲ. ೬. ಸಂಕ್ಲೇಶ ಭಾಜನ—ಕಷ್ಟಕ್ಕೀಡು. ೭. ಕೃತ್ತಿ (ಚರ್ಮ) + ವಾಸ (ಸ್)—ಚರ್ಮವೇ ವಸ್ತ್ರವಾಗಿ ಉಳ್ಳವ. ಹೇರಾಳ–ಬಹಳ. ೮. ತಾವು— ಸ್ಥಳ, ಪಾಣಿ + ಗ್ರಹಣ — ಕೈ ಹಿಡಿಯುವದು, ಮದುವೆ. ಗಾರುಡಿತಿ (ಗಾರುಡ + ಇತಿ)— ಮೋಡಿ ಕಾರನ ಹೆಂಗುಸು. ೯. ಅಸಮ ನೇತ್ರ— ವಿಷಮ ಕಣ್ಣುಳ್ಳ. ೧೦. ಸೂರೆ ಮಾರು—ಹಾಳು ಬದುಕು. ೧೧. ಸನೆ—ಸೊರಗು. ೧೪. ಅದ್ದು—ಮುಳುಗು. ೧೬. ವಿಕರ್ಮವಿಪಾಕ—ದುಷ್ಕರ್ಮಪರಿಪಾಕ. ನೆಮ್ಮು—ಆಶ್ರಯಿಸು. ೧೭. ಕೋರವಿಸು--ಕುಕ್ಕು. ತೆರಳಿಕೆ—ಗುಂಪು.

**ಕ. ಟಿಪ್ಪಣಿಗಳು**:—೨. ಕುಶಲೋ...ಸೂಕ್ತಿ—ಕೊನೆಯಲ್ಲಿ ಕ್ಷೇಮ ವನ್ನು ಕೇಳುವ ಹಾಸ್ಯಯುಕ್ತವಾದ ಮಾತು. ೩. ಒಡಲ (ನ್ನು) ವಾಯುದೆ ಕೆಡಿಸುವರೇ? ಪರ್ವತದ ಒಡೆಯ--ಹಿಮವಂತ. ೫. ಸಖಿಗೆ ಎಂದಡೆ ಆಕೆ (ಸಖಿಯು) ಎಂದಳು. ೬. ಬಾಯಿ ಬಸಿರುಗಳು ತಣಿಯುವು; ತಿನ್ನುವದಕ್ಕೆ ಆತನಲ್ಲಿ ಏನೂ ದೊರೆಯುವದಿಲ್ಲ; ಆತನು ತಿರುಕ; ಮನೆ–ಮಸಣ; ಉರೊ ಳಗೆ ಉಂಟೇ? (ಮನೆ); ಎಲ್ಲರ ಮನಕೆ ಹರುಷವನು ಇತ್ತೆ--ಎಲ್ಲರಿಗೂ ಸಂತೋಷವನ್ನು ಮಾಡಿದೆ. (ವಿರುದ್ಧಾರ್ಥದಲ್ಲಿ); ದುಃಖ ಮಾಡಿದೆ. ೭. ಅಬಲೆಯರಿಂಗೆ (ಅಬಲೆಯರ) ಚಿತ್ತವು ಪಾತ್ರದಲಿ (ಯೋಗ್ಯಸ್ಥಳದಲ್ಲಿ) ನೆರೆವುದು; ಅದು ಈಗ (ನಿನ್ನನ್ನು ನೋಡಿದರೆ) ಹುಸಿ ಆಯ್ತು. ಹೆತ್ತವರು... ಚಿತ್ತರು. ತಾಯಿತಂದೆಗಳು ಸ್ವಸ್ಥ ಮನಸ್ಸಿನಿಂದ ಕುಳಿತುಬಿಟ್ಟರು. ತಾ ಸಹಿತ ತನ್ನೆದೆ ಹೊತ್ತುತಿದೆ–ನನಗೆ ಸಹ (ನನ್ನ) ಮನಸ್ಸು ಕಳವಳಗೊಳ್ಳುತ್ತಿದೆ. ೮, ಮೊದಲ ಪಾಣಿಗ್ರಹಣ ಬಯಲು.—ಮೊದಲ ಹೆಂಡತಿ (ಸತಿ) ಸತ್ತು ಹೋದುದರಿಂದ ಬಯಲಾಯಿತು. ನೀನೂ ಬದುಕಲಾರೆ, ಒಂದುವೇಳೆ ಜೀವಿಸಿದರೆ ಹಾವುಗಾರನ ಹೆಂಡತಿಯಾದ ನೀನು ಗಾರುಡಿತಿ (ಮೋಡಿಕಾತಿ) ಯಾಗುವೆ. ೧೯. ಸೂರೆಮಾರು ಇದನು (ಈ ಹಾಳು ಬಾಳನ್ನು) ಆರು ಸಾಧಿಸ ಬೇಕು (ಪ್ರಯತ್ನದಿಂದ) ಪಡೆಯಬೇಕು? ೧೧. ಅವಯವದ...ಇಲ್ಲ. ಇಂತಹ ಸೌಂದರ್ಯವು ಎಲ್ಲಿಯೂ ಇಲ್ಲ. ೧೨. ಇಂದ್ರ, ದಿಕ್ಪಾಲಕರು ನಿನ್ನನ್ನು ಮೆಚ್ಚುವರು. ೧೫. ನಿನ್ನ ವಚನಗಳನ್ನು ನನ್ನ ಕಿವಿಗಳು ಓಕರಿಸು ತಿವೆ (ಹೇಸುತ್ತಿವೆ); ನೀನೇಕೆ? ಅಮಳ ಶೈವವು ಏಕೆ?— ನೀನೆಲ್ಲಿ? ಶೈವವು

(ಶಿವಧರ್ಮಾರ್ಣವ) ಎಲ್ಲಿ? ೧೭. ಎಡಬಲಗಳಲ್ಲಿ (ದೇವತೆಗಳ) ಸಂದಣಿಯುಳ್ಳ, ಬ್ರಹ್ಮ ದೇವೇಂದ್ರರಿಗೆ (ಮಾತ್ರ) ಬೀದಿಯುಳ್ಳ ತೇಜಸ್ಸಿನ ರಾಶಿಯುಳ್ಳ ಶಿವನನ್ನು ಕಂಡಳು.

## ಡ. ಪ್ರಶ್ನೆಗಳು:—

೧. ಪಾರ್ವತಿಯು ಬಳಿಗೆ ಬಂದ ಕಪಟ ವಿಪ್ರನ ವೇಷವನ್ನು ವರ್ಣಿಸಿರಿ.

೨. ಕಪಟವಿಪ್ರನು ಪಾರ್ವತಿಗೆ ಕೇಳಿದ ಪ್ರಶ್ನೆಗಳನ್ನು ಹೇಳಿರಿ.

೩. ಕಪಟವಿಪ್ರನು ಶಿವನ ಯಾವ ಯಾವ ದೋಷಗಳನ್ನು ಹೇಳಿದನು?

೪. ವರ, ಕನ್ಯೆ ಇವರ ಅನನುರೂಪತೆಯನ್ನು ಕಪಟವಿಪ್ರನು ಹೇಗೆ ಹೇಗೆ ತೋರಿಸಿದನು?

೫. ೧೧ನೆಯ ಪದ್ಯವನ್ನು ಓದಿರಿ; ಕೆಳಗಿನ ಪ್ರಶ್ನೆಗಳ ಉತ್ತರಗಳನ್ನು ಹೇಳಿರಿ.

ಅ. ಭವನ...ಭುವನದಲಿ ನಾಕಾಣೆನು, ಈ ಮಾತಿನಿಂದ ಪಾರ್ವತಿಗೆ ಯಾವ ಮಾತನ್ನು ಹೇಳಿದಂತಾಯಿತು?

ಬ. "ನಿನ್ನನೊಬ್ಬಳ ಕಂಡೆನು" ಈ ಮಾತಿನಿಂದ ಪಾರ್ವತಿಯು ವಿಷಯವಾಗಿ ಆತನು ಏನು ಹೇಳಿದಂತಾಯಿತು?

ಕ. "ಅವಯವದ....ನವತಿಯಿಲ್ಲ' ಈ ಮಾತಿನ ಅರ್ಥವನ್ನು ಸ್ಪಷ್ಟ ಮಾಡಿರಿ.

ಡ. (ಪಾರ್ವತಿಯಲ್ಲಿ) ಒಂದೇ ಕೊರತೆ; ಅದು ಯಾವದು?

೬. ಕಪಟ ವಿಪ್ರನಿಗೆ ಪಾರ್ವತಿಯು ಕೊಟ್ಟ ಉತ್ತರಗಳು ಯಾವವು? ಅವುಗಳಲ್ಲಿ (ಶಿವನನ್ನು ಮದುವೆಯಾಗುವಲ್ಲಿ) ಪಾರ್ವತಿಯು ಯಾವ ವಿಚಾರವು ತೋರುವದು? ಯಾವ ಮಾತಿನಿಂದ? (೧೫).

೭. ಸಿಟ್ಟಾದ ಪಾರ್ವತಿಯಲ್ಲಿ ಯಾವ ಯಾವ ಶಾರೀರಿಕ ವಿಕಾರಗಳು ಕಾಣಿಸಿದುವು?

೮. ಅಬಲೆ (ಪಾರ್ವತಿ) ಕಂಡ ಶಿವನ ವೈಭವವನ್ನು ಹೇಳಿರಿ.

೯. ಹಾವು **ಕೈಯಲಿ** ಮೈಯನೆಲ್ಲವ ನಾವರಿಕೊಂಡಿಹವು; **ಅಬಲೆಯರಿಗೆ** ಚಿತ್ತವು ಪಾತ್ರದಲಿ ನೆರೆವುದು; ಇಲ್ಲಿಯ ವ್ಯಾಕರಣ ವಿಶೇಷಗಳೇನು?

## ೨. ದಮಯಂತಿಯು ನಳರಾಜನ ಮನೆಗೆ ಹೋದುದು.

**ಅ. ಗ್ರಂಥಪರಿಚಯ**—ಈ ಪದ್ಯಗಳು ಧಾರವಾಡ ಜಿಲ್ಲೆಯ 'ಕಾಗಿನೆಲ್ಲಿ' ಎಂಬ ಗ್ರಾಮದ 'ಕನಕದಾಸ' ಎಂಬ ಕವಿಯ ನಳಚರಿತ್ರೆಯ ಒಂದು ಭಾಗದೊಳಗಿನವು. ಈತನು ಬೇಡರ ಜಾತಿಯವ; ವಿಷ್ಣುಭಕ್ತ. ೧೬ ನೆಯ ಶತಮಾನದಲ್ಲಿದ್ದನು. ಇದು ಸುಲಭಶೈಲಿಯ ಕಾವ್ಯವು.

**ಬ. ಶಬ್ದಕೋಶ**—೧. ಲೋಲ–ಚಂಚಲ. ಪಯಣ–ತ್ಸ-ಪ್ರಯಾಣ. ನಿಷಧ–ನಳರಾಜನ ದೇಶ. ೨. ಸುಗುಣೆ–ಒಳ್ಳೆಯ ಗುಣವುಳ್ಳ ಹೆಂಗುಸು; ಸಿಂಧ–ದೊಡ್ಡ ಛತ್ರ, ಚಾಮರ. ೩. ಬಿಗುಹು–ಬಿಗಿಯುವುದು; ರೆಂಚೆ–ಝೂಲು (ಥಡಿ); ಸತ್ತಿಗೆ—ತ್ಸ—ಛತ್ರಿಕಾ, ಕೊಡೆ; ಪಲ್ಲೈಸು—ವಿಸ್ತರಿಸು; ಚೌರಿ–ಚಾಮರ. ೪. ಅಂದಣ—ಮೇಣೆ, ಪಲ್ಲಕ್ಕಿ; ತೇಜಿ—ಕುದುರೆ; ವಿಡಾಯ—ಶೋಭೆ. ೫. ಕಂಧರ—ಕುತ್ತಿಗೆ. ೬. ವರೂಥ—ರಥ. ೭. ನೆಲೆ + ಮಾಡ—ಅಂತಸ್ತಿನ ಮನೆ; ಕರುವಾಡ—ಎತ್ತರವಾದ ಮನೆ; ಸೌಧ—ದೊಡ್ಡಮನೆ; ಜಾಲಂದ್ರ–ಕಿಂಡಿ. ೮. ಅತುಳ—ನ + ತುಲಾ (=ಸಾಮ್ಯ) ಅಸದೃಶ, ಬಹಳ; ಭೋಗಿ (–ಸರ್ಪ) + ಶಯನ--ಶೇಷ; 'ಶೇಷ' ಸರ್ಪನಮೇಲೆ ಮಲಗಿದವ, ವಿಷ್ಣು; ನಿಕುರಂಬ- ಸಮುದಾಯ; ಅಕ್ಷತೆ + ತಳಿ (–ಎರಚು ಹಾಕು).

**ಕ. ಟಿಪ್ಪಣಿಗಳು**—೨. ಸುಗುಣೆಯರು—ಹಿಂದೆ ದಾಸಿಯರನ್ನು ಮಗಳೊಡನೆ ಕಳುಹುವ ವಾಡಿಕೆ ಇತ್ತು. ೪. ರಾಯರ ಮಧ್ಯದಲಿ–ಮಾಂಡಲಿಕರು, ಸೇನೆ ಮುಂತಾದ ವೈಭವದೊಡನೆ ಹೊರಟಳು.

**ಡ. ಪ್ರಶ್ನೆಗಳು**--

೧. ದಮಯಂತಿಯ ಪತಿಗೃಹ ಪ್ರಯಾಣದ ವೈಭವವನ್ನು ವರ್ಣಿಸಿರಿ.
೨. ಆಕೆಗೆ ಯಾವ ಬಳುವಳಿಗಳು ದೊರೆತಿರಬಹುದು?
೩. ದಮಯಂತಿಯ ಆಗಮನದಲ್ಲಿ ಪೌರನಾರಿಯರ ಸಂಭ್ರಮವನ್ನು ಹೇಳಿರಿ.
೪. ತೆಗೆಸಿದನು ಭಂಡಾರದಲಿ ಬಗೆ ಬಗೆಯ ವಸ್ತುವನು; ಪಯಣದಲಿ ತೇರುಗಳ ಶೃಂಗರಿಸಿದನು, ಈ ವಾಕ್ಯಗಳಲ್ಲಿಯ ವ್ಯಾಕರಣ ವಿಶೇಷಗಳೇನು?

## ೩. ಕೊಳೂರ ಕೊಡಗೂಸು.

**ಅ. ಗ್ರಂಥಪರಿಚಯ**—ಇದು ೧೬ನೆಯ ಶತಮಾನದ 'ಭೀಮಕವಿ' ಎಂಬ ವೀರಶೈವಕವಿಯ ಬಸವಪುರಾಣದೊಳಗಿನ ಭಾಗವು. ಬಸವಪುರಾಣವು ಕಾವ್ಯವೆಂದೂ, ಧರ್ಮಪುರಾಣವೆಂದೂ ಹೆಸರಾಗಿದೆ.

**ಬ. ಶಬ್ದಕೋಶ**—೧. ಚೆಲುವಾಲು—ಸಿಹಿಹಾಲು, ತಾಜಾಹಾಲು; ಆರೋಗಿಸು—ಉಣ್ಣು; ೨. ಸೀಯಿತ್ತೋ—ಹೊತ್ತಿತೋ (ಹೊಗೆವಾಸನೆಯಾಯಿತೋ?) ೩. ಒಕ್ಕುಡಿತೆ—ಒಂದು ಸೆರೆ. ೪. ಬೋನ—ತ್ಸ—ಭೋಜನ—ಅನ್ನ. ನೆಲುಹು—ನೆಲುವು. ಮಡಗು—ಇಡು; ೫. ಷೋಡಶ—ಹದಿನಾರು (ಜನ). ಗಣಾರ್ಚನೆ—ಗಣಂಗಳ ಪೂಜೆ; ಪರ್ಬ—ಹಬ್ಬ. ೬. ಶಿವಸೋದರಿ—ಧರ್ಮಭಗಿನಿ. ಮಹಮನೆ—ದೊಡ್ಡ ಮನೆ ೭. ತಿಂಥಿಣಿ—ಗುಂಪು. ಒಳಯಿಂಕೆ—ಒಳಗೆ. ಅವಲು—ಅವಲಕ್ಕಿ. ಹಾರಿ—ಪಾರಿ—ಹುಡಿಗಿ; ೮. ಚೆಗುಳಿ ಮುಂತಾದವು ತಿನ್ನುವ ಪದಾರ್ಥಗಳು. ಸಿಗಳ ಮುಂತಾದುವು ಆಭರಣಗಳು. ಕಿರಿಗೆ ರವಕೆ (ಸೀರೆ ಕುಪ್ಪಸ) ವಸ್ತ್ರಗಳು. ೧೦. ಹೊಡಮಡು—ನಮಿಸು, ಬಾಗು; ಅಳುಗು—ಅಳುವಳು; ಗುಂಪಿಸುಗು—ಸಂಕೋಚವಾಗುವಳು; ಉಡುಗುವಳು; ಮೃಡ—ಶಿವ; ಬಿದಿಗು—ಹರಡುವಳು, ತಾಟಿಸು—ಅಪ್ಪಳಿಸು. ಅಸಿಯ—ತೆಳುವಾದ + ಬಸಿರು—ಹೊಟ್ಟೆ.

**ಕ. ಟಿಪ್ಪಣಿಗಳು**—

೧. ತರಲ್ಕಾರಕ್ಕೆ ನೋಡಿದರೋ? ತರುವಾಗ (ಆರ್ + ಅಕ್ಕೆ) ಯಾರಾದರೂ ನೋಡಿದರೋ? ೨. ಪಾಲಿಂಗೆ ಮನವನು + ಅನು + ಇಟ್ಟೆನೋ? ಹಾಲಿಗೆ ನಾನು ಆಶೆಯಿಟ್ಟೆನೋ? ತುಪ್ಪವನು ಅಟ್ಟೆನು ಎಂದೋ—ಸಂಗಡ ತುಪ್ಪವನ್ನು ಕಳುಹಿಲ್ಲವೆಂದೇ? ೩. ಓಕರಿಸುತ ಒಕ್ಕುಡಿತೆ ಕೊಂಡರೆ ಸಾಕು. ನಾವು ಉಂಬೊಡೆ ಅಟ್ಟ—ನಾವು ಉಣ್ಣುವದಕ್ಕಾಗಿ ಅಡಿಗೆ ಮಾಡಿದ. ೪. ನೆಲುಹಿನ ಗಡಿಗೆಯಲಿ ತುಪ್ಪವಿದೆ. ೬. ಹೆಸರ ಹುಗ್ಗಿ ಅದಂ ನಿರೂಪಿಸು (ಹೇಳು.) ೭. ಹಾಲಿನೊಳಗೆ ಹಾಕಲು ಅವಲಕ್ಕಿಯ ತರಲೇ?

**ಡ. ಪ್ರಶ್ನೆಗಳು—**

೧. ಕುಡಿವ ಹಾಲಿನಲ್ಲಿರಬಹುದಾದ ಯಾವ ಯಾವ ಕೊರತೆಗಳನ್ನು ಕೊಡಗೂಸು ಸಂಶಯಗೊಳ್ಳುವಳು?

೨. ಕಲ್ಲಿನಾಥ ದೇವರನ್ನು ಕೊಡಗೂಸು ರಮಯಿಸುವ ಮಾತುಗಳನ್ನು ಹೇಳಿರಿ.

೩. ಕೊಡಗೂಸು ದೇವರಿದಿರಿಗೆ ತೋರಿಸಿದ ಅಕ್ಕಸಗಳನ್ನು ಹೇಳಿರಿ.

೪. ತುಪ್ಪವನು ಅಟ್ಟೆನು ಎಂದು; ಹಾಲು ಕಾಯುವ್ರೋ; ಹಾಲು ಕಡುಬಿಸಿಯಾದವ್ರೊ; ಈ ವಾಕ್ಯಗಳಲ್ಲಿ ಕಂಡುಬರುವ ವ್ಯಾಕರಣ ನಿಯಮಗಳ ಅಪವಾದಗಳು ಯಾವವು?

---

## ೪. ದ್ರೌಪದೀ ಸ್ವಯಂವರ.

**ಅ. ಗ್ರಂಥಪರಿಚಯ**—ಈ ಪದ್ಯಗಳು. ಕರ್ನಾಟಕ ಭಾಷಾಭಾಮಿನೀಪತಿ ಎಂದು ಕವಿಗಳು ಹೊಗಳಿದ, ಗದುಗಿನ ನೆರೆಯಲ್ಲಿರುವ ಕೋಳಿವಾಡದ ದೇಶಸ್ಥ ಸ್ಮಾರ್ತ ಬ್ರಾಹ್ಮಣಕವಿಯಾದ ನಾರಾಯಣಗೌಡನಿಂದ ರಚಿತವಾದ ಕನ್ನಡ ಮಹಾಭಾರತದ ಉದ್ಯೋಗಪರ್ವದೊಳಗಿನವು. ಈತನು ೧೫ನೆಯ ಶತಮಾನದವನು. ಒಳ್ಳೆಯ ರಸವತ್ತಾದ ಓಜಸ್ವಿಭಾಷೆಯ ಕಾವ್ಯವೆಂದು ಸಮಗ್ರಕರ್ನಾಟಕದಲ್ಲಿ ಕನ್ನಡಿಗರು ಈ ಭಾರತವನ್ನು ಮೆಚ್ಚಿಗೆಯಿಂದ ಓದುತ್ತಿರುವರು. ತನ್ನ ಇಷ್ಟದೇವತೆಯಾದ ಗದುಗಿನ ವೀರನಾರಾಯಣನ ಅಂಕಿತದಿಂದ ಈ ಕಾವ್ಯವನ್ನು ರಚಿಸಿದ್ದಾನೆ.

**ಬ. ಶಬ್ದಕೋಶ—** ಬಿಲು + ಪಿಡಿದು; ಕ್ರಿ. ಸ. ಯಂತ್ರಕೆ—ಮತ್ಸ್ಯಯಂತ್ರಕ್ಕೆ. ಕೋಲು—ಬಾಣ. ಕೇವಣಿಸು—ತೊಡು. ೩. ವಚನಶೂರ—ಮಾತಿನಲ್ಲಿ ಶೂರ. ೪. ಭರತ—ನಾಟ್ಯಶಾಸ್ತ್ರ, (ಭರತಮುನಿ ಕೃತ) ಗಜ ತುರಗ ಲಕ್ಷಣ—ಆನೆ ಕುದುರೆಗಳ ಲಕ್ಷಣ ಹೇಳುವ ಶಾಸ್ತ್ರ ೫. ಕೆಲವು ಪಕ್ವಾನ್ನಗಳ ಹೆಸರು ಹೇಳಿವೆ. ಸೂಪ—ತೊವೆ; ದಂಶಕ—ಬಾಡಿಸಿಕೊಳ್ಳುವ ಪದಾರ್ಥ. ೬. ದರ್ಭೆ—ಒಂದು ತರದ (ಪವಿತ್ರವಾದ) ಹುಲ್ಲು; ಗೂಡು—ಸಿವುಡು. ೭. ಉಪಾಧ್ಯ—ತ್ಸ—ಉಪಾಧ್ಯಾಯ—ಬ್ರಾಹ್ಮಣ. ಅಂಘವಣೆ—ಬಯಕೆ; ವೈನತೇಯ—ವಿನತಾ+ಇಯ—ವಿನತೆಯ ಮಗ, ಗರುಡ; ಬೆಗಡಿಸು—ಅಂಜಿಸು,

ಹಾವಡಿಗ—ಹಾವು + ಆಡಿಗ—ಹಾವಾಡಿಗ. ೮. ಶ್ರೋತ್ರಿಯ—ಕರ್ಮನಿಷ್ಠ ಬ್ರಾಹ್ಮಣ. ಅನ್ವಯ ವಿದ್ಯೆ—ವಂಶದ ವಿದ್ಯೆ. ೯. ಭದ್ರ—ಭವ್ಯ. ಅಳುಕು—ಅಂಜು; ಭಾಗ್ಯಮುಖಿ—ಸುದೈವವು ಮುಖದಲ್ಲಿ ತೋರುವವ. ಬ. ವ್ರೀ. ೧೦. ಸಮಿಧೆ—ಹೋಮದ ಕಟ್ಟಿಗೆ; ಆರಳಿ, ಅತ್ತಿ ಮುಂ. ತಿಲ—ಎಳ್ಳು. ಔಪಾಸನ—ಅಗ್ನಿ ಕಾರ್ಯ; ಹೋಮ. ಬಣಗು—ಜಂಭ. ನೆನಹು—ನೆನೆಸಿದ್ದು;ಕಾರ್ಯ. ೧೧. ನಿಬ್ಬರ—ತ್ಸ—ನಿರ್ಭರ, ಬಲವಾದ. ಕಟು—ಕಹಿ. ಉಕ್ತಿ + ವಿನ್ಯಾಸ—ಮಾತಿನ ರಚನೆ; ಮದದ್ವಿಪ—ಮದದಾನೆ; ಗರುವಾಯಿ—ಗಾಂಭೀರ್ಯ ೧೨. ಉಗಿ—ಜಗ್ಗು; ಲಾಗು—ಲಾಘವ, ಹಗರುತನ. ಕಾರ್ಮುಕ+ಯೋಗ—ಬಿಲ್ಲಿನ ಶಾಸ್ತ್ರ.=ಕೋದಂಡ + ಆಗಮ. ತ್ರಿಪುರ + ಅರಿ—ತ್ರಿಪುರಾಸುರ ವೈರಿ, ಶಿವ. ಸಂದೋಹ—ಸಮೂಹ. ೧೩. ನಿದಾ೯ಯ—ದಾಕ್ಷಿಣ್ಯವಿಲ್ಲದೆ. ಯುವತಿ ಜನ ಜಲಧಿ—ಹೆಂಗಸರ ಗುಂಪೆಂಬ ಸಮುದ್ರ. ಕ. ಧಾ. ೧೪. ಮಸಗು—ಆರ್ಭಟಿಸು. ಕೊರೆ—ಸಮೀಪ. ತೋಟಿ—ಜಗಳ. ಅಪಾಂಗ—ಕಡೆಗಣ್ಣ ನೋಟ. ತಣಿ—ತೃಪ್ತಿಹೊಂದು. ಪುಳಕ + ಜಳ—ರೋಮಾಂಚವೆಂಬ ನೀರು.

**ಕ. ಟಿಪ್ಪಣಿಗಳು**— ೪. ಪೂರ್ವ ಕಾಲದಲ್ಲಿ ಕಲಿಯುತ್ತಿದ್ದ ಕೆಲವು ವಿದ್ಯೆಗಳ ಹೆಸರು ಹೇಳಿವೆ. ೭. ವೈನತೇಯ...ಹಾವಡಿಗರಿಗೆ ಸದರವೆ?—ಗರುಡನನ್ನು ಅಂಜಿಸಿದ ವಿಷವು ಹಾವಾಡಿಗರಿಗೆ ಸಾಧ್ಯವೇ? ೮. ಭಗೀರಥ ಯತ್ನ—ಭಗೀರಥ ರಾಜನು ಸ್ವರ್ಗಲೋಕದಿಂದ ಭೂಮಿಗೆ ಗಂಗೆಯನ್ನು ತಂದನು. ಬಹು ದೊಡ್ಡ ಪ್ರಯತ್ನವದು. ೧೪. ಹರುಷ ಲಜ್ಜೆಯುಲಿ ಒಳ ತೋಟಿ ಮಸಗಿತು—ಹರುಷವು ಮಾಲೆ ಹಾಕುವದಕ್ಕೆ ಅವಸರಪಡಿಸುತ್ತಿತ್ತು, ಲಜ್ಜೆಯು ಹಿಂದೆ ಎಳೆಯುತ್ತಿತ್ತು; ಈ ಮೇರೆಗೆ ಅವಳ ಮನದಲ್ಲಿ ಹರುಷ ಲಜ್ಜೆಗಳ ಒಳಜಗಳವು ನಡೆದಿತ್ತು.

**ಡ. ಪ್ರಶ್ನೆಗಳು**—

೧. "ಇದರಿಂದ ಬಹ ದುಷ್ಕೀರ್ತಿ ಬರಲಿ;" ಆದಾವ ದುಷ್ಕೀರ್ತಿ? ಅದು ಎತರಿಂದ ಬರುವದಂತೆ?

೨. ಪೂರ್ವಕಾಲದಲ್ಲಿ ಬ್ರಾಹ್ಮಣರಲ್ಲಿ ಯಾವ ಯಾವ ವಿದ್ಯೆಗಳನ್ನು ಕಲಿಯುವ ವಾಡಿಕೆಯಿತ್ತು?

೩. ಬಿಲ್ಲನ್ನೇರಿಸಲು ಎದ್ದ ಅರ್ಜುನನನ್ನು ಕುರಿತು ಆಡಿದ ಬ್ರಾಹ್ಮಣರ, ರಾಜರ

ಅಪಹಾಸದ ನುಡಿಗಳನ್ನು ಹೇಳಿರಿ. ಬಿಲ್ಲನ್ನೇರಿಸಿದ ತರುವಾಯ ಅವರಲ್ಲುಂಟಾದ ಭಾವಗಳನ್ನು ಹೇಳಿರಿ.

೪. "ಒಳತೋಟಿ ಮಸಗಿತು ಹರುಷಲಜ್ಜೆಯಲಿ" ಹರುಷ, ಲಜ್ಜೆ ಏಕೆ ಉಂಟಾದುವು? ಅವುಗಳಲ್ಲಿ 'ತೋಟಿ' ಎಂದರೇನು? ಅದು ಏಕೆ ಉಂಟಾಯಿತು? ಅದರಲ್ಲಿ ಯಾವುದು ಜಯವನ್ನು ಪಡೆಯಿತು?

೮. ಭಾಗ್ಯಮುಖಿ, ಬಣಗು ವಿಪ್ರ ಇವುಗಳ ವಿಗ್ರಹಗಳನ್ನು ಹೇಳಿರಿ.

---

## ೫. ಚೆನ್ನಬಸವಣ್ಣನ ಬಾಲ್ಯ.

**ಅ. ಗ್ರಂಥಪರಿಚಯ**— ಈ ಪದ್ಯಗಳು ಚೆನ್ನಬಸವಪುರಾಣದೊಳಗಿನವು; ಚೆನ್ನಬಸವಣ್ಣನ ಬಾಲ್ಯವನ್ನು ವರ್ಣಿಸುವವು. ೧೬ನೆಯ ಶತಕದ ಕೊನೆಯಲ್ಲಿದ್ದ ವೀರಶೈವ ಕವಿ ವಿರೂಪಾಕ್ಷಪಂಡಿತನು ಈ ಪುರಾಣವನ್ನು ಬರೆದನು. ಈತನ ಗುರು ವಿಜಯನಗರದ ಹಿರಿಯಮಠದ ಸಿದ್ಧವೀರೇಶಸ್ವಾಮಿ.

**ಬ. ಶಬ್ದಕೋಶ**— ೧. ಪೊರೆ–ಸಮೀಪ; ನೆರೆದ + ತಿಂಗಳ್–ಪೂರ್ಣಚಂದ್ರ ಕಮಲ + ಆಕರ(–ಖನಿ)–ಸರೋವರ; ೨. ಶೈವಕಳೆ–ಶೈವ ತೇಜಸ್ಸು. ತತ್ತ್ವಸಂಪನ್ನತೆ–ತತ್ತ್ವಜ್ಞಾನಪೂರ್ಣತೆ; ಪವಾಡ–ಅಮಾನುಷಕೃತ್ಯ. ೩. ಷಣ್ಮುಖಜನಿತ ಸನ್ಮೂರ್ತಿ–ಷಣ್ಮುಖನಿಂದ ಉತ್ಪನ್ನವಾದ ಆಕಾರವುಳ್ಳವ; ಷಣ್ಮುಖನ ಅವತಾರವೆನಿಸಿದವ. ಆನಂದ....ಚಂದ್ರ–ಆನಂದಸಾಗರವನ್ನು ಉಕ್ಕೇರಿಸುವಲ್ಲಿ ಪೂರ್ಣಚಂದ್ರ. ಬೈತ್ರ – ತ್ಸ – ವಹಿತ್ರ – ತೆಪ್ಪ. ೫. ನೆವ–ನಿಮಿತ್ತ. ೬. ಮಾಗಾಯ್–ಒಂದು ಆಭರಣ. ಎಕ್ಕಸರ–ಏಕಾವಳಿ; ಸೋಗಿಲ್–ಉಡಿ, ನೆರಗು; ೭. ನೊಸಲ + ಕಣ್ + ಅವ–ಶಿವ. ಫಣಿ (ಹಾವು) + ಕುಂಡಲ–ಕರ್ಣಾಭರಣವಾಗಿ ಉಳ್ಳವ, ಶಿವ. ಪೊನ್ + ಸರಿಗೆ–ಬಂಗಾರದ ಕಡ್ಡಿ, ತಂತಿ; ಸಸಿ (–ತ್ಸ–ಶಶಿನ್) + ತಲೆಯ–ಚಂದ್ರನು ತಲೆಯಲ್ಲಿದ್ದವ, ಶಿವ. ಎಳ + ಪೆರೆ–ಬಾಲಚಂದ್ರ. ೯. ಪರವಾದಿ–ತಾನು ಹೇಳಿದ್ದಕ್ಕೆ ವಿರುದ್ಧವಾಗಿ ಹೇಳುವವ; ಮುಕ್ತಿಬಾಲೆ–ಮುಕ್ತಿಯೆಂಬ ಹುಡುಗಿ; ೧೧. ನಾಯಕರತ್ನ–ಹಾರದ ನಡುವಿನ ದೊಡ್ಡರತ್ನ. ಬಿಸು + ಕದಿರ್–ಬಿಸಿಯಾದ ಕಿರಣ.

**ಕ. ಟಿಪ್ಪಣಿಗಳು:**— ೧. ಮೂರು ಉಪಮೆಗಳು. ಮೂರು ರೂಪಕಗಳು. ಚೆನ್ನಬಸವಣ್ಣನೆಂಬೀನಾಮವೇ—ಬಸವಣ್ಣನಿಗಿಂತ ಚೆನ್ನ (—ಚೆನ್ನಾಗಿ ತೋರುವವ.) ೩. ಶರಣಗಣ...ಬೈತ್ರ—ಶರಣರು ಭವಸಾಗರವ ದಾಟುವ ದಕ್ಕೆ ಈತನು ತೆಪ್ಪ; ದಾಟಿಸುವವ. ೯. ತೋಳಾಟ, ಹೊನ್ನತಾಗುಬ್ಬಿ ಯಾಟ ಇವು ಶಿಶುಗಳ ಆಟಗಳು. ತೋಳಾಟದಲ್ಲಿ ವಿರುದ್ಧ ವಾದಿಗಳ ಬಾಯ ಮೇಲೆ ಹೊಡೆವನೋ ಎಂಬಂತೆಯೂ 'ತಾತಾ ಗುಬ್ಬಿ' ಆಡುವಾಗ ಮುಕ್ತ್ಯಂಗನೆಯನ್ನು ಕರೆವನೋ ಎಂಬಂತೆಯೂ ಕಂಡಿತು. ಮುಂದೆ ಈತನು ಪ್ರತಿವಾದಿಗಳನ್ನು ಜಯಿಸುವನು; ಮೋಕ್ಷವನ್ನು ಪಡೆಯುವನು ಎಂದು ಸೂಚಿತವಾಗುತ್ತಿತ್ತು.

**ಡ. ಪ್ರಶ್ನಗಳು:**—

೧. ಚೆನ್ನಬಸವಣ್ಣ ಎಂಬ ಹೆಸರು ಹೇಗೆ ಅನ್ವರ್ಥಕವಾಗುವುದಂತೆ?

೨. ಚೆನ್ನಬಸವಣ್ಣನ ಬಾಲಲೀಲೆಗಳನ್ನು ಹೇಳಿರಿ.

೩. ಚೆನ್ನಬಸವಣ್ಣನು ಶಿವನ ಸುತನು ಎಂಬುದನ್ನು ಯಾವ ಯಾವ ಆಭರಣ ಗಳು (ಪತೇತರಂತೆ) ಕಂಡು ಸೂಚಿಸುತ್ತಿದ್ದವು?

೪. ಚೆನ್ನಬಸವಣ್ಣನ ಮುತ್ತಿನ ಕಂಠಮಾಲೆಯನ್ನು ಕವಿ ಹೇಗೆ ವರ್ಣಿಸಿ ರುವನು?

೫. ಈ ಪದ್ಯಗಳ ವೃತ್ತಲಕ್ಷಣವನ್ನು ಹೇಳಿರಿ.

೬. ....ಅಂತೆ ಕಜ್ಜಳಂಬೊರೆದು ಕಂಗೊಳಿಪ ಮುಖಂಗಾಣುತೆ ಇದು.. ಎಂದು ತಾರಾಂಗನೆಯರ್ ಒಲಿದು ಬಂದು ತತ್ಸಮೀಪದೊಳ್ ನೆಲಸಿ ದರೋ ಎಂದೆನಲ್ಕೆ..ಎನೆದುದು ಇಲ್ಲಿ ಬಿಟ್ಟ ಪದಗಳನ್ನು ಸೇರಿಸಿರಿ.

---

## ೬. ಉತ್ತರಕುಮಾರ,— ಅಂತಃಪುರದಲ್ಲಿ.

**ಅ. ಗ್ರಂಥಪರಿಚಯ**— ೪ನೆಯ ಪಾಠವನ್ನು ನೋಡಿರಿ.

**ಬ. ಶಬ್ದಕೋಶ**— ೧. ಕುಹಕ—ಕಪಟ; ಸಹಸ—ಸಾಹಸ. ತುರು—ಆಕಳು, ನಿರ್ವಹಿಸು—ನಿತ್ತರಿಸು, ಸಾಗಿಸು. ೨. ಕಡಗು—ರೇಗು; ತೊಡೆ—ಅಳಿಸು; ೩. ಅಳ್ಕು—ಮುಳುಗಿಸು; ೪. ಅಲುಗು—ಅಲ್ಲಾಡಿಸು; ಕೇಸರಿ—ಸಿಂಹ. ಬವರ—ಕಾಳಗ. ೮. ಉಡುಹ—ಒಂಟಿಗ. ೧೦. ಗುರುಸೂನು—ಗುರುವಾದ

ದ್ರೋಣನ ಮಗ, ಅಶ್ವತ್ಥಾಮ. ೧೧. ರಂಜಕ–ರಂಜನೆಮಾಡುವವ; ಒಪ್ಪ ವಂತೆ ಮಾಡುವವ. ಕಾಪಳ–ಕತ್ತಲೆ. ಕಂ + ಜ- ಜಲಜ;

**ಕ. ಟಿಪ್ಪಣಿಗಳು**— ೪. ತನ್ನೊಡನೆ ಬವರವನ್ನು ತೊಡಗುವುದೆಂದರೆ ಜವನ ಮೀಸೆಯು ಮುರಿಯುವುದು ಮುಂತಾದ್ದರಂತೆ. ೫. ಕೆಲಬರು ಹಾರುವರು–ದ್ರೋಣ, ಅಶ್ವತ್ಥಾಮ ಮುಂ. ಅಂತಕನ ನೆರೆಯೂರವರು–ತೀರ ಮುದುಕರು; ಭೀಷ್ಮ. ಅಧಮ ಕುಲದವರು–ಕರ್ಣ. ೧೧. ಅಹಿತರನು ನಾಕದ ಕಂಜ ವದನೆಯರು ಅಪ್ಪುವೊಲು–ತನ್ನಿಂದ ವೈರಿಗಳು ಕಾಳೆಗದಲ್ಲಿ ಹತರಾಗುವರು; ಆಗ ಅವರಿಗೆ ವೀರಸ್ವರ್ಗ. ಅಲ್ಲಿ ಅಪ್ಸರೆಯರು ಇವರನ್ನು ಅಪ್ಪುವರು.

**ಡ. ಪ್ರಶ್ನಗಳು**—

೧. ಉತ್ತರನ ಕೆಲವು ಪೌರುಷವಚನಗಳಲ್ಲಿ ನಿಮಗೆ ಚೆಂದ ಕಂಡ ನಾಲ್ಕನ್ನು ಹೇಳಿರಿ.

೨. ಈ ಪದ್ಯಗಳ ೩ನೆಯ ಚರಣದ ಪ್ರಸ್ತಾರ ಹಾಕಿರಿ.

೩. ಕೌರವಸೇನೆಯಲ್ಲಿ ವೀರಾಧಿವೀರರು ಯಾರು? ಈ ಕವಿತೆಗಳಲ್ಲಿ ಹಾಗೆಲ್ಲಿ ಹೇಳಿದೆ?

೪. ಉತ್ತರನು ಸಾರಥಿಯನ್ನು ರಮಿಯಿಸುವ ಮಾತುಗಳನ್ನು ಹೇಳಿರಿ.

---

## ೭. ಉತ್ತರಕುಮಾರ,—ಸಮರಾಂಗಣದಲ್ಲಿ.

**ಬ. ಶಬ್ದಕೋಶ**— ೧. ಕಟಕ–ಪಾಳೆಯ; ಚಮ್ಮಟಿಗೆ – ತ್ಸ – ಚರ್ಮ ಪಟ್ಟಿಕಾ, ಬಾರುಕೋಲು; ಉಗಿ–ತೆರೆ, ಬಗಿ; ೨. ಕಾಹು–ಕಾವು–ಕಾವ್ಯ; ತಾಳಿಗೆ–ಗಂಟಲು; ಸೀಯು–ಕರಕಾಗು. ೩. ನಾಕ- ಸ್ವರ್ಗ. ವಾಘೆ–ಕಡಿವಾಣ; ೪. ಕೊಳುಗುಳ–ಕಾಳಗ, ಲೋಗ–ತ್ಸ–ಲೋಕ, ಮಂದಿ; ಕುತ್ತು–ಚುಚ್ಚು, ಘಾತಿಸು; ೫. ಜೀವಗಳ್ಳ–ಜೀವವನ್ನು ಳಿಸಿಕೊಳ್ಳುವವ.

**ಕ. ಟಿಪ್ಪಣಿಗಳು**— ೧. ೪. ನಿನ್ನ ಬಸಿರಲಿ ಮರಳಿ ಬಂದವನು–ಮತ್ತೊಮ್ಮೆ ನಿನ್ನ ಹೊಟ್ಟೆಯಿಂದ ಬಂದವನು; ನಿನ್ನ ಹೊಟ್ಟೆಯಿಂದ ಹುಟ್ಟಿಬಂದವನು; ನಿನ್ನ ಮಗನು. ೫. ಸುರರ ಸತಿಯರನೊಲ್ಲೆವು–ನೀನು ರಣದಲ್ಲಿ ಮಡಿದರೆ ವೀರಸ್ವರ್ಗವನ್ನೈದಿ ಅಪ್ಸರೆಯರನ್ನು ಪಡೆವೆ ಎಂದು ಬೃಹನ್ನಳೆ ಹೇಳಿದುದಕ್ಕೆ

ಇದು ಉತ್ತರ. ರಣದಲ್ಲಿ ಹಿಂದಿರುಗಿದರೆ ಪಾತಕವು ಬರುವುದೆಂದರೆ ಅಶ್ವಮೇಧ ಮಾಡಿಸಿ ಭೂಸುರರು ಆ ಪಾತಕವನ್ನು ಕಳೆಯುವರು ಎನ್ನುವನು.

**ಡ. ಪ್ರಶ್ನಗಳು—**

೧. ಹಸಿದಮಾರಿಯು. . ಬದುಕುವುದೇ? ಈ ವಾಕ್ಯದ ಉಪಮೇಯ ವಾಕ್ಯವನ್ನು ಹೇಳಿರಿ.

೨. ಕೌರವಸೇನೆಯನ್ನು ಕಂಡ ಉತ್ತರನಿಗೆ ಆದ ಶಾರೀರಿಕ ವಿಕಾರಗಳನ್ನು ಹೇಳಿರಿ.

೩. ಉತ್ತರನ ಯಾವ ಯಾವ ಮಾತುಗಳಲ್ಲಿ ಆತನ ಸಂಕಟವೂ ಪರರ ವಿನೋದವೂ ಕಾಣುತ್ತವೆ? ಅವನ ಹೇಡಿತನ, ನಾಚಿಕೆಗೇಡಿತನಗಳು ಯಾವ ಯಾವ ಮಾತುಗಳಲ್ಲಿ ತೋರುವವು?

೪. ಗುರು, ಲಘು ಎಂದರೇನು? ಯಾವ ಯಾವವು ಗುರುಗಳು?

---

## ೮. ಅಂಗದನ ರಾಯಭಾರ

**ಅ. ಗ್ರಂಥಪರಿಚಯ**—ಇದು ತೊರವೆ ರಾಮಾಯಣದ ಯುದ್ಧಕಾಂಡದ ಭಾಗವು. ಈ ರಾಮಾಯಣವನ್ನು ವಿಜಾಪುರ ಜಿಲ್ಹೆಯ ತೊರವೆ ಗ್ರಾಮದ ನರಹರಿ ಎಂಬ ಹೆಸರಿನ, ಕುಮಾರವಾಲ್ಮೀಕಿ ಎಂಬ ಬಿರುದಿನ ಬ್ರಾಹ್ಮಣ ಕವಿಯು ಕ್ರಿ. ಶ. ಸು. ೧೫೫೦ ರಲ್ಲಿ ರಚಿಸಿದನು. ಇದರಲ್ಲಿ ವಾಲ್ಮೀಕಿ ರಾಮಾಯಣದ ಕಥೆ ಸಂಕ್ಷೇಪವಾಗಿ ಹೇಳಿದೆ. ತೊರವೆ ರಾಮಾಯಣವು ತಿಳಿಗನ್ನಡದ ಮನೋಹರ ಕಾವ್ಯವು. ರಾವಣನೊಡನೆ ಯುದ್ಧವು ಆರಂಭವಾಗುವ ಮೊದಲು ಒಪ್ಪಂದಕ್ಕಾಗಿ ವಾಲಿಪುತ್ರನಾದ ಅಂಗದನು ರಾಮನ ದೂತನಾಗಿ ಲಂಕೆಗೆ ಹೋದ ಕಥೆ ಈ ಭಾಗದಲ್ಲಿ ಬಂದಿದೆ.

**ಬ. ಶಬ್ದಕೋಶ**— ೧. ಉಪ್ಪರಿಸು–ಹಾರು; ಗರುವಿಕೆ–ದೊಡ್ಡತನ; ಗಾಡಿಕೆ–ಗಾಢತೆ; ಗಮಕ–ಅಂದ. ೨. ಕಟಕ–ಪಾಳೆಯ; ನಿರ್ಜರ–ದೇವ, ನಿಕರ–ಸಮೂಹ. ಅಭ್ರ–ಆಕಾಶ. ದಿವಿಜವಿಭಾಡ–ದೇವಭಯಂಕರ; ದೇವವೈರಿ–ರಾವಣ. ೩. ಬೆಗಡು–ಭಯ; ಅರೆದೆಗೆ–ಹಿಂದೆಗೆ; ಬಿಗುಹು–ಜಿಗುವು; ಅಂಕ–ಗುರುತು, ಮುದ್ರೆ. ಬಿರುದು–ಗೌರವದ ಹೆಸರು. ಅಗಡು–ದುಷ್ಟ.

ಧೇನು–ಕತ್ತಿ. ಸರಿಸದಲಿ–ಚೆನ್ನಾಗಿ. ಇಂದ್ರಸುತಸುತ–ಇಂದ್ರಪುತ್ರನಾದ ವಾಲಿಯ ಪುತ್ರ–ಅಂಗದ. ೪. ನೈಶಾಟ–ನಿಶಾಚರ. ೫. ರಜನೀಮುಖ–ಸಾಯಂಕಾಲ. ೬. ಮೋಡಿ–ಬಗೆ, ಅಂದ. ಹೊಗರು–ಕಾಂತಿ. ೭. ಬರವು–ಬರುವಿಕೆ. ೮. ಒಕ್ಕಣೆ–ಮರ್ಯಾದೆಯ ಹೇಳಿಕೆ; ಅಭಿವಿನ್ಯಾಸ–ರಚನೆ. ೯. ಮಾತುಲ–ತಾಯಿಯ ಸೋದರ. ಕೋಲು–ಬಾಣ. ಬೋಳೆಯ–ದೇವ. ಬಲ್ಲಹ–ಒಡೆಯ. ೧೦. ಕೊಳ್ಳಿ–ಕಿಡಿ; ೧೧. ಪೋತ–ಮರಿ. ೧೨. ತಿರುಪು-ಅಟ್ಟು. ೧೩. ಓ+ದ–ಒಲಿದ. ೧೪. ಬಚ್ಚಣೆ–ಹೊದಿಕೆ. ೧೫. ಶೂಲಿ–ಶಿವ. ಊಳು–ಕೂಗು; ನರಿ ಸಿಕ್ಕು–ನರಿಯಂತೆ ಸಿಕ್ಕು ಬೀಳುವುದು; ಗೆಣೆ+ಬಂಟ-ಗೆಳೆಯನಾದ–ಸಮಾನನಾದ+ಶೂರ. ೧೭. ನಾಸಾ+ಛೇದ–ಮೂಗು ಕೊಯ್ಯುವಿಕೆ; ಸಾರಿದು–ಸಾರ್ದು, ಹತ್ತಿರ ಹೋಗಿ; ೧೮. ಕಳೇವರ–ಶರೀರ; ೧೯. ಒನೆ–ಅಲ್ಲಾಡಿಸು, ಝಳಪಿಸು.

**ಕ. ಟಿಪ್ಪಣಿಗಳು**—೧. ಗರುವಿಕೆಯ....ಉಬ್ಬಿಸಲಿ–ಗರುವಿಕೆ, ಗಾಡಿಕೆಗಳುಳ್ಳ (ಗರುಡನಂತಹ) ಗಮನದ ಬೆಡಗಿನಿಂದ ಒಂದ ಉಬ್ಬು—ಹುರುಪು. ೨. ದಿವಿಜವಿಭಾಡಪುರ (ಲಂಕೆ) ಭಯರಸದಲಿ ಇರ್ದುದು; ಅಂಗದನ ಬರುವಿಕೆಗೆ ಅಂಜಿ. ೩. ಉರ್ಚಿಸಿದ ಧೇನುಗಳಲಿ....ಸುತನ—(ಹಿಂದಿನ ಹನುಮನೇ ಬಂದನೆಂದು ಬೆದರಿದ ರಕ್ಕಸರು) ಕತ್ತಿಗಳನ್ನು ಹಿರಿದು ಅಂಗದನನ್ನು ಸುತ್ತುಹಾಕಿದರು. ೪. ರಿಪುರವಿ+ರಾಹುವಿನ—ರಿಪುವೆಂಬ ರವಿಗೆ ರಾಹುವಿನಂತಿರುವ-ರಿಪುವನ್ನು ನುಂಗುವ. ನೈಶಾಟಕುಲ+ಕಾನನ+ಹುತಾಶನನ ರಾಕ್ಷಸ ಕುಲವೆಂಬ ಕಾನನಕ್ಕೆ ಅಗ್ನಿರೂಪನಾದ. ರೂಪಕ. ನಮ್ಮವರು+ಊಹಿಸಿದುದನು. ೬. ನಗರದಹನ....ಮೋಡಿಯ ಮಿಗಿಸುತಿದೆ ಮಾತಿನಲಿ—ಮಾತಿನಲ್ಲಿ (ಹಿಂದೆ) ನಮ್ಮ ನಗರವನ್ನು ಸುಟ್ಟ ಕಪಿಯ ಅಂದವನ್ನು ಮೀರುತ್ತಿದೆ. ಈ ಕಪಿ. ಪ್ರಹಸ್ತ—ರಾವಣನ ಕಡೆಯ ಸೇನಾಪತಿ. ೮. ಖರದೂಷಣಾದ್ಯರ—ಲಕ್ಷ್ಮಣನು ಶೂರ್ಪಣಖಿಯ ಮೂಗನ್ನು ಕೊಯ್ದ ಬಳಿಕ ಖರ, ದೂಷಣ ಎಂಬ ರಾಕ್ಷಸರು ಲಕ್ಷ್ಮಣನನ್ನು ಇದಿರಿಸಿ ಹತರಾದರು. ೯. ಲಂಕಾಪಾಲನ ಮಾತುಳನ—ರಾವಣನ ಸೋದರಮಾವಂದಿರಾದ ಸುಬಾಹು ಮಾರೀಚರ ಕೊರಳಲ್ಲಿ ರಾಮನು ಬಾಣ ತೊಡಿಸಿದ್ದನು. (ವಿಶ್ವಾಮಿತ್ರ ಯಾಗರಕ್ಷಣದಲ್ಲಿ) ನಿನ್ನಾಳಿದನ ತಮ್ಮನ—ನಿಮ್ಮ ಒಡೆಯನಾದ ರಾವಣನ

ತಮ್ಮ ವಿಭೀಷಣನನ್ನು. ೧೦. ನೀ ಅಲ್ಲ; ಕಾನನವನು (ಅಶೋಕವನ) ಒಪ್ಪಿಸಿ ಒಲ್ಲೆನು; ಅವ ನಿನ್ನಿಂದ (ನಿನಗಿಂತ) ಬಾಯಲಿ ಬಲ್ಲಿದನು. ಸುಡಿಸಿಕೊಂಡು ಅವನು ನಿಲ್ಲದೆ ಓಡಿದನು. ಅಂದಿನವ ನೀನು ಅಲ್ಲ. ೧೧. ಅವನ ವಿಧಿಯನು—ಅವನ ಅವಸ್ಥೆಯನ್ನು. ಬಾಲಸುಡುಕ—ಬಾಲಸುಟ್ಟುಕೊಂಡವನೆಂದು ಕಪಿಪೋತಗಳು ಆತನನ್ನು ಓಡಿಸಲು ಆತನ ಊಳಿಗವು ನನಗೆ ಬಂದಿದೆ. . ನನ್ನ ಬಾಲವನ್ನು ನೋಡಿರಿ (ಇದು ಸುಟ್ಟಿಲ್ಲ). ೧೨. ಹೋಗಲಿ + ಅದಕೇನು; ನಿಶಾಚರನ ಅಸುವ ಸಲಹಿದ—ರಾವಣನಿಗೆ ಪ್ರಾಣದಾನ ಮಾಡಿದ. ೧೩. ನನ್ನ ತಂದೆ ವಾಲಿಯು ಸುಗ್ರೀವನ ಪತ್ನಿಗೆ ಮೆಚ್ಚಿದ ಕಾರಣ. . . . ೧೫. ಕಾರ್ತವೀರ್ಯಾರ್ಜುನನು ನರ್ಮದೆಯಲ್ಲಿ ಜಲಕ್ರೀಡೆಯಾಡುವಾಗ ರಾವಣನು ಅಲ್ಲಿಗೆ ಹೋಗಿ ಆತನ ಸೆರೆಯಲ್ಲಿ ಸಿಕ್ಕುಬಿದ್ದನು. ೧೬. ರಾವಣನು ವಾಲಿಯ ಮೇಲೆ ಏರಿಹೋಗಲು ಆತನು ಹತ್ತು ತಲೆಯ ಪ್ರಾಣಿ ಇದೊಂದು ವಿನೋದ ವಸ್ತುವೆಂದು ಮಗನ ತೊಟ್ಟಿಲಿಗೆ ಈತನನ್ನು ಕಟ್ಟಿದ್ದನು. ಕೈಲಾಸವನ್ನು ಎತ್ತಹೋಗಿ ಕೈಸಿಕ್ಕಿ ನಾಯಿಯ ಹಾಗೆ ಒದರಿದನು. ೧೭. ಸೀತಾಸ್ವಯಂವರದಲ್ಲಿ ಬಿಲ್ಲಿನ ಕೆಳಗೆ ನರಿಯಂತೆ ಸಿಕ್ಕುಬಿದ್ದನು. ಅನುಚರರ ಗೆಣೆವಂಟ—ತನ್ನ ಅನುಯಾಯಿಗಳಿಗೆ ಸಮಾನನಾದ ಶೂರ.

**ಡ. ಪ್ರಶ್ನಗಳು—**

೧. ಅಂಗದನ ಬರುವಿಕೆಗೆ ಲಂಕೆಯ ರಾಕ್ಷಸರು ಏಕೆ ಅಂಜಿದರು? ೩.

೨. ಅಂಗದನು ತಾನು ಏಕೆ ಬಂದಿರುವೆನೆಂದು ಹೇಳುವನು? ೪.

೩. ಅಂಗದನಿಗೆ ಪ್ರಹಸ್ತನು ಕೇಳಿದ ಪ್ರಶ್ನಗಳಾವವು? ೭.

೪. ರಾಕ್ಷಸರಿಗೆ ಅಂಜಿಕೆ ಬರುವಂತೆ ರಾಮನ ಶೌರ್ಯವನ್ನು ಅಂಗದನು ಯಾವ ಯಾವ ಮಾತುಗಳಿಂದ ಹೇಳಿದನು? ೯, ೧೦.

೫. ಬಾಲ ಸುಡಿಸಿಕೊಂಡದ್ದಕ್ಕೆ ಹನುಮನಿಗೆ ಯಾವ ಅಪಮಾನವಾಯಿತಂತೆ? ೧೧. ೬. ಮಾತ್ರಾವೃತ್ತವೆಂದರೇನು? ಒಂದೆರಡು ಮಾತ್ರಾವೃತ್ತಗಳನ್ನು ಹೇಳಿರಿ.

೭. ಅಂಗದನು ರಾವಣನಿಗಾದ ಯಾವ ಯಾವ ಅಪಮಾನಗಳನ್ನು ನೆನಪಿಗೆ ತಂದು ಕೊಡುವನು? ೧೪, ೧೫, ೧೬.

## ೯. ಕರ್ಣನ ಸ್ವಾಮಿನಿಷ್ಠೆ.

**ಅ. ಗ್ರಂಥಪರಿಚಯ**—೪ನೆಯ ಅನುಬಂಧವನ್ನು ನೋಡಿರಿ.

**ಬ. ಶಬ್ದಕೋಶ**—೧. ಇನ—ಸೂರ್ಯ; ನಿಮ್ಮಡಿ—ನಿಮ್ಮ ಪಾದ. ಸರಿ ಸೇವನೆ–ಸಮಾನ ಉಪಭೋಗ. ಸೋಂಕು–ಮುಟ್ಟುವಿಕೆ, ಸ್ಪರ್ಶ. ಸಾರಿದು-ಸಾರ್ದು; ಶೌರಿ–ಶೂರನೆಂಬ ಯಾದವನ ವಂಶಜ, ಕೃಷ್ಣ. ೨. ಸಂವಾದಿಸು. ಹೇಳು, ವಾದಿಸು; ಅನ್ವಯ—ವಂಶ, ಮೆದಿನೀಪತಿ—ಅರಸು, ಕ್ಷತ್ರಿಯ; ದಾನವ + ಸೂದನ—ದೈತ್ಯನಾಶಕ, ಕೃಷ್ಣ. ಭವ—ಹುಟ್ಟು, ಜನ್ಮ. ೩. ವಂಶವಿಹೀನ–ಕುಲದಿಂದ ಕಡಿಮೆಯವ; ಹವಣು–ಸಮ (ತ್ಸ-ಪ್ರಮಾಣ); ಭಾನು—ಸೂರ್ಯ; ಲಲಾಮ—ಭೂಷಣ. ೪. ಅಂಜುಳಿ—ಬೊಗಸೆ; ೫. ಇತ್ತಂಡ–ಎರಡು ತಂಡ, ಎರಡು ಬಣ. ಕಾಮಿತ–ಇಷ್ಟ; ನಿದಾನ–ಮೂಲ-ಕಾರಣ. ೬. ಬಾಯ್ದಂಬುಲ–ಬಾಯೊಳಗಿನ ತಾಂಬೂಲ; ಎಂಜಲು; ೭. ಶೌರಿಯ–ತ್ಸ–ಶೌರ್ಯ. ಸೂರಿಯ–ತ್ಸ–ಸೂರ್ಯ. ಅಗ್ಗ–ಬೆಲೆ. ೮. ಸಿರೆ–ತ್ಸ–ಸಿರಾ. ನಾಡಿ, ನರ. ದೃಗು–ತ್ಸ–ದೃಕ್) + ಜಲ–ಕಣ್ಣೀರು. ಉರವಣಿಸು–ಹೆಚ್ಚಾಗು; ಹೊಗೆ + ತೋರದೆ–ಹೊಗೆ ತೋರಿಸದೆ; ಉರುಹು–ಸುಡು. ೯. ಕೊಲಲು + ಇಲ್ಲ–ಕೊಲ್ಲುವಂತಿಲ್ಲ, ಭೇದ-ಭೇದೋಪಾಯ; ಮಧು + ಸೂದನ—ಮಧುದೈತ್ಯನನ್ನು ಕೊಂದವ, ಕೃಷ್ಣ. ಚಿಂತಾ + ಉದಧಿ—ಚಿಂತಾಸಮುದ್ರ. ಅದ್ದು—ಮುಳುಗು. ೧೦. ಗ್ಲಾನಿ—ಬಳಲಿಕೆ. ಬೆಸಗೈಸಿಕೊಳ್ಳು–ಸೇವಿಸಿಕೊಳ್ಳು; ದುಮ್ಮಾನ–ಅಸಮಾಧಾನ. ಅಪದೆಸೆ–ಕೆಟ್ಟಸ್ಥಿತಿ. ೧೧. ಮಾ + ಧವ—ಲಕ್ಷ್ಮೀಪತಿ, ಕೃಷ್ಣ. ಹೊರೆ—ಸಲಹು, ದಾತಾರ–ಕೊಡುವವ, ಒಡೆಯ. ಸಿರ–ತ್ಸ–ಶಿರಸ್, ತಲೆ. ಭರ–ಸಂಭ್ರಮ. ೧೨. ಮನ್ನಣೆ-ಮಾನ್ಯತೆ. ಅಗ್ಗಳಿಕೆ–ಹೆಚ್ಚಳ. ೧೩. ತಣಿ–ತೃಪ್ತಿಯಾಗು; ಖಾತಿ–ಅಸಮಾಧಾನ; ಕೋಪ. ರೂಢಿ–ಜಗ; ಲೋಕ. ಹರಿಬ–ತೀರಿಸಬೇಕಾದುದು. ೧೪. ಸಂಪನ್ನತೆ, ಯೋಗ್ಯತೆ. ಕೈವಾರ–ಸಹಾಯಕ; ೧೫. ಮಾರಿ—ಮೃತ್ಯುದೇವತೆ; ಔತಣ—ಆಮಂತ್ರಣ, ಊಟ; ಬಹುಜೀವಹರ–ಬಹಳ ಪ್ರಾಣಗಳನ್ನಪಹರಿಸುವಂಥದು; ತೀರಿಸು—ಮುಗಿಸು, ಕೊಲ್ಲು.

**ಕ. ಟಿಪ್ಪಣಿಗಳು**—೧. ಮೈದುನತನದ ಸರಸ—ಕರ್ಣನು ಕುಂತಿಯ ಮಗ; ಕುಂತಿ ಕೃಷ್ಣನಿಗೆ ಸೋದರತ್ತೆ. ಆದದರಿಂದ ಕರ್ಣ ಕೃಷ್ಣ ಇವರು ಭಾವಮೈದುನರು. ಆದುದರಿಂದ ಕೃಷ್ಣನಿಗೆ ಕರ್ಣನೊಡನೆ ಮೈದುನತನದ ಸಲಿಗೆ. ಸರಿಸೇವನೆಯೆ?—(ನಿನ್ನೊಡನೆ ನನಗೆ) ಸಮಾನತೆಯೆ?

೨. ಅನ್ವಯಕೆ..ಇಲ್ಲ ನಮ್ಮ ನಿಮ್ಮ ಕುಲಗಳಲ್ಲಿ ೧ನೆಯದು, ೨ನೆಯದು ಎಂಬ ಹೆಚ್ಚುಕಡಿಮೆ ಇಲ್ಲ. ನೀನು ಮೇದಿನೀಪತಿ—ನೀನು ಕ್ಷತ್ರಿಯ, (ಅಂಬಿಗನೆಂದು ತಿಳಿದುಕೊಂಡಿರುವೆ.)

೩. ನಿಮ್ಮಡಿ..ಸಮಾನಿಸುವರೇ?—ನಿಮ್ಮೊಡನೆ ಸಮಾನ ಎಂದು ನಡೆಸಿಕೊಳ್ಳಬಹುದೇ? ರಾಮಂಗೆ ಸರಿ—ರಾಮನೂ ಸೂರ್ಯವಂಶದವನು.

೪. ಕಳೆದುಕೊಂಡನು..ಸಲಿಗೆಯನ್ನು ತೋರ್ಪಡಿಸುವನು.

೫. ಐವರ ಮೊದಲಿಗನು-ಧರ್ಮರಾಜನಿಗಿಂತ ಹಿರಿಯ; ಇದಲ್ಲದೆ ಕರ್ಣನ ವಿಷಯವಾಗಿ ದುರ್ಯೋಧನನಿಗೆ ದ್ವೇಷವಿಲ್ಲ. ಆದುದರಿಂದ ರಾಜ್ಯದ ಜಗಳವು ಇಬ್ಬರಿಗೂ ಇಷ್ಟವಾಗುವದಿಲ್ಲ.

೬. ಬಾಯ್ದಂಬುಲಕೆ ಕೈಯಾನುವದೆ ಎಂಜಲನ್ನು ಹಿಡಿಯುವದು; ಎಂದರೆ ಹೀನ ಸೇವೆಯನ್ನು ಮಾಡುವದು.

೮. ತನ್ನ ಜನ್ಮವೃತ್ತಾಂತವು ತಿಳಿದದ್ದರ ಪರಿಣಾಮವು ದುರ್ಯೋಧನನ ಕೇಡು; ಎಂದು ಕರ್ಣನಿಗೆ ದುಃಖ; ಆದ್ದರಿಂದ ಕುತ್ತಿಗೆಯ ಸಿರ ಬಿಗಿದದ್ದು ಮುಂ. ಹರಿಯ ಹಗೆ..ಹೋಹುದೆ?—ಕೃಷ್ಣನ ವೈರ; ಅದು ಬೆಂಕೆಯಂತೆ ಹೊಗೆ ತೋರದಂತೆ ಸುಡದಿರುವದೇ?

೧೨. ಜಗದೊಳಗಾಪ್ತಜನವಿಲ್ಲ- ದುರ್ಯೋಧನನಿಗಿಂತ ಹೆಚ್ಚಿನ ಆಪ್ತನು ಜಗತ್ತಿನಲ್ಲಿಯೇ ತನಗೆ ಇಲ್ಲ. ಹೀನವೃತ್ತಿಯ ಬಳಸಿ ನಡೆಸನು-ಹೀನ ತರದ ನಡತೆಯಿಂದ ನಡೆಸಿಕೊಳ್ಳುವದಿಲ್ಲ.

೧೩. ದುರ್ಯೋಧನನು ತನ್ನ ಮನ್ನಣೆ ಮಾಡುವ ಬಗೆಗಳನ್ನು ಕರ್ಣನು ಹೇಳುವನು.

೧೪. ತನಗೆ ದುರ್ಯೋಧನನೇ ಒಡೆಯ; ಆತನ ವೈರಿಗಳೇ ವೈರಿಗಳು; ಆತನ

ಕಡೆಯುವರೇ ತನ್ನ ಕಡೆಯುವರು. ಕುರುನೃಪತಿ ಆದಂತೆ ಅಹೆನು-ದುರ್ಯೋಧನನು ಆದ ಹಾಗೆ ಆಗುವೆನು, ಆತನು ಬದುಕಿದರೆ ಬದುಕುವೆನು, ಸತ್ತರೆ ಸಾಯುವೆನು.

೧೫. ನಾಳಿನ ಭಾರತಯುದ್ಧವು ಮಾರಿಗೌತಣವಾಯ್ತು-ಮೃತ್ಯುದೇವತೆಗೆ ಔತಣ, ಮೇಜವಾನಿ. ಪತಿಯು ಅವಸರಕ್ಕೆ ಶರೀರವನು ನೂಕುವೆನು-ಒಡೆಯನ ಕೆಲಸದಲ್ಲಿ ಶರೀರವನ್ನರ್ಪಿಸುವೆನು.

## ಡ. ಪ್ರಶ್ನಗಳು—

೧. ಕರ್ಣನ ಸ್ವಾಮಿನಿಷ್ಠೆ ವ್ಯಕ್ತವಾಗುವ ಆತನ ಮಾತುಗಳನ್ನು ಹೇಳಿರಿ.

೨. ಭೇದೋಪಾಯಕ್ಕೆ ಹೋದ ಕೃಷ್ಣನ ಚಾತುರ್ಯವನ್ನು ತೋರಿಸಿರಿ.

೩. ಕರ್ಣನು ಕೃಷ್ಣನಿಗೆ 'ಮರುಳು ಮಾಧವ' ಎನ್ನುವನು, ಅವನ ದೃಷ್ಟಿಯಲ್ಲಿ ಕೃಷ್ಣನ ಮರುಳತನವೇನು?

೪. 'ಚಿಂತೋದಧಿಯೊಳದ್ದಂತೆ ಮೌನದೊಳಿದ್ದನಾಕರ್ಣ,' ಕರ್ಣನ ಆ ಕಾಲದ ಚಿಂತೆ, ಇಲ್ಲವೆ ಅವನ ಮನಸ್ಸಿನ ವಿಚಾರ ಇವುಗಳನ್ನು ವಿವರಿಸಿರಿ. ಬ. ಭಾಮಿನೀಷಟ್ಪದಿಯ ಲಕ್ಷಣವನ್ನು ಹೇಳಿರಿ.

೫. ಕರ್ಣನ ಮಹಾನುಭಾವತೆಯನ್ನು ತೋರಿಸಿರಿ.

---

# ೧೦. ಮಾಯಾಂಗನೆಯರ ಕಾಟ.

**ಅ. ಗ್ರಂಥಪರಿಚಯ**—ಈ ಪದ್ಯಗಳು ೧೩ನೆಯ ಶತಮಾನದ, ಹಂಪೆಯ ಹರೀಶ್ವರ ಕವಿಯ ಸೋದರಳಿಯ ರಾಘವಾಂಕ ಕವಿಯ ಹರಿಶ್ಚಂದ್ರ ಕಾವ್ಯದೊಳಗಿನವು. ವಿಶ್ವಾಮಿತ್ರಮುನಿ ಹರಿಶ್ಚಂದ್ರನನ್ನು ಕಾಡುವದಕ್ಕಾಗಿ ಮಾಯೆಯಿಂದ ಹುಟ್ಟಿಸಿದ ಚಂಡಾಲ ಕನ್ಯೆಯರು ಆತನ ಬಳಿಗೆ ಬಂದು ತಮ್ಮನ್ನು ಮದುವೆಯಾಗೆಂದು ಆತನನ್ನು ಕಾಡುವರು. ನಿಮ್ಮನ್ನು ಮುಟ್ಟುವದೇ ಅಯೋಗ್ಯವೆಂದು ಹರಿಶ್ಚಂದ್ರನು, ಅದರಲ್ಲೇನು ದೋಷವೆಂದು ಆ ಹೊಲತಿಯರು ವಾದಿಸುವುದು ಈ ಪದ್ಯಗಳಲ್ಲಿದೆ. ಇದೊಂದು ಉತ್ತಮ ಕಾವ್ಯವು.

**ಬ. ಶಬ್ದಕೋಶ**—೧. ಕಟ್ಟಾಸೆ—ಕಡಿದು + ಆಸೆ ದೊಡ್ಡ ಆಶೆ. ವಲ್ಲಭ-ಪತಿ. ಉಮ್ಮಳಿಕೆ—ಕಳವಳ. ಅಳವಳಿ—ಬಳಲು. ಅಳುಪು—ಆಸೆ. ಅನಾಮಿಕ-ಹೊಲೆಯ. ೨. ವಸು + ಮತಿ—ಭೂಮಿ. ವಸು—ಶ್ರೇಷ್ಠಪದಾರ್ಥ. ಒರೆದೊರೆ—ಸಮಸಮಾನ. ಉಲಿಹ—ಶಬ್ದ, ಮಾತು. ೩. ಲೇಸು—ಒಳ್ಳೆಯದು. ಸೊಳ—ಸೊಣ, ಜೇನ್ನೊಣ. ಮೃಗ+ನಾಭಿ—ಕಸ್ತೂರಿ, ಮೃಗದ ಹೊಕ್ಕುಳಲ್ಲಿ ಹುಟ್ಟಿದ್ದು. ೪. ಒಚ್ಚಲು—ಮೋರಿ, ಕಾಲುವೆ. ತಿಳಿ—ತಿಳಿಯಾಗು. ಮೀ+ಹ—ಸ್ನಾನ. ಪ್ರೇತ+ವನ—ಸ್ಮಶಾನ. ಮುಡಿ+ಹ (ಪ)-ಮುಡಿದುಕೊಳ್ಳುವುದು. ಗಾಡಿ—ಶೋಭೆ. ೫. ಮೆಯ್ಮುಡಿ—ಮೈ ಮತ್ತು ತುರುಬು. ತೀಡು—ಬೀಸು. ೬. ಭಂಡ—ದುಷ್ಟ, ಬಾಯ್ಬಡಕ. ಕಾಳುಗೆಡೆ—ಹಾಳುಬೀಳು; ಹಾಳಾಗಿ ಬೀಳಿಸು. ೮. ಏಗೆಯ್ದೊಡಂ—ಏನು ಮಾಡಿದರೂ. ಆಸುಗೆಟ್ಟು—ರೀತಿದಪ್ಪಿ. ೯. ಎಳಸು—ಬಯಸು. ಮೊರೆಯಿಡು—ಬೊಬ್ಬೆಯಿಡು. ಉರವಣಿಸು—ಸಂತಾಪಗೊಳ್ಳು.

**ಕ. ಟಿಪ್ಪಣಿಗಳು**—೨. ಕನ್ನಿಕೆಯುರಂ ಕುಡುವ ಭೂಪರಿಲ್ಲ—ನಮ್ಮ ಸೂರ್ಯವಂಶದ ರಾಜರೊಡನೆ ಶರೀರಸಂಬಂಧ ಮಾಡುವ ಯೋಗ್ಯತೆಯು ಅರಸರು ಇಲ್ಲ. ಕಾಲಗುಣವೋ ನಿಂದ ನೆಲದ ಗುಣವೋ-ಕಾಲ ಮಹಿಮೆಯೋ ಸ್ಥಾನ ಮಹಿಮೆಯೋ

೩. ಹಾಲು ಕೆಚ್ಚಲ ಮಾಂಸದೊಳಗಿಂದ ಹಾಯ್ದುಬರುವದು. ಜೇನು ತುಪ್ಪವು-ಜೇನ್ನೊಣಗಳ ಕಾರಿಕೆ. ಕಸ್ತೂರಿ-ಒಂದು ಮೃಗದ ಹೊಕ್ಕುಳ ರಕ್ತ,

೪. ಮೂಲ, ಇಲ್ಲವೆ ಜನ್ಮಸ್ಥಾನವೇ ಅಶುದ್ಧವೆಂದು ಹೇಳುವನು.

೫. ಉಳಿದ ಇಂದ್ರಿಯಗಳಿಗೆ ಮೈಲಿಗೆಯಿಲ್ಲದೆ ಸ್ಪರ್ಶೇಂದ್ರಿಯವೊಂದಕ್ಕೇ ಮೈಲಿಗೆ ಏಕೆ ಎಂದು ಹೊಲತಿಯರು ಆಕ್ಷೇಪಿಸುವರು.

೬. ಉಳಿದ ಇಂದ್ರಿಯಗಳು ದೂರದಿಂದ ಉಪಭೋಗ ಹೊಂದುವವು. ಸ್ಪರ್ಶೇಂದ್ರಿಯವು ಹೊಂದಬೇಕಾಗುವದೆಂದು ರಾಜನು ಉತ್ತರ ಕೊಡುವನು.

ನಾಲ್ಕು ಅಧಿಕ; ಒಂದು ಅಧಮವೇ-ಮೈಲಿಗೆ ಇಲ್ಲದ ನಾಲ್ಕು ಇಂದ್ರಿಯಗಳು ಶ್ರೇಷ್ಠ; ಸ್ಪರ್ಶೇಂದ್ರಿಯವೊಂದು ಹೀನವೇ?

**ಡ. ಪ್ರಶ್ನೆಗಳು**—

೧. ಮಾಯಾಂಗನೆಯರು ಹರಿಶ್ಚಂದ್ರ ಇವರ ಸಂಭಾಷಣವನ್ನು ರಚಿಸಿರಿ.

೨. ಅವರಲ್ಲಿ ಯಾರ ಮಾತು ಗೆದ್ದಂತಿದೆ? ಏಕೆ?

೩. ಕಾಲಗುಣವೋ ನಿಂದ ನೆಲದ ಗುಣವೋ ಈ ಮಾತನ್ನು ಸ್ಪಷ್ಟಪಡಿಸಿರಿ.

೪. ಪಂಚೇಂದ್ರಿಯಂಗಳೊಳು ನಾಲ್ಕು ಅಧಿಕ, ಒಂದು ಅಧಮ; ಅದು ಹೇಗೆ?

೫. ನಾವು ದೇವರಿಗೆ ಅರ್ಪಿಸುವ ಕೆಲವು ವಸ್ತುಗಳು ಅಪವಿತ್ರ ಎಂದು ಹೊಲತಿಯರು ಹೇಳುವರು; ಅವು ಯಾವವು? ಹೇಗೆ ಅಪವಿತ್ರಗಳು?

---

## ೧೧. ರಾಮನ ರಾಜ್ಯವಿಯೋಗ.

**ಅ ಗ್ರಂಥಪರಿಚಯ**— ಈ ಪದ್ಯಗಳು ತೊರವೆ ರಾಮಾಯಣದೊಳಗಿನವು. ೮ ನೆಯ ಪಾಠದ ಗ್ರಂಥಪರಿಚಯವನ್ನು ನೋಡಿರಿ.

**ಬ. ಶಬ್ದಕೋಶ**—೧. ವಿಬುಧ—ದೇವ; ಹೊನ್ + ಬೆಸ—ಬಂಗಾರದ ಕೆಲಸ; ರಂಜೆಯ—ಝೂಲು; ಲಳಿ—ಅಂದ, ಸೊಬಗು; ಭದ್ರ + ಆಯತ + ಮತಂಗಜ—ಭದ್ರ (ದೊಡ್ಡ) ಜಾತಿಯ ಬೀಸಾದ ಆನೆ. ತೂರ್ಯತ್ರಯ—ನೃತ್ಯ, ಗೀತ, ವಾದ್ಯಗಳೆಂಬ ಮೂರು. ೨. ಹರ್ಮ್ಯ—ಶ್ರೀಮಂತರ ಮನೆ, ಉಪ್ಪರಿಗೆ; ಆರಾಮ—ಹೂದೋಟ. ಶಿಖಿ-ನವಿಲು. ಕಟ್ಟುಲುಹು—ಹೆಚ್ಚಾದ ಸಪ್ಪಳ. ೩. ಚಮೂ + ಪ — ಸೇನಾಪತಿ. ನಿಯೋಗಿ—ಅಧಿಕಾರಿ, ಸೇವಕ; ಮುರಿವು—ಭಂಗ, ನಾಶ. ೪. ತೆವರು—ಬದಿಗೆ ಮಾಡು, ಸವರು; ದುಗುಡ—ದುಃಖ. ದೊದ್ದೆ—ಗುಂಪು, ಸಂದಣಿ; ೫. ಜಾಡ್ಯ—ಬೇಸರ; ಜವನಿಕೆ—ತೆರೆ(ಪರದೆ); ಜಂಜಡ-ತೊಳಲಾಟ; ೬. ಹೊದಿಸು—ಮುಚ್ಚು, ಮರುಮಾತು—ಉತ್ತರ; ಹದ—ಅವಸ್ಥೆ; ೭. ಅಣುಗ—ಹುಡುಗ. ೮. ಸೊಬಗು—ತನ—ಸೌಭಾಗ್ಯ; ಶೋಭೆ. ಸುಮ್ಮಾನ—ಸಮಾಧಾನ, ಶಾಂತಿ. ಲೇಸು—ಒಳಿತು. ಬಹಳಿತ -ಬಹಳವಾದ. ಕೋಶ—ಬೊಕ್ಕಸ. ೯. ಆಡುಂಬೊಲ—ಆಡುವ ಪ್ರದೇಶ; ಕುಹಕ—ಕಪಟ; ಪಸರ—ಪಸಾರ

ಅಂಗಡಿ. ಅರವೆ—ತ್ನ—ಆರಾವು. ೧೦. ಗಯ್ಯಾಳಿ—ಘಾತಾಳಿ, ಕೇಡಿಗಳು. ಬಾಳು—ಕತ್ತಿ. ಗೋನಾಳಿ—ಕುತ್ತಿಗೆ. ನರಸುಕ್ಕು—ನರಗಳು ಸುಕ್ಕಿ ಹೋಗುವ ವಿಷ. ೧೧. ಹೊದಕುಳಿ—ಚಿಂತೆ; ತಾಪ. ೧೩. ಅಧಿರಾಜತ್ವ— ಅರಸುತನ. ಮುರಳದಲೆ—ಮುರಳಿದ ತಲೆ. ತಿರುಗಿದ ಮೋರೆ. ಪರಾಙ್ಮುಖತೆ; ೧೫. ನೆಮ್ಮು—ಆಶ್ರಯಿಸು; ಕೂರಿತು—ತೀಕ್ಷ್ಣ. ಕದರ್ಥ—ಕೆಟ್ಟ ಬೇಡಿಕೆ; ೧೮. ಬಂಜಡೆಯುತನ—ಕಷ್ಟ. ೧೯. ಅನೃತ—ನ+ಋತ—ಸುಳ್ಳು. ೨೦. ಅಸುಜ್ಞೆ—ಒಪ್ಪಿಗೆ.

**ಕ. ಟಿಪ್ಪಣಿಗಳು—೨.** ರಾಜ್ಯ, ವನರಾಜ್ಯ ಇವುಗಳ ತುಲನೆ. ರಾಮನಿಗೆ ಅಭಿನವರಾಜ್ಯ—ವನರಾಜ್ಯ—ಬರುವುದರ ಸೂಚನೆಯಾಗುತ್ತಿದೆ.

೫. ಉತ್ತರ ಸಂಭವಿಸಲು ನಮಗೆ ಅವನಿ ಅಸಾಧ್ಯವೆಂಬೀ ವ್ಯವಹರಣೆ ಗೋಚರಿಸುತಿದೆ. ನೀವು ಉತ್ತರ ಕೊಟ್ಟರೆ ( ಅದರಲ್ಲಿ ) ನಮಗೆ ರಾಜ್ಯವು ಅಸಾಧ್ಯವೆಂಬ ಸಂಗತಿ ತೋರುತ್ತಿದೆ.

೧೦. ಗೋನಾಳಿಗೆ ಬಾಳ ಚಾಚಿದಳು. ಒಡ್ಡಿದ ಬಂದು ( ಪ್ರತಿಬಂಧವನ್ನು ) ತಂದು ನಾಲಗೆಗೆ ನರಸುಕ್ಕನ್ನು ಇಕ್ಕಿದಳು.

೧೧. ಒಟ್ಟೆಯಲ್ಲಿ ಉತ್ತರವಿದ್ಯವ ( ಮುಂದಾಗುವ ) ವಿದ್ಯಮಾನವನ್ನು ಸಮಾಚಾರವನ್ನು ಅರಿಯದೆ.

೧೨. ಮೊದಲು ಎನಗೆ ಈ ವರವ ಒಂದಿಸಿದರು.

೧೩. ಮನು—ಸೂರ್ಯವಂಶದ ಒಬ್ಬ ಪ್ರಸಿದ್ಧ ರಾಜ.

೧೪. ದಧೀಚಿ—ಇಂದ್ರನಿಗೆ ವೃತ್ರಾಸುರವಧಕ್ಕಾಗಿ ವಜ್ರದಂತಿರುವ ತನ್ನ ಎಲುವುಗಳನ್ನು ಕೊಟ್ಟನು. ಶಿಬಿ—ಕಪೋತವನ್ನುಳುಹಲು ತನ್ನ ಮಾಂಸ ವನ್ನು ಕೊಟ್ಟನು. ಜೀಮೂತವಾಹನ—ಶಂಖಚೂಡನೆಂಬ ನಾಗನನ್ನು ಗರುಡನಿಗೆ ತನ್ನ ದೇಹವನ್ನು ಕೊಟ್ಟು ರಕ್ಷಿಸಿದನು. ಬಲಿ—ವಾಮನ ವೇಷ ದಿಂದ ಬಂದ ವಿಷ್ಣುವಿಗೆ ೩ ಪಾದ ಭೂಮಿಯನ್ನು ದಾನಮಾಡಿ ಪಾತಾಳಕ್ಕಿಳಿ ದನು. ಕಪೋತ—ತಾನಿದ್ದ ಮರಕ್ಕೆ ಹಸಿದು ಬಂದ ಬೇಡನಿಗೆ ತಾನೇ ಬೆಂಕಿ ಯಲ್ಲಿ ಬಿದ್ದು ಆಹಾರವನ್ನೊದಗಿಸಿತು.

೧೫. ಕುಜನರ ಜಿಹ್ವೆ ಕಡುಕೂರಿತು ದುಷ್ಟರ ನಾಲಗೆ ಬಹಳ ತೀಕ್ಷ್ಣ. ಬೇಕಾದಂತಹ ಬಿರುನುಡಿಗಳನ್ನಾಡಬಲ್ಲುದು.

೧೬. ನೃಪನು, ಆಡಿ ಹುಸಿ ಹೊಗದಂತೆ.

೧೯. ಕಲ್ಮಷವನು ಉಗಿದು ಅನ್ವಯದ ಭೂಷಣವ ಘಟದಲಿ ಕಾಸಿದಿರಿ– ಹೊಲಸನ್ನು ತೆಗೆದು ವಂಶವೆಂಬ ಭೂಷಣವನ್ನು ಮೂಸೆಯಲ್ಲಿ ಕಾಸಿದಿರಿ. ವಂಶವು ಇನ್ನಿಷ್ಟು ಬೆಳಗುವಂತೆ ಮಾಡಿದಿರಿ.

## ಡ. ಪ್ರಶ್ನೆಗಳು—

೧. ಕೈಕೇಯಿಯು ದಶರಥನನ್ನು ಇರುಕಿನಲ್ಲಿ ಸಿಕ್ಕಿಸಿದ ಸಂದರ್ಭವನ್ನು ಚಿತ್ರಿಸಿರಿ. ಸುಮಂತ್ರ, ರಾಮ, ವಸಿಷ್ಠ, ಕೈಕೇಯಿ ಇವರಲ್ಲಿ ಆಗ ನಡೆದ ಸಂಭಾಷಣವನ್ನು ಬರೆಯಿರಿ.

೨. ೧೨ನೆಯ ಪದ್ಯವನ್ನೋದಿರಿ, ಕೆಳಗಿನ ಪ್ರಶ್ನೆಗಳ ಉತ್ತರಗಳನ್ನು ಹೇಳಿರಿ.
   ಅ. ಹಿಂದಿನ ಪದ್ಯದಲ್ಲಿ ಮೇಲನರಿಯದೆ ವರವ ಕೊಟ್ಟೆನೆಂದು ದಶರಥನು ಹೇಳಿದುದನ್ನು ಕೈಕೇಯಿ ಯಾವ ಮಾತಿನಿಂದ ಹೀಯಾಳಿಸುವಳು?
   ಆ. ತನ್ನ ವರಗಳನ್ನು ಆತನು ಈಗ ಕೊಡಲೇಬೇಕೆಂಬುದನ್ನು ಕೈಕೇಯಿ ಹೇಗೆ ಸಮರ್ಥಿಸುವಳು?
   ಇ. ವರಗಳನ್ನು ಕೊಟ್ಟಾಗಿನ ಮತ್ತು ಈಗಿನ ದಶರಥನ ಸ್ಥಿತಿಯಲ್ಲಿ ಯಾವ ಪರಿವರ್ತನವುಂಟಾಗಿದೆ?

೩. ದಶರಥನು ತನ್ನ ಅರಮನೆಯ ಪೂರ್ವದ ಸ್ಥಿತಿ ಈಗಿನ ಸ್ಥಿತಿ ಇವುಗಳ ತುಲನೆ ಮಾಡಿದ್ದನ್ನು ಹೇಳಿರಿ. ೪. ಗುರು, ಲಘುಗಳೆಂದರೇನು?

---

# ೧೩. ಚಂದ್ರಹಾಸನ ಬಾಲ್ಯ.

**ಅ. ಗ್ರಂಥಪರಿಚಯ**— ೧೭ನೆಯ ಶತಮಾನದಲ್ಲಿದ್ದ ದೇವನೂರಿನ ಲಕ್ಷ್ಮೀಶ ಕವಿಯ ಜೈಮಿನಿ ಭಾರತದೊಳಗಿನ ಪದ್ಯಗಳಿವು. ಜೈಮಿನಿಭಾರತವು ಕನ್ನಡಿಗರ ಬಲುಮೆಚ್ಚಿಗೆಯ ಕಾವ್ಯವು.

**ಬ. ಶಬ್ದಕೋಶ**—೧. ಒರೆ–ಹೇಳು; ಅರುವೆರಳು–ಆರು + ಬೆರಳು. ದಿವ–(ದಿವಾ) ಹಗಲು. ೨. ಕ್ಷತ್ರಧರ್ಮ–ಕ್ಷತ್ರಿಯರ ಕರ್ತವ್ಯ. ಚಿತ್ರ

ಭಾನು–ಅಗ್ನಿ. ಶತ ಪತ್ರ–ಕಮಲ. ಅಹಿತ–ವೈರಿ. ೩. ಧಾತ್ರಿ–ದಾದಿ, ಮೊಲೆಯುಣಿಸುವ ಸಾಕುತಾಯಿ. ೪. ತಿರಿ–ಭಿಕ್ಷೆಬೇಡು; ಹೊರೆ–ಸಲಹು. ಆರ್ತೆ–ದುಃಖಿತೆ. ಪೊನ್ + ತೊಡಿಗೆ; ಕುಡಿವಾಲ್–ಕುಡಿವ+ಪಾಲ್; ೫. ಒಗು–ಸೋರು. ನುಣ್+ಕದಪು–ನಯವಾದ ಗಲ್ಲ. ಎಣೆ–ಜೋಡಿ. ಸುಳಿನಾಭಿ–(ಪ್ರವಾಹದೊಳಗಿನ) ಸುಳಿಯಂತಿರುವ ಹೊಕ್ಕುಳು. ಬಟ್ಟದೊಡೆ–ದುಂಡು ತೊಡೆ; ಅಜಸ್ರ–ಸತತ. ೬ ರುಜೆ––ಬೇನೆ. ಅಡಸು–ಮೇಲೆ ಬರು. ನಿರಾಲಂಬ–ನಿರಾಶ್ರಯ. ೭. ದೇಸಿಗ–ಪರದೇಶಿ. ತನಿ+ಪಣ್–ಸವಿಹಣ್ಣು. ಮೆಲ್ವಾಸು–ಮೆಲ್+ಪಾಸು–ಮೃದುವಾದ ಹಾಸಿಗೆ. ಅಳ್ತಿ–ಪ್ರೀತಿ. ೮. ತಿಲಕ–ಹಣೆಬೊಟ್ಟು. ಕಮ್ಮಲರ್–ಕಮ್ಮಿತು+ಅಲರ್–ಸುವಾಸನೆಯ ಹೂವು. ೯. ನೆರವಿ–ಗುಂಪು. ರೂಢಿಸಿದ–ಒಳಕೆಯಾದ; ಪರವುಟ್ಟ (–ಪುಷ್ಟ, ಪುಷ್–ಸಲಹು)–ಎರಡನೆಯವರಿಂದ ಪೋಷಿತ.

**ಕ. ಟಿಪ್ಪಣಿಗಳು**—೧. ಮೂಲಾನಕ್ಷತ್ರದಲ್ಲಿ ಮಕ್ಕಳು ಹುಟ್ಟುವದು ಕೇಡು.

೬. ಕಾಲನ ಅರಮನೆಗೆ ಎಯ್ದಿದಳ್––ಯಮನ ಮನೆಗೆ ಹೋದಳು–ಸತ್ತಳು.

**ಡ. ಪ್ರಶ್ನೆಗಳು**

೧. ೨ನೆಯ ಪದ್ಯದಲ್ಲಿ ಪತಿವ್ರತೆಯಾಗಿ ಎಂಬ ವಿಶೇಷಣದ ಸಾರ್ಥಕತೆ ಏನು?

೨. ಚಂದ್ರಹಾಸನ ಅವಯವಗಳ ಚೆಲುವನ್ನು ವರ್ಣಿಸಿರಿ.

೩. ಬಾಲ ಚಂದ್ರಹಾಸನನ್ನು ಪ್ರೀತಿಸುವ ಹೆಣ್ಣುಮಕ್ಕಳು ಆತನಿಗೆ ಯಾವ ಯಾವ ಉಪಚಾರಗಳನ್ನು ಮಾಡುತ್ತಿದ್ದರು?

---

## ೧೪. ಸೀತಾಪರಿತ್ಯಾಗ.

**ಅ. ಗ್ರಂಥಪರಿಚಯ**— ೧೩ನೆಯ ಪಾಠ ನೋಡಿರಿ.

**ಬ. ಶಬ್ದಕೋಶ**— ಪ್ರೇಯ–ಪ್ರೀತಿ. ಪಣ್ಣು–ಸಜ್ಜಾಗು ಸುಮಿತ್ರಾ+ಆತ್ಮಜ—ಲಕ್ಷ್ಮಣ. ಆಯತಾಂಬಕಿ––(ಆಯತ+ಅಂಬಕ)––ವಿಶಾಲವಾದ

ಕಣ್ಣುಳ್ಳವಳು. ೨. ಅಭೀಷ್ಟ—ಬಯಕೆ. ಬಲವಂದು—ಪ್ರದಕ್ಷಿಣೆಮಾಡಿ. ಪರಕೆ—ಆಶೀರ್ವಾದ. ೩. ಕುಟೀರ—ಗುಡಿಸಲು. ಸುಯ್—ಉಸಿರು ಬಿಡು. ೪. ಉದ್ವಹ—ಶ್ರೇಷ್ಠ. ಸೀವರಿಸು—ಕಳವಳಿಸು. ೫. ಸಂಚಕಾರ—ಚಂಚಗಾರ. ಕಣ್ಬಟ್ಟೆ—ಕಣ್ + ಬಟ್ಟೆ—ದೃಷ್ಟಿಪಥ; ಗೋಚರ. ಕಣ್ಬಟ್ಟೆಗೆಟ್ಟನೆ? ದೃಷ್ಟಿಗೋಚರನಾಗುವದಿಲ್ಲವೇ? ೬. ಅಭಿರಾಮ—ಸಂತೋಷಗೊಳಿಸುವವ, ಸುಂದರ; ಧಾಮ—ಸ್ಥಾನ; ಉದ್ದಾಮ—ಶ್ರೇಷ್ಠ. ವಾರ್ + ಧಿ—ಜಲಧಿ. ೭. ತಳುವು—ತಡಮಾಡು; ೯. ಗುಲ್ಮ—ಕಂಟಿ. ಜಾಹ್ನವಿ—ಗಂಗೆ; ೧೧. ಮಖ—ಯಜ್ಞ. ಯೂಪ—ಯಜ್ಞದಲ್ಲಿ ಬೇಕಾಗುವ ಕಂಬ; ಬನ್ನ—ಕಷ್ಟ; ನವೆ—ಸೊರಗು, ಬಾಡು. ಸನ್ನ—ಬತ್ತಿದ; ವೈದೇಹಿ—ವಿದೇಹರಾಜನ ಮಗಳು, ಸೀತೆ. ೧೨. ಸಲಿಸಿ—ಸಲ್ಲಿಸಿ. ಓ—ಸಲಹು; ಓವಿ—ಸಲಹಿ.

**ಕ. ಟಿಪ್ಪಣಿಗಳು**— ೧. ಛಾಯೆಗಾಣಿಸಿ—"ತಾಯೆ ಸೀನೇತಕೆಳಸಿದೆ" ಎಂದು (ಲಕ್ಷ್ಮಣನು ತಪೋವನ ಗಮನವನ್ನು ಏಕೆ ಬಯಸಿದೆಯೆಂದು) ನುಡಿದು ಈ ಪ್ರವಾಸವು ಒಳ್ಳೆಯದಾಗುವದಿಲ್ಲವೆಂಬುದರ ಛಾಯೆಯನ್ನು ತೋರಿಸಿದನು. ೫. ನೆಗಳ್ದ ಬಾಳ್ಕೆಗೆ ಸಂಚಕಾರಮಂ ಕೊಟ್ಟನೆ?—ಇನ್ನು ಮುಂದೆ ಬರುವ ಕೆಟ್ಟ ಬಾಳುವೆಗೆ, ವನಕ್ಕೆ ಕಳುಹಿದ್ದು ಸಂಚಕಾರವಾದಂತೆ. ೭. ಕಾಕುತ್‌ಸ್ಥ—ಕಕುದ್—ಹಿಣಿ (ಇಣಿ) ಆದರ ಮೇಲೆ ಕುಳಿತವ; ರಾಮಚಂದ್ರನ ಪೂರ್ವಜರಲ್ಲಿ ಒಬ್ಬ ಅರಸನು ಎತ್ತಿನ ಹಿಣಿಯ ಮೇಲೆ ಕುಳಿತು ಯುದ್ಧಮಾಡಿದ್ದನು. ಅವನು ಕಕುತ್‌ಸ್ಥ. ಅವನ ವಂಶದವರು ಕಾಕುತ್‌ಸ್ಥರು. ೧೨. ಜನಕಂಗೆ ನಾವನ್ಯರಲ್ಲ—ತಂದೆಗೆ ನಾವು ಭಿನ್ನರಲ್ಲ; ತಂದೆಯಂತೆ ತಿಳಿದುಕೊಳ್ಳು; ಇಲ್ಲವೆ ನಿನ್ನ ತಂದೆಯಾದ ಜನಕರಾಜನಿಗೆ ನಾವು ಹೊರಗಿನವರಲ್ಲ; ಅವನ ಪರಿಚಯದವರು. ಆವಾವ ಬಯಕೆ. . ಸಲಿಸಿ—ಗರ್ಭಿಣಿಯರಿಗಾಗುವ ಬಯಕೆ. ೧೩. ಚಿತ್ರಮಯವಾಗಿ. . ಶಾಲೆ—ಕಟ್ಟಿತು=ಕಟ್ಟಲ್ಪಟ್ಟಿತು. ಸಂಕ್ಷಿಪ್ತ ಕರ್ಮಣಿಪ್ರಯೋಗ.

**ಡ. ಪ್ರಶ್ನಗಳು**—

೧. ಸೀತೆಯು ಉತ್ತಮ ಸ್ವಭಾವದವಳು ಎಂಬುದನ್ನು ತೋರಿಸಿರಿ.

೨. 'ನಂಬಿದರಭೀಷ್ಟಮಂ ಸಲಿಸುವ ಕೃಪಾಳು ಎಂಬುದಂ ಕಾಣಿಸಿದಂ' ಈ ಮಾತಿನ ಅರ್ಥವನ್ನೂ ಸಂದರ್ಭವನ್ನೂ ಹೇಳಿರಿ.

೩. ರಾಮನು ತನ್ನನ್ನು ತೊರೆದನೆಂಬುದನ್ನು ತಿಳಿದ ಬಳಿಕ ಸೀತೆಯಾಡಿದ ಮಾತುಗಳನ್ನು ಹೇಳಿರಿ.

೪. ಲಕ್ಷ್ಮಣನಿಗೆ ಸೀತೆಯ ವಿಷಯದಲ್ಲಿ ಭಕ್ತಿ, ಚಿಂತೆ ಇದ್ದವೆಂದು ತೋರಿಸುವ ಪದ್ಯಭಾಗಗಳನ್ನು ಸೂಚಿಸಿರಿ.

---

## ೧೫. ಸೂರ್ಯಾಸ್ತ, ಅಂಧಕಾರ, ಚಂದ್ರೋದಯ.

**ಅ. ಗ್ರಂಥಪರಿಚಯ**— ಈ ಪದ್ಯಗಳು ಚೆನ್ನಬಸವಪುರಾಣದೊಳಗಿನವು. ೫ನೆಯ ಪಾಠದಲ್ಲಿ ನೋಡಿರಿ.

**ಬ. ಶಬ್ದಕೋಶ**— ೧. ಇರ್ಮ್ಮೈಗನ್ನಡಿ–ಎರಡು ಮೈಯ ಕನ್ನಡಿ. ವಾರುಣಿ–ವರುಣನ ದಿಕ್ಕು, ಪಶ್ಚಿಮ. ಮುನ್ನೀರ್–ಸಮುದ್ರ. ಪರಿಯಾಣ–ಹರಿವಾಣ. ಇನ–ಸೂರ್ಯ. ೨. ಕಾಳಿ–ಪಾರ್ವತಿ. ತಿಮಿರ–ಕತ್ತಲೆ. ೩. ಪಿಡಿಯಾಳ್–ಹಿಡಿಯುವವ, (ಸೆರೆಯಲ್ಲಿಡುವ) ಆಳು. ಎರಕ–ಪ್ರೀತಿ, ಸಲಿಗೆ. ತಮಸ್ತಾಪ–ಕತ್ತಲೆಗೆ ತಾಪದಾಯಕ. ೪. ಸುರಪ–ಇಂದ್ರ; ಖೇಚರ-(ಖೇ-ಆಕಾಶದಲ್ಲಿ) ದೇವ. ಅಂಬರದ ರತ್ನ–ಸೂರ್ಯ. ೫. ಕೌಳಿಗ–ಮೋಸಗಾರ. ಪೊನ್ + ಸೆಂಡು (ಚೆಂಡು); ಪಿಶಂಗ–ನಸುಗೆಂಪು. ಸಿತ–ಬಿಳಿಯ; ೬. ನಗ–ಪರ್ವತ; ಖಗ–ಪಕ್ಷಿ; ಸಂಕುಲ–ಸಮೂಹ. ವಿಚಿಕಿಲ–ಮಲ್ಲಿಗೆ. ಪ್ರಸೂನ–ಹೂವು. ನಗಜಾತೆ–ಪಾರ್ವತಿ; ವಾಣಿ–ಸರಸ್ವತಿ. ನಿಮ್ನಗೆ–(ನಿಮ್ನ–ತಗ್ಗು)ನದಿ. ನಿಮ್ನ + ಗಾ–ತಗ್ಗಿನತ್ತ ಹರಿಯುವುದು.

**ಕ. ಟಿಪ್ಪಣಿಗಳು**— ೧. ರನ್ನದ ಕನ್ನಡಿ (ರನ್ನ–ಕೆಂಪು ಬಣ್ಣದ್ದು. ರತ್ನವೆಂದು ಸಾಮಾನ್ಯವಾಗಿ ಹೇಳಿದಾಗ ಕೆಂಪು ಎಂದೇ ತಿಳಿದುಕೊಳ್ಳುವದು). ಮಾಣಿಕ್ಯ, ಕಿಡಿ, ಪೊನ್ನ ಹರಿವಾಣ ಇವುಗಳ ಉಪಮೆ ಕೊಟ್ಟು ಉದಯ ಹೊಂದುತ್ತಿರುವ ಚಂದ್ರನಲ್ಲಿ ತೀರ ಕೆಂಪು, ಕೆಂಪು, ಸಾಧಾರಣ ಕೆಂಪು ಈ ಬಣ್ಣಗಳನ್ನು ಹೇಳಿರುವನು. ೩. ದೀಪಗಳ ವರ್ಣನೆ. ಕತ್ತಲೆಯ ಕಡೆಯ ಸಿಪಾಯಿಗಳು ಬಂಧಿಸಿದ ಸೂರ್ಯಕಿರಣ, ಸೂರ್ಯನು ತನಗೆ ಎಂದೂ

ಇದಿರಾಗಿ ಬಾರದ ಕತ್ತಲೆಯನ್ನು ಹಿಡಿಯಲೋಸುಗ ನಿಯಮಿಸಿದ ಸೈನಿಕರು ಎಂದು ದೀಪಗಳನ್ನು ಉತ್ಪ್ರೇಕ್ಷಿಸುವನು. ೪. ನಕ್ಷತ್ರಗಳ ವರ್ಣನೆ- ದಿಕ್ಪಾಲರ, ದೇವತೆಗಳ ಕೈದೀವಿಗೆಗಳು, ಆಕಾಶವು ತನ್ನ ಮಣಿ(ಸೂರ್ಯ) ಹೋಗಲು ಆತನನ್ನು ಜಗದ ತುಂಬ ಹುಡುಕಲು ಧರಿಸಿದ ಕಣ್ಣುಗಳು, ಚಂದ್ರನ ಕೀರ್ತಿಯ ತುಣುಕುಗಳು ಎಂದು ವರ್ಣಿಸಿದೆ. ೫. ಕಾಲನೆಂಬ ಗಾರುಡಿ (ಮೋಡಿಕಾರ)ಯು ದೇವಲೋಕದಲ್ಲಿ ಆಟಹೂಡಿ ಮೊದಲು ರತ್ನದ ಚೆಂಡು ತೋರಿಸಿ ಅದನ್ನೆ ಬಂಗಾರದ ಚೆಂಡು, ಮುತ್ತಿನ ಚೆಂಡು ಮಾಡಿ ತೋರಿಸಿದನೆಂದು ವರ್ಣನೆ. ಚಂದ್ರಬಿಂಬವು ಮೊದಲು ಕೆಂಪು, ಬಳಿಕ ನಸುಗೆಂಪು, ಬಳಿಕ ಬಿಳಿದು ಆಗುವದು. ಪೂರ್ವಾದ್ರಿಯೆಂಬ ದೇವಾಲಯದ ರತ್ನ-ಸುವರ್ಣ-ರಜತ ಕಲಶಗಳೆಂದೂ ವರ್ಣನೆ. ೬. ಎಲ್ಲ ವಸ್ತುಗಳು ಬಿಳಿಯುವಾದವು. ೧,೩,೪,೫ ಪದ್ಯಗಳಲ್ಲಿ ಉತ್ಪ್ರೇಕ್ಷೆಗಳಿವೆ.

## ಡ. ಪ್ರಶ್ನಗಳು—

೧. ೧, ೩, ೪, ೫ ಪದ್ಯಗಳ ಭಾವಾರ್ಥವನ್ನು ವಿವರಿಸಿ ಬರೆಯಿರಿ.

೨. ೧, ೩, ೪, ೫ ಪದ್ಯಗಳಲ್ಲಿರುವ ಉತ್ಪ್ರೇಕ್ಷೆಗಳಲ್ಲಿರುವ ಯುಕ್ತತೆ, ಚಂದ ಇವನ್ನು ಹೇಳಿರಿ.

೩. ಪ್ರಾಸ, ಯತಿಗಳೆಂದರೇನು?

# ಮಹನೀಯರ ಅಭಿಪ್ರಾಯಗಳು

ಕನ್ನಡದಲ್ಲಿ ಓದುಗರು ಹೆಚ್ಚಾಗಬೇಕಾದುದು ಅವಶ್ಯವಿರುವಂತೆ ಓದುಗರಲ್ಲಿ ವಿಶುದ್ಧವಾದ ಅಭಿರುಚಿಯು ಬೆಳೆಯಬೇಕಾದುದೂ ಅವಶ್ಯವಾಗಿದೆ. ಈ ಉದ್ದೇಶ ಸಾಧಿಸುವುದಕ್ಕೆ ಕನ್ನಡದಲ್ಲಿಯ ವಿವಿಧ ಬಗೆಯ, ವಿವಿಧ ಶೈಲಿಯ ಲೇಖನಗಳ ಸಂಗ್ರಹಗಳು ಒಂದು ಉತ್ತಮ ಸಾಧನವೆಂದು ನನಗೆ ಅನಿಸುತ್ತದೆ. ಈ ದೃಷ್ಟಿಯಿಂದ '**ಕನ್ನಡ ವಾಚನ ಪಾಠಮಾಲೆ**'ಯು ಉಪಯುಕ್ತವಾದ ಪುಸ್ತಕವಾಗಿದೆ. ಶಾಲೆಗಳಲ್ಲಿಯ ನಿರ್ದಿಷ್ಟ ಪಠ್ಯಪುಸ್ತಕದ ಒಂದೇ ಪಡಿಯಚ್ಚಿನ ಶೈಲಿಯ ಕಟ್ಟು, ಪಠ್ಯಪುಸ್ತಕಗಳಿಲ್ಲದೆ ಕೈಗೆ ದೊರೆಯುವ ಏನನ್ನೋ, ಯಾವುದನ್ನೋ ಓದಬೇಕಾಗಿ ಬರುವ ಸ್ವಚ್ಛಂದತೆ ಇವುಗಳಲ್ಲಿಯ ಮಧ್ಯಮಾರ್ಗವನ್ನು ಅನುಸರಿಸುವುದು ಉಚಿತವಾದ ಹಾದಿ. ಅದಕ್ಕೆ ಈ ಪುಸ್ತಕವು ಸಹಾಯಕಾರಿಯಾಗಿದೆ. ಕನ್ನಡದಲ್ಲಿಯ ಪ್ರಾದೇಶಿಕ ಭಾಷಾಶೈಲಿಗಳನ್ನು ಒಂದುಗೂಡಿಸುವ ವಿಚಾರದಿಂದ ಇಲ್ಲಿಯ ಶೈಲಿ ರಚಿತವಾಗಿದೆ. ವಿಷಯಗಳ ವೈವಿಧ್ಯ, ಅದಕ್ಕನುಗುಣವಾದ ಭಾಷಾ ವೈವಿಧ್ಯ, ಪ್ರಗತಿಪರವಿಚಾರಸರಣಿ ಇವುಗಳನ್ನು ಸಾಧಿಸುವ ದೃಷ್ಟಿಯಿಂದ ನುರಿತ ಲೇಖಕರೂ, ಅನುಭವಿಕ ಶಿಕ್ಷಕರೂ ಆದ ಪಂಡಿತ ಪೂಜಾರ ಹಾಗೂ ಶ್ರೀ. ಕುರಡಿ ಮಾಸ್ತರ ಇವರು ರಚಿಸಿದ ಕನ್ನಡ ವಾಚನ ಪಾಠಮಾಲೆಯು ವಿದ್ಯಾರ್ಥಿಗಳಿಗೆ ಸಹಾಯಕಾರಿಯಾಗಿ ಅವರಲ್ಲಿ ಒಳ್ಳೆಯ ವಾಚನಾಭಿರುಚಿಯನ್ನು ಬೆಳೆಸುವುದೆಂದು ನಾನು ನಂಬಿದ್ದೇನೆ. ವಿದ್ಯಾರ್ಥಿಗಳು, ಓದುಗರು ಇದರ ಉಪಯೋಗವನ್ನು ಅವಶ್ಯವಾಗಿ ಮಾಡಿಕೊಳ್ಳಬೇಕೆಂದು ನಾನು ಆಶಿಸುತ್ತೇನೆ.

ಕರ್ನಾಟಕ ಕಾಲೇಜ, ಧಾರವಾಡ
ತಾ. ೨೬-೧೨-೫೮

**ಎಸ್. ಎಸ್. ಮಾಳವಾಡ. ಎಂ. ಎ.**